₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 17.08.2025 ಸಂಪುಟ: 10 ಸಂಚಿಕೆ: 215 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದು ಶುಕ್ಲಾ ಭಾರತಕ್ಕೆ ಆಗಮನ

ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಐತಿಹಾಸಿಕ ಭೇಟಿ ನೀಡಿದ ನಂತರ ಗಗನಯಾನಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರು ಭಾರತಕ್ಕೆ ಭಾನುವಾರ ಮರಳಲಿದ್ದಾರೆ. ಕಳೆದ ಒಂದು ವರ್ಷದಿಂದ ಶುಭಾಂಶು ಅವರು ಅಮೆರಿಕದಲ್ಲಿದ್ದು ಆಕ್ಸಿಯಂ-4 ಯೋಜನೆಯ ತರಬೇತಿಯಲ್ಲಿ ಪಾಲ್ಗೊಂಡಿದ್ದರು. ಭಾನುವಾರ ಮರಳುವ ಅವರು, ಮೊದಲು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲಿದ್ದಾರೆ. ನಂತರ ತಮ್ಮ ಊರು ಉತ್ತರ ಪ್ರದೇಶದ ಲಖನೌಗೆ ತೆರಳಲಿದ್ದಾರೆ. ಬಳಿಕ ಬೆಂಗಳೂರಿಗೆ ಭೇಟಿ ನೀಡಿ 'ಇಸ್ರೊ'ದ ಸಹೋದ್ಯೋಗಿಗಳ ಜತೆ ತಮ್ಮ ಗಗನಯಾನದ ಅನುಭವ ಹಂಚಿಕೊಳ್ಳಲಿದ್ದಾರೆ.

ಸೊಂಪಾದ ಪುಟಗಳು

ನಿಜವಾದ ಗೆಳೆಯರು ಯಾರು? ಟೀಕಾಕಾರರು ಯಾರು?
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ಸಭಾಮರ್ಯಾದೆಯನ್ನು ಸರ್ವಥಾ ಮರೆಯಬಾರದು
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ಜೀವನದಲ್ಲಿ ಯಾವತ್ತೂ ಯಶಸ್ಸು ನಿಮ್ಮ ತಲೆಗೆ ಹೋಗಬಾರದು ಮತ್ತು ಸೋಲು ನಿಮ್ಮ ಹೃದಯಕ್ಕೆ ಹೋಗಬಾರದು. ಇವೆರಡೂ ನಿಮಗೇ ತೊಂದರೆ ಕೊಡುತ್ತವೆ. ಯಶಸ್ಸು ಮತ್ತು ಸೋಲನ್ನು ನಿಭಾಯಿಸುವುದು ಜಾಣ್ಮೆ.

ವಕ್ರತುಂಡೋಕ್ತಿ

ನೀವು ಹೊರಗಡೆ ಹೋಗದಿದ್ದರೂ ಇಂದಿನ ಹವಾಮಾನ ಏನು ಎಂದು ಕೇಳಿದ್ದೀರಿ ಅಂದ್ರೆ, ಅಲೆಕ್ಸಾ ಜತೆಗೆ ಮಾತಾಡುತ್ತಿದ್ದೀರಿ ಎಂದರ್ಥ.

ಮತಗಳವು: ಮನೆ ಮನೆ ಅಭಿಯಾನ

ದೆಹಲಿ: 'ಮತ ಕಳವು ನಿಲ್ಲಿಸಿ' ಅಭಿಯಾನದ ಭಾಗವಾಗಿ ರಾಷ್ಟ್ರಾದ್ಯಂತ ಮನೆ ಮನೆ ಅಭಿಯಾನಕ್ಕೆ ಭಾರತೀಯ ಯುವ ಕಾಂಗ್ರೆಸ್ (ಐವೈಸಿ) ರಾಷ್ಟ್ರೀಯ ಅಧ್ಯಕ್ಷ ಉದಯ್ ಭಾನು ಛಿಬ್ ಅವರು ಶನಿವಾರ ಚಾಲನೆ ನೀಡಿದ್ದಾರೆ. ದೇಶದ ಪ್ರತಿ ಮತಗಟ್ಟೆಗಳಲ್ಲಿಯೂ ಮತದಾರ ಪಟ್ಟಿಯನ್ನು ಪರಿಶೀಲನೆ ನಡೆಸಲು ಈ ಅಭಿಯಾನ ಕೈಗೊಳ್ಳಲಾಗಿದೆ. ಪ್ರಜಾಪ್ರಭುತ್ವಕ್ಕಾಗಿನ ಹೋರಾಟವು ಇದೀಗ ಪ್ರತಿ ಮತಗಟ್ಟೆಗೂ ತಲುಪಿದೆ ಎಂದು ಉದಯ್ ಭಾನು ತಿಳಿಸಿದ್ದಾರೆ.

ಚಂದ್ರಶೇಖರನಾಥ ಸ್ವಾಮೀಜಿ ನಿಧನ

ಬೆಂಗಳೂರು: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಚಂದ್ರಶೇಖರನಾಥ ಸ್ವಾಮೀಜಿ (81) ಶುಕ್ರವಾರ ತಡರಾತ್ರಿ ವಿಧಿವಶರಾಗಿದ್ದಾರೆ. ನಾಥ ಸಂಪ್ರದಾಯದಂತೆ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾಗಿರುವ ನಿಶ್ಚಲಾನಂದ ನಾಥ ಸ್ವಾಮೀಜಿಯವರ ನೇತೃತ್ವದಲ್ಲಿ ಶನಿವಾರ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು. ಆದಿಚುಂಚನಗಿರಿ ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ದಗಂಗಾ ಶ್ರೀಗಳಾದ ಸಿದ್ದಲಿಂಗ ಸ್ವಾಮೀಜಿ, ಸುತ್ತೂರು ಶ್ರೀಗಳಾದ ದೇಶಿಕೇಂದ್ರ ಸ್ವಾಮೀಜಿ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ ಶಿವಕುಮಾರ್ ಸೇರಿ ಹಲವರು ಸಂತಾಪ ಸೂಚಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ನನ್ನನ್ನು ಸಚಿವ ಸ್ಥಾನದಿಂದ ತೆಗೆಯಲು ಕಾಣದ ಕೈಗಳು ಕೆಲಸ ಮಾಡಿವೆ – ಕೈ ಶಾಸಕ



ಅನಾಮಿಕ ತೋರಿಸಿದ ಕಡೆಯೆಲ್ಲಾ ಅಗೆದರೂ ಸಿಗದ ಅಸ್ಥಿಪಂಜರ | ಬುರುಡೆ ಪ್ರಹಸನಕ್ಕೆ ಅಂತ್ಯ ಹಾಡಲು ಮುಂದಾದ ಸರಕಾರ
ನಾಳೆಯಿಂದ ಎಸ್‌ಐಟಿ ತನಿಖೆ ಸ್ಥಗಿತಗೊಳಿಸಲು ನಿರ್ಧಾರ | ರಚನೆಯಾಗಿರುವ ಎಸ್‌ಐಟಿಯನ್ನು ವಿಸರ್ಜನೆಗೊಳಿಸಲು ಸೂಚನೆ

ಗುಂಡಿ ಅಗೆದಿದ್ದು ಸಾಕು, ಬರ್ರಿ ವಾಪಸ್!

ವಿಶ್ವವಾಣಿ ವಿಶೇಷ ಬೆಂಗಳೂರು

ಕಳೆದ 3 ವಾರಗಳಿಂದ ಧರ್ಮಸ್ಥಳದಲ್ಲಿ ನಡೆದ 'ಬುರುಡೆ' ಪ್ರಹಸನಕ್ಕೆ ಕೊನೆ ಹಾಡಲು ಸರಕಾರ ಮುಂದಾಗಿದ್ದು, ಸೋಮವಾರವೇ ಪ್ರಣಬ್ ಮೊಹಂತಿ ನೇತೃತ್ವದ ವಿಶೇಷ ತನಿಖಾ ತಂಡದ ತನಿಖೆ ಸ್ಥಗಿತಗೊಳಿಸಲು ತೀರ್ಮಾನಿಸಿದೆ.

ನ್ಯಾಯಾಧೀಶರ ಮುಂದೆ ಅನಾಮಿಕ ವ್ಯಕ್ತಿ ನೀಡಿದ್ದ ಹೇಳಿಕೆಯನ್ನು ಆಧಾರವಾಗಿಟ್ಟುಕೊಂಡು ರಚಿಸಿದ್ದ ವಿಶೇಷ ತನಿಖಾ ತಂಡವು, ಕಳೆದ 15 ದಿನಗಳಿಂದ ವ್ಯಕ್ತಿ ತೋರಿಸಿದ ಜಾಗದಲ್ಲೆಲ್ಲ ಅಗೆದರೂ ಯಾವುದೇ ಸಾಕ್ಷ್ಯ ಸಿಕ್ಕಿಲ್ಲ. ಆದರೆ ದಿನದಿಂದ ದಿನಕ್ಕೆ ರಾಜ್ಯ ಸರಕಾರ ಹಾಗೂ ಎಸ್‌ಐಟಿ ವಿರುದ್ಧ ಜನಾಕ್ರೋಶ ಹೆಚ್ಚಾಗುತ್ತಿರುವುದರಿಂದ ಎಸ್‌ಐಟಿಯನ್ನು ವಿಸರ್ಜನೆ ಮಾಡಲು ಸರಕಾರ ತೀರ್ಮಾನಿಸಿದೆ.

ಅನಾಮಿಕ ವ್ಯಕ್ತಿ ಈಗ ಹೊಸ ಹೊಸ ಸ್ಥಳಗಳನ್ನು ಗುರುತಿಸುವ ಜತೆಗೆ ಹೂತಿಟ್ಟ ಶವಗಳ ಸಂಖ್ಯೆಯಲ್ಲಿಯೂ ಏರಿಕೆ ಮಾಡುತ್ತಿದ್ದಾನೆ. ಇದರೊಂದಿಗೆ ವ್ಯಕ್ತಿ ನೀಡುತ್ತಿರುವ ಮಾಹಿತಿಯಲ್ಲಿ ಯಾವುದೇ 'ಪುರಾವೆ' ಇಲ್ಲ. ಎಸ್‌ಐಟಿ ಇರುವ ತನಕ ನಿತ್ಯ ಒಂದೊಂದು ಸುಳ್ಳು ಆರೋಪದ ಮೇಲೆ ದೂರು ದಾಖಲಿಸುವ ಸಾಧ್ಯತೆಯಿರುತ್ತದೆ. ದಾಖಲಾದ ಆರೋಪಗಳನ್ನು ತನಿಖೆ ನಡೆಸದಿದ್ದರೆ ನ್ಯಾಯಾಲಯದ ಕದತಟ್ಟುವ ಸಾಧ್ಯತೆಯಿರುತ್ತದೆ. ಆದ್ದರಿಂದ ಇದಕ್ಕೆ ಅವಕಾಶ ನೀಡದಿರಲು ಎಸ್‌ಐಟಿಯನ್ನೇ ವಜಾಗೊಳಿಸುವುದು ಸೂಕ್ತ ಎನ್ನುವ ಚರ್ಚೆ ಸರಕಾರದ ಮಟ್ಟದಲ್ಲಿ ನಡೆದಿದೆ. ಈ ವಿಷಯವನ್ನು ಗೃಹ ಇಲಾಖೆಗೂ ಮುಟ್ಟಿಸಿರುವ ಸರಕಾರ, ರಚನೆಯಾಗಿರುವ ಎಸ್‌ಐಟಿಯನ್ನು ಕಾನೂನಾತ್ಮಕವಾಗಿ ವಿಸರ್ಜನೆಗೊಳಿಸಲು ಸೂಚನೆ ನೀಡಿದೆ. ಆದ್ದರಿಂದ ಮಧ್ಯಂತರ ವರದಿ ಸಲ್ಲಿಸಲು ಎಸ್‌ಐಟಿಗೆ ಸೂಚಿಸಿದ್ದ ಗೃಹ ಇಲಾಖೆ, ಸೋಮವಾರ ಗೃಹ ಸಚಿವ ಪರಮೇಶ್ವರ ಅವರು ಸದನದಲ್ಲಿ ಮಾಹಿತಿ ನೀಡಿದ ಬಳಿಕ ತನಿಖೆಯ ಪೂರ್ಣ ಪ್ರಮಾಣದ ವರದಿಯನ್ನು ಗೃಹ ಇಲಾಖೆಗೆ ಸಲ್ಲಿಸಲು ಸೂಚನೆ ನೀಡಲಾಗಿದೆ. ಇದೇ ವರದಿಯನ್ನು ನ್ಯಾಯಾಲಯಕ್ಕೂ ಸಲ್ಲಿಸುವ ಮೂಲಕ ಪ್ರಕರಣಕ್ಕೆ ಕೊನೆ ಹಾಡುವ ಲೆಕ್ಕಾಚಾರದಲ್ಲಿದೆ.

ಮುಂದೇನು?

ರಾಜ್ಯ ಸರಕಾರ ಎಸ್‌ಐಟಿಯನ್ನು ಸ್ಥಗಿತಗೊಳಿಸಿದರೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುಗಳು ಬರುವ ಸಾಧ್ಯತೆ ದಟ್ಟವಾಗಿದೆ. ಆದ್ದರಿಂದ ಎಸ್‌ಐಟಿ ಬದಲಿಗೆ, ಸ್ಥಳೀಯ ಪೊಲೀಸ್ ಠಾಣೆ ಯಲ್ಲಿಯೇ ಸಾಮಾನ್ಯ ಪ್ರಕರಣ ಗಳಂತೆ ದೂರು ದಾಖಲಿಸಿಕೊಳ್ಳಲು ಸೂಚನೆ ನೀಡಲು ತೀರ್ಮಾನಿಸಲಾಗಿದೆ. ಒಂದು ವೇಳೆ ಯಾವುದಾದರೂ ಬಲವಾದ ಸಾಕ್ಷ್ಯಗಳು ಸಿಕ್ಕಿದ್ದೇ ಆದರೆ ಮುಂದಿನ ತೀರ್ಮಾನ ತೆಗೆದುಕೊಳ್ಳಲು ಗೃಹ ಇಲಾಖೆ ತೀರ್ಮಾನಿಸಿದೆ ಎಂದು ತಿಳಿದುಬಂದಿದೆ.

- ಅನಾಮಿಕ ವ್ಯಕ್ತಿ ತೋರಿಸಿದ ಎಲ್ಲ ಸ್ಥಳಗಳು ಪೂರ್ಣಗೊಂಡರೂ ಅಸ್ಥಿಪಂಜರ ಸಿಕ್ಕಿಲ್ಲ
- ಹೊಸ ಸ್ಥಳಗಳನ್ನು ಗುರುತಿಸುವ ಜತೆಗೆ ಹೂತಿಟ್ಟ ಶವಗಳ ಸಂಖ್ಯೆಯಲ್ಲಿಯೂ ಏರಿಕೆ
- ರಾಜ್ಯ ಸರಕಾರ, ಎಸ್‌ಐಟಿ ವಿರುದ್ಧ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಜನಾಕ್ರೋಶ

ನಾಳೆ ಸರಕಾರದಿಂದ ಉತ್ತರ?

ಎಸ್‌ಐಟಿ ಸ್ಥಗಿತಗೊಳಿಸುವ ತೀರ್ಮಾನಕ್ಕೆ ಬಂದಿರುವ ರಾಜ್ಯ ಸರಕಾರ, ಸೋಮವಾರ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರ ನೀಡುವ ಮೂಲಕ ವಿವಾದವನ್ನು ಮುಗಿಸುವ ಪ್ರಯತ್ನಕ್ಕೆ ಕೈಹಾಕಿದೆ. ಗುರುವಾರ ಬಿಜೆಪಿ ನಾಯಕರು ನಿಯಮ 69ರಲ್ಲಿ ಪ್ರಸ್ತಾಪಿಸಿದ್ದ ಧರ್ಮಸ್ಥಳ ಬುರುಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ಉತ್ತರಿಸುವುದಾಗಿ ಈಗಾಗಲೇ ಗೃಹ ಸಚಿವ ಡಾ.ಜಿ. ಪರಮೇಶ್ವರ ಹೇಳಿದ್ದಾರೆ. ಈ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿದ್ದು, ಸೋಮವಾರ ಸುದೀರ್ಘ ಉತ್ತರ ನೀಡುವ ಸಾಧ್ಯತೆಯಿದೆ. ಉತ್ತರ ಸಮಯದಲ್ಲಿಯೇ, ಧರ್ಮಸ್ಥಳದ ಮಂಜುನಾಥ ಅಥವಾ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರನ್ನು ಅಪಮಾನಿಸುವ ಉದ್ದೇಶ ಸರಕಾರ ಹಾಗೂ ಪಕ್ಷದ್ದಲ್ಲ ಎನ್ನುವ ಸ್ಪಷ್ಟ ಸಂದೇಶ ರವಾನಿಸುವ ಸಾಧ್ಯತೆಯಿದೆ.

ಧರ್ಮಸ್ಥಳ ಚಲೋ ಅಭಿಯಾನ ಶುರು

ಬೆಂಗಳೂರು: ರಾಜ್ಯ ಸರಕಾರವೇ ಧರ್ಮಸ್ಥಳದ ಜತೆ ಇದೆ ಎಂದು ಹೇಳಿರುವ ಮಧ್ಯೆಯೇ, ನಾಡಿನ ಪ್ರಮುಖ ಧಾರ್ಮಿಕ ಸ್ಥಳದ ಪಾವಿತ್ರ್ಯತೆ ಹಾಳು ಮಾಡಿ ಅಪಪ್ರಚಾರ ನಡೆಸಲಾಗುತ್ತಿದೆ. ಕೂಡಲೇ ಇದಕ್ಕೆಲ್ಲ ತಡೆ ಹಾಕಬೇಕು ಎಂದು ಆಗ್ರಹಿಸಿ ಬಿಜೆಪಿ ಧರ್ಮಸ್ಥಳ ಚಲೋ ಅಭಿಯಾನ ನಡೆಸಿದ್ದು, ಶನಿವಾರ ದೇವಳಕ್ಕೆ ಪಕ್ಷದ ನಾಯಕರು ಭೇಟಿ ನೀಡಲಿದ್ದಾರೆ.

ಧರ್ಮಸ್ಥಳ ಕ್ಷೇತ್ರದ ಅಪಪ್ರಚಾರ ಖಂಡಿಸಿ ನಡೆದಿರುವ ಈ ಧರ್ಮಸ್ಥಳ ಚಲೋ ಅಭಿಮಾನಕ್ಕೆ ನೆಲಮಂಗಲದ ಟೋಲ್ ಬಳಿ ಶಾಸಕ ಎಸ್.ಆರ್.ವಿಶ್ವನಾಥ್ ಪೂಜೆ ನೆರವೇರಿಸಿ ಯಾತ್ರೆಗೆ ಚಾಲನೆ ನೀಡಿದರು. → 4

ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾದ ಕೈ ನಾಯಕರು

ಧರ್ಮಸ್ಥಳದ ಬುರುಡೆ ಪ್ರಕರಣದಲ್ಲಿ ಯಾವುದೇ ಸಾಕ್ಷ್ಯ ಸಿಗದಿರುವುರಿಂದ ಧರ್ಮಸ್ಥಳದ ಪರವಾಗಿ ಭಕ್ತರು ನಿಂತಿದ್ದಾರೆ. ಈ ವಿಷಯವನ್ನು ಬಿಜೆಪಿ ನಾಯಕರು ಬಳಸಿಕೊಳ್ಳಲು ಮುಂದಾಗಿರುವುದು ಸ್ಪಷ್ಟವಾಗುತ್ತಿದ್ದಂತೆ, ಕಾಂಗ್ರೆಸ್ ಧರ್ಮಸ್ಥಳದ ಪರವಾಗಿ ಧ್ವನಿಯಾಗಲು ತೀರ್ಮಾನಿಸಿದೆ.

ಧರ್ಮಸ್ಥಳ ಚಲೋ ಅಭಿಮಾನದಲ್ಲಿ ಭಾಗವಹಿಸಿದ್ದ ಬಿಜೆಪಿ ಕಾರ್ಯಕರ್ತರು.

ಧರ್ಮಸ್ಥಳ: 37 ವರ್ಷ, 279 ಶವ

ಮಂಗಳೂರು: ಧರ್ಮಸ್ಥಳದ ಆಸುಪಾಸಿನಲ್ಲಿ ಅತ್ಯಾಚಾರ, ಕೊಲೆ ನಡೆಸಿ ನೂರಾರು ಹೆಣ್ಣು ಮಕ್ಕಳ ಶವಗಳನ್ನು ಹೂಳಲಾಗಿದೆ ಎಂಬ ಆರೋಪದ ಹಿನ್ನೆಲೆ ಈ ಕುರಿತು ಗ್ರಾಮ ಪಂಚಾಯಿತಿ ಅಧಿಕೃತ ಮಾಹಿತಿ ಕೊಟ್ಟಿದ್ದು, 37 ವರ್ಷಗಳಲ್ಲಿ 279 ಶವ ಹೂಳಲಾಗಿದೆ ಎಂದಿದೆ. ಆರ್‌ಟಿಐ ಅಡಿಯಲ್ಲಿ ಕೇಳಿದ್ದ ಮಾಹಿತಿಗೆ ಉತ್ತರಿಸಿದ ಧರ್ಮಸ್ಥಳ ಗ್ರಾಪಂನ ಪಿಡಿಒ, 1987ರಿಂದ 2025ರ ಅವಧಿಯಲ್ಲಿ ಧರ್ಮಸ್ಥಳ ಆಸುಪಾಸಿನಲ್ಲಿ ಶಿಶುಗಳದ್ದೂ ಸೇರಿದಂತೆ 279 ಶವಗಳನ್ನು ಹೂಳಲಾಗಿದೆ. ಇವುಗಳಲ್ಲಿ ಹೆಚ್ಚಿನವು ಆತ್ಮಹತ್ಯೆ ಪ್ರಕರಣಗಳು. 279 ಅನಾಥ ಶವಗಳಲ್ಲಿ 219 ಪುರುಷರ ಶವಗಳು, 46 ಮಹಿಳೆಯರ ಶವ, ಶಿಶುಗಳದ್ದು ಸೇರಿದಂತೆ 14 ಶವಗಳ ಲಿಂಗವನ್ನು ಗುರುತಿಸಲು ಸಾಧ್ಯವಾಗಿಲ್ಲ ಎನ್ನುವ ಮಾಹಿತಿ ನೀಡಿದೆ.

ಶಿರಾಡಿ: ರೈಲು ಬಸ್ ಬಂದ್

ಸಕಲೇಶಪುರ: ಪಶ್ಚಿಮ ಘಟ್ಟ ಪ್ರದೇಶದಲ್ಲಿ ಭಾರೀ ಮಳೆ ಸುರಿದಿದ್ದು, ಜನಜೀವನ, ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ. ಎಡಕುಮೇರಿಯಲ್ಲಿ ರೈಲ್ವೆ ಹಳಿ ಮೇಲೆ ಭೂಮಿ ಕುಸಿದು ರೈಲು ಸಂಚಾರ ಸ್ಥಗಿತಗೊಂಡಿದೆ. ಶಿರಾಡಿಘಾಟ್ ರಾಷ್ಟ್ರೀಯ ಹೆದ್ದಾರಿಯ ಮೂರ್ನಾಲ್ಕು ಜಾಗಗಳಲ್ಲಿ ಮಣ್ಣು ಕುಸಿದಿದೆ. ಮಣ್ಣು ಕುಸಿದಿರುವ ಸ್ಥಳಗಳಲ್ಲಿ ಮೊಕ್ಕಾಂ ಹೂಡಿರುವ ಸಕಲೇಶಪುರ ಗ್ರಾಮಾಂತರ ಠಾಣೆ ಪೊಲೀಸರು, ಜೆಸಿಬಿಗಳನ್ನು ಬಳಸಿ ರಸ್ತೆಗೆ ಬಿದ್ದ ಮಣ್ಣನ್ನು ತೆರವುಗೊಳಿಸಲು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಬಿರುಸಿನ ಮಳೆ ಕಾರ್ಯಾಚರಣೆ ಅಡ್ಡಿಯಾಗಿದೆ.

ಟಿಬಿ ಡ್ಯಾಂನ 7 ಗೇಟ್ ಜಾಮ್

ಹೊಸಪೇಟೆ: ತುಂಗಭದ್ರಾ ಜಲಾಶಯದ ಏಳು ಗೇಟ್‌ಗಳು ಬಾಗಿವೆ ಆಗಿವೆ ಎಂದು ಅಣೆಕಟ್ಟೆ ಸುರಕ್ಷತಾ ಪರಿಶೀಲನಾ ಕಮಿಟಿ ವರದಿ ನೀಡಿದೆ. ಕ್ರಸ್ಟ್ ಗೇಟ್ ನಂಬರ್ 4, 11, 18, 20, 24, 27 ಹಾಗೂ 28ನೇ ಗೇಟ್‌ಗಳು ಬಾಗಿವೆ. ಇದರಲ್ಲಿ, 6 ಗೇಟ್‌ಗಳನ್ನು ಮೇಲೆ ಎತ್ತಲು ಹಾಗೂ ಇಳಿಸಲು ಆಗುತ್ತಿಲ್ಲ. ಗೇಟ್ ನಂಬರ್ 4 ಅನ್ನು ಕೇವಲ 2 ಅಡಿ ಮಾತ್ರ ಮೇಲಕ್ಕೆ ಎತ್ತಬಹುದು. ಗೇಟ್ ನಂ.4 ಸೇರಿ ಒಟ್ಟು 7 ಗೇಟ್‌ಗಳು ಹಾನಿ ಆಗಿವೆ. ಜಲಾಶಯದ ಒಳಹರಿವು ಏರಿದರೆ ಅಪಾಯ ಉಂಟಾಗಬಹುದು ಎಂಬ ಆತಂಕ ಮನೆ ಮಾಡಿದೆ.



ಶ್ರೀಕೃಷ್ಣ ಜನ್ಮಾಷ್ಟಮಿ ನಿಮಿತ್ತ ಮಹಾರಾಷ್ಟ್ರದ ಥಾಣೆಯಲ್ಲಿ ಆಯೋಜಿಸಿದ್ದ **ದಹಿ ಹಂಡಿ** ಉತ್ಸವದಲ್ಲಿ ಭಾಗವಹಿಸಿದ್ದ ಜೋಗೇಶ್ವರಿಯ ಕೊಂಕಣ ನಗರ ಗೋವಿಂದ ಪಾಠಕ್ ತಂಡವು 10 ಹಂತದ ಮಾನವ ಪಿರಮಿಡ್ ರಚಿಸಿ ವಿಶ್ವ ದಾಖಲೆ ನಿರ್ಮಿಸಿದೆ. ಗೆದ್ದ ತಂಡಕ್ಕೆ 25 ಲಕ್ಷ ರುಪಾಯಿ ಬಹುಮಾನ ನೀಡಲಾಯಿತು.

ಭಾರತಕ್ಕೆ 2ನೇ ಸುಂಕ ವಿಧಿಸುವುದು ಡೌಟು

ನ್ಯೂಯಾರ್ಕ್: ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿರುವ ರಾಷ್ಟ್ರಗಳ ಮೇಲೆ 2ನೇ ಬಾರಿ ವಿಧಿಸಿದ್ದ ಹೆಚ್ಚುವರಿ ಸುಂಕವನ್ನು ಹೇರದಿರುವ ಸುಳಿವನ್ನು ಅಮೆರಿಕದ ಟ್ರಂಪ್ ಸರಕಾರ ನೀಡಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾ ತನ್ನ ಒಬ್ಬ ತೈಲ ಖರೀದಿದಾರರನ್ನು ಕಳೆದುಕೊಂಡಿದೆ. ಭಾರತವು ಶೇ.40 ರಷ್ಟು ತೈಲವನ್ನು ರಷ್ಯಾದಿಂದ ಖರೀದಿಸುತ್ತಿದೆ. ಚೀನಾ ಕೂಡ ಹೆಚ್ಚಿನ ತೈಲವನ್ನು ರಷ್ಯಾದಿಂದ ಖರೀದಿಸುತ್ತಿದೆ. ಹೆಚ್ಚುವರಿ ಸುಂಕ ವಿಧಿಸಿದರೆ ಅವರ ಸ್ಥಿತಿ ಚಿಂತಾಜನಕವಾಗಲಿದೆ. ಹಾಗೆ ಮಾಡಬೇಕೆಂದಿದ್ದರೆ ನಾನು ಮಾಡಿಯೇ ತೀರುತ್ತೇನೆ. ಆದರೆ ನಾನು ಹಾಗೆ ಮಾಡುವುದಿಲ್ಲ ಎಂದಿದ್ದಾರೆ.

ಚೀನಾ ವಿದೇಶಾಂಗ ಸಚಿವ ನಾಳೆ ಭಾರತಕ್ಕೆ

ಬೀಜಿಂಗ್: ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಸೋಮವಾರ ಭಾರತಕ್ಕೆ ಭೇಟಿ ನೀಡುತ್ತಿದ್ದು, ಮುಖ್ಯವಾಗಿ ಭಾರತ-ಚೀನಾ ನಡುವಿನ ಗಡಿ ಸಮಸ್ಯೆಗಳ ಕುರಿತು ಮಾತುಕತೆ ನಡೆಸಲಿದ್ದಾರೆ ಎಂದು ವರದಿಯಾಗಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಜತೆಗೆ ಈಗಾಗಲೇ ಹಲವು ಸುತ್ತು ಗಡಿ ಸಮಸ್ಯೆ ಕುರಿತು ಚರ್ಚಿಸಿರುವ ವಾಂಗ್, ಮಾತುಕತೆ ಮುಂದುವರಿಸಲು ಸೋಮವಾರ-ಮಂಗಳವಾರ ಭಾರತದಲ್ಲಿರುವರು ಎಂದು ವಿದೇಶಾಂಗ ಸಚಿವಾಲಯ ಶನಿವಾರ ಹೇಳಿದೆ.

ಟೋಲ್ ಪ್ಲಾಜಾಗಳಲ್ಲಿ 1.39 ಲಕ್ಷ ವಹಿವಾಟು

ಮೊದಲ ದಿನವೇ 1.4 ಲಕ್ಷ ಫಾಸ್ಟ್ಯಾಗ್ ಪಾಸ್

ದೆಹಲಿ: ಭಾರತೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಆ.15ರ ಸ್ವಾತಂತ್ರ್ಯ ದಿನಾಚರಣೆ ಸಂದರ್ಭ ದಲ್ಲೇ ಫಾಸ್ಟ್ಯಾಗ್ ವಾರ್ಷಿಕ ಪಾಸ್ ಬಿಡುಗಡೆ ಮಾಡಿದ್ದು, ಬಳಕೆದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಶುಕ್ರವಾರ ಸಂಜೆ 7ರ ವೇಳೆಗೆ 1.4 ಲಕ್ಷ ಬಳಕೆದಾರರು ವಾರ್ಷಿಕ ಪಾಸ್ ಖರೀದಿಸಿದ್ದಾರೆ. ಟೋಲ್ ಪ್ಲಾಜಾಗಳಲ್ಲಿ 1.39 ಲಕ್ಷ ವಹಿವಾಟು ದಾಖಲಾಗಿದೆ. ಉಳಿದಂತೆ 25 ಸಾವಿರ ಬಳಕೆದಾರರು 'ರಾಜಮಾರ್ಗ ಯಾತ್ರೆ' ಮೊಬೈಲ್ ಆಪ್‌ನಲ್ಲಿಯೇ ವಾರ್ಷಿಕ ಪಾಸ್ ಬಳಸಲಾರಂಭಿಸಿದ್ದಾರೆ. ದೇಶಾದ್ಯಂತ ಇರುವ 'ಎನ್‌ಎಚ್‌ಎಐ'ನ ಆಯ್ದ ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಾಷ್ಟ್ರೀಯ ಎಕ್ಸ್‌ಪ್ರೆಸ್‌ವೇಗಳಲ್ಲಿನ ಒಟ್ಟಾರೆ 1,150 ಟೋಲ್ ಪ್ಲಾಜಾಗಳಲ್ಲಿ ವಾರ್ಷಿಕ ಪಾಸ್‌ಗೆ ಮಾನ್ಯತೆ ಇದೆ. 'ಫಾಸ್ಟ್ಯಾಗ್ ವಾರ್ಷಿಕ ಪಾಸ್' ನೋಂದಣಿ ಸಹ ಆರಂಭವಾಗಿದ್ದು, ಮನೆಯಿಂದಲೇ ಆನ್‌ಲೈನ್ ಮೂಲಕ ವಾರ್ಷಿಕ ಪಾಸ್ ಕಾಯ್ದಿರಿಡಬಹುದಾಗಿದೆ.

ವಾರ್ಷಿಕ ಪಾಸ್ ಹೊಂದಿದ ವಾಹನಗಳ ಸಂಚಾರ ಸುಗಮಗೊಳಿಸಲು ಟೋಲ್ ಪ್ಲಾಜಾಗಳಲ್ಲಿ ಎನ್‌ಎಚ್‌ಎಐ ಅಧಿಕಾರಿಗಳು ಮತ್ತು ನೋಡಲ್ ಆಫೀಸರ್‌ಗಳನ್ನು ನಿಯೋಜಿಸಲಾಗಿದೆ. ಪಾಸ್ ಬಳಕೆದಾರರ ದೂರುಗಳಿದ್ದರೆ ತ್ವರಿತವಾಗಿ ಪರಿಹರಿಸಲೆಂದೇ 1033 ಸಂಖ್ಯೆಯ ರಾಷ್ಟ್ರೀಯ ಹೆದ್ದಾರಿ ಸಹಾಯವಾಣಿಗೆ ಹೆಚ್ಚುವರಿಯಾಗಿ 100ಕ್ಕೂ ಅಧಿಕ ಸಿಬ್ಬಂದಿಗಳನ್ನು ನೇಮಿಸಿ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಾಗಿದೆ.

ಬೆಲೆ 3 ಸಾವಿರ ರು.

1 ವರ್ಷ ಅಥವಾ 200 ಟ್ರಿಪ್‌ಗಳಿಗೆ ಅವಕಾಶವಿರುವ ಫಾಸ್ಟ್ಯಾಗ್ ವಾರ್ಷಿಕ ಪಾಸ್ ಬೆಲೆ 3,000 ರು.ಗಳು. ಪಾಸ್ ಖಾಸಗಿ ಕಾರು, ಜೀಪ್, ವ್ಯಾನ್‌ಗಳಿಗೆ ಮಾತ್ರ ಅನ್ವಯ. ಪಾಸನ್ನು ಎನ್‌ಎಚ್‌ಎಐ ವೆಬ್‌ಸೈಟ್ ಅಥವಾ ರಾಜ ಮಾರ್ಗಯಾತ್ರೆ ಮೊಬೈಲ್ ಅಪ್ಲಿಕೇಶನ್ ನಲ್ಲಿ ಖರೀದಿಸಿ ಸಕ್ರಿಯಗೊಳಿಸಿಕೊಳ್ಳಬಹುದು.

ಅಗ್ನಿ ಅವಘಡದಲ್ಲಿ ಐವರ ದುರ್ಮರಣ

ಬೆಂಗಳೂರು: ಪ್ಲಾಸ್ಟಿಕ್ ಮ್ಯಾಟ್ ಅಂಗಡಿಯಲ್ಲಿ ಅಗ್ನಿ ಅವಘಡ ಸಂಭವಿಸಿ ಇಬ್ಬರು ಮಕ್ಕಳು, ಒಂದೇ ಕುಟುಂಬದ ನಾಲ್ವರು ಸೇರಿ ಐವರು ಸಜೀವ ದಹನಗೊಂಡಿರುವ ಹೃದಯ ವಿದ್ರಾವಕ ಘಟನೆ ಹಲಸೂರು ಗೇಟ್ ವ್ಯಾಪ್ತಿಯ ನಗರ್ತಪೇಟೆಯಲ್ಲಿ ಶನಿವಾರ ಮುಂಜಾನೆ ನಡೆದಿದೆ. ಮದನ್ (38), ಪತ್ನಿ ಸಂಗೀತಾ (33) ಮಿತೇಶ್ (8), ವಿಹಾನ್ (5) ಸಜೀವ ದಹನಗೊಂಡ ಒಂದೇ ಕುಟುಂಬದವರಾಗಿದ್ದು, ಮತ್ತೊಂದು ಮಹಡಿಯಲ್ಲಿದ್ದ ಸುರೇಶ್ ಎಂಬುವವರು ಸುಟ್ಟು ಕರಕಲಾಗಿದ್ದಾರೆ. ನಗರ್ತಪೇಟೆಯ ಪ್ಲಾಸ್ಟಿಕ್ ಮ್ಯಾಟ್ ಅಂಗಡಿಯಲ್ಲಿ ಮುಂಜಾನೆ 3.30ರ ಸುಮಾರಿಗೆ ಶಾರ್ಟ್ ಸರ್ಕ್ಯೂಟ್‌ನಿಂದ ಅಂಗಡಿಯಲ್ಲಿ ಬೆಂಕಿ ಹೊತ್ತಿಕೊಂಡು ಈ ದುರ್ಘಟನೆ ಸಂಭವಿಸಿದೆ.

ಜಮೀರ್ ವೈಯಕ್ತಿಕ ಪರಿಹಾರ ವಿತರಣೆ: ಶುಕ್ರವಾರ ಸಿಲಿಂಡರ್ ಸ್ಫೋಟಗೊಂಡಿದ್ದ ಚಿನ್ನಯ್ಯಪಾಳ್ಯಕ್ಕೆ ಹಾಗೂ ನಗರ್ತಪೇಟೆಯಲ್ಲಿ ಅಗ್ನಿ ಅವಘಡ ಸಂಭವಿಸಿದ ಸ್ಥಳಕ್ಕೆ ಸಚಿವ ಜಮೀರ್ ಅಹ್ಮದ್ ಭೇಟಿ ನೀಡಿದರು. ಚಿನ್ನಯ್ಯನ ಪಾಳ್ಯದಲ್ಲಿ ಸಿಲಿಂಡರ್ ಸ್ಫೋಟದಲ್ಲಿ ಮೃತಪಟ್ಟ ಬಾಲಕನ ಕುಟುಂಬಕ್ಕೆ ಐದು ಲಕ್ಷ ರು., ತಾಯಿ-ಮಗಳು ಗಾಯಾಳು ಕುಟುಂಬಕ್ಕೆ ಎರಡು ಲಕ್ಷ ರು., ಇಬ್ಬರು ಗಾಯಾಳು ಕುಟುಂಬಕ್ಕೆ ಎರಡು ಲಕ್ಷ ಹಾಗೂ ಸಣ್ಣ ಪುಟ್ಟ ಗಾಯಗೊಂಡವರಿಗೆ ತಲಾ 25 ಸಾವಿರ ರು. ನೀಡಿದರು. ನಂತರ ಬೆಂಗಳೂರು ನಗರ್ತ ಪೇಟೆಗೆ ಭೇಟಿ ನೀಡಿ, ಸುರೇಶ್ ಕುಟುಂಬಕ್ಕೆ ವೈಯಕ್ತಿಕವಾಗಿ ತಲಾ ಐದು ಲಕ್ಷ ರು. ಪರಿಹಾರ ನೀಡುವುದಾಗಿ ತಿಳಿಸಿದರು.

ವಿ.ಕೆ.ಸೆಕ್ಸೇನಾ, ಆರಿಫ್ ಖಾನ್ ಹೆಸರು ಮುಂಚೂಣಿಯಲ್ಲಿ
ರೇಸ್‌ನಲ್ಲಿದೆ ಕರ್ನಾಟಕ ರಾಜ್ಯಪಾಲ ಗೆಹ್ಲೋತ್ ಹೆಸರು

ಮುಂದಿನ ವಿಪಿ ಯಾರು?

ದೆಹಲಿ: ಜಗದೀಪ್ ಧನಕರ್ ಅವರ ರಾಜೀನಾಮೆಯಿಂದ ತೆರವಾಗಿರುವ ಉಪರಾಷ್ಟ್ರಪತಿ ಸ್ಥಾನಕ್ಕೆ ಸೆಪ್ಟೆಂಬರ್ 9ಕ್ಕೆ ಚುನಾವಣೆ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಈಗಾಗಲೇ ಪ್ರಾಥಮಿಕ ಹಂತದ ಸಭೆ ನಡೆಸಿ ಒಮ್ಮತದ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ಹೊಣೆಯನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ನೀಡಿದೆ. ಆಗಸ್ಟ್ 17ರಂದು ನಡೆಯಲಿರುವ ಬಿಜೆಪಿ ಸಂಸದೀಯ ಮಂಡಳಿ ಸಭೆಯಲ್ಲಿ ಅಭ್ಯರ್ಥಿ ಆಯ್ಕೆಯ ಘೋಷಣೆ ಆಗಲಿದೆ ಎಂದು ಮೂಲಗಳು ತಿಳಿಸಿವೆ. ಈ ಸಭೆಯಲ್ಲಿ ಬಿಜೆಪಿ ಹಾಗೂ ಎನ್‌ಡಿಎ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ.

ಈಗಾಗಲೇ ದೆಹಲಿ ಸರಕಾರದ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸೆಕ್ಸೇನಾ ಹಾಗೂ ಬಿಹಾರ ರಾಜ್ಯಪಾಲ ಆರಿಫ್ ಮೊಹಮದ್ ಖಾನ್ ಅವರ ಹೆಸರುಗಳು ಅಂತಿಮಗೊಂಡಿದ್ದು, ಸಂಸದೀಯ ಮಂಡಳಿ ಸಭೆಯಲ್ಲಿ ಒಬ್ಬರ ಹೆಸರನ್ನು ಘೋಷಣೆ ಮಾಡಲಾಗುತ್ತದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ. ಉಪರಾಷ್ಟ್ರಪತಿ ಅಭ್ಯರ್ಥಿ ಬಿಜೆಪಿ ಪಕ್ಷದವರೇ ಆಗಿರುತ್ತಾರೆ, ಅವರು ಆರ್‌ಎಸ್‌ಎಸ್ ಒಡನಾಡಿಯಾಗಿರುತ್ತಾರೆ ಎಂದು ಈ ಹಿಂದೆ ಬಿಜೆಪಿ ನಾಯಕರು ಸ್ಪಷ್ಟಪಡಿಸಿದ್ದರು. → 4

ವಿ.ಕೆ.ಸೆಕ್ಸೇನಾ

ಆರಿಫ್ ಖಾನ್

ದೇವವ್ರತ

ಗೆಹ್ಲೋತ್

ರೇಸ್‌ನಲ್ಲಿ ಯಾರ್‍ಯಾರು?

- ದೆಹಲಿ ಸರಕಾರದ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸೆಕ್ಸೇನಾ
- ಬಿಹಾರ ರಾಜ್ಯಪಾಲ ಆರಿಫ್ ಮೊಹಮದ್ ಖಾನ್
- ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ
- ಕರ್ನಾಟಕ ರಾಜ್ಯಪಾಲ ಗೆಹ್ಲೋತ್
- ಸಿಕ್ಕಿಂ ರಾಜ್ಯಪಾಲ ಓಂ ಮಾಥುರ್
- ಆರೆಸ್ಸೆಸ್ ಚಿಂತಕ ಶೇಷಾದ್ರಿ ಚಾರಿ
- ರಾಜ್ಯಸಭೆ ಉಪಾಧ್ಯಕ್ಷ ಹರಿವಂಶ್

- ಭಾನುವಾರ ಬಿಜೆಪಿ ಸಂಸದೀಯ ಮಂಡಳಿ ಸಭೆಯಲ್ಲಿ ಅಭ್ಯರ್ಥಿ ಘೋಷಣೆ
- ಆರ್‌ಎಸ್‌ಎಸ್ ಒಡನಾಡಿಯೊಬ್ಬರನ್ನೇ ಅಭ್ಯರ್ಥಿಯಾಗಿ ಘೋಷಿಸುವ ಸಾಧ್ಯತೆ
- ಬಿಹಾರ ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು ಅಭ್ಯರ್ಥಿ ಆಯ್ಕೆ ಮಾಡುವ ಸಾಧ್ಯತೆ

20ಕ್ಕೆ ವಿಧಾನಸೌಧ ಮುತ್ತಿಗೆ

ರಾಜ್ಯ ರೈತ ಸಂಘ -ಕಬ್ಬು ಬೆಳೆಗಾರರ ಸಂಘದ ನೇತೃತ್ವ: ಹುಂಡಿ ಭಾಗ್ಯರಾಜ್

ಮೈಸೂರು: ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆ.20ರಂದು ರೈತ ಸಂಘ ಹಾಗೂ ರಾಜ್ಯ ಕಬ್ಬು ಬೆಳೆಗಾರ ಸಂಘದ ನೇತೃತ್ವದಲ್ಲಿ ವಿಧಾನಸೌಧ ಮುತ್ತಿಗೆ ಹಾಗೂ ಧರಣಿ ಕಾರ್ಯಕ್ರಮ ರೂಪಿಸಲಾಗಿದೆ.

ಈ ಕುರಿತು ಸಂಘದ ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ದೇಶ ವಿಜೃಂಭಣೆಯಿಂದ ಸ್ವಾತಂತ್ರ್ಯ ದಿನ ಆಚರಿಸುತ್ತದೆ. ಆದರೆ, ರೈತರ ಪಾಲಿಗೆ ವೈಜ್ಞಾನಿಕ ಬೆಲೆ ನಿಗದಿಗೆ ಯಾವುದೇ ಸ್ವಾತಂತ್ರ್ಯ ಇಲ್ಲ, ದಶಕಗಳಿಂದಲೂ ರೈತರ ಬೇಡಿಕೆಗಳು ಬೇಡಿಕೆಗಳಾಗಿಯೇ ಉಳಿದಿವೆ ಎಂದರು.

ಹಲವು ಬೇಡಿಕೆಗಳನ್ನುಮುಂದಿಟ್ಟು ತೀವ್ರವಾದ ಹೋರಾಟ ರೂಪಿಸಲಾಗಿದೆ. ರಾಜ್ಯದ ಎಲ್ಲಾ ಕಡೆಗಳಿಂದ ಆ.20ರಂದು ರೈತರು ಬೆಂಗಳೂರಿಗೆ ಆಗಮಿಸಿ ವಿಧಾನಸೌಧ ಮುತ್ತಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಬೇಡಿಕೆಗಳು: ಪ್ರಸಕ್ತ ಸಾಲಿನ ಪ್ರತಿ ಟನ್ ಕಬ್ಬಿಗೆ 4500 ನಿಗದಿ ಮಾಡಬೇಕು. ಕಟಾವು ಮತ್ತು ಸಾಗಣೆ ಸಕ್ಕರೆ ಕಾರ್ಖಾನೆಗಳು ಭರಿಸಬೇಕು. ದ್ವಿಪಕ್ಷೀಯ ಒಪ್ಪಂದ ಪತ್ರವನ್ನು ಜಾರಿ ಮಾಡಬೇಕು. ಸಕ್ಕರೆ ಕಾರ್ಖಾನೆಗಳಲ್ಲಿ ರೈತರು ಹಾಗೂ ತಜ್ಞರ ಸಮಿತಿ ರಚಿಸಬೇಕು. ತೂಕದಲ್ಲಿ ಮೋಸ ತಪ್ಪಿಸಲು ತೂಕದ ಯಂತ್ರ ಅಳವಡಿಸಬೇಕು. ಕಳೆದ ಸಾಲಿನ 950 ಕೋಟಿ ರೂ ರೈತರಿಗೆ ಬಾಕಿ ನೀಡಬೇಕು. ಅಕ್ರಮ ಸಕ್ರಮ ಯೋಜನೆಯನ್ನು ತಕ್ಷಣ ಜಾರಿಗೆ ತರಬೇಕು. ವಿದ್ಯುತ್ ಪರಿವರ್ತಕಗಳು ಸುಟ್ಟರೆ 24 ಗಂಟೆಯಲ್ಲಿ ಬದಲಾಯಿಸಲು ಕ್ರಮ ಕೈಗೊಳ್ಳಬೇಕು.

ರೈತ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾಧ್ಯಮಗಳೊಂದಿಗೆ ಮಾತನಾಡಿದರು.

ಮೇಕೆದಾಟು ಯೋಜನೆಯನ್ನು ತಕ್ಷಣ ಜಾರಿಗೆ ತರಬೇಕು. ಪ್ರತಿ ಲೀಟರ್ ಹಾಲಿಗೆ 55 ರೂಪಾಯಿ ನಿಗದಿ ಮಾಡಬೇಕು.

ಜಿಲ್ಲೆಯ ಎಲ್ಲಾ ಕೆರೆಕಟ್ಟೆಗಳಿಗೆ ನದಿ ಮೂಲದಿಂದ ನೀರು ತುಂಬಿಸುವ ವಿಶೇಷ ಡಿ ಪಿ ಆರ್ ತಯಾರಿಸಿ ಕ್ರಮ ಕೈಗೊಳ್ಳಬೇಕು. ಅಭಿವೃದ್ಧಿಯ ಹೆಸರಲ್ಲಿ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುವ ಸರ್ಕಾರ ರೈತರನ್ನು ಪಾಲುದಾರರಾಗಿ ಮಾಡಿ ಅಭಿವೃದ್ಧಿಯಲ್ಲಿ ಬರುವ ಲಾಭವನ್ನು ರೈತರಿಗೆ ಹಂಚಬೇಕು. ಅರಣ್ಯಗಳಿಗೆ ರೈತರ ಜಾನುವಾರುಗಳನ್ನು ಮೇಯಿಸುವುದಕ್ಕೆ ನಿರ್ಬಂಧ ಇರುವ ಸರಕಾರದ ಕ್ರಮವನ್ನು ತಕ್ಷಣ ವಾಪಸ್ ಪಡೆಯಬೇಕು. ಕಾಡು ಪ್ರಾಣಿಗಳಿಂದ ಆಗುವ ಬೆಳೆ ನಷ್ಟಕ್ಕೆ ವೈಜ್ಞಾನಿಕ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು. ಮಾನವ ಮತ್ತು ಪ್ರಾಣಿ ಸಂಘರ್ಷಕ್ಕೆ ಮಾನವ ಪ್ರಾಣ ಹಾನಿಯಾದರೆ ಕನಿಷ್ಠ 25 ಲಕ್ಷ ಪರಿಹಾರ ನೀಡಬೇಕು. ಸ್ವಾಮಿನಾಥನ್ ವರದಿಯನ್ನು ಕೇಂದ್ರ ಸರ್ಕಾರ ಜಾರಿಗೆ ತರಬೇಕು. ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ ಖಾತ್ರಿ ಕಾಯ್ದೆ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ಯೂರಿಯಾ ಗೊಬ್ಬರದ ಹೆಸರಲ್ಲಿ ರಾಜಕೀಯ

ರಾಜ್ಯದಲ್ಲಿ ರಸಗೊಬ್ಬರದ ಪೂರೈಕೆ ರಾಜಕಾರಣವಾಗಿದ್ದು, ಕೇಂದ್ರ ಮತ್ತು ರಾಜ್ಯ ಸರಕಾರಗಳು ರೈತರ ಹೆಸರಲ್ಲಿ ರಾಜಕೀಯ ಮಾಡುತ್ತಿವೆ,ಲ. ರಸ ಗೊಬ್ಬರದ ಸಮರ್ಪಕ ಪೂರೈಕೆ ಸರಕಾರದ ಜವಾಬ್ದಾರಿಯಾಗಿದ್ದು ಕೃತಕ ಅಭಾವ ಸೃಷ್ಟಿಸುವವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮದ್ಯದಂಗಡಿಗೆ ವಿರೋಧ: ಸರಕಾರ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮದ್ಯದ ಅಂಗಡಿಗಳನ್ನು ತೆರೆಯುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ, ಇದನ್ನು ತಕ್ಷಣ ಕೈಬಿಡಬೇಕು ಎಂದು ಒತ್ತಾಯಿಸಿದರು.

ಅಪಪ್ರಚಾರದ ವಿರುದ್ಧ ಹೋರಾಟ ಅನಿವಾರ್ಯ

ಕೆ.ಆರ್.ಪೇಟೆ: ಧರ್ಮಸ್ಥಳದ ಕುರಿತು ಅಪಪ್ರಚಾರ ಮಾಡುವುದು, ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಹರಿಬಿಡುವ ಕೆಲಸ ಖಂಡನೀಯವಾಗಿದೆ. ಇವರ ವಿರುದ್ಧ ಸದ್ಭಕ್ತರು ಒಗ್ಗಟ್ಟಿನಿಂದ ಹೋರಾಟ ಅನಿವಾರ್ಯ ಎಂದು ತೆಂಡೆಕೆರೆ ಬಾಳೆಹೊನ್ನೂರು ಶಾಖಾ ಮಠದ ಪೀಠಾಧ್ಯಕ್ಷರಾದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಜಯನಗರ ಬಡಾವಣೆಯಲ್ಲಿರುವ ಮಲ್ಲಿಕಾರ್ಜುನ್ ಚಾರಿಟೇಬಲ್ ಟ್ರಸ್ಟ್ ಕಚೇರಿಯಲ್ಲಿ ಧರ್ಮಸ್ಥಳ ಭಕ್ತ ಮಂಡಳಿ ವತಿಯಿಂದ ಧರ್ಮಸ್ಥಳದ ಅಪಪ್ರಚಾರದ ವಿರುದ್ಧ ಜಾಗೃತಿ ಹಾಗೂ ಬೃಹತ್ ಪ್ರತಿಭಟನೆ ಬಗ್ಗೆ ಪೂರ್ವಭಾವಿ ಸಭೆಯ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ಶ್ರೀಕ್ಷೇತ್ರ ನಿರಂತರ ಅನ್ನ,ಅಕ್ಷರ ದಾಸೋಹ, ಔಷಧ ದಾನ ನಡೆಸುತ್ತಾ ಬಂದಿದೆ. ಜತೆಗೆ ಸ್ವ-ಸಹಾಯ ಗುಂಪುಗಳ ಮೂಲಕ ಅನೇಕ ಮಹಿಳೆಯರಿಗೆ ದಾರಿ ದೀಪವಾಗಿದೆ. ಧರ್ಮಸ್ಥಳ ಧರ್ಮಾಧಿಕಾರಿಗಳ ಸಮಾಜಮುಖಿ ಕಾರ್ಯಗಳನ್ನು ಕಂಡು ಸಹಿಸದ ಕೆಲ ಸಮಾಜ ಘಾತುಕ ಶಕ್ತಿಗಳು ಧರ್ಮಸ್ಥಳದ ಹೆಸರಿಗೆ ಕಳಂಕ ತರಬೇಕು ಎಂಬ ಯೋಜನೆಯಲ್ಲಿ ತೊಡಗಿವೆ. ನಾವು ಧರ್ಮಸ್ಥಳ ಧರ್ಮಾಧಿಕಾರಿಗಳಿಗೆ ಎಲ್ಲರೂ ನೈತಿಕ ಬೆಂಬಲ ನೀಡೋಣ ಎಂದರು.

ಕಾಪನಹಳ್ಳಿ ಗವಿಮಠದ ಶ್ರೀಸ್ವತಂತ್ರ ಚನ್ನವೀರ ಮಹಾಸ್ವಾಮಿ, ಎಲ್ಲ ರೀತಿಯ ಗೊಂದಲಗಳಿಗೆ ತೆರೆ ಎಳೆಯಬೇಕು. ಸಾಮಾಜಿಕ ಮಾಧ್ಯಮಗಳಲ್ಲಿ ನಡೆಯುತ್ತಿರುವ ಅಪಪ್ರಚಾರ ತಡೆಯಬೇಕು ಎಂದು ಒತ್ತಾಯಿಸಿದರು.

ಬಳಿಕ ಜಿ.ಪಂ ಮಾಜಿ ಉಪಾಧ್ಯಕ್ಷ ಶೀಳನೆರೆ ಅಂಬರೀಷ್,ಮುಖಂಡ ಅಕ್ಕಿಹೆಬ್ಬಾಳು ರಘು,ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾದ ತಾಲ್ಲೂಕು ಅಧ್ಯಕ್ಷ ಸುಜೇಂದ್ರ ಕುಮಾರ್, ತಾಲೂಕು ವಕೀಲರ ಸಂಘದ ಅಧ್ಯಕ್ಷ ನಾಗೇಗೌಡ,ಕಸಾಪ ಮಾಜಿ ಅಧ್ಯಕ್ಷ ಹರಿಚರಣ ತಿಲಕ್,ಜೆಡಿಎಸ್ ಮುಖಂಡ ಬ್ಯಾಲದಕೆರೆ ನಂಜೇಗೌಡ, ಅರವಿಂದ್ ಕಾರಂತ್,ತೋಟಪ್ಪ ಶೆಟ್ಟಿ,ಮಾತನಾಡಿದರು.

ಮಡಿಕೇರಿ:ಯುಜಿ ಪವರ್ ಕೇಬಲ್ ಅಳವಡಿಕೆ

ಮಡಿಕೇರಿ: ಮಳೆಗಾಲದಲ್ಲಿ ವಿದ್ಯುತ್ ವ್ಯತ್ಯಯ ನಿವಾರಿಸುವ ಸಲುವಾಗಿ ಮಡಿಕೇರಿ ನಗರದಾದ್ಯಂತ ನೆಲದಾಳದ ವಿದ್ಯುತ್ ಕೇಬಲ್ ಅಳವಡಿಕೆಗೆ ಚಿಂತನೆ ಹರಿಸಲಾಗಿದೆ ಎಂದು ಶಾಸಕ ಡಾ. ಮಂಥರ್ ಗೌಡ ಹೇಳಿದ್ದಾರೆ.

ನಗರದ ಲಯನ್ಸ್ ಕ್ಲಬ್ ಸಭಾಂಗಣದಲ್ಲಿ ಲಯನ್ ಸಂಸ್ಥೆಯಿಂದ ನಡೆದ ಎಸ್‌ಎಸ್‌ಎಲ್‌ಸಿ ಟಾಪರ್ ಮಡಿಕೇರಿಯ ತನ್ಮಯಿ ಎಂ.ಎನ್.ಗೆ ಸನ್ಮಾನ ನೆರವೇರಿಸಿ ಮಾತನಾಡಿದರು.

ನಗರದಲ್ಲಿ ಮಳೆಗಾಲದಲ್ಲಿ ಸಾಕಷ್ಟು ಸಮಸ್ಯೆ ಕಂಡು ಬರುತ್ತಿದೆ. ಕುಡಿಯುವ ನೀರಿಗೆ ವಿದ್ಯುತ್ ಸಂಪರ್ಕ ಆದ್ಯತೆಯಾಗಿ ವಿದ್ಯುತ್ ಕೇಬಲ್ ಅಂಡರ್ ಗ್ರೌಂಡ್ ಮೂಲಕ ಅಳವಡಿಸುವ ಚಿಂತನೆಯಿದೆ. ರಾಜ್ಯ ಇಂಧನ ಸಚಿವರಿಗೂ ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ ಎಂದರು. ಮಡಿಕೇರಿಯಲ್ಲಿ 6 ತಿಂಗಳ ಕಾಲ ಮಳೆ ಬೀಳುತ್ತಿದ್ದು ಮೂಲಸೌಲಭ್ಯಕ್ಕೆ ಸಾಕಷ್ಟು ಸಮಸ್ಯೆ ಎದುರಾಗುತ್ತಿದೆ. ಮಡಿಕೇರಿಯಲ್ಲಿ ಮೂಲ ಸೌಲಭ್ಯಕ್ಕೆ ಗಮನ ನೀಡಲಾಗುತ್ತದೆ. ರಸ್ತೆ ಎರಡೂ ಬದಿ ಫುಟ್‌ಪಾತ್ ಯೋಜನೆ ಇನ್ನೇನು ಜಾರಿಯಾಗಲಿದೆ.

ಎಸ್‌ಎಸ್‌ಎಲ್‌ಸಿ ಟಾಪರ್ ಮಡಿಕೇರಿಯ ತನ್ಮಯಿ ಎಂ.ಎನ್.ಗೆ ಸನ್ಮಾನ.

ಜಿಲ್ಲಾಸ್ಪತ್ರೆಯಲ್ಲಿ ಹೃದಯ ಚಿಕಿತ್ಸಾ ಘಟಕ ಪ್ರಾರಂಭಿಸಿ ಉತ್ತಮ ಗುಣಮಟ್ಟದ ಚಿಕಿತ್ಸೆಗೆ ಮುಂದಾಗುತ್ತೇವೆ ಎಂದರು.. ಸನ್ಮಾನ ಸ್ವೀಕರಿಸಿದ ಎಂ.ಎನ್. ತನ್ಮಯಿ, ಪೋಷಕರ ಪ್ರೋತ್ಸಾಹ, ಶಿಕ್ಷಕರ ಮಾರ್ಗದರ್ಶನದಿಂದ 622 ಅಂಕಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಬರಲು ಸಾಧ್ಯವಾಯಿತು ಎಂದರು. ಮಡಿಕೇರಿ ಲಯನ್ಸ್ ಕ್ಲಬ್ ಅಧ್ಯಕ್ಷ ಮದನ್ ಮಾದಯ್ಯ, ಕಾರ್ಯದರ್ಶಿ ಕೆ. ಮಧುಕರ್, ವಲಯಾಧ್ಯಕ್ಷ ಕೆ.ಎಸ್. ನಟರಾಜ್, ಖಜಾಂಜಿ ಕೆ. ದಾಮೋದರ್ ವೇದಿಕೆಯಲ್ಲಿದ್ದರು. ಪ್ರಮುಖರಾದ ಅಂಬೆಕಲ್ ನವೀನ್ ಕುಶಾಲಪ್ಪ, ಎಂ.ಎ.ನಿರಂಜನ್, ಪ್ರತಿಮಾ ರವಿ, ಡಿ.ಜೆ. ಕಿಶೋರ್, ಪ್ರಿಯಾ ನವೀನ್, ಕನ್ನಂಡ ಕವಿತಾ, ಮೋಹನ್ ಕುಮಾರ್, ಸತೀಶ್ ರಾಜ್, ರಾಗ, ಪ್ರೇಮಾಕೋಟಿ ನಿರ್ವಹಿಸಿದರು. ಮುಡಾ ಅಧ್ಯಕ್ಷ ಬಿ.ವೈ. ರಾಜೇಶ್ , ಹಿರಿಯ ಪತ್ರಕರ್ತ ಜಿ. ಚಿದ್ವಿಲಾಸ್, ಎಚ್.ಟಿ.ಅನಿಲ್, ಸಮಿತಿ ಅಧ್ಯಕ್ಷ ಅಂಬೆಕಲ್ ಕುಶಾಲಪ್ಪ ಇದ್ದರು.

ಶ್ರೀಕೃಷ್ಣ ಎಲ್ಲ ಭಾವಗಳ ಮೂರ್ತರೂಪ

ಮೈಸೂರು: ಪ್ರತಿಯೊಬ್ಬರೂ ಅರ್ಥ ಪೂರ್ಣವಾದ ಜೀವನ ನಡೆಸಲು ಭಗವದ್ಗೀತೆ ತಿಳಿಯುವುದು ಅತ್ಯಶ್ಯಕ ಎಂದು ಮುಕ್ತ ವಿಶ್ವವಿದ್ಯಾನಿಲಯದ ಆರ್ಕ್ಯಾಲಾಜಿ ವಿಭಾಗದ ಮುಖ್ಯಸ್ಥ ಪ್ರೊ. ಶೆಲ್ವಪಿಳ್ಳೆ ಅಯ್ಯಂಗಾರ್ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕರ್ನಾಟಕ ಕಲಾಮಂದಿರದ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಆಯೋಜಿಸಲಾಗಿದ್ದ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶ್ರೀಕೃಷ್ಣನನ್ನು ಪೂರ್ಣಾವತಾರ ಎಂದು ಪರಂಪರೆ ಒಕ್ಕಣಿಸಿದೆ. ಮನುಷ್ಯನ ಎಲ್ಲ ಭಾವಗಳ ಮೂರ್ತರೂಪವಾಗಿ ಅವನು ಕಾಣಿಸಿಕೊಂಡ. ಆ ಎಲ್ಲ ಭಾವಗಳನ್ನೂ ಮೀರಿನಿಂತ ಕೂಡ. ಹೀಗಾಗಿಯೇ ಅವನು ಪೂರ್ಣಾವತಾರಿ. ಅವನು ಎಲ್ಲರ ಭಾವಗಳನ್ನೂ ಅರ್ಥಮಾಡಿಕೊಳ್ಳಬಲ್ಲ, ಅವನು ಎಲ್ಲರ ಸಮಸ್ಯೆಗಳಿಗೂ ಪರಿಹಾರವಾಗಿಯೂ ಒದಗಬಲ್ಲ. ಹೀಗಾಗಿಯೇ ಅವನು ಜಗದ್ಗುರು ಎಂದು ಹೇಳಿದರು.

ಜಿಲ್ಲಾಡಳಿತದಿಂದ ಕಿರು ರಂಗಮಂದಿರದಲ್ಲಿ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮ ನಡೆಯಿತು.

ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ತಿಳಿಸಿರುವ ಪ್ರಕಾರ, ಮಾನವ ಹುಟ್ಟು ಸಾವಿನ ನಡುವೆ ಇರುವ ಜೀವನವೆಂಬ ಚಕ್ರದಲ್ಲಿ ಸಿಲುಕಿ ಹೇಗೆ ಸುಖ-ದುಃಖಗಳನ್ನು ಅನುಭಸುತ್ತಾನೆ ?, ಜೀವನದಲ್ಲಿ ಇಟ್ಟುಕೊಂಡ ಗುರಿ ಸಾಧಿಸುವುದರ ಕಡೆಗೆ ಮನಸ್ಸನ್ನು ಕೇಂದ್ರಿಕೃತವಾಗಿ ಇಟ್ಟುಕೊಳ್ಳುವುದು ಹೇಗೆ? ಎಂಬ ಪ್ರಸ್ತಾಪವಿದೆ. ಗೀತೆಯನ್ನು ಉಪದೇಶಿಸಿದ್ದು ಕೇವಲ ಅರ್ಜುನನಿಗೆ ಮಾತ್ರವಲ್ಲ, ಅರ್ಜುನ ಅವನಿಗೆ ಒಂದು ನೆಪ ಅಷ್ಟೆ, ಅವನ ಉಪದೇಶದ ಉದ್ದೇಶ ಇಡೀ ಮನುಕುಲ. ಅದೇ ಅವನ ವ್ಯಕ್ತಿತ್ವದ ವಿಶೇಷತೆ. ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಎಂಎಲ್ಸಿ ಮಂಜೇಗೌಡ, ಎಡಿಸಿ ಡಾ. ಶಿವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಮಾಜಿ ಉಪಮೇಯರ್ ಪುಷ್ಪವಲ್ಲಿ, ಸಮಿತಿ ಮುಖಂಡ ವೆಂಕಟಾಚಲ ಮತ್ತಿತರರು ಉಪಸ್ಥಿತರಿದ್ದರು.

ಪೂರ್ವಜರ ತ್ಯಾಗದಿಂದ ಬಂದ ಸ್ವಾತಂತ್ರ್ಯ

ಪಿರಿಯಾಪಟ್ಟಣ: ಸ್ವಾತಂತ್ರ್ಯವೆಂಬುದು ನಮ್ಮ ಪೂರ್ವಜರ ತ್ಯಾಗ, ಬಲಿದಾನದ ಸಂಕೇತವಾಗಿದೆ. ಸಾವಿರಾರು ದೇಶಭಕ್ತರು, ಹೋರಾಟಗಾರರ, ತ್ಯಾಗ, ಬಲಿದಾನದಿಂದ ಲಭಿಸಿರುವ ಸ್ವಾತಂತ್ರ್ಯ ಉಳಿಸಿಕೊಂಡು ಹೋಗುವ ಕರ್ತವ್ಯ ನಮ್ಮೆಲ್ಲರದಾಗಿದೆ ಎಂದು ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ತಿಳಿಸಿದರು.

ಪಟ್ಟಣದ ಗೋಣಿಕೊಪ್ಪ ರಸ್ತೆಯ ಸರಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ 79 ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಂದು ಹಿರಿಯರು ಬ್ರಿಟಿಷರ ದಾಸ್ಯದಿಂದ ಭಾರತವನ್ನು ಬಿಡುಗಡೆಗೊಳಿಸಿದರ ಫಲವಾಗಿ ಇಂದು ಭಾರತ ವಿಶ್ವದ ಅತ್ಯಂತ ಬಲಿಷ್ಠ ರಾಷ್ಟ್ರಗಳ ಸಾಲಿಗೆ ಸೇರಿದೆ.

ತಾಲೂಕು ಆಡಳಿತದಿಂದ ನಡೆದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ.

ಸ್ವಾತಂತ್ರ್ಯ ಪೂರ್ವದಲ್ಲಿ ದೇಶ ಸಾಕಷ್ಟು ಸಮಸ್ಯೆಗಳಿಂದ ಹಿಂದುಳಿದಿತ್ತು. ಈಗ ಸಾಮಾಜಿಕ ಪ್ರಗತಿಯ ಜೊತೆಗೆ, ಶೈಕ್ಷಣಿಕ, ಕೈಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲೂ ನಾವು ಮುಂದುವರೆದಿದ್ದೇವೆ ಎಂದರು.

ರಾವಂದೂರು ಕಾಲೇಜಿನ ಉಪನ್ಯಾಸಕ ಲಕ್ಷ್ಮಿಕಾಂತ್ ಮಾತನಾಡಿ, ಸ್ವಾತಂತ್ರ್ಯ ಎಂಬುದು ಯಾರೋ ಕೊಟ್ಟ ಭಿಕ್ಷೆಯಲ್ಲ. ಅದು ಭಾರತೀಯರ ಹೋರಾಟದ ಫಲ. ನಾವು ಪ್ರತಿ ಕ್ಷೇತ್ರದಲ್ಲೂ ಮುಂದಿದ್ದು ಆರ್ಥಿಕ ಸದೃಢತೆ ಹೊಂದಿ 4 ನೇ ಸ್ಥಾನದಲ್ಲಿ ಗುರುತಿಸಿಕೊಂಡಿದೆ ಎಂದರು.

ತಹಸೀಲ್ದಾರ್ ನಿಸರ್ಗ ಪ್ರಿಯಾ ರವರು ಧ್ವಜ ಸಂದೇಶ ನೀಡಿದರು. ಎಂಡಿಸಿ ಬ್ಯಾಂಕ್ ನಿರ್ದೇಶಕ ಪಿ ಲೋಕೇಶ್, ಬಿಇಒ ರವಿ ಪ್ರಸನ್ನ ಸಿಪಿಐಗಳಾದ ಗೋವಿಂದರಾಜ್ ದೀಪಕ್, ನೌಕರರ ಸಂಘದ ಅಧ್ಯಕ್ಷ ಕೃಷ್ಣೇಗೌಡ, ಪುರಸಭಾ ಸದಸ್ಯರಾದ ಮಂಜುಳ ಚನ್ನಬಸವರಾಜ್, ಮಂಜುನಾಥ್, ರಾಜೇಶ್, ರವಿ ಉಪಸ್ಥಿತರಿದ್ದರು.

ಕೃಷಿ ಕಾರ್ಮಿಕರ ಸಮಸ್ಯೆ ಪರಿಹರಿಸಿ: ಸಚಿವ

ಮಂಡ್ಯ: ಕೃಷಿ ಕೂಲಿ ಕಾರ್ಮಿಕರು ಸಮಸ್ಯೆಗಳನ್ನು ಪರಿಹರಿಸಲು ಮನವಿ ಗಳನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಿದ್ದು, ನಿಯಮಾನುಸಾರ ಪರಿಹರಿಸಬಹುದಾದ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಿ ವರದಿ ನೀಡುವಂತೆ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ವಸತಿ ಹಾಗೂ ನಿವೇಶನ ರಹಿತ ಬಡ ಕುಟುಂಬಗಳಿಗೆ ಗ್ರಾಮೀಣ ಭಾಗದಲ್ಲಿ ನಿವೇಶನ ಒದಗಿಸಲು ಸರ್ಕಾರಿ ಭೂಮಿ ಇದ್ದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆ ನಡೆಸಿ ಕ್ರಮ ಕೈಗೊಳ್ಳಿ. ಗ್ರಾಮಗಳಲ್ಲಿ ಹಕ್ಕು ಪತ್ರ, ನಿವೇಶನ ಕುರಿತು ಸಮಸ್ಯೆಗಳಿದ್ದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಸಮಸ್ಯೆ ಪರಿಹಾರವಾಗದಿದ್ದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತನ್ನಿ ಎಂದರು.

ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾವಿ ಮಾತನಾಡಿದರು.

ಕೃಷಿ ಕೂಲಿ ಕಾರ್ಮಿಕರಿಗೆ ಯಾವುದೇ ಆಧಾರವಿಲ್ಲದೆ ಬ್ಯಾಂಕ್ ಗಳಿಂದ 2 ಲಕ್ಷ ರೂ ಸಾಲ ನೀಡಬೇಕು. ಈ ಹಿನ್ನೆಲೆಯಲ್ಲಿ ಬ್ಯಾಂಕ್ ವಿಷಯಗಳಿಗೆ ಪ್ರತ್ಯೇಕವಾಗಿ ಸಭೆ ನಡೆಸುವುದಾಗಿ ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಮಂಡ್ಯ ನಗರ ವ್ಯಾಪ್ತಿಯಲ್ಲಿ ಸುಮಾರು 2000 ಕ್ಕೂ ಹೆಚ್ಚು ಜನ ನಿವೇಶನ ರಹಿತ ಬಡವರಿದ್ದು ಅವರಿಗೆ ನಿವೇಶನ ಒದಗಿಸಲು 35 ಎಕರೆ ಭೂಮಿ ಬೇಕಿದ್ದು, ಮಂಡ್ಯ ನಗರ ವ್ಯಾಪ್ತಿಯಲ್ಲಿ ಇರುವುದಿಲ್ಲ 10 ಕಿಮೀ ವ್ಯಾಪ್ತಿಗೆ ಹೋದರೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ ಎಂದರು.

ಸಭೆಯಲ್ಲಿ ಜಿಪಂ ಸಿಇಒ ಕೆ.ಆರ್. ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು

ಪ್ರಯಾಸ್ ಯೋಜನೆಗೆ ಸಚಿವರಿಂದ ಚಾಲನೆ

ಚಾಮರಾಜನಗರ: ಅಂಗನವಾಡಿ ಮಕ್ಕಳಲ್ಲಿ ವಾಕ್-ಶ್ರವಣ ಸಮಸ್ಯೆ ಇದ್ದರೇ ಗುರುತಿಸಿ ಉಚಿತ ಚಿಕಿತ್ಸೆ ನೀಡುವ ಮಹತ್ವಾಕಾಂಕ್ಷಿ 'ಪ್ರಯಾಸ್' ಯೋಜನೆಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಚಾಲನೆ ನೀಡಿದರು.

ನಗರದ ವಾರ್ಡ್ ನಂ.10ರ ಕರಿನಂಜನಪುರ ಬಡಾವಣೆಯ ಅಂಗನವಾಡಿ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಸಹಯೋಗದಲ್ಲಿ ಅಂಗನವಾಡಿ ಮಕ್ಕಳ ವಾಕ್ (ಮಾತು) ಮತ್ತು ಶ್ರವಣ (ಕಿವಿ) ಪರೀಕ್ಷೆಯ 'ಪ್ರಯಾಸ್' ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಮಾತನಾಡಿ, ಇಡೀ ರಾಜ್ಯದಲ್ಲಿಯೇ ಮೊದಲ ಬಾರಿಗೆ ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾಡಳಿತ ರೂಪಿಸಿ ಅನುಷ್ಠಾನಗೊಳಿಸುತ್ತಿರುವ ಪ್ರಯಾಸ್ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮಾತನಾಡಿ ಮಕ್ಕಳ ಕಲಿಕಾ ಪ್ರಕ್ರಿಯೆ ಪೂರಕವಾಗಿರುವ ಉತ್ತಮ ಯೋಜನೆಯಾಗಿದೆ ಎಂದರು.



'ಪ್ರಯಾಸ್' ಯೋಜನೆಗೆ ಸಚಿವ ಕೆ. ವೆಂಕಟೇಶ್ ಅವರು ಚಾಲನೆ ನೀಡಿದರು.

ಕೆಲ ಮಕ್ಕಳಿಗೆ ಮಾತಿನ ತೊಂದರೆ, ಕಿವಿ ಸಮಸ್ಯೆ ಹುಟ್ಟಿನಿಂದಲೇ ಬರುವುದು ಸಹಜ. ಅಂತಹ ಮಕ್ಕಳನ್ನು ಗುರುತಿಸಿ ಅವರಿಗೆ ಅಗತ್ಯವಿರುವ ಚಿಕಿತ್ಸೆ ನೀಡಿ ಗುಣಪಡಿಸುವುದು ಅವಶ್ಯವಾಗಿದೆ. ಇದು ಮಕ್ಕಳ ಮಕ್ಕಳ ಮುಂದಿನ ವಿದ್ಯಾಭ್ಯಾಸಕ್ಕೂ ಅನುಕೂಲವಾಗಲಿದೆ. ಯೋಜನೆಯ ಸದ್ಬಳಕೆಗಾಗಿ ಉತ್ತಮ ಗುಣಮಟ್ಟದ ವೈದ್ಯಕೀಯ ಸೌಲಭ್ಯ ನೀಡುತ್ತಿರುವ ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆ ಕಾರ್ಯ ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಮಾತನಾಡಿ, ಇದೊಂದು ವಿನೂತನ ಕಾರ್ಯಕ್ರಮ. ಜಿಲ್ಲೆಯ 6 ವರ್ಷದವರೆಗಿನ ಎಲ್ಲಾ ಮಕ್ಕಳನ್ನು ಗುರುತಿಸಿ ಉಚಿತ ಚಿಕಿತ್ಸೆ ಸೌಲಭ್ಯ ನೀಡಲು ಜಿಲ್ಲಾಡಳಿತ ಒಪ್ಪಂದ ಮಾಡಿಕೊಂಡಿದೆ. ಜಿಲ್ಲೆಯ 440 ಅಂಗನವಾಡಿಗಳಲ್ಲಿ 37800 ಮಕ್ಕಳಿದ್ದು, ಈ ಪೈಕಿ ಪ್ರಸಕ್ತ ಸಾಲಿನಲ್ಲಿ 35326 ಮಕ್ಕಳ ತಪಾಸಣೆ ಗುರಿ ಹೊಂದಲಾಗಿದೆ

ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಗ್ಯಾರಂಟಿ ಪ್ರಾಧಿಕಾರದ ಜಿಲ್ಲಾಧ್ಯಕ್ಷರಾದ ಹೆಚ್.ವಿ. ಚಂದ್ರು, ಜಿಪಂ ಸಿಇಒ ಮೋನಾ ರೋತ್, ಎಸ್‌ಪಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಸುರೇಶ್, ಡಿಎಚ್‌ಒ ಡಾ. ಎಸ್. ಚಿದಂಬರ ಇದ್ದರು.

ಮೈಸೂರಿನಲ್ಲಿ ವಿಶ್ವ ವಾಣಿ ಸಮೂಹದ ಪ್ರವಾಸಿ ಪ್ರಪಂಚ ವಾರ ಪತ್ರಿಕೆಯನ್ನು ಪಯಣ ಸಂಸ್ಥೆ ಜನರಲ್ ಮ್ಯಾನೇಜರ್ ವಿವೇಕ್ ಶಂಕರ್ ಬಿಡುಗಡೆಗೊಳಿಸಿದರು. ಈ ವೇಳೆ ವಿಶ್ವವಾಣಿಯ ಪ್ರಾದೇಶಿಕ ವ್ಯವಸ್ಥಾಪಕ ಎನ್. ನಂದನ್ ಕುಮಾರ್, ಪ್ರಸರಣ ವಿಭಾಗದ ಎಲ್ಲಪ್ಪ, ಟಿ.ನರಸಿಪುರ ವರದಿಗಾರ ಆನಂದ್ ಉಪಸ್ಥಿತರಿದ್ದರು.

ಗಣೇಶ ಹಬ್ಬ: ಸೌಲಭ್ಯ ಒದಗಿಸಿ

ಚಾಮರಾಜನಗರ: ಜಿಲ್ಲೆಯಲ್ಲಿ ಗೌರಿ ಗಣೇಶೋತ್ಸವಕ್ಕೆ ಗಣೇಶ ಪ್ರತಿಷ್ಠಾಪನೆ, ವಿಸರ್ಜನೆ, ಉತ್ಸವ ದಂತಹ ಕಾರ್ಯಕ್ರಮಗಳಿಗೆ ಅಧಿಕಾರಿಗಳು ಅನು ಮತಿ ನೀಡುವ ಜೊತೆಗೆ ಹಬ್ಬದ ಸಂದರ್ಭದಲ್ಲಿ ಸುರಕ್ಷತೆ ಹಾಗೂ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಸೂಚಿಸಿದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮಾತನಾಡಿದರು.

ಅಧಿಕಾರಿಗಳು ಹಾಗೂ ನಗರದ ವಿದ್ಯಾಗಣಪತಿ ವಿದ್ಯಾಮಂಡಳಿ ಪದಾಧಿಕಾರಿಗಳು, ಮುಖಂಡರೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗೌರಿ ಗಣೇಶ ಪ್ರತಿಷ್ಠಾಪಿಸುವ ಆಯೋಜಕರಿಗೆ ಅನುಮತಿ ನೀಡುವ ಸಲುವಾಗಿ ಅಧಿಕಾರಿಗಳನ್ನೊಳಗೊಂಡ ಏಕಗವಾಕ್ಷಿ ಸಮಿತಿ ರಚಿಸಲಾಗಿದೆ.

ಕಾರ್ಯಕ್ರಮಗಳ ಆಯೋಜಕರು ಆಯಾ ತಾಲೂಕು ವ್ಯಾಪ್ತಿಯ ಸಮಿತಿಯಿಂದ ಕಡ್ಡಾಯವಾಗಿ ಅನುಮತಿ ಪಡೆದುಕೊಳ್ಳಬೇಕಿದೆ. ಆಯೋಜಕರು ಅರ್ಜಿ ಸಲ್ಲಿಸಿದ ಕೂಡಲೇ ಪರಿಶೀಲಿಸಿ ತ್ವರಿತವಾಗಿ ಅನುಮತಿ ನೀಡಬೇಕು ಎಂದರು.

ಗಣೇಶ ಪ್ರತಿಷ್ಠಾಪನೆ, ವಿಸರ್ಜನೆ ಸ್ಥಳಗಳನ್ನು ಅಧಿಕಾರಿಗಳು ಪರಿಶೀಲಿಸಬೇಕು. ಗಣಪತಿ ವಿಸರ್ಜನೆಗಾಗಿ ನಿಗದಿ ಮಾಡಿರುವ ಸ್ಥಳಗಳಲ್ಲಿ ಅಗತ್ಯ ಸೌಕರ್ಯಗಳನ್ನು ಕಲ್ಪಿಸಬೇಕು. ಜಿಲ್ಲಾಡಳಿತ ಪೊಲೀಸ್ ಇಲಾಖೆ ಎಲ್ಲ ಸಹಕಾರ ನೀಡಲಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಎಡಿಸಿ ಟಿ. ಜವರೇಗೌಡ, ಡಿವೈಎಸ್ಪಿ ಲಕ್ಷ್ಮಯ್ಯ, ಎಂಜಿನಿಯರ್‌ಗಳಾದ ಕಿರಣ್, ಅಲ್ತಾಫ್, ತಹಸೀಲ್ದಾರರಾದ ಬಸವರಾಜು, ತನ್ಮಯ್, ನಗರಸಭಾ ಆಯುಕ್ತರಾದ ಎಸ್.ವಿ. ರಾಮದಾಸ್, ರಮೇಶ್ ಇದ್ದರು.

ಶೃಂಗಸಭೆಗೆ ಮಡಿಕೇರಿ ಯದೀಶ್ ಆಯ್ಕೆ

ಮಡಿಕೇರಿ: ನಾರ್ತ್‌ಈಸ್ಟರ್ನ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿರುವ ಕೊಡಗು ಜಿಲ್ಲೆಯ



ಯದೀಶ್ ರಮೇಶ್, ಹಾರ್ವರ್ಡ್ ಪ್ರಾಜೆಕ್ಟ್ ಫಾರ್ ಏಷ್ಯನ್ ಅಂಡ್ ಇಂಟರ್‌ನ್ಯಾಷನಲ್ ರಿಲೇಶನ್ಸ್ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಗಳಲ್ಲಿ ಒಬ್ಬರಾಗಿ ಆಯ್ಕೆಯಾಗಿದ್ದಾರೆ.

ಮಡಿಕೇರಿ ನಗರಸಭಾ ಸದಸ್ಯ ಕೆ.ಎಸ್. ರಮೇಶ್ ಮತ್ತು ಕೆ.ಆರ್. ರಮ್ಯಾ ಅವರ ಪುತ್ರ.ರಾಗಿರುವ ಯದೀಶ್ ರಮೇಶ್ ಏಷ್ಯಾದಿಂದ ಆಯ್ಕೆಯಾದ ಕೆಲವೇ ಪ್ರತಿನಿಧಿಗಳಲ್ಲಿ ಒಬ್ಬರಾಗಿದ್ದಾರೆ. ಈ ಪ್ರತಿಷ್ಠಿತ ಜಾಗತಿಕ ಸಮ್ಮೇಳನ ಆಗಸ್ಟ್ 20 ರಿಂದ 24ರವರೆಗೆ ಜಪಾನ್‌ನ ಟೋಕಿಯೋ ನಗರದಲ್ಲಿ ನಡೆಯಲಿದೆ. ಜಾಗತಿಕ ವೇದಿಕೆಗಳಲ್ಲಿ ಭಾರತದ ಪ್ರತಿನಿಧಿಯಾಗಿ ಹಲವಾರು ಪ್ರಮುಖ ಸಮಾವೇಶಗಳಲ್ಲಿ ಪಾಲ್ಗೊಂಡಿದ್ದರು ನ್ಯೂಯಾರ್ಕ್‌ನ ವಿಶ್ವಸಂಸ್ಥೆ ಮುಖ್ಯ ಕಚೇರಿಯಲ್ಲಿ ನಡೆದ ಯುವ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.

ಈ ಸಾಧನೆ ಸಾಧ್ಯವಾಗಲು ನೆರವಾದ ಕೊಡಗು ಜಿಲ್ಲೆಯ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ, ಮತ್ತು ಮೂಡ ಅಧ್ಯಕ್ಷ ರಾಜೇಶ್ ಯಲ್ಲಪ್ಪ , ಕರ್ನಾಟಕ ಸರ್ಕಾರದ ಬೆಂಬಲ, ಪ್ರೋತ್ಸಾಹ ಮತ್ತು ಮಾರ್ಗದರ್ಶನ ಪ್ರಮುಖವಾಗಿದೆ ಎಂದು ಯದೀಶ್ ರಮೇಶ್ ಹೇಳಿದರು.

ಸಮಾಚಾರ ಸಣ್ಣದಲ್ಲ

ಸ್ವಯಂ ಪ್ರೇರಿತ ರಕ್ತದಾನ ಶಿಬಿರ

ಹುಣಸೂರು: ಪ್ರವೀಣ್ ಕ್ಯಾಪಿಟಲ್ ಪ್ರವೇಟ್ ಲಿಮಿಟೆಡ್ ಹಾಗೂ ಬಿಜಿಎಸ್ ಹಾಸ್ಪಿಟಲ್ ಮೈಸೂರು ಇವರ ಸಹಯೋಗದೊಂದಿಗೆ 79ನೇ ಸ್ವಾತಂತ್ರ್ಯೋತ್ಸವದ ನಿಮಿತ್ತ ಪ್ರವೀಣ್ ಕ್ಯಾಪಿಟಲ್ ಶಾಖೆಯಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ಶಿಬಿರದಲ್ಲಿ 25 ಜನ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿದರು. ನಮ್ಮ ಸಂಸ್ಥೆಯ ಸಿಬ್ಬಂದಿ, ಗ್ರಾಹಕರು ಹಾಗೂ ಪತ್ರಕರ್ತರು ರಕ್ತದಾನ ಮಾಡಿ ರಕ್ತದಾನಕ್ಕೆ ಮೆರಗು ನೀಡಿದರು. ಸ್ಥಳೀಯರು ಸುಮಾರು ನೂರಕ್ಕೂ ಹೆಚ್ಚು ಜನ ಉಚಿತ ತಪಾಸಣೆಯಲ್ಲಿ ಪಾಲ್ಗೊಂಡು ಚಿಕಿತ್ಸೆ ಪಡೆದುಕೊಂಡರು. ಬಿಜಿಎಸ್ ಸಿಬ್ಬಂದಿ ಪ್ರವೀಣ್, ವ್ಯವಸ್ಥಾಪಕ ಲೋಕೇಶ್ ಇದ್ದರು.

ಗ್ರಾಪಂ ಅಧ್ಯಕ್ಷರ ವಿರುದ್ಧ ಅವಿಶ್ವಾಸ

ಮದ್ದೂರು: ತಾಲೂಕಿನ ಚಾಮನಹಳ್ಳಿ ಗ್ರಾಪಂ ಅಧ್ಯಕ್ಷ ಸಿದ್ದರಾಜು ವಿರುದ್ಧ ಆಡಳಿತ ಮಂಡಳಿ ಸದಸ್ಯರು ಮಂಡಿಸಿದ್ದ ಅವಿಶ್ವಾಸ ಮಂಡನೆಗೆ ಬೆಂಬಲ ದೊರೆತದ್ದರಿಂದ ಅಧ್ಯಕ್ಷರ ಪದಚ್ಯುತಿಗೊಂಡಿದೆ. 18 ಸದಸ್ಯಬಲದ ಗ್ರಾ.ಪಂ. ಸದಸ್ಯರ ಪೈಕಿ ಶನಿವಾರ ಉಪವಿಭಾಗಾಧಿಕಾರಿ ಶಿವಮೂರ್ತಿಯವರ ನೇತೃತ್ವದಲ್ಲಿ ನಡೆದ ಸಭೆ ವೇಳೆ 17 ಸದಸ್ಯರು ಸಭೆಗೆ ಹಾಜರಾಗಿ ಅವಿಶ್ವಾಸದ ಪರ 16 ಸದಸ್ಯರು ವಿರುದ್ಧವಾಗಿ ಒಂದು ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.ಪದಚ್ಯುತಿಗೊಂಡ ಜೆ.ಡಿ.ಎಸ್ ಬೆಂಬಲಿತ ಅಧ್ಯಕ್ಷ ಸಿದ್ದರಾಜು ಅವರ ಸ್ಥಾನಕ್ಕೆ ಉಪಾಧ್ಯಕ್ಷೆ ಪುಷ್ಪ ಅವರನ್ನು ಪ್ರಭಾರ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಲು ಉಪ ವಿಭಾಗಾಧಿಕಾರಿ ಸೂಚನೆ ನೀಡಿದ್ದಾರೆ.

ಎಸ್ಸಿ ಒಳ ಮೀಸಲು ವರದಿ ಅವೈಜ್ಞಾನಿಕ

ತಿ.ನರಸೀಪುರ: ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ರವರ ಅವೈಜ್ಞಾನಿಕ ಒಳ ಮೀಸಲಾತಿ ವರದಿಯ ಮೂಲಕ ಬಲಗೈ ಜನಾಂಗದವರನ್ನು ಹತ್ತಿಕ್ಕುವ ಕೆಲಸ ನಡೆದಿದೆ ಎಂದು ಪರಿಶಿಷ್ಟ ಜಾತಿ ಮಹಾಸಭಾ ಅಧ್ಯಕ್ಷ ಸೋಸಲೆ ಶಶಿಕಾಂತ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಇದನ್ನು ಜಾರಿಗೊಳಿಸದೆ ತಡೆ ಹಿಡಿದು ಮರು ಸಮೀಕ್ಷೆ ಮಾಡಬೇಕೆಂದು ಸರಕಾರಕ್ಕೆ ಒತ್ತಾಯಿಸಿದ್ದಾರೆ. ಸಮೀಕ್ಷೆಯಲ್ಲಿ ಚಲವಾದಿ ಹೊಲೆಯ ಹೊಲರ್. ಆರೋಕ್, ಈ ಜಾತಿಗಳನ್ನು ಬಲಗೈ ಜನಾಂಗದ ಪಟ್ಟಿಯಲ್ಲಿ ಸೇರಿಸುವುದಿಲ್ಲ. ಆದ್ದರಿಂದ ಈ ಸಮುದಾಯಗಳನ್ನು ಬಲಗೈ ಸಮುದಾಯಕ್ಕೆ ಸೇರಿಸಬೇಕೆಂದುಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸೋಸಲೆ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ನಂಜುಂಡಯ್ಯ, ಶ್ರೀಧರ್, ಬಿಜೆಪಿ ಅಧ್ಯಕ್ಷ ಲಕ್ಷ್ಮಣ, ಚಿದರವಳ್ಳಿ ಶಿವಣ್ಣ, ಚೌಹಳ್ಳಿ ಜಯರಾಮ್, ಸೋಸಲೆ ಶಿವಣ್ಣ, ಮಂಜುನಾಥ್, ಚಿನ್ನಸ್ವಾಮಿ, ಗಂಗಾಧರ್, ಚಂದ್ರು,ರಂಗಸ್ವಾಮಿ, ರುದ್ರ, ಶಿವಣ್ಣ ಇದ್ದರು.

ಶ್ರೀಶನೈಶ್ಚರ ಸ್ವಾಮಿಗೆ ಬೆಣ್ಣೆಯಿಂದ ಅಲಂಕಾರ

ಹುಣಸೂರು: ನಗರದ ಕಲ್ಕುಣಿಕೆಯ ಕೆ.ಆರ್.ನಗರದ ಮುಖ್ಯರಸ್ತೆಯಲ್ಲಿರುವ ಶ್ರೀಶನೈಶ್ಚರ ಸ್ವಾಮಿ ದೇವಸನ್ನಿಧಿಯಲ್ಲಿ ಶಿವ, ವಿನಾಯಕ, ದುರ್ಗಾಪರಮೇಶ್ವರಿ, ಹಾಗೂ ನಾಗದೇವರಿಗೆ 50 ಕೆಜಿ ನಂದಿನಿ ಬೆಣ್ಣೆಯಿಂದ ಅಲಂಕಾರ ಮಾಡಲಾಗಿತ್ತು. ಕಳೆದ ಮೂರು ವಾರ ಇದೇ ರೀತಿ ಅಲಾಂಕಾರ ನಡೆದಿದ್ದು ಭಕ್ತರು ದೇವರ ಕೃಪೆಗೆ ಪಾತ್ರರಾಗಿದ್ದಾರೆ. ಅಭಿಷೇಕ, ಆರತಿ, ಪೂಜೆ, ಅನ್ನದಾನದ ಪ್ರಸಾದ ನಡೆಯಿತು.

IN THE COURT OF THE CIVIL JUDGE AND J.M.F.C. AT KORATAGERE
C. MIS. NO. 264/2025

Petitioners :- 1) Nagarajappa s/o Late Channarayappa, aged 58 years. **2) E Puttamma** w/o Late Narasimhappa, Aged 54 years. **3) Vijay Kumar** s/o Late Channarayappa, Aged 47 years. All are r/o Kyashavara, Holavanahalli hobli, Koratagere taluk.

-: V/S :-

Respondent:-
The Registrar of Birth and Death's and The Tahasildar Koratagere, Koratagere taluk.

PUBLIC NOTIFICATION

The above named petitioner is filed petition for obtain the Death certificate of the petitioners father Channarayappa s/o Doddachannaiah died on 28-02-2009 at Kyashavara village, Holavanahalli hobli Koratagere taluk. Is there any other legal representatives are here by summoned to appear before this court in person or by a pleader on 13/10/2025 at 11-00 A.M. to answer the same, failing which the petition will be disposed off exparte.
Given under my hand and the seal of the court on this day of 13/18/2025

BY ORDER OF THE COURT
SHERISTEDAR
CIVIL JUDGE SHERASTHEDAR
CIVIL JUDGE AND J.M.F.C COURT AT KORATAGERE

G.M.Krishnamurthy, Advocate,
Komal Girish.N.S. Advocate, Near Mini Vidhana soudha, Koratagere.
Advocate for Petitioners

IN THE COURT OF THE CIVIL JUDGE AT KORATAGERE
C.MIS.No.253/2025

Petitioners :- Arasegouda S/o Late Anjinappa, Age about 73 years, R/o Kenganapalya (V)Kolala Hobli, Koratagere Taluk, Tumkur Disc.

Respondent:-
Deputy Tahasildar, Koratagere (T)

PUBLIC NOTIFICATION

Whereas the petitioner of the above petition, filed to obtain the death certificate of his wife Siddamma w/o Arasegouda died on 04/05/2021 at Kenganapalya Village, Kolala hobli, Koratagere Taluk. It is hereby notify that who ever has interest or objection to obtain the death certificate of the petitioner may appear in person or through your advocate on:- 15/09/2025 in the above case. Failing which the matter will be herd written mined in your absence.

BY ORDER OF THE COURT
SHERISTEDAR KORATAGERE

T. Krishnamurthy B.A.,LL,B,
Advocate for petitioner

ಶ್ರೀಮತಿ ಡಿ.ಚೆನ್ನಮ್ಮ ಎಜುಕೇಶನ್ ಸೊಸೈಟಿ, ಮಾದಾಪುರ
ಸೋಮವಾರ ಪೇಟೆ ತಾಲ್ಲೂಕು, ಕೊಡಗು ಜಿಲ್ಲೆ-571251

ಉಲ್ಲೇಖ – ಸರ್ಕಾರದ ಪತ್ರ ಸಂಖ್ಯೆ ಇಪಿ 234 ಡಿಜಿಡಬ್ಲು 2023, ದಿನಾಂಕ – 23.01.2025
***

ನಮ್ಮ ಆಡಳಿತ ಮಂಡಳಿಯ ವತಿಯಿಂದ ಸೋಮವಾರಪೇಟೆ ತಾಲೂಕಿನ ಮಾದಾಪುರದಲ್ಲಿ ನಡೆಯುತ್ತಿರುವ ಶ್ರೀಮತಿ ಡಿ. ಚೆನ್ನಮ್ಮ ಪದವಿಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಕನ್ನಡ ಭಾಷೆ ಉಪನ್ಯಾಸಕ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಖಾಲಿ ಇರುವ ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ಮೀಸಲಾತಿ/ ಒಳ ಮೀಸಲಾತಿ	ವಯೋಮಿತಿ
01	ಕನ್ನಡ ಭಾಷೆ	01	ಕನ್ನಡ ಭಾಷೆ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇಕಡ 55 ಅಂಕಗಳೊಂದಿಗೆ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣ ಹಾಗೂ ಬಿ.ಇ.ಡಿ ಪದವಿ.	ಮೀಸಲಾತಿ ರಹಿತ	ಸರ್ಕಾರದ ನಿಯಮಾನುಸಾರ

ಈ ಹುದ್ದೆಗೆ ನೇಮಕಾತಿ ಬಯಸುವ ಅಭ್ಯರ್ಥಿಗಳು ಜಾಹೀರಾತು ಪ್ರಕಟಣೆಗೊಂಡ 21 ಕರ್ತವ್ಯದ ದಿನಗಳೊಳಗೆ ವಿದ್ಯಾರ್ಹತೆ ಮತ್ತು ವಯೋಮಿತಿ ಇವುಗಳನ್ನು ದೃಢೀಕರೀಸುವ ಪ್ರಮಾಣ ಪತ್ರಗಳನ್ನು ಲಗತ್ತಿಸಿ, ರು. 1000/– ರಾಷ್ಟ್ರೀಕೃತ ಬ್ಯಾಂಕ್ ಡಿಡಿ ಯೊಂದಿಗೆ ಅರ್ಜಿಯನ್ನು ಅಧ್ಯಕ್ಷರು/ಕಾರ್ಯದರ್ಶಿ, ಶ್ರೀಮತಿ ಡಿ. ಚೆನ್ನಮ್ಮ ಎಜುಕೇಶನ್ ಸೊಸೈಟಿ, ಮಾದಾಪುರ, ಸೋಮವಾರಪೇಟೆ ತಾಲೂಕು, ಕೊಡಗು ಜಿಲ್ಲೆ – 571201 ಇವರಿಗೆ ಸಲ್ಲಿಸುವುದು. ಅರ್ಜಿಯ ಪ್ರತಿಯೊಂದನ್ನು ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಕೊಡಗು ಜಿಲ್ಲೆ. ಇವರಿಗೆ ಕಳುಹಿಸುವುದು.

ದಿನಾಂಕ: 16–08–2025 **ಸಹಿ/– ಅಧ್ಯಕ್ಷರು/ಕಾರ್ಯದರ್ಶಿ**

ಸಮಾಚಾರ ಸಣ್ಣದಲ್ಲ

ವಿಶೇಷ ಚೇತನರಿಗೆ ಉದ್ಯೋಗ ಮೇಳ

ತುಮಕೂರು: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದಲ್ಲಿ ಬೆಂಗಳೂರಿನ ಸಮರ್ಥನಂ ಸಂಸ್ಥೆಯು ವಿಕಲಚೇತನ ಉದ್ಯೋಗಾಕಾಂಕ್ಷಿಗಳಿಗೆ ಆಗಸ್ಟ್ 23ರಂದು ಬೆಳಿಗ್ಗೆ 9 ಗಂಟೆಗೆ ಬೆಂಗಳೂರಿನ ಬಿಇಎಸ್ ಆರ್ಟ್ಸ್, ಕಾಮರ್ಸ್, ಸೈನ್ಸ್ ಕಾಲೇಜಿನಲ್ಲಿ ಉದ್ಯೋಗ ಮೇಳ ಆಯೋಜಿಸಿದೆ. ಕನಿಷ್ಠ 10ನೇ ತರಗತಿ ಅಥವಾ ಮೇಲ್ಪಟ್ಟ ವಿದ್ಯಾರ್ಹತೆಯ ದೈಹಿಕ, ವಾಕ್ ಮತ್ತು ಶ್ರವಣದೋಷ ಹಾಗೂ ದೃಷ್ಟಿದೋಷವುಳ್ಳ ವಿಕಲಚೇತನರು ಭಾಗವಹಿಸಬಹುದು ಎಂದು ಇಲಾಖೆ ಅಧಿಕಾರಿ ಬಿ.ಎಸ್. ಚಿದಾನಂದಮೂರ್ತಿ ತಿಳಿಸಿದ್ದಾರೆ.ಹೆಚ್ಚಿನ ಮಾಹಿತಿಗಾಗಿ ವೀರಭದ್ರ ಪಾಟೀಲ್(ಮೊ.ಸಂ.9480812121), ಸುಭಾಷ್(9449864693) ಅವರನ್ನು ಸಂಪರ್ಕಿಸಬೇಕೆಂದು ಅವರು ತಿಳಿಸಿದ್ದಾರೆ.

ಡಿ. ದೇವರಾಜ ಅರಸು ಜನ್ಮ ದಿನ ಆ.20ರಂದು

ತುಮಕೂರು: ರಾಜ್ಯದ ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆಯನ್ನು ಆಗಸ್ಟ್ 20ರಂದು ನಗರ ಕೇಂದ್ರ ಗ್ರಂಥಾಲಯದಲ್ಲಿ ಅರ್ಥಪೂರ್ಣವಾಗಿ ಹಾಗೂ ವಿಶಿಷ್ಟತೆಯಿಂದ ಆಚರಿಸಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

ಪುಸ್ತಕಗಳ ಪ್ರದರ್ಶನ ಆಕ್ಷೇಪಣೆಗೆ ಅವಕಾಶ

ತುಮಕೂರು: ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯು 2022ನೇ ಸಾಲಿನಲ್ಲಿ ಪ್ರಥಮ ಮುದ್ರಣಗೊಂಡು ಆಯ್ಕೆಗಾಗಿ ಸ್ವೀಕರಿಸಿದ ಪುಸ್ತಕಗಳ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಬೆಂಗಳೂರಿನ ವಿಜಯನಗರ ಎಂ.ಸಿ. ಬಡಾವಣೆ(ಡಾ: ಬಾಲಗಂಗಾಧರನಾಥ ಸ್ವಾಮೀಜಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹತ್ತಿರ) ಡಾ: ವಿಷ್ಣುವರ್ಧನ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರದಲ್ಲಿ ಆಗಸ್ಟ್ 20 ರಿಂದ 22ರವರೆಗೆ ಆಯ್ಕೆಯಾದ ಮತ್ತು ಆಯ್ಕೆಯಾಗದ ಪುಸ್ತಕಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸಲ್ಲಿಸಿದ ಲೇಖಕರು, ಲೇಖಕ-ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು ಆಕ್ಷೇಪಣೆಗಳಿದ್ದಲ್ಲಿ ಆಗಸ್ಟ್ 30ರೊಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01 ಇವರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ವಾ. ಸಂ.0816-2955816ನ್ನು ಸಂಪರ್ಕಿಸಬೇಕೆಂದು ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ ಸಂಭ್ರಮದ ಮೆರವಣಿಗೆ

ಮಧುಗಿರಿ: ತಾಲೂಕಿನ ಪುರವರ ಹೋಬಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ನಿಟ್ರಹಳ್ಳಿ ಶಾಲೆಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಭಿನ್ನ ರೀತಿಯಲ್ಲಿ ಆಚರಣೆ ಮಾಡಿದರು. ಶಾಲಾ ಸಮಿತಿ ಅಧ್ಯಕ್ಷೆ ಸುಮ ಗಿರೀಶ್ ಧ್ವಜಾರೋಹಣ ನೆರವೇರಿಸಿದರು. ಶಾಲೆಯ ವಿದ್ಯಾರ್ಥಿಗಳು ವಿವಿಧ ಪೌರಾಣಿಕ ಹಿನ್ನಲೆಯ ವೇಷ ಭೂಷಣ ಧರಿಸಿ ಟ್ರ್ಯಾಕ್ಟರ್ ಗಳಲ್ಲಿ ತಮಟೆ ವಾದ್ಯಗಳೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಮುಖ್ಯ ಶಿಕ್ಷಕ ಹರೀಶ್, ಉಪಾಧ್ಯಕ್ಷ ಶಿವಶಂಕರಪ್ಪ,ನರಸಿಂಹರಾಜು, ರೇಣುಕಮ್ಮ, ರಾಧಮ್ಮ, ಕವಿತ, ಮಹೇಶ್, ಹರೀಶ್, ಗ್ರಾಪಂ ಅಧ್ಯಕ್ಷೆ ಲಕ್ಷ್ಮಮ್ಮ, ಶಿಕ್ಷಕ ಹನುಮಂತರಾಯ, ರೂಪೇಶ್,ಸಿ ಶುಭಾಸಿನಿ ಇದ್ದರು.

ಐ.ಡಿ.ಹಳ್ಳಿ: ಐ.ಡಿ.ಹಳ್ಳಿ ಗ್ರಾಮ ಪಂಚಾಯಿತಿ ಮುಂಭಾಗ ಗ್ರಾಪಂ ಅಧ್ಯಕ್ಷೆ ಭಾಗ್ಯಮ್ಮ 79ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಧ್ವಜಾರೋಹಣ ನೆರವೇರಿಸಿದರು, ಉಪಾಧ್ಯಕ್ಷೆ ಲಕ್ಷ್ಮಮ್ಮ,ಪಿಡಿಒ ಆಂಜನೇಯಲು, ಗ್ರಾಪಂ ಸದಸ್ಯರು, ಶಿಕ್ಷಕರು ಸಾರ್ವಜನಿಕರು ಹಾಜರಿದ್ದರು.

ವಿದ್ಯುತ್ ರಿಪೇರಿ ವೇಳೆ ಲೈನ್‌ಮನ್ ಸಾವು

ಚಿಕ್ಕನಾಯಕನಹಳ್ಳಿ: ಅಜ್ಜಿಗುಡ್ಡೇ ಸಮೀಪ ವಿದ್ಯುತ್ ತಂತಿ ಸರಿಪಡಿಸಲು ಕಂಬವನ್ನೇರಿ ಕೆಲಸ ಮಾಡುತ್ತಿದ್ದಾಗ ಕಂಬದಲ್ಲಿ ಅಳವಡಿಸಿದ್ದ ಕ್ಲಾಂಪ್ ಆಕಸ್ಮಿಕವಾಗಿ ಮುರಿದ ಪರಿಣಾಮ ಕಂಬದಿಂದ ಬಿದ್ದು ಮೃತಪಟ್ಟ ಘಟನೆ ಶನಿವಾರ ಮಧ್ಯಾಹ್ನ ನಡೆದಿದೆ. ಬಾಗಲಕೋಟೆ ಜಿಲ್ಲೆ ಗಜೇಂದ್ರಗಡದ ಮುತ್ತು ಉಳ್ಳಪ್ಪ (28) ಮೃತಪಟ್ಟವರು. ತಿಮ್ಮನಹಳ್ಳಿ ಉಪ ವಿಭಾಗದಲ್ಲಿ 8 ವರ್ಷಗಳಿಂದ ಇವರು ಸೇವೆ ಸಲ್ಲಿಸುತ್ತಿದ್ದರು. ಇವರಿಗೆ ಪತ್ನಿ ಹಾಗೂ ಮಗಳು ಇದ್ದಾರೆ. ವಿದ್ಯುತ್ ಲೈನ್ ಸಮಸ್ಯೆಯಾಗಿದೆ ಎಂದು ಸ್ಥಳೀಯರು ಶಾಖಾಧಿಕಾರಿಗೆ ವಿಷಯ ತಿಳಿಸಿದ್ದಾರೆ. ಲೈನ್‌ಮನ್ ಮುತ್ತು ಅವರಿಗೆ ವಿದ್ಯುತ್ ಲೈನ್ ದುರಸ್ತಿಗೆ ಸೂಚನೆ ನೀಡಲಾಗಿತ್ತು. ಲೈನ್ ಸರಿಪಡಿಸುವ ವೇಳೆ ಆಕಸ್ಮಿಕವಾಗಿ ಕ್ಲಾಂಪ್ ಮುರಿದು ಕೆಳಗೆ ಬಿದ್ದು ಮೃತಪಟ್ಟಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ. ತಿಮ್ಮನಹಳ್ಳಿ ಶಾಖಾಧಿಕಾರಿ ರಘು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬೆಸ್ಕಾಂ ಇಇ ಸೋಮಶೇಖರಗೌಡ, ಎಇಇ ಗವಿರಂಗಪ್ಪ, ಶೆಟ್ಟಿಕೆರೆ ಎಸ್‌ಒ ಇರ್ಫಾನ್ ಹಾಜರಿದ್ದರು.

{ಡಿ.ಕೆ. ಶಿವಕುಮಾರ್ } ಉಪಮುಖ್ಯಮಂತ್ರಿ
ನಾನು ಒಬ್ಬ ಸಾಮಾನ್ಯ ಕಾರ್ಯಕರ್ತ. ಕನಕಪುರದ ಜನರು ನನ್ನನ್ನು ತುಂಬಾ ಪ್ರೀತಿಸುತ್ತಾರೆ. ಆ ಪ್ರೀತಿ ವಿಶ್ವಾಸವೇ ನನಗೆ ಶಕ್ತಿಯಾಗಿದೆ. ಕಳೆದ ಎಂಟು ವಿಧಾನಸಭಾ ಚುನಾವಣೆಗಳಲ್ಲಿ ನನ್ನನ್ನು ಗೆಲ್ಲಿಸುತ್ತಾ ಬಂದಿದ್ದಾರೆ. ಈ ಜನರು ನೀಡಿದ ಗೆಲುವು ನನಗೆ ಸಾರ್ವಜನಿಕ ರಾಜಕಾರಣದ ಜೀವನದಲ್ಲಿ ರಾಜ್ಯದ ಜನ ಸೇವೆ ಮಾಡಲು ಬಹುದೊಡ್ಡ ಸಹಕಾರಿಯಾಗಿದೆ. ನನ್ನ ಜನತೆಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

ಡಿಸಿ ಕಚೇರಿಯಲ್ಲಿ ಪೂರ್ವಭಾವಿ ಸಭೆ | ಗೃಹ ಸಚಿವ ಪರಮೇಶ್ವರ್ ಘೋಷಣೆ

11 ದಿನ ತುಮಕೂರು ದಸರಾ

ತುಮಕೂರು: ಹನ್ನೊಂದು ದಿನಗಳ ಕಾಲ ತುಮಕೂರು ದಸರಾ ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಹಲವು ಸಿದ್ಧತೆಗಳನ್ನು ನಡೆಸಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪರಮೇಶ್ವರ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಪೂರ್ವಭಾವಿ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ವರ್ಷ 9 ದಿನಗಳ ಕಾಲ ನಡೆದಿದ್ದ ತುಮಕೂರು ದಸರಾ ಈ ಬಾರಿ ಪಂಚಾಂಗದ ಪ್ರಕಾರ 11 ದಿನಗಳ ಕಾಲ ಆಚರಿಸಲು ಸಕಲ ಸಿದ್ಧತೆಗಳನ್ನು ನಡೆಸಿದ್ದು ಈ ಬಾರಿಯ ತುಮಕೂರು ದಸರಾ ಕಳೆದ ಬಾರಿಗಿಂತಲೂ ಹಲವು ವಿಶೇಷತೆಗಳಿಂದ ಕೂಡಿರಲಿದೆ ಎಂದು ತಿಳಿಸಿದರು.

ದಸರಾ ಆಚರಣೆಗೆ ಸಂಬಂಧಿಸಿದಂತೆ ತುಮಕೂರು ಜಿಲ್ಲಾಡಳಿತ ಈಗಾಗಲೇ ರೂಪುರೇಷೆಗಳನ್ನು ಸಿದ್ಧಪಡಿಸಿದೆ. ಸೆ.8ರಂದು ತುಮಕೂರು ದಸರಾ-2025ರ ಲಾಂಛನ ಬಿಡುಗಡೆ ಮಾಡಲಾಗುವುದು ಹಾಗೂ ಸೆ.22ರಿಂದ ಅಕ್ಟೋಬರ್ 2ರವರೆಗೆ ಶಾಸ್ತ್ರೋಕ್ತವಾಗಿ ನವರಾತ್ರಿ ಉತ್ಸವ ಹಾಗೂ ದಸರಾ ಮಹೋತ್ಸವ ನಡೆಲಿದೆ ಎಂದರು.

ಕಳೆದ ಬಾರಿಯಂತೆ ಜೂನಿಯರ್ ಕಾಲೇಜು ಮೈದಾನದಲ್ಲಿ ನವರಾತ್ರಿಯ ಪೂಜಾ ಕೈಂಕರ್ಯಗಳು ನಡೆಯಲಿದ್ದು, ನವದುರ್ಗೆಯರಿಗೆ ದಿನವೂ ವಿಶೇಷ ಅಲಂಕಾರ, ಪೂಜಾ ವಿಧಿ ವಿಧಾನ, ಹೋಮ, ಹವನಗಳು ನಡೆಯಲಿವೆ ಹಾಗೂ ಸಂಜೆ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಸೆಪ್ಟೆಂಬರ್ 22ರಂದು ಮೊದಲ ದಿನವೇ ಗಾಜಿನ ಮನೆಯಲ್ಲಿ ಫಲಪುಷ್ಪ ಪ್ರದರ್ಶನ, ನಗರಾದ್ಯಂತ ವಿಶೇಷ ವಿದ್ಯುತ್ ದೀಪಾಲಂಕಾರ ಹಾಗೂ ಉಚಿತ ಅಂಬಾರಿ ವಿಶೇಷ ಬಸ್‌ಗೆ ಚಾಲನೆ ನೀಡಲಾಗುವುದು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಪರಮೇಶ್ವರ್ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಅ.2ರಂದು ಜಂಭೂ ಸವಾರಿ ಮೆರವಣಿಗೆ
ಕೊನೆಯ ದಿನವಾದ ಅ.2ರಂದು ಜಂಭೂ ಸವಾರಿ ಮೆರವಣಿಗೆ ಕೂಡ ಮೈಸೂರು ದಸರಾ ಮಾದರಿಯಲ್ಲಿ ಹಮ್ಮಿಕೊಳ್ಳಲಾಗುತ್ತಿದ್ದು ನಾಡಿನ ಹೆಸರಾಂತ ಜಾನಪದ ಕಲಾತಂಡಗಳು, ಕಲಾವಿದರು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಸಚಿವರು ತಿಳಿಸಿದರು.

ಇದಲ್ಲದೆ ಮಹಿಳಾ ಮತ್ತು ಮಕ್ಕಳ ದಸರಾ, ವಿಜ್ಞಾನ ಮತ್ತು ತಂತ್ರಜ್ಞಾನ ವಸ್ತು ಪ್ರದರ್ಶನ, ಯುವ ದಸರಾ, ಕವಿಗೋಷ್ಠಿ, ವಿಶೇಷ ಕಾರ್ ಷೋ, ವಿಂಟೇಜ್ ಬೈಕ್ ಷೋ ಇತ್ಯಾದಿ ಕಾರ್ಯಕ್ರಮಗಳು ದಿನವೂ ಸಾರ್ವಜನಿಕರ ವೀಕ್ಷಣೆಗೆ ಹಾಗೂ ಮನರಂಜನೆಗಾಗಿ ಏರ್ಪಡಿಸಲಾಗುತ್ತಿದೆ. ಪಂಜಿನ ಕವಾಯತು ಹಾಗೂ ಡ್ರೋಣ್ ಪ್ರದರ್ಶನವನ್ನು ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ವಿಶೇಷವಾಗಿ ಏರ್ಪಡಿಸಲಾಗುತ್ತಿದ್ದು, ಚೆನ್ನೈನಿಂದ ಆಗಮಿಸಿರುವ ಪರಿಣಿತರು ನಮ್ಮ ಪೊಲೀಸ್ ಹಾಗೂ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದ್ದಾರೆ.

ಅಲ್ಲದೆ ಕೊನೆಯ ಮೂರು ದಿನಗಳು ಈ ಬಾರಿ ವಿಶೇಷ ಮನರಂಜನಾ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು ಇದಕ್ಕಾಗಿ ಕನ್ನಡ ಚಿತ್ರರಂಗದ ಖ್ಯಾತ ಸಂಗೀತ ನಿರ್ದೇಶಕರು, ನಟರನ್ನು ಸಂಪರ್ಕಿಸಲಾಗಿದೆ ಎಂದು ವಿವರಿಸಿದರು. ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಭು ಜಿ. ಜಿಲ್ಲಾ ಪೊಲೀಸ್ ಅಧೀಕ್ಷಕ ಅಶೋಕ್ ಕೆ.ವಿ. ತುಮಕೂರು ಪಾಲಿಕೆ ಆಯುಕ್ತೆ ಆಶ್ವಿಜ, ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿರಿದ್ದರು.

ಬಾಗೇಪಲ್ಲಿಯಲ್ಲಿ ಸಡಗರದ 79ನೇ ಸ್ವಾತಂತ್ರ್ಯ ಸಂಭ್ರಮ

ಬಾಗೇಪಲ್ಲಿ: ನನ್ನ ಮೊದಲ ಆದ್ಯತೆ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಎಂದು ಶಾಸಕ ಎಸ್.ಎನ್ ಸುಬ್ಬಾರೆಡ್ಡಿ ತಿಳಿಸಿದರು. ಪಟ್ಟಣದ ಸರಕಾರಿ ಬಾಲಕಿಯರ ಪ್ರೌಢಶಾಲೆ ಆವರಣದಲಿ 79 ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಾನು ಶಾಸಕನಾಗಿ 13 ನೇ ವರ್ಷ ಈ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸುತ್ತಿದ್ದೇನೆ. ಅಧಿಕಾರಕ್ಕಾಗಿ ಶಾಸಕನಾಗಿಲ್ಲ,ಒಬ್ಬ ರೈತನ ಮಗನಾಗಿ ಈ ಕ್ಷೇತ್ರದ ರೈತರ ಋಣ ತೀರಿಸುತ್ತಿದ್ದೇನೆ. ಹಾಗೇಯೆ ರೈತ ಮಕ್ಕಳು ಶಿಕ್ಷಣ ಪಡೆಯಬೇಕು.

ಹಾಗಾಗಿ 17 ಹಾಸ್ಟೆಲ್ ಗಳನ್ನು ತಂದಿದ್ದೇನೆ. ಹಾಗೇಯೆ 3 ವಸತಿ ಶಾಲೆಗಳನ್ನು ತಂದಿದ್ದೇನೆ ಎಂದು ತಿಳಿಸಿದರು.

ಸಂಸದ ಡಾ.ಕೆ ಸುಧಾಕರ್ ರವರು ನೂತನ ಚೇಳೂರು ತಾಲೂಕಿನಲ್ಲಿ ಪ್ರಜಾಸೌಧ ನಿರ್ಮಿಸಲು ಪ್ರತಿಭಟನೆಯಲ್ಲಿ ಭಾಗವಹಿಸಿ, ಪಟ್ಟಣದಿಂದ ದೂರ ನಿರ್ಮಿಸಲು ಮುಂದಾಗಿದ್ದಾರೆ ಎಂದು ಹೇಳುತ್ತಾರೆ.

ಆದರೆ ಮೆಡಿಕಲ್ ಕಾಲೇಜು ಚಿಕ್ಕಬಳ್ಳಾಪುರ ನಗರದಿಂದ ನಿಮ್ಮೂರು ಪೆರೇಸಂದ್ರ ಸಮೀಪ ಏಕೆ ನಿರ್ಮಿಸಿದ್ದೀರಿ? ನಿಮ್ಮ ಅನುಕೂಲಕ್ಕಲ್ಲವೇ?ಹಾಗಾಗಿ ಯಾವ ನೈತಿಕತೆಯಿಂದ ಪ್ರಶ್ನಿಸುತ್ತೀರಿ ಎಂದರು.

ಈ ವೇಳೆ ತಹಸೀಲ್ದಾರ್ ಎನ್. ಮನೀಷಾ ಮಹೇಶ್ ಪತ್ರಿ, ಇಒ ಜಿ.ವಿ. ರಮೇಶ್, ಆರೋಗ್ಯ ಇಲಾಖೆಯ ಡಾ.ಸಿ.ಎನ್. ಸತ್ಯನಾರಾಯಣರೆಡ್ಡಿ, ಬಿಇಒ ವೆಂಕಟೇಶಪ್ಪ, ಸಿಡಿಪಿಒ ರಾಮಚಂದ್ರ, ತೋಟಗಾರಿಕೆ ಇಲಾಖೆಯ ಲಲಿತಾ, ಅರಣ್ಯ ಇಲಾಖೆ ವಾಸುದೇವಮೂರ್ತಿ, ಬಿಸಿಎಂ ಇಲಾಖೆಯ ಶಿವಪ್ಪ, ನೌಕರರ ಸಂಘದ ಅಧ್ಯಕ್ಷ ಆರ್. ಹನುಮಂತರೆಡ್ಡಿ, ಪುರಸಭೆ ಅಧ್ಯಕ್ಷರಾದ ಶ್ರೀನಿವಾಸ, ಉಪಾಧ್ಯಕ್ಷರಾದ ಸುಜಾತ ನರಸಿಂಹನಾಯ್ಡು, ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷ ಶ್ರೀನಿವಾಸರೆಡ್ಡಿ, ಮುಖಂಡರಾದ ಕೆ.ಸಿ.ಚಂದ್ರಶೇಖರರೆಡ್ಡಿ, ಬಿ.ವಿ. ವೆಂಕಟರವಣ, ಪುರಸಭಾ ಸದಸ್ಯರಾದ ಗಡ್ಡಂ ರಮೇಶ್, ಅಶೋಕ್ ರೆಡ್ಡಿ, ಆಂಜನೇಯರೆಡ್ಡಿ, ಗುಲ್ನಾಜ್ ಬೇಗಂ, ರೇಷ್ಮಾಭಾನು ಭಾಗವಹಿಸಿದ್ದರು.

ಆರೋಗ್ಯ ಕ್ಷೇತ್ರಕ್ಕೆ ಖಾಸಗಿ ಆಸ್ಪತ್ರೆ ಕೊಡುಗೆ ಅಪಾರ

ಚಿಕ್ಕಬಳ್ಳಾಪುರ: ಜನಸಾಮಾನ್ಯರ ಆರೋಗ್ಯ ಸುಧಾರಣೆಯಲ್ಲಿ ಸರಕಾರಿ ಆಸ್ಪತ್ರೆಗಳ ಸೇವೆ ಎಷ್ಟು ಮುಖ್ಯವೋ,ಅಷ್ಟೇ ಪ್ರಮಾಣದಲ್ಲಿ ಖಾಸಗಿ ಆಸ್ಪತ್ರೆಗಳ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಯ ಕೊಡುಗೆಯೂ ಇದೆ ಎಂದು ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ತಿಳಿಸಿದರು.

ನಗರದ ಕೆನರಾಬ್ಯಾಂಕ್ ಹಿಂಭಾಗದ ರಸ್ತೆಯಲ್ಲಿ ಪ್ರಾರಂಭವಾಗಿರುವ ಸಿದ್ವಿನ್ ನೂತನ ಆಸ್ಪತ್ರೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜನಸಂಖ್ಯೆಗೆ ಅನುಗುಣವಾಗಿ ಸರಕಾರವೇ ಎಲ್ಲರಿಗೂ ಆರೋಗ್ಯ ಸೇವೆಯನ್ನು ಒದಗಿಸಲು ಸಾಧ್ಯವಿಲ್ಲದಂತಹ ಪರಿಸ್ಥಿತಿಯಿದೆ. ಇದನ್ನು ಮನಗಂಡೇ ಖಾಸಗಿ ಕ್ಲಿನಿಕ್, ಆಸ್ಪತ್ರೆ, ವೈದ್ಯಕೀಯ ಸಂಸ್ಥೆಗಳು ತಲೆಯೆತ್ತುತ್ತಿವೆ.ಇವುಗಳಿಂದಾಗಿ ಸರಕಾರಿ ವೈದ್ಯರು ಮತ್ತು ಆಸ್ಪತ್ರೆ ಸೇವೆಗಳ ಮೇಲಿನ ಒತ್ತಡ ಕಡಿಮೆಯಾಗಿದೆ ಎಂದರು.

ಚಿಕ್ಕಬಳ್ಳಾಪುರ ನಗರದಲ್ಲಿ ನೂತನವಾಗಿ ವೈದ್ಯಕೀಯ ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸಲು ಮುಂದಾಗಿರುವ ಸಿದ್ವಿನ್ ಆಸ್ಪತ್ರೆಯ ಆಡಳಿತ ಮಂಡಳಿ ಗ್ರಾಮೀಣ ಪ್ರದೇಶದ ಜನತೆಯ ಆಶಾಕಿರಣವಾಗಿ ಬೆಳೆಯಲಿ.ಗುಣಮಟ್ಟದ ಸೇವೆ ನೀಡಿ ರೋಗಿಗಳ ಪಾಲಿಗೆ ಸಂಜೀವಿನಿ ರೀತಿ ಕೆಲಸ ಮಾಡಲಿ. ವೈದ್ಯೋ ನಾರೇಯಣೋ ಹರಿ ಎಂಬ ಉಕ್ತಿಗೆ ಕಳಂಕಬರದಂತೆ ಆರೋಗ್ಯ ಸೇವೆಯಲ್ಲಿ ಉತ್ತರೋತ್ತರ ಅಭಿವೃದ್ಧಿ ಕಾಣಲಿ ಎಂದು ಹಾರೈಸಿದರು.

ನೂತನ ಆಸ್ಪತ್ರೆಯನ್ನು ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಉದ್ಘಾಟಿಸಿದರು.

ಸಿದ್ವಿನ್ ಆಸ್ಪತ್ರೆಯ ಎಂ.ಡಿ.ಡಾ.ಮೇಘನಾ ಮಾತನಾಡಿ ನಮ್ಮ ಆಸ್ಪತ್ರೆಯಲ್ಲಿ ಒಪಿಡಿ ಸೇವೆಗಳು ಸೇರಿದಂತೆ ಶಸ್ತ್ರ ಚಿಕಿತ್ಸೆಯ ತನಕ ಎಲ್ಲಾ ಸೇವೆಗಳು ಒಂದೇ ಸೂರಿನಡಿ ಲಭ್ಯವಿದೆ.ಸಮರ್ಥ ವೈದ್ಯಕೀಯ ಸಿಬ್ಬಂದಿ, ಸೇವಾ ಮನೋಭಾವದ ದಾದಿಯರು ಇದ್ದಾರೆ. ಹಾಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ಒದಗಿಸಲು ಸಂಕಲ್ಪ ಮಾಡಲಾಗಿದೆ ಎಂದರು.

ಎಡಿಸಿ ಡಾ.ಭಾಸ್ಕರ್,ತಹಸೀಲ್ದಾರ್ ರಶ್ಮಿ,ಎಎಸ್ಪಿ ಜಗನ್ನಾಥ್‌ರೈ, ಆರ್‌ಎಂಒ ಡಾ.ರಮೇಶ್, ಮಂಜುನಾಥ್ ಆಸ್ಪತ್ರೆಯ ಡಾ.ಮಂಜುನಾಥ್, ಮಾವು ಅಭಿವೃದ್ಧಿ ಮಂಡಳಿ ಮಾಜಿ ನಿರ್ದೇಶಕ ಕೆ.ವಿ.ನಾಗರಾಜ್ ಇತರೆ ಗಣ್ಯರು ಶುಭಕೋರಿದರು. ಈ ವೇಳೆ ವೈದ್ಯರಾದ ಡಾ.ಅಜಯ್,ಸರ್ಜನ್ ಡಾ.ಅರುಣ್‌ಕುಮಾರ್, ಡಾ.ಗಣೇಶ್, ಡಾ.ಹರಿಣಿ ,ಡಾ.ಶೋಭ ಮತ್ತಿತರರು ಇದ್ದರು.

ಹಲವೆಡೆ ಶ್ರೀಕೃಷ್ಣ ಜನ್ಮಾಷ್ಟಮಿ ಪೂಜೆ

ಅರಸೀಕೆರೆ: ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ತಾಲೂಕಿನ ಸುಕ್ಷೇತ್ರ ಹಾರನಹಳ್ಳಿ ಗುತ್ತಿನಕೆರೆ ಗ್ರಾಮದ ಶ್ರೀರಂಗನಾಥಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಶ್ರಾವಣಮಾಸದ ಮೂರನೇ ಶನಿವಾರವಾದ್ದರಿಂದ ಸಹಜವಾಗಿಯೇ ಭಕ್ತರ ದಂಡು ಮುಂಜಾನೆಯಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿತ್ತು.

ಶ್ರೀರಂಗನಿಗೆ ಮಾಡಿದ್ದ ಶ್ರೀಕೃಷ್ಣಾಲಂಕಾರವನ್ನು ಭಕ್ತರು ಕಣ್ತುಂಬಿಕೊಂಡರು. ಮಹಾಮಂಗಳಾರತಿ ವೇಳೆ ಮುಖಂಡರು, ನಾನಾ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶ್ರೀರಂಗನಾಥಸ್ವಾಮಿ, ತಿಮ್ಮಪ್ಪಸ್ವಾಮಿಯ ಉತ್ಸವ ಮೂರ್ತಿಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಿತು.

ನಾನಾ ಕಡೆ ಪೂಜೆ:

ಇದೇ ರೀತಿ ತಾಲೂಕಿನ ಮಾಲೇಕಲ್ ಅಮರಗಿರಿ ಶ್ರೀಲಕ್ಷ್ಮಿ ವೆಂಕಟರಮಣಸ್ವಾಮಿ ದೇವಾಲಯ, ಬಿಳಿಕಲ್ ಶ್ರೀರಂಗನಾಥಸ್ವಾಮಿ ಬೆಟ್ಟದಪುರದ ಶ್ರೀರಂಗನಾಥ ಸ್ವಾಮಿ ದೇವಾಲಯ, ಜಾವಗಲ್ ಶ್ರೀಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯ, ಹಾರನಹಳ್ಳಿ ಚನ್ನಕೇಶವ ದೇವಾಲಯ ಹಾಗೂ ನಗರದ ರುಕ್ಮಿಣಿ ಪಾಂಡುರಂಗ ದೇವಾಲಯ ಮತ್ತು ಪ್ರಾಚೀನ ಆಂಜನೇಯ ದೇವಾಲಯಗಳಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಗೆ ವಿಶೇಷ ಪೂಜೆಗಳು ನಡೆದವು.

ಗುತ್ತಿನಕೆರೆ ಗ್ರಾಮದ ಶ್ರೀರಂಗನಾಥಸ್ವಾಮಿ, ತಿಮ್ಮಪ್ಪಸ್ವಾಮಿಯ ಉತ್ಸವ ಮೂರ್ತಿಯ ಮೆರವಣಿಗೆ ನಡೆಯಿತು.

ಶಿವರಾಂಪುರಕ್ಕೆ ನಂದಿನಿ ಹಾಲಿನ ಡೇರಿ ಭಾಗ್ಯ

ಕೋಲಾರ: ತಾಲೂಕಿನ ಶಿವರಾಂಪುರ ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಹಾಲು ಅಳೆಯುವುದರ ಮುಖಾಂತರ ಕೋಮುಲ್ ನಿರ್ದೇಶಕ ಡಿ.ವಿ.ಹರೀಶ್ ಉದ್ಘಾಟಿಸಿದರು.

ಸೀಸಂದ್ರ ಡೇರಿಗೆ ಪ್ರತಿ ನಿತ್ಯ ಒಂದೂವರೆ ಕಿಮೀ ನಡೆದುಕೊಂಡು ಹೋಗಿ ಹಾಲು ಹಾಕಬೇಕಿತ್ತು. ಹೊಸ ಡೇರಿಯಿಂದ ಸಮಸ್ಯೆ ಪರಿಹಾರವಾಗಿದೆ. ನೂತನ ಸಂಘದಲ್ಲಿ ಪ್ರತಿ ದಿನ 450 ಲೀಟರ್ ಹಾಲು ಸಂಗ್ರಹಣೆಯಾಗುತ್ತಿದ್ದು ಒಕ್ಕೂಟದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹಾಲು ಉತ್ಪಾದಕರು ಬಳಸಿಕೊಂಡು ಹಾಲು ಉತ್ಪಾದನೆಯನ್ನು ಹೆಚ್ಚಿಸಿ ಆರ್ಥಿಕವಾಗಿ ಸಧೃಡಗೊಳ್ಳುವಂತೆ ತಿಳಿಸಿದರು.

ಗುಣಮಟ್ಟಕ್ಕೆ ತಕ್ಕಂತೆ ದರ ನೀಡಲು ಸಲಹೆ ನೀಡಿದರು.

ಶಿವರಾಂಪುರದಲ್ಲಿ ನೂತನ ಹಾಲಿನ ಡೇರಿಯನ್ನು ಕೋಮುಲ್ ನಿರ್ದೇಶಕ ಡಿ.ವಿ.ಹರೀಶ್ ಉದ್ಘಾಟಿಸಿದರು.

ಕೋಮುಲ್ ಉಪ ವ್ಯವಸ್ಥಾಪಕ ಡಾ.ಮಹೇಶ್, ಸಂಘದ ಅಧ್ಯಕ್ಷ ಎಸ್.ಆರ್ ವೆಂಕಟಾಚಲಪತಿ, ಪಶು ವೈದ್ಯಾಧಿಕಾರಿ ಡಾ.ಅಶ್ವಕ್ ಅಹಮದ್, ವಿಸ್ತರಣಾಧಿಕಾರಿ ಅರುಣ್‌ಕುಮಾರ್, ಶ್ರೀಕಾಂತ್ ಇದ್ದರು.

ಶ್ರೀಕೃಷ್ಣನ ಆದರ್ಶ ಸಾಧನೆಗೆ ಪ್ರೇರಣೆ: ಶಾಸಕ

ತುಮಕೂರು: ಶ್ರೀಕೃಷ್ಣನ ಆದರ್ಶಗಳನ್ನು ಮೈಗೂಡಿಸಿಕೊಂಡರೆ ಮಾತ್ರ ಮುಂದೆ ಬರಲು ಸಾಧ್ಯ ಎಂದು ಶಾಸಕ ಜಿ.ಬಿ. ಜೋತಿಗಣೇಶ್ ತಿಳಿಸಿದರು.

ನಗರದ ಡಾ.ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಜಿಪಂ, ಮಹಾನಗರಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಗೊಲ್ಲ(ಯಾದವ) ಸಂಘದ ವತಿಯಿಂದ ಆಯೋಜಿಸಿದ್ದ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತಿದರು. ನಾವು ಅಧರ್ಮವನ್ನು ಬಹಳ ಉಪಾಯದಿಂದಲೇ ಮೆಟ್ಟಿ ನಿಲ್ಲಬೇಕಾಗಿದೆ.ಭಗವಂತ ಬೋಧಿಸಿದ ಭಗವದ್ಗೀತೆ ಇಂದಿನ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಿದೆ ಎಂದರು.

ಗೊಲ್ಲ ಸಮುದಾಯದ ಮುಖಂಡ ಜಿ.ಎನ್.ಬೆಟ್ಟಸ್ವಾಮಿ ಮಾತನಾಡಿ, ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಿದರೆ ಒಳ್ಳೆಯ ಪ್ರತಿಫಲ ಸಿಕ್ಕೇ ಸಿಗುತ್ತದೆ ಎಂಬುದಕ್ಕೆ ಕುರುಕ್ಷೇತ್ರ ಯುದ್ದವೇ ಸಾಕ್ಷಿ ಎಂದರು. ಜಿಲ್ಲಾ ಯಾದವರ ಸಂಘದ ಅಧ್ಯಕ್ಷ ಜಿ.ಚಂದ್ರಶೇಖರಗೌಡ ಮಾತನಾಡಿ, ಇಡೀ ವಿಶ್ವದಲ್ಲಿರುವ ಭಾರತೀಯರೆಲ್ಲರೂ ಇಂದು ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸುತ್ತಿದ್ದಾರೆ. ಆದರೆ ಇಂದಿಗೂ ಗೊಲ್ಲರಹಟ್ಟಿಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿವೆ.ಕುಡಿಯುವ ನೀರು,ರಸ್ತೆ ಹೀಗೆ ಹಲವು ಕೊರತೆಗಳನ್ನು ಹೊಂದಿವೆ. ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವ ಕೆಲಸ ನೆನೆಗುದಿಗೆ ಬಿದ್ದಿದೆ ಎಂದರು. ಮುಖಂಡರಾದ ಮಹಾಲಿಂಗಯ್ಯ, ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಜಯಣ್ಣ ಬೆಳಗೆರೆ ಮಾತನಾಡಿದರು. ಗೊಲ್ಲ ಸಮಾಜದ ಅಭ್ಯುದಯಕ್ಕೆ ಶ್ರಮಿಸಿದ ಹಿರಿಯರಾದ ಪೂಜಾರ್ ಚಿತ್ತಯ್ಯ, ಬಿ.ವಿ.ವೆಂಕಟರಮರಣಪ್ಪ, ನೀಲಮ್ಮ, ಸಣ್ಣಪ್ಪ, ಅವರುಗಳನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಹಿರಿಯರಾದ ಷಣ್ಮುಖಪ್ಪ, ಚೆಂಗಾವರ ಕರಿಯಪ್ಪ, ವೀರಣ್ಣಗೌಡ, ಚಿಕ್ಕೇಗೌಡ, ಅಕ್ಕಪ್ಪ, ಚಿಕ್ಕಪ್ಪಯ್ಯ, ಎಸ್.ಚಿಕ್ಕರಾಜು, ಸುವರ್ಣಮ್ಮ, ಚಂದ್ರಕಲಾ, ಪುಟ್ಟರಾಜು, ರಂಗನಾಥ್,ಕುಣಿಹಳ್ಳಿ ಮಂಜುನಾಥ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಗೊಲ್ಲಸಮಾಜದ ಹಿರಿಯರನ್ನು ಸನ್ಮಾನಿಸಲಾಯಿತು.

ಸ್ವಾತಂತ್ರ್ಯ ದಿನ : ಹಲವರಿಗೆ ಪುರಸ್ಕಾರ

ಕೋಲಾರ: ತಾಲೂಕಿನ ನರಸಾಪುರ ಕರ್ನಾಟಕ ಪಬ್ಲಿಕ್ ಶಾಲಾ ಸ್ವಾತಂತ್ರ್ಯ ದಿನಾಚರಣೆಯಲ್ಲಿ ನಿವೃತ್ತ ಕುಷ್ಠರೋಗ ನಿಯಂತ್ರಣ ಅಧಿಕಾರಿ ಡಾ.ಎನ್.ಸಿ. ನಾರಾಯಣಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಪಂಚಾಯಿತಿ ಅಧ್ಯಕ್ಷ ಕುಮಾರ್ ಧ್ವಜಾರೋಹಣ ನೆರವೇರಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ಎಂಟಿಬಿ ಶ್ರೀನಿವಾಸ್ ತಂಡದವರು ಗಾಂಧೀಜಿ ಮತ್ತು ಅಂಬೇಡ್ಕರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು. ಶಿಕ್ಷಕ ಡಿ.ಕೆ. ವೆಂಕಟರವಣ, ಶಿಕ್ಷಕಿ ರೇಣುಕಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಹೆಚ್ಚಿನ ಅಂಕ ಗಳಿಸಿದ ಪ್ರತಿಭೆಗಳಿಗೆ ನಗದು ಬಹುಮಾನವನ್ನು ಬೆಸ್ತರ ನಾರಾಯಣಪ್ಪ ವಿತರಣೆ ಮಾಡಿದರು.

ಸಾಂಸ್ಕೃತಿಕ ಪ್ರತಿಭೆಗಳಿಗೆ ವರ್ತಕರ ಸಂಘದ ಓಂ ಪ್ರಕಾಶ್ ಬಹುಮಾನ ಕೊಟ್ಟು ಊಟದ ವ್ಯವಸ್ಥೆ ಏರ್ಪಡಿಸಿದ್ದರು. ಭಾನುಪ್ರಕಾಶ್ ಮತ್ತು ಓಂ ಪ್ರಕಾಶ್ ಸನ್ಮಾನಕ್ಕೆ ಭಾಜನರಾದರು. ಪ್ರಾಂಶುಪಾಲೆ ಮಂಜುಳಾ, ಉಪ ಪ್ರಾಂಶುಪಾಲ ಗೋಪಿನಾಥ್, ರೇಣುಕಾ, ಪಿ. ಭಾರತಿ, ಸಚಿನ್ ನಾರಾಯಣಸ್ವಾಮಿ, ಪಂಚಾಯಿತಿ ಉಪಾಧ್ಯಕ್ಷೆ ಪದ್ಮಮ್ಮ, ಮುಖಂಡ ನವೀನ್ ಕುಮಾರ್, ಚಂದ್ರ ಮೋಹನ್, ಜಾಲಿ ಬಾನು ಇದ್ದರು.

'ಸಂಭವಾಮಿ ಯುಗೇ ಯುಗೇ' ಕೃಷ್ಣ ಮಂತ್ರ

ಚಿಕ್ಕಬಳ್ಳಾಪುರ: ಮನುಷ್ಯನ ಜೀವನಕ್ಕೆ ಬೇಕಾದ ಎಲ್ಲ ಆದರ್ಶಗಳು, ಸಲಹೆ, ಮಾರ್ಗದರ್ಶನಗಳು ಭಗವದ್ಗೀತೆಯಲ್ಲಿವೆ ಎಂದು ಜಿಲ್ಲಾಧಿಕಾರಿ ಪಿ ಎನ್ ರವೀಂದ್ರ ಅವರು ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಯಾದವ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಡಿ ನಡೆದ ಶ್ರೀಕೃಷ್ಣನ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಹಿಂದೂ ಧರ್ಮಿಯರು ಕೃಷ್ಣನನ್ನು ಆರಾಧಿಸುವ, ಪೂಜಿಸುವ ಸಂಪ್ರದಾಯವನ್ನು ಅನಾಧಿ ಕಾಲದಿಂದಲೂ ಪಾಲಿಸುತ್ತಿದ್ದಾರೆ. ಧರ್ಮದ ರಕ್ಷಣೆ ಮಾಡಲು ಎಲ್ಲಾ ಕಾಲಕ್ಕೂ 'ಸಂಭವಾಮಿ ಯುಗೇ ಯುಗೇ' ಎಂದು ಹೇಳಿ ಜಗದೋದ್ಧಾರಕನಾಗಿ ನಿಂತ ಎಂದು ತಿಳಿಸಿದರು. ಪೆರೇಸಂದ್ರದ ಕಾಲೇಜಿನ ಪ್ರಾಂಶುಪಾಲ ಪಿ.ಎನ್. ನರಸಿಂಹರೆಡ್ಡಿ ಮಾತನಾಡಿ ಉಪನ್ಯಾಸ ನೀಡಿದರು. ಅಪರ ಜಿಲ್ಲಾಧಿಕಾರಿ ಡಾ.ಎನ್ ಭಾಸ್ಕರ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಜಗನ್ನಾಥ್ ರೈ, ಸಹಾಯಕ ನಿರ್ದೇಶಕ ಡಿ.ಎಂ ರವಿಕುಮಾರ್, ತಹಸೀಲ್ದಾರ್ ರಶ್ಮಿ, ಸಮುದಾಯದ ಮುಖಂಡರಾದ ಕೆ.ಎಂ ಮುನೇಗೌಡ, ಆರ್ ವೆಂಕಟೇಶ್, ವಿ.ಮನಿಕೃಷ್ಣಪ್ಪ, ವೆಂಕಟೇಶ್, ಶ್ರೀನಿವಾಸ್, ಇದ್ದರು.

ಅಪಘಾತಕ್ಕೀಡಾಗಿದ್ದ ಕತ್ತೆ ಮರಿ ಚೇತರಿಕೆ

ತಿಪಟೂರು: ಹುಳಿಯಾರು ರಸ್ತೆಯ ಶಂಕರನಗರ ಬಡಾವಣೆಗೆ ಹೊಂದಿಕೊಂಡಂತೆ ಮುಖ್ಯರಸ್ತೆಯಲ್ಲಿ ಕಳೆದ ಎರಡು ದಿನಗಳಿಂದ ಅಪಘಾತಕೀಡಾದ ಕತ್ತೆ ಮರಿ ತೀವ್ರವಾಗಿ ಗಾಯಗೊಂಡಿತ್ತು.

ಇದೀಗ ಚೇತರಿಕೆ ಕಾಣುತ್ತಿದೆ. ಸ್ಥಳೀಯರು ನಗರ ಸಭೆ ಮತ್ತು ಪಶು ಇಲಾಖೆಗೆ ಕರೆ ಮಾಡಿ ವಿಷಯ ತಿಳಿಸಿದರು ಸ್ಪಂದಿಸುತ್ತಿಲ್ಲ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದರು. ಅದರ ಬೆನ್ನಲ್ಲೇ ಸಾಮಾಜಿಕ ಕಳಕಳಿಯಿಂದ ವಿಶ್ವವಾಣಿ ವರದಿಗಾರರು ಪೌರಾಯುಕ್ತರಿಗೆ ಮತ್ತು ಪಶುವೈದ್ಯಾಧಿಕಾರಿಗೆ ವಿಷಯ ಮುಟ್ಟಿಸಿ, ಉಸಿರಾಡುತ್ತಿದ್ದ ಕತ್ತೆಮರಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ಕೊಡಿಸಿ ಕತ್ತೆಮರಿಯೂ ಚೇತರಿಕೆ ಕಂಡು ಪ್ರಾಣಾಪಾಯದಿಂದ ಪಾರಾಗಿದೆ.ಸ್ಥಳೀಯರ ಹೇಳಿಕೆ ಪ್ರಕಾರ ಕತ್ತೆಗಳನ್ನು ಸಾಕಿರುವ ಮಾಲೀಕ ಕತ್ತೆಗಳನ್ನು ರಸ್ತೆಯಲ್ಲಿ ಓಡಾಡಲು ಬಿಟ್ಟಿದ್ದರಿಂದ ಆಗಾಗ ಅಪಘಾತಗಳು ಸಂಭವಿಸುತ್ತಿವೆ. ಕತ್ತೆ ಮಾಲೀಕನಿಗೆ ಕತ್ತೆಗಳನ್ನು ರಸ್ತೆಗೆ ಬಿಡದಂತೆ ಹೇಳಿದರೆ, ಸ್ಥಳೀಯರನ್ನು ಅವ್ಯಾಚ ಶಬ್ದಗಳಿಂದ ನಿಂದಿಸುತ್ತಾನಂತೆ.ನಗರಸಭೆ ವತಿಯಿಂದ ಕತ್ತೆ ಮಾಲೀಕನಿಗೆ ಈಗಾಗಲೇ ನೋಟಿಸ್ ಕೂಡ ಜಾರಿ ಮಾಡಲಾಗಿದೆ. ನಗರ ಸಭೆ ಅಧಿಕಾರಿಗಳು ಶೀಘ್ರವೇ ಕತ್ತೆ ಮಾಲೀಕನ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಸ್ಥಳೀಯರು ವಿನಂತಿಸಿಕೊಂಡಿದ್ದಾರೆ.

ಧರ್ಮಸ್ಥಳ ಚಲೋ: ತಪ್ಪಿತಸ್ಥರಿಗೆ ಶಿಕ್ಷೆ ಆಗಲಿ

ಹಾಸನ: ಧರ್ಮಸ್ಥಳದಲ್ಲಿ ಶವ ಹೂತಿಟ್ಟ ಆರೋಪ ಹಾಗೂ ಎಸ್‌ಐಟಿ ತನಿಖೆ ಹಿನ್ನೆಲೆಯಲ್ಲಿ ಶ್ರೀ ಕ್ಷೇತ್ರದ ಬಗ್ಗೆ ಅಪಪ್ರಚಾರ ಖಂಡಿಸಿ ಹಾಗೂ ಧರ್ಮಸ್ಥಳ ಪರವಾಗಿ ಬೆಂಗಳೂರಿನ ಯಲಹಂಕ ಕ್ಷೇತ್ರದ ಶಾಸಕ ಎಸ್. ಆರ್.ವಿಶ್ವನಾಥ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಧರ್ಮಸ್ಥಳ ಚಲೋ ಇಂದು ನಗರದ ಮೂಲಕ ಹಾದು ಹೋಯಿತು.

ಧರ್ಮಸ್ಥಳದ ಜೊತೆ ನಾವು ಎಂಬ ಘೋಷಣೆಯೊಂದಿಗೆ ನೂರಾರು ಕಾರುಗಳು ಧರ್ಮಸ್ಥಳ ಕಡೆಗೆ ಸಂಚರಿಸಿದವು. ಬೆಳಗ್ಗೆ ಜಾಥಾದೊಂದಿಗೆ ನಗರ ತಲುಪಿದ ಎಸ್. ಆರ್ ವಿಶ್ವನಾಥಗೆ ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಆರತಿ ಬೆಳಗಿ ಸ್ವಾಗತ ಕೋರಿದರು. ನೂರಾರು ಕಾರುಗಳಲ್ಲಿ ಸಾವಿರಾರು ಭಕ್ತರು ಧರ್ಮಸ್ಥಳ ಕಡೆಗೆ ಪ್ರಯಾಣ ಬೆಳೆಸಿದರು. ಬೃಹತ್ ಜಾಥಾ, ಸಕಲೇಶಪುರ, ಶಿರಾಡಿಘಾಟ್, ಗುಂಡ್ಯಾ ಮೂಲಕ ಧರ್ಮಸ್ಥಳ ತಲುಪಿ ಸಂಜೆ ವೇಳೆಗೆ ಬೆಂಗಳೂರಿಗೆ ವಾಪಸ್ ಆಗಲಿದೆ.

ಈ ವೇಳೆ ಮಾತನಾಡಿದ ವಿಶ್ವನಾಥ್, ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ. ಸೌಜನ್ಯ ಕೇಸ್ ತನಿಖೆ ಮಾಡಲಿ ನಮ್ಮ ಅಡ್ಡಿ ಇಲ್ಲ, ಸ್ವಾಗತ ಮಾಡಿದ್ದೇವೆ. ಧರ್ಮಸ್ಥಳದ ಬುಡಕ್ಕೆ ಕೈ ಹಾಕುವ ಕೆಲಸ ಮಾಡುತ್ತಿದ್ದಾರೆ, ಮಂಜುನಾಥ ಸ್ವಾಮಿ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ ಎಂದರು. ಅನಾಮಿಕನ ಮಾತು ಕೇಳಿ ತಪ್ಪು ಮಾಡಿದ್ದೇವೆ ಅಂತ ಸರ್ಕಾರಕ್ಕೆ ಅನ್ನಿಸಿದೆ, ಅಧಿವೇಶನದಲ್ಲಿ ಸೋಮವಾರ ತನಿಖೆ ವರದಿ ಮಂಡಿಸಬೇಕು, ದೇವರು ಶಿಕ್ಷೆ ಕೊಡಬೇಕಾದರೆ ನಿಧಾನ ಆಗುತ್ತೆ, ಕಾಂಗ್ರೆಸ್‌ನವರು ಈಗ ಷಡ್ಯಂತ್ರ ಅಂತ ಹೇಳುತ್ತಿದ್ದಾರೆ, ಇದು ಹೇಗೆ ಎಂದು ಪ್ರಶ್ನಿಸಿದರು. ನಾಳೆಯಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು, ಧರ್ಮಸ್ಥಳ ಭಕ್ತರಿಂದ ತುಂಬಿ ತುಳುಕಬೇಕು, ಜನರು ದೇವರ ಮೇಲೆ ವಿಶ್ವಾಸ ಕಳೆದುಕೊಳ್ಳಬಾರದು, ನನ್ನ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ ಅವರ ವಿರುದ್ಧ ಸೋಮವಾರ ಅಧಿವೇಶನದಲ್ಲಿ ಹಕ್ಕುಚ್ಯುತಿ ಮಂಡಿಸುತ್ತಿದ್ದೇನೆ ಎಂದರು.

ಅನಾಮಿಕನ ಮಂಪರು ಪರೀಕ್ಷೆ ಮಾಡಲಿ:ವಿಶ್ವನಾಥ
ಎಸ್‌ಐಟಿ ತನಿಖೆಗೆ ಕೊಟ್ಟಾಗ ಶವಗಳು ದೊರೆಯಬಹುದು ಎಂದು ಸರಕಾರ ಅಂದುಕೊಂಡಿತ್ತು, 13ನೇ ಪಾಯಿಂಟ್‌ನಲ್ಲಿ ಏನು ಸಿಗಲಿಲ್ಲ, ಆಮೇಲೆ ಧರ್ಮಸ್ಥಳದ ಜೊತೆ ಇದ್ದೇವೆ ಎಂದು ಮಾತನಾಡಲು ಆರಂಭಿಸಿದರು. ಅನಾಮಿಕ ಹೇಳಿದ್ದನ್ನೆಲ್ಲಾ ಕೇಳಿದ್ರೆ ಇಡೀ ಧರ್ಮಸ್ಥಳವನ್ನೇ ಅಗೆಯಬೇಕು, ವಿಧಾನಸೌಧ ಕಟ್ಟುವ ಸಂದರ್ಭದಲ್ಲಿ ಯಾರನ್ನೋ ಕೊಲೆ ಮಾಡಿ ಸ್ಪೀಕರ್ ಕೂರುವ ಜಾಗದ ಕೆಳಗೆ ಹೂತಿದ್ದೇನೆ ಎಂದು ಹೇಳಿದರೆ ತೆಗೆಯಲು ಆಗುತ್ತಾ ಎಂದು ಪ್ರಶ್ನಿಸಿದರು. ಅನಾಮಿಕನನ್ನು ಮೊದಲು ಮಂಪರು ಪರೀಕ್ಷೆ ಮಾಡಲಿ, ಅವನು ಸುಳ್ಳು ಹೇಳಿದ್ರೆ ಕ್ರಮ ಆಗಬೇಕೆಂದರು.

ಕೊನೆ ಶ್ರಾವಣ ಶನಿವಾರ ವಿಶೇಷ ಪೂಜಾದಿಗಳು

ಚಿಂತಾಮಣಿ: ಶ್ರಾವಣ ಮಾಸದ ಕೊನೆಯ ಶನಿವಾರದಂದು, ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ವರಾದಾದ್ರಿ ಬೆಟ್ಟದ ಶ್ರೀವೀರಾಂಜನೇಯ ಸ್ವಾಮಿ ದೇವಸ್ಥಾನಕ್ಕೆ ವಿಶೇಷ ಅಲಂಕಾರ ಪೂಜೆ, ಶ್ರೀವರದಾಂಜನೇಯ ಸ್ವಾಮಿಗೆ ತಿರುಪತಿ ತಿರುಮಲದಲ್ಲಿ ನಡೆಯುವ ಶೈಲಿಯಲ್ಲಿ 108 ಕೆ ಜಿಗಳ ಪುಳಿಯೋಗರೆ ಸೇವೆ ತಿರುಪ್ಪಾವಡ ಸೇವೆ ಮಾಡಲಾಗಿತ್ತು. ಇತಿಹಾಸ ಪ್ರಸಿದ್ಧ ಈ ದೇವಸ್ಥಾನದಲ್ಲಿ ಪ್ರತಿವರ್ಷ ಶ್ರಾವಣ ಮಾಸದಲ್ಲಿ ಶನಿವಾರ, ಸೋಮವಾರ ವಿಶೇಷ ಪೂಜೆ ನೆರವೇರಿಸಲಾಗುತ್ತಿದೆ.ಅದರಂತೆ ಬೆಳಿಗ್ಗೆ ಕಾಕಡಾರತಿ, ವಾಯುಸ್ತುತಿ ಪುನಶ್ಚರಣ, ವಿಷ್ಣು ಸಹಸ್ರನಾಮ, ಪಂಚಾಮೃತ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ಕಾರ್ಯಕ್ರಮಗಳು ಜರುಗಿದವು. ನಗರದ ವಿವಿಧ ಭಾಗಗಳಲ್ಲಿ ದೇವಸ್ಥಾನಗಳ ಮುಂಭಾಗ ಅನ್ನದಾನ ಕಾರ್ಯಕ್ರಮಗಳು ಸಹ ಏರ್ಪಡಿಸಲಾಗಿತ್ತು.

ಸಮಾಚಾರ ಸಣ್ಣದಲ್ಲ

ವಿವಾಹಿತೆಯ ಕೊಲೆಗೈದು ಪ್ರಿಯಕರ ಆತ್ಮಹತ್ಯೆ

ಬೆಳಗಾವಿ: ಅನೈತಿಕ ಸಂಬಂಧಕ್ಕೆ ಒಪ್ಪದ ಮಹಿಳೆಯನ್ನು ವಿವಾಹಿತ ಯುವಕ ಚಾಕು ಇರಿದು ಕೊಲೆ ಮಾಡಿದ್ದಲ್ಲದೆ ತಾನೂ ಆತ್ಮಹತ್ಯೆಗೆ ಶರಣಾದ ಘಟನೆ ಜಿಲ್ಲೆಯ ಖಾನಾಪುರ ತಾಲೂಕಿನ ಬೀಡಿ ಗ್ರಾಮದಲ್ಲಿ ನಡೆದಿದೆ. ಆನಂದ ಸುತಾರ್ (31) ಆತ್ಮಹತ್ಯೆಗೆ ಶರಣಾದ ಯುವಕ. ಹಾಗೂ ರೇಷ್ಮಾ ತಿರವಿರ (30) ಕೊಲೆಯಾದ ಮಹಿಳೆ. ಘಟನೆಗೆ ಇಬ್ಬರ ನಡುವಿನ ಅನೈತಿಕ ಸಂಬಂಧವೇ ಕಾರಣ ಎಂದು ಹೇಳಲಾಗುತ್ತಿದೆ.

ಆನಂದ ಹಾಗೂ ರೇಷ್ಮಾ ಒಂದೇ ಗ್ರಾಮದವರಾಗಿದ್ದು, ಇವರ ನಡುವೆ ಕಳೆದ ಎರಡು ವರ್ಷಗಳಿಂದ ಅನೈತಿಕ ಸಂಬಂಧ ಇತ್ತು. ರೇಷ್ಮಾ ಪತಿ ಶಿವಾನಂದನಿಗೆ ವಿಷಯ ಗೊತ್ತಾಗುತ್ತಿದ್ದಂತೆ ನಂದಗಡ ಪೊಲೀಸ್ ಠಾಣೆಯಲ್ಲಿ ಮೃತ ಆನಂದನ ವಿರುದ್ಧ ಪ್ರಕರಣ ದಾಖಲಿಸಿ ಪೊಲೀಸರಿಂದ ಎಚ್ಚರಿಕೆ ಕೊಡಿಸಿದ್ದ. ಕಳೆದ ಕೆಲ ದಿನಗಳಿಂದ ಆನಂದ ರೇಷ್ಮಾಳ ಹಿಂದೆ ಬಿದ್ದಿದ್ದ. ಅನೈತಿಕ ಸಂಬಂಧಕ್ಕೆ ಆಕೆ ಆಸ್ಪದ ನೀಡದ ಕಾರಣಕ್ಕೆ ಚಾಕುವಿನಿಂದ ಇರಿದು ರೇಷ್ಮಾಳನ್ನು ಕೊಲೆ ಮಾಡಿದ್ದಾನೆ. ಭಯದಿಂದ ತಾನೂ ಚಾಕುವಿನಿಂದ ಇರಿದುಕೊಂಡಿದ್ದಾನೆ. ರಕ್ತದ ಮಡುವಿನಲ್ಲಿದ್ದ ಆನಂದ್ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯ ಸಾವನ್ನಪ್ಪಿದ್ದಾನೆ. ಈ ಸಂಬಂಧ ನಂದಗಡ ಠಾಣೆಯಲ್ಲಿ ದೂರು ದಾಖಲಾಗಿದೆ.

ಜನಾಕ್ರೋಶದ ಬೆನ್ನಲ್ಲೇ ಧರ್ಮಸ್ಥಳ ಪರ ಕೈ ಪಡೆ

ಎಸ್‌ಐಟಿ ರಚನೆ ಬಳಿಕ ಮೌನಕ್ಕೆ ಶರಣಾಗಿದ್ದ ನಾಯಕರು | ಸದ್ಯ ಧರ್ಮಸ್ಥಳದ ಪರ ಮಾತಾಡುತ್ತಿರುವ ಕಾಂಗ್ರೆಸ್ ನಾಯಕರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರೀ ವಿವಾದಕ್ಕೆ ಕಾರಣವಾಗಿರುವ ಧರ್ಮಸ್ಥಳ ಬುರುಡೆ ಪ್ರಕರಣದಲ್ಲಿ ಭಕ್ತರ ಆಕ್ರೋಶ ಸರಕಾರ ಹಾಗೂ ಪಕ್ಷದ ವಿರುದ್ಧ 'ತಿರುಗಲು' ಶುರುವಾಗುತ್ತಿದ್ದಂತೆ ಎಚ್ಚೆತ್ತಿರುವ ಕೈ ನಾಯಕರು ಧರ್ಮಸ್ಥಳದ ವಿರುದ್ಧ ಸರಕಾರವಿಲ್ಲ ಎನ್ನುವ ಸಂದೇಶವನ್ನು ರವಾನಿಸುವ ಪ್ರಯತ್ನ ಆರಂಭಿಸಿದ್ದಾರೆ.

ಸರಕಾರ ಎಸ್‌ಐಟಿ ರಚಿಸಲು ಮುಂದಾಗಲೇ ಬಹುತೇಕ ಕಾಂಗ್ರೆಸಿಗರು ಜನರ ಆಕ್ರೋಶದ ಮಾತುಗಳನ್ನು ಆಡಿದ್ದರು. ಆದರೆ ಅನಾಮಧೇಯಕ ವ್ಯಕ್ತಿ 'ಬುರುಡೆ' ಸಮೇತ ಹೇಳಿಕೆ ನೀಡಿದ್ದರಿಂದ ಈ ಹಂತದಲ್ಲಿ ವಿರೋಧಿಸದರೆ ಸಮಸ್ಯೆಯಾಗಲಿದೆ ಎಂದು ಮೌನವಾಗಿದ್ದರು. ಕಳೆದ ಎರಡು ಮೂರು ವಾರದಲ್ಲಿ ನಡೆದ ಘಟನಾವಳಿಯಲ್ಲಿ ಬುರುಡೆ ವ್ಯಕ್ತಿಯ ಹೇಳಿಕೆಯಲ್ಲಿ 'ಸತ್ಯ'ವಿಲ್ಲ ಎನ್ನುವ ಅರಿವಾಗುತ್ತಿದ್ದಂತೆ ಎಸ್‌ಐಟಿಯ ಭವಿಷ್ಯದ ಬಗ್ಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚಿಸಿದ್ದರು.

ಆದರೆ ಕಳೆದ ನಾಲ್ಕು ದಿನದಲ್ಲಿ ಜನಾಭಿಪ್ರಾಯ ಧರ್ಮಸ್ಥಳ ಪರವಾಗಿ ಬರಲು ಶುರುವಾದ ಬೆನ್ನಲ್ಲೇ, ಆತಂಕಗೊಂಡ ಬಹುತೇಕ ಶಾಸಕರು, ಎಸ್‌ಐಟಿಯನ್ನು ಸ್ಥಗಿತಗೊಳಿಸುವಂತೆ ಹಾಗೂ ಧರ್ಮಸ್ಥಳದ ಪರ ನಿಲ್ಲುವುದೇ ಸೂಕ್ತ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದರಲ್ಲಿಯೂ, ಧರ್ಮಸ್ಥಳ ಭಕ್ತರ ಸಂಖ್ಯೆ ಹೆಚ್ಚಿರುವ ಕ್ಷೇತ್ರದ ಶಾಸಕರು, ಎಸ್‌ಐಟಿಯನ್ನು ಕೈಬಿಡುವುದೇ ಸೂಕ್ತ ಎನ್ನುವ ಜತೆಗೆ ಧರ್ಮಸ್ಥಳದ ಪರ ನಿಂತರು ಎನ್ನುವುದು ಸ್ಪಷ್ಟ.

ರಾಜಕೀಯವಾಗಿ ಭಾರೀ ಡ್ಯಾಮೇಜ್‌ನ ಆತಂಕ: ಹಾಗೇ ನೋಡಿದರೆ, ರಾಜ್ಯಾದ್ಯಂತ ಧರ್ಮಸ್ಥಳದ ಭಕ್ತಾದಿಗಳಿದ್ದಾರೆ. ಇದರೊಂದಿಗೆ ರಾಜ್ಯದ ಹಳ್ಳಿ-ಹಳ್ಳಿಗಳಲ್ಲಿ ಸ್ತ್ರೀ ಸಂಘಗಳಿವೆ. ಇದರೊಂದಿಗೆ ವಿವಿಧ ಸಮಾಜ ಸೇವೆಯಲ್ಲಿ ಧರ್ಮಸ್ಥಳ ತೊಡಗಿಸಿಕೊಂಡಿರುವುದರಿಂದ, ರಾಜ್ಯದ ಬಹುತೇಕರಿಗೆ ವಿರೇಂದ್ರ ಹೆಗ್ಗಡೆ ಅವರ ಬಗ್ಗೆ ಗೌರವವಿದೆ. ಈ ಹಂತದಲ್ಲಿ

ಯಾವುದೇ ಸಾಕ್ಷ್ಯವಿಲ್ಲದೇ, ಅನಾಮಿಕ ವ್ಯಕ್ತಿಯ ಮಾತು ನಂಬಿಕೊಂಡು ಗುಂಡಿ ಅಗೆಯುತ್ತಾ ಹೋದರೆ ಮುಂದಿನ ಚುನಾವಣೆಯಲ್ಲಿ ಭಾರಿ ಸಮಸ್ಯೆಯಾಗುತ್ತದೆ ಎನ್ನುವ ಆತಂಕವನ್ನು ಬಹುತೇಕ ಶಾಸಕರು ಹೊರಹಾಕಿದ್ದಾರೆ.

ಇದರೊಂದಿಗೆ ಬಿಜೆಪಿ ನಾಯಕರು ಈ ವಿಷಯವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷವನ್ನು ಟೀಕಿಸುತ್ತಿದ್ದಂತೆ ಎಚ್ಚೆತ್ತ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಧರ್ಮಸ್ಥಳದ ಪರವಾಗಿ ಬ್ಯಾಟ್ ಬೀಸಿದ್ದಾರೆ. ಇದರ ಬೆನ್ನಲ್ಲೇ, ಇನ್ನುಳಿದ ನಾಯಕರು ಡಿಕೆ ಹಾದಿಯಲ್ಲಿಯೇ ಸಾಗಿದರು ಎಂದು ತಿಳಿದುಬಂದಿದೆ.

ಕಮ್ಯುನಿಸ್ಟ್ ಕಾಂಗ್ರೆಸ್ ಕೆಲಸ: ಧರ್ಮಸ್ಥಳದ ವಿಚಾರದಲ್ಲಿ ರಾಜ್ಯದ ಮುಖ್ಯಮಂತ್ರಿಗಳು ರಾಜ್ಯದ ಜನರ ಕ್ಷಮೆ ಕೇಳಿ ರಾಜೀನಾಮೆ ನೀಡಬೇಕು ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಾತನಾಡಿ, ಕಾಂಗ್ರೆಸ್ ಪಕ್ಷದವರು ಧರ್ಮಸ್ಥಳದಲ್ಲಿ ತನಿಖೆ ನಡೆಸಿ ಏನೂ ಸಿಗಲಿಲ್ಲ, ತಪ್ಪು ಮಾಡಿ

ದಿಕ್ಕು ತಪ್ಪಿಸಿದವರ ಸುಮ್ಮನೆ ಬಿಡುವುದಿಲ್ಲ: ಲಕ್ಷ್ಮಿ ಹೆಬ್ಬಾಳ್ಕರ್

ಧರ್ಮಸ್ಥಳದ ವಿಚಾರವಾಗಿ ವಿಧಾನಸಭೆಯಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಮಾತನಾಡಿ, ದೇವಳದ ಪಾವಿತ್ರ್ಯತೆ ಹಾಳು ಮಾಡಲು ಬಿಡುವುದಿಲ್ಲ. ಈ ಹುನ್ನಾರದ ಹಿಂದೆ ಷಡ್ಯಂತ್ರವಿದೆ ಎಂದು ಗುಡುಗಿ ಕ್ಷೇತ್ರದ ವಿಚಾರವಾಗಿ ಖಡಕ್ ಸಂದೇಶ ಸಾರಿದ್ದರು. ಇದು ಕೂಡ ಪಕ್ಷದ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿರುವಾಗಲೇ, ಧರ್ಮಸ್ಥಳದೊಂದಿಗೆ ಸರಕಾರವಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿರುವುದಲ್ಲದೆ, ಸರಕಾರದ ದಿಕ್ಕು ತಪ್ಪಿಸಿದವರನ್ನು ಸುಮ್ಮನೆ ಬಿಡುವುದಿಲ್ಲ ಎಂದು ಎಚ್ಚರಿಸಿದ್ದಾರೆ. ಉಡುಪಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳ ಬಹಳ ಪವಿತ್ರ ಕ್ಷೇತ್ರ. ಧರ್ಮಸ್ಥಳದ ಹೆಸರಿಗೆ ಮಸಿ ಬಳಿಯುವ ಕೆಲಸ ನಡೆಯುತ್ತಿದೆ. ಹೆಣ ಹೂತಿರುವುದಾಗಿ ಹೇಳಿರುವ ಅನಾಮಿಕ ನೂರಾರು ಕಲ್ಪನೆಯ ಕತೆ ಹೇಳುತ್ತಿದ್ದಾನೆ. ಸರಕಾರದ ದಿಕ್ಕು ತಪ್ಪಿಸಿದವರನ್ನು ನಾವು ಬಿಡುವುದಿಲ್ಲ. ಧರ್ಮಸ್ಥಳದಲ್ಲಿ ಅನಾಮಿಕ ಹೇಳಿದಂತೆ ಗುಂಡಿ ಮೇಲೆ ಗುಂಡಿ ತೋಡಿದರೂ ಏನೂ ಸಿಕ್ಕಿಲ್ಲ. ಬೆಟ್ಟ ಅಗೆದರೂ ಇಲಿಯೂ ಸಿಗಲಿಲ್ಲ ಎಂಬಂತಾಗಿದೆ. ಧರ್ಮಸ್ಥಳಕ್ಕೆ ಕಪ್ಪು ಮಸಿ ಬಳಿಯಲು ಪ್ರಯತ್ನಿಸಿದವರ ಶಿಕ್ಷೆಯಾಗುತ್ತದೆ. ಧರ್ಮಸ್ಥಳದ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಆರೋಪಗಳನ್ನು ಮಾಡಿದರು. ಆಗ ಆರೋಪ ಮಾಡಿದ್ದು ಇದೇ ಬಿಜೆಪಿ, ಈಗ ಗೋಸುಂಬೆ ಕಣ್ಣೀರು ಹಾಕುತ್ತಿರುವುದು ಇದೇ ಬಿಜೆಪಿ ಎಂದು ಟೀಕಿಸಿದರು.

ಬಿಜೆಪಿಯವರು ಸಾವಿರ ಮಾತಾಡಬಹುದು, ಮುಸುಕುಧಾರಿಯ ಹಿಂದೆ ಯಾರು ಯಾರು ಇದ್ದಾರೆ ಎಲ್ಲವೂ ಗೊತ್ತಿದೆ. ಎಲ್ಲರ ನಾಟಕ ದೊಂಬರಾಟ ಮುಗಿಯಲಿ ಎಂದು ಎಸ್‌ಐಟಿ ರಚಿಸಲಾಗಿದೆ. ನಾನು ಮಂಜುನಾಥ ಸ್ವಾಮಿಯ ಭಕ್ತೆ. ಧರ್ಮಸ್ಥಳದ ಬಗ್ಗೆ ಅಪಾರ ನಂಬಿಕೆ ವಿಶ್ವಾಸ ಇದೆ.

– ಲಕ್ಷ್ಮಿ ಹೆಬ್ಬಾಳ್ಕರ್ ಸಚಿವೆ

ಸಿಕ್ಕಿಹಾಕಿಕೊಂಡಿದ್ದೇವೆ. ಅದಕ್ಕಾಗಿ ನಿರೀಕ್ಷಣಾ ಜಾಮೀನು ಪಡೆಯುವ ರೀತಿಯಲ್ಲಿ ಧರ್ಮಸ್ಥಳ ಪ್ರಕರಣ ಒಂದು ಷಡ್ಯಂತ್ರ. ಇದಕ್ಕೆ ಕಮ್ಯುನಿಸ್ಟರು ಕಾರಣ. ಅವರ ಒತ್ತಾಯದ ಮೇಲೆ ನಾವು ಎಸ್‌ಐಟಿಯನ್ನು ರಚಿಸಿದ್ದೇವೆ ಎಂದಿದ್ದಾರೆ.

ಕಾಂಗ್ರೆಸ್ ಇಂದು ಪಕ್ಷವಾಗಿ ಉಳಿಯದೆ ಕಮ್ಯುನಿಸ್ಟ್ ಕಾಂಗ್ರೆಸ್ ಪಕ್ಷವಾಗಿ ಕೆಲಸ ಮಾಡುತ್ತಿದೆ. ಕಮ್ಯುನಿಸ್ಟ್ ಚಿಂತನೆಗಳನ್ನು ಅವರು ಪೈಪೋಟಿಯಿಂದ ಮುಖ್ಯಮಂತ್ರಿ ಮೂಲಕ ಮಾಡಿಸುವುದಕ್ಕೆ ಹೊರಟಿದ್ದಾರೆ. ಈ ಕಾರಣದಿಂದ ಧರ್ಮಸ್ಥಳದಲ್ಲಿ ಅನಾಮಿಕ ವ್ಯಕ್ತಿ ಹುಟ್ಟಿಕೊಂಡಿದ್ದಾನೆ. ಆತನನ್ನು ಮೊದಲಿಗೆ ಬಂಧಿಸಿ ಎಫ್‌ಐಆರ್ ಹಾಕಿ ನಂತರ ನ್ಯಾಯಾಲಯಕ್ಕೆ ಹಾಜರುಪಡಿಸಿ ಜೈಲಿಗೆ ಕಳುಹಿಸಬೇಕು. ಅವಶ್ಯಕತೆ ಇದ್ದರೆ ವಿಚಾರಣೆಗೆ ಒಳಪಡಿಸಬೇಕು. ಆದರೆ ಈ ಸರಕಾರ ಅನಾಮಿಕ ವ್ಯಕ್ತಿಯನ್ನು ಚಾಂಪಿಯನ್ನಾಗಿ ಮಾಡಿದೆ ಎಂದು ಆರೋಪಿಸಿದರು.

ಗಿರೀಶ್ ಮಟ್ಟಣ್ಣನವರ್ ವಿರುದ್ಧ ಎಫ್‌ಐಆರ್

ಧಾರವಾಡ: ಧರ್ಮಸ್ಥಳ ಕ್ಷೇತ್ರದ ವಿರುದ್ಧ ಅಪಪ್ರಚಾರ ನಡೆಸಿದ್ದಾರೆ ಎಂದು ಆರೋಪಿಸಿ ಗಿರೀಶ ಮಟ್ಟಣ್ಣವರ್ ವಿರುದ್ಧ ಧಾರವಾಡದ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಜೈನ ಸಮಾಜದ ಮುಖಂಡ ಮಂಜುನಾಥ ಜಕ್ಕಣ್ಣವರ ಎಂಬುವವರು ಗಿರೀಶ ಮಟ್ಟಣ್ಣವರ್ ಹಾಗೂ ಕುಡ್ಲ ರಾಂಪೇಜ್ ಎಂಬ ಯೂಟ್ಯೂಬ್ ಚಾನೆಲ್ ಮೇಲೆ ಧಾರವಾಡ ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಗಿರೀಶ ಮಟ್ಟಣ್ಣವರ್ ಅವರು, ಜೈನರು ಕ್ರೂರಿಗಳು, ಮತಾಂಧರು, ಬಾಹುಬಲಿ ಮೂರ್ತಿ ಕೆತ್ತಿದವರ ಕೈ ಕತ್ತರಿಸಬೇಕು ಎಂಬ ಹೇಳಿಕೆ ನೀಡುವ ಮೂಲಕ ಧರ್ಮಗಳ ನಡುವೆ ದ್ವೇಷ ಬಿತ್ತುವ ಕೆಲಸ ಮಾಡಿದ್ದಾರೆ. ಮಟ್ಟಣ್ಣವರ ಅವರು ಜೈನ ಧರ್ಮದ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ನೀಡಿದ್ದು, ಇದು ಇಡೀ ಜೈನ ಸಮಾಜದವರ ಮನಸ್ಸಿಗೆ ಘಾಸಿಯುಂಟು ಮಾಡಿದೆ. ಈವರೆಗೂ ಅವರು ತಮ್ಮ ಹೇಳಿಕೆ ಬಗ್ಗೆ ಕ್ಷಮೆ ಕೇಳಿಲ್ಲ. ಆದ್ದರಿಂದ ತಕ್ಷಣ ಅವರನ್ನು ಬಂಧಿಸಬೇಕು ಎಂದು ಮಂಜುನಾಥ ಜಕ್ಕಣ್ಣವರ ಆಗ್ರಹಿಸಿದ್ದಾರೆ.

ಧರ್ಮಸ್ಥಳ: 37 ವರ್ಷಗಳಲ್ಲಿ ಹೂತಿದ್ದು 279 ಶವ

219 ಗಂಡಸರು, 49 ಹೆಂಗಸರ ಅಂತ್ಯಸಂಸ್ಕಾರ | ಗ್ರಾಮ ಪಂಚಾಯಿತಿಯಿಂದ ಮಾಹಿತಿ

ಮಂಗಳೂರು: ಧರ್ಮಸ್ಥಳದ ಆಸುಪಾಸಿನಲ್ಲಿ ಅತ್ಯಾಚಾರ ಕೊಲೆ ನಡೆಸಿ ನೂರಾರು ಹೆಣ್ಣು ಮಕ್ಕಳ ಶವಗಳನ್ನು ಹೂಳಲಾಗಿದೆ ಎಂಬ ಆರೋಪದ ಹಿನ್ನೆಲೆ ಈ ಕುರಿತು ಗ್ರಾಮ ಪಂಚಾಯಿತಿ ಅಧಿಕೃತ ಮಾಹಿತಿ ಕೊಟ್ಟಿದ್ದು 37 ವರ್ಷಗಳಲ್ಲಿ 279 ಶವ ಹೂಳಲಾಗಿದೆ ಎಂದಿದೆ.

1987 ರಿಂದ 2025 ರ ಅವಧಿಯಲ್ಲಿ ಧರ್ಮಸ್ಥಳ ಆಸುಪಾಸಿನಲ್ಲಿ ಶಿಶುಗಳದ್ದೂ ಸೇರಿದಂತೆ 279 ಶವಗಳನ್ನು ಹೂಳಲಾಗಿದೆ. ಇವುಗಳಲ್ಲಿ ಹೆಚ್ಚಿನವು ಆತ್ಮಹತ್ಯೆ ಪ್ರಕರಣಗಳು ಎಂದು ಆರ್‌ಟಿಐನಡಿ ಪಂಚಾಯಿತಿ ಮಾಹಿತಿ ಕೊಟ್ಟಿದೆ. 279 ಅನಾಥ ಶವಗಳಲ್ಲಿ 219 ಪುರುಷರ ಶವಗಳು, 46 ಮಹಿಳೆಯರ ಶವ, ಶಿಶುಗಳದ್ದು ಸೇರಿದಂತೆ 14 ಶವಗಳ ಲಿಂಗವನ್ನು ಗುರುತಿಸಲು ಸಾಧ್ಯವಾಗಿಲ್ಲ ಎನ್ನುವ ಮಾಹಿತಿಯನ್ನು ಧರ್ಮಸ್ಥಳ ಗ್ರಾಪಂನ ಪಿಐಒ ಆರ್‌ಟಿಐ ಅಡಿಯಲ್ಲಿ ಮಾಹಿತಿ ಕೊಟ್ಟಿದ್ದಾರೆ.

2003-2004, 2006-2007 ಮತ್ತು 2014-2015ರ ಅವಧಿಯಲ್ಲಿ 17 ಅನಾಥ ಶವಗಳನ್ನು ಹೂಳಲಾಗಿದೆ. 2015-25 ವರೆಗೆ 10 ವರ್ಷಗಳಿಂದ 101 ಅನಾಥ ಶವಗಳನ್ನು ಹೂಳಲಾಗಿದೆ. ಧರ್ಮಸ್ಥಳದ ಪ್ರಾಥಮಿಕ ಆರೋಗ್ಯ ಕೇಂದ್ರದ ಹಿಂದಿನ ವೈದ್ಯರೊಬ್ಬರ ಪ್ರಕಾರ ಶವಗಳು ಕಾಡಿನೊಳಗೆ ಪತ್ತೆಯಾಗಿದೆ.

ತನಿಖೆಗೆ ವಿದೇಶದ ತಂತ್ರಜ್ಞಾನ

ಅನಾಮಿಕ ಗುರುತಿಸಿದ ಸಮಾಧಿ ಸ್ಥಳಗಳಲ್ಲಿ ಸಿಕ್ಕಿದ ಮೂಳೆ ಸಮಗ್ರ ಮಾಹಿತಿ ಪತ್ತೆಗೆ ಅತ್ಯಾಧುನಿಕ ವಿದೇಶಿ ತಂತ್ರಜ್ಞಾನ ಬಳಕೆ ಮಾಡಲು ನಿರ್ಧರಿಸುವ ವಿಚಾರ ತಿಳಿದು ಬಂದಿದೆ. ದೇಶದಲ್ಲೇ ಮೊದಲ ಬಾರಿಗೆ ಇಂತಹ ತಂತ್ರಜ್ಞಾನವನ್ನು ಅಪರಾಧ ಪ್ರಕರಣ ಸಂಬಂಧಿಸಿ ಬಳಸಲಾಗುತ್ತದೆ. ವಿದೇಶದ ವಿಧಿ ವಿಜ್ಞಾನ ಪ್ರಯೋಗಾಲದ ತಜ್ಞರ ನೆರವು ಪಡೆಯಲು ರಾಜ್ಯದ ಎಫ್‌ಎಸ್‌ಎಲ್ ತಜ್ಞರೇ ಶಿಫಾರಸು ಮಾಡಿದ್ದಾರೆ ಎಂದು ತಿಳಿದು ಬಂದಿದೆ.

ತಲೆ ಬುರುಡೆ ಉತ್ಖನನದಲ್ಲಿ 17 ಪಾಯಿಂಟ್ ಗಳಲ್ಲಿ 20 ಕಡೆ ಶೋಧಿಸಿದಾಗ 6ನೇ ಪಾಯಿಂಟ್ ನಲ್ಲಿ ಮೂಳೆಗಳು ಪತ್ತೆಯಾಗಿದ್ದವು. ಮರಣೋತ್ತರ ಪರೀಕ್ಷೆಯಲ್ಲಿ ಇವು ಪುರುಷನಿಗೆ ಸೇರಿದ ಮೂಳೆಗಳಾಗಿವೆ ಎಂದು ಖಚಿತವಾಯಿತು. ಆದರೆ ಹೆಣ ಹೂತದ್ದು ಯಾವಾಗ. ಮೊದಲೇ ಹೂತದ್ದೆ? ನಂತರ ಹೂಳಲಾಯಿತೆ. ಮೊದಲೇ ಹೂತು ಹಾಕಿದ್ದರೆ. ಹೂತು ಹಾಕಿದ್ದು ಯಾವಾಗ ಎಂಬ ನಿರ್ದಿಷ್ಟ ಕಾಲದ ಮಾಹಿತಿ ಹೊರಬಂದಿಲ್ಲ. ಹೀಗಾಗಿ ವಿದೇಶದಲ್ಲಿ ಚಾಲ್ತಿಯಲ್ಲಿರುವ ಮೂರು ಮಾದರಿಯ ಪರೀಕ್ಷೆಗೆ ಚಿಂತನೆ ನಡೆದಿದೆ.

ಧರ್ಮಸ್ಥಳ ಚಲೋ ಅಭಿಯಾನ ಶುರು

ಧರ್ಮಸ್ಥಳ ಕ್ಷೇತ್ರದ ಅಪಪ್ರಚಾರ ಖಂಡಿಸಿ ಧರ್ಮಸ್ಥಳ ಚಲೋ ಅಭಿಮಾನಕ್ಕೆ ನೆಲಮಂಗಲದ ಟೋಲ್ ಬಳಿ ಶಾಸಕ ಎಸ್.ಆರ್. ವಿಶ್ವನಾಥ್ ಪೂಜೆ ನೆರವೇರಿಸಿ ಯಾತ್ರೆಗೆ ಚಾಲನೆ ನೀಡಿದರು.

← ಮೊದಲಪುಟದಿಂದ

ಸುಮಾರು 300ಕ್ಕೂ ಹೆಚ್ಚು ವಾಹನಗಳಲ್ಲಿ ಭಕ್ತರು ಧರ್ಮಸ್ಥಳ ಚಲೋ ನಡೆಸಿದ್ದು, ಶನಿವಾರ ಸಂಜೆ ಇವರೆಲ್ಲ ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿಯ ದರ್ಶನ ಪಡೆದು ಅಲ್ಲಿಯೇ ವಾಸ್ತವ್ಯ ಹೂಡಿ, ಭಾನುವಾರ ಸಂಕಲ್ಪ ಪೂಜೆ ನೆರವೇರಿಸುವರು.

ನೆಲಮಂಗಲ-ಕುಣಿಗಲ್ ರಸ್ತೆಯ ಮಾರ್ಗವಾಗಿ ಹಾಸನದಿಂದ ಸಕಲೇಶಪುರದ ಮೂಲಕ ಶಿರಾಡಿಘಾಟ್ ರಸ್ತೆ ಮಾರ್ಗವಾಗಿ ರ್‍ಯಾಲಿ ಧರ್ಮಸ್ಥಳಕ್ಕೆ ತೆರಳಿದೆ. ರ್‍ಯಾಲಿಯಲ್ಲಿ ನೂರಾರು ಜನ ಭಗವಾಧ್ವಜ ಹಿಡಿದು ಕೇಸರಿ ಶಾಲು ಧರಿಸಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಹಿಂದೂ ಹಕ್ಕುಗಳನ್ನು ಎತ್ತಿಹಿಡಿಯಲು ಮತ್ತು ಕರ್ನಾಟಕದಾದ್ಯಂತ ದೇವಾಲಯದ ಪಾವಿತ್ರ್ಯವನ್ನು ರಕ್ಷಿಸಲು ಧರ್ಮಸ್ಥಳದಲ್ಲಿ ಪ್ರತಿಜ್ಞೆ ತೆಗೆದುಕೊಳ್ಳುವುದು ರ್‍ಯಾಲಿಯ ಪ್ರಮುಖ ಉದ್ದೇಶವಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದ ಶಾಸಕರ ನಿಯೋಗ ಭಾನುವಾರ ಧರ್ಮಸ್ಥಳಕ್ಕೆ ಭೇಟಿ ನೀಡಲಿದ್ದು, ಉಡುಪಿ, ಮಂಗಳೂರು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಬಿಜೆಪಿ ಶಾಸಕರು ನಿಯೋಗದಲ್ಲಿರುತ್ತಾರೆ. ಬಿಜೆಪಿ ನಾಯಕರು ಧರ್ಮಾಧಿಕಾರಿಗಳನ್ನೂ ಭೇಟಿ ಮಾಡಿ ನೈತಿಕ ಬೆಂಬಲ ಸೂಚಿಸಿದ್ದಾರೆ. ಉಡುಪಿ, ಮಂಗಳೂರು, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ 30-35 ಶಾಸಕರು ಸೇರಿದಂತೆ ಪ್ರಮುಖ ಬಿಜೆಪಿ ನಾಯಕರು ದೇವಾಲಯ ಭೇಟಿಯ ನಂತರ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಮುಂದಿನ ವಿಪಿ ಯಾರು?

← ಮೊದಲಪುಟದಿಂದ

ಜತೆಗೆ, ಬಿಹಾರ ವಿಧಾನಸಭಾ ಚುನಾವಣೆ ಹಾಗೂ ದೇಶದ ರಾಜಕೀಯ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಅಭ್ಯರ್ಥಿಯನ್ನು ಘೋಷಣೆ ಮಾಡಲಾಗುವುದು ಎಂದು ಬಿಜೆಪಿಯ ಮೂಲಗಳು ತಿಳಿಸಿವೆ.

ಆಗಸ್ಟ್ 7ರಂದು ಚುನಾವಣಾ ಆಯೋಗ, ಉಪರಾಷ್ಟ್ರಪತಿ ಚುನಾವಣೆಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಿತ್ತು. ಆಗಸ್ಟ್ 21ಕ್ಕೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದೆ. ಆಗಸ್ಟ್ 25ಕ್ಕೆ ನಾಮಪತ್ರ ಹಿಂಪಡೆಯಲು ಕೊನೆ ದಿನವಾಗಿದೆ. ಈಗಾಗಲೇ 18 ನಾಮಪತ್ರಗಳು ಸಲ್ಲಿಕೆಯಾಗಿವೆ.

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಕಾಶಿಪುರ ವೃತ್ತ, ಶಿವಮೊಗ್ಗ-577204

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್)-ಕೆಡಬ್ಲ್ಯೂ – 1/2/3

ಐ.ಎಫ್.ಟಿ. ಸಂ: 13/2025-26 ದಿನಾಂಕ: 13.08.2025

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲ್ಯೂ-1 ಹಾಗೂ ಕೆಡಬ್ಲ್ಯೂ-2ರ ಅನ್ವಯ ಶಿವಮೊಗ್ಗ ಉಪವಿಭಾಗದ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಫಲಾನುಭಾವಿಗಳಿಗೆ ಕೊಳವೆ ಭಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಗಳು ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲ್ಯೂ-3ರ ಅನ್ವಯ ತರೀಕೆರೆ ಉಪವಿಭಾಗ ವ್ಯಾಪ್ತಿಯಲ್ಲಿನ ಒಂದು ಸಂಖ್ಯೆಯ ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ.3.58ಲಕ್ಷ ದಿಂದ ರೂ.50.76 ಲಕ್ಷಗಳು. ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: http:/kppp.karnataka.gov.inನಲ್ಲಿ ದಿನಾಂಕ:13.08.2025ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ : 20.08.2025, 17:00 ಘಂಟೆ. ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/25-26/78/08/766

ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ.
(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂ ಸಂ:08192-251168 e-mail: ka.davanagere.dudc@gmail.com

ಸಂ:ಜಿ.ನ.ಕೋ.ದಾ(2)/ಸಿಆರ್/1142/2021-22 ದಿನಾಂಕ: 16-08-2025

ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ-2ನೇ ಕರೆ

ದಾವಣಗೆರೆ ಜಿಲ್ಲೆಯ 2021-22ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ಯೋಜನೆಯ ಅನುದಾನದಡಿ ಪೌರಾಡಳಿತ ನಿರ್ದೇಶನಾಲಯದಿಂದ ಅನುಮೋದನೆ ಪಡೆದುಕೊಂಡಿರುವ ಕ್ರಿಯಾ ಯೋಜನೆಯಂತೆ ಹೊನ್ನಾಳಿ ಪುರಸಭೆ ವ್ಯಾಪ್ತಿಯಲ್ಲಿ ಸ್ವಾಗತ ಕಾಮನು ನಿರ್ಮಿಸುವುದು ಮತ್ತು ಕಛೇರಿ ಉನ್ನತೀಕರಣ ಕಾಮಗಾರಿಗಳಿಗೆ ಈ ಕೆಳಗಿನಂತೆ ಇಂಡೆಂಟ್ ನಂಬರ್ ಗಳಂತೆ ಐಟಂವಾರು ಟೆಂಡರ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
ಇಂಡೆಂಟ್‌ಗಳು:- (1) ಹೊನ್ನಾಳಿ ಪುರಸಭೆ ವ್ಯಾಪ್ತಿಯಲ್ಲಿ ಸ್ವಾಗತ ಕಾಮನು ನಿರ್ಮಿಸುವುದು ಮತ್ತು ಕಛೇರಿ ಉನ್ನತೀಕರಣ (DMA/2025-26/OW/Work indent/45544)
ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ:- 54.41 ಇ-ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:-02.09.2025 , ತಾಂತ್ರಿಕ ಬಿಡ್ ತೆರೆಯುವ ದಿನಾಂಕ:- 04.09.2025 ಆರ್ಥಿಕ ಬಿಡ್ ತೆರೆಯುವ ದಿನಾಂಕ:- 06.09.2025 * ಗುತ್ತಿಗೆ ಅವಧಿ:- 9 ತಿಂಗಳು
ಸದರಿ ಕಾಮಗಾರಿಗಳ ವಿವರ, ಹಾಗೂ ಇತರೆ ಷರತ್ತುಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ತಾಂತ್ರಿಕ ಶಾಖೆಯಿಂದ ಪಡೆದುಕೊಳ್ಳಬಹುದಾಗಿದೆ. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಯನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು ಬದಲಾವಣೆ ಇದ್ದಲ್ಲಿ ದಿನ ಪತ್ರಿಕೆ ಅಥವಾ ಯಾವುದೇ ಜಾಹೀರಾತು ಪ್ರಕಟಣೆ ನೀಡಲಾಗುವುದಿಲ್ಲ.

ವಾಸಾಇ/ದಾವಣಗೆರೆ/270/ಕೆಎಸ್‌ಎಂಸಿಎ/2025-26
ಸಹಿ/- ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ ಜಿಲ್ಲೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10
(ದೂರವಾಣಿ : 0821-2979772 ಇ-ಮೇಲ್: -khsdrp.divmys@gmail.com)

ಸಂ: ಆಕುಕ/ಇಂ.ವಿ./ಕಾ.ಅ/ಮೈ/ಸಇ-3/ಟೆಂಡರ್-10/530-AAM-PM-ABHIM/2025-26 ದಿನಾಂಕ: 16.08.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ **ಮಂಡ್ಯ, ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ** ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಸಾಮಾನ್ಯ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, CAT-I, CAT-II(A) ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟಾರೆ 61 ಕಾಮಗಾರಿಗಳ ಟೆಂಡರ್ ಆಹ್ವಾನಿಸಲಾಗಿದ್ದು. ಕನಿಷ್ಠ ಅಂದಾಜು ಮೊತ್ತ **ರೂ. 53.82 ರಿಂದ ಗರಿಷ್ಠ ಅಂದಾಜು ಮೊತ್ತ ರೂ.54.13 ಲಕ್ಷಗಳಾಗಿರುತ್ತವೆ.**

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು:-1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **29.08.2025ರಂದು 16.00 ಗಂಟೆಯವರೆಗೆ** (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **30.08.2025 ರಂದು 16.30 ಗಂಟೆಗೆ.** ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp. karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.
DIPR/MYS/810/SA/2025-26

ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ
ಕೌಶ್ಯಲ್ಯ ವಿಕಾಸ ಭವನ, ಗ್ರಾಮ ಗಂಗೋತ್ರಿ ಆವರಣ, ನಾಗಾವಿ ಗದಗ-582103
E-mail : ksrdpru@gmail.com Phone: 08372-200920, 200922
ಸಂಖ್ಯೆ:RDPRU/15ENG2025/2025-26/138 ದಿನಾಂಕ : 08/08/2025

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ಕುಲಸಚಿವರು ಮಹಾತ್ಮಾ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ "ವಿಶ್ವವಿದ್ಯಾಲಯದ ಆವರಣದ ವಸತಿ ವಲಯದಲ್ಲಿ ಒಳಚರಂಡಿಯನ್ನು ನಿರ್ಮಿಸುವ, ಬಾಲಕಿಯರ ವಸತಿ ನಿಲಯದಲ್ಲಿ ಶೌಚಾಲಯವನ್ನು ನಿರ್ಮಿಸುವ ಮತ್ತು ವಿವೇಕ ಲೋಕದಲ್ಲಿ ವಿವೇಕಪಥವನ್ನು ನಿರ್ಮಿಸುವ ಕಾಮಗಾರಿ" ಗೆ Karnataka public procurement portal ಮುಖಾಂತರ ನಿಗದಿತ ನಮೂನೆ KW-3 ರನ್ವಯ ಟೆಂಡರ್ ಆಹ್ವಾನಿಸಿದ್ದಾರೆ. ಟೆಂಡರ್‌ದಾರರು Karnataka public procurement portal ಮುಖಾಂತರ ಈ ಕೆಳಗೆ ಕಾಣಿಸಿದ ವೇಳಾಪಟ್ಟಿಯಿಂದ ಟೆಂಡರ್ ಸಲ್ಲಿಸಬಹುದಾಗಿದೆ.
(1) ಟೆಂಡರ್ ಸಂ: KSRDPRU/2025-26/OW/WORK_INDENT2, (2) ಟೆಂಡರ್‌ಗಿಟ್ಟ ಮೊತ್ತ : **50,20,635.85/-** (3) ಇ.ಎಂ.ಡಿ: ರೂ. **1,00,500/-** (2%). (4) Karnataka public procurement portal ಮೂಲಕ ಡೌನ್‌ಲೋಡ್ ಮಾಡುವ ದಿನಾಂಕ : **17-08-2025** ರಿಂದ **01-09-2025** ವರೆಗೆ (5) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **01-09-2025** ಸಂಜೆ 04:00 ಘಂಟೆ ವರೆಗೆ (6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **03-09-2025** ಸಂಜೆ 04:00 ಘಂಟೆ (7) ಆರ್ಥಿಕ ಬಿಡ್ ತೆರೆಯುವ ದಿನಾಂಕ : **18-09-2025** ಮುಂಜಾನೆ 11:00 ಘಂಟೆ.
ಹೆಚ್ಚಿನ ವಿವರಗಳಿಗೆ www.kppp.karnataka.gov.in. ನಲ್ಲಿ ನೋಡಿ.
ವಾಸಾಸಂಇ/ಗದಗ/ಕೆಎಸ್‌ಎಂಸಿಎ/242/2025-26 ಸಹಿ/- ಕುಲಸಚಿವರು

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಧಾರವಾಡ ವಿಭಾಗ, ಧಾರವಾಡ.
ಅರಣ್ಯ ಸಂಕೀರ್ಣ ಕೆ.ಸಿ.ಪಾರ್ಕ ಹತ್ತಿರ, ಧಾರವಾಡ-580008.
ದೂರವಾಣಿ:0836-2447092. ಇ-ಮೇಲ್: dcf_dwd@yahoo.co.in
ಸಂಖ್ಯೆ:ಎ1/ಎಸಿಟಿ/ಸಿಆರ್-35/2025-26 ದಿನಾಂಕ:04-08-2025

ಸಂಕ್ಷಿಪ್ತ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜಕರಿಗೆ ತಿಳಿಯಪಡಿಸುವುದೇನೆಂದರೆ, ಧಾರವಾಡ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕೇಂದ್ರಿಯ ಶ್ರೀಗಂಧದ ಕೋಠಿ, ಧಾರವಾಡ ಇಲ್ಲಿ ದಾಸ್ತಾನಿರುವ ಶ್ರೀಗಂಧದ ಎಣ್ಣೆಯನ್ನು ಇ-ಟೆಂಡರ್-ಕಂ-ಹರಾಜಿನ (MSTC Portal www.mstcecommerce.com) ಮುಖಾಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ವಿಭಾಗ, ಧಾರವಾಡರವರು ಹರಾಜು ಮಾಡುವರು. ಸದರ ಪ್ರಕಟಣೆಯ ಸಂಖ್ಯೆ: MSTC/BLR/Karnataka Forest Department/1/Forest Complex/25-26/25521 ರಲ್ಲಿ ಪ್ರಕಟಿಸಲಾದ ಟೆಂಡರ್ ಪ್ರಕಟಣೆಯ ನಿಭಂದನೆಗಳಿಗೆ ಒಳಪಟ್ಟಿರುತ್ತದೆ.

(1) ಇ-ಹರಾಜಿನ ದಿನಾಂಕ ಮತ್ತು ಸಮಯ: **01-09-2025** ಅಪರಾಹ್ನ **03.00** ಗಂಟೆಯಿಂದ **05.00** ಗಂಟೆವರೆಗೆ (2) ಹರಾಜು ನಡೆಯುವ ವಿಧಾನ: ಆನ್‌ಲೈನ್ ಹರಾಜು. www.mstcecommerce.com ಮುಖಾಂತರ. (3) ಹರಾಜಿಗೆ ಇಡಲಾದ ಶ್ರೀಗಂಧದ ಎಣ್ಣೆಯ ಅಂದಾಜು ಪ್ರಮಾಣ ಮತ್ತು ಮೊತ್ತ: ಸುಮಾರು 0.091350 ಮೆ.ಟನ್ ಶ್ರೀಗಂಧದ ಎಣ್ಣೆ ಅಂದಾಜು **ರೂ.70.00 ಲಕ್ಷಗಳು.** (4) ಹರಾಜಿಗಿಟ್ಟಿರುವ ಶ್ರೀಗಂಧದ ಎಣ್ಣೆಯ ಲಾಟುಗಳನ್ನು ಖರೀದಿದಾರರು ಅಧಿಕೃತ ತಪಾಸಣೆ ನಡೆಸಲು ನಿಗದಿಪಡಿಸಿರುವ ದಿನಾಂಕ ಮತ್ತು ಸ್ಥಳ: **29-08-2025** ರಂದು ಬೆಳಿಗ್ಗೆ **10.30** ರಿಂದ ಸಂಜೆ **4.00** ಗಂಟೆಯವರೆಗೆ ಕೇಂದ್ರಿಯ ಶ್ರೀಗಂಧದ ಕೋಠಿ, ಧಾರವಾಡ. (5) ಇ-ಹರಾಜಿನ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸ್ಥಳ: **29-08-2025** ಸಂಜೆ **4.00** ಗಂಟೆಗೆ. ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ವಿಭಾಗ ಧಾರವಾಡರವರ ಕಚೇರಿ.

ಷರತ್ತುಗಳು:
(1) ಆಸಕ್ತ ಖರೀದಿದಾರರು ಪೂರ್ವಭಾವಿಯಾಗಿ ಎಂ.ಎಸ್.ಟಿ.ಸಿ. ಇ-ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳತಕ್ಕದ್ದು. (2) ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವ ಖರೀದಿದಾರರು ಹರಾಜಿನ ಪೂರ್ವದಲ್ಲಿ ಹರಾಜಿಗಿಟ್ಟ ಮಾಲನ್ನು ಪರಿಶೀಲಿಸಿಕೊಳ್ಳುವುದು. (3) ಹರಾಜಿಗೆ ಇಟ್ಟ ಮಾಲಿನ ಪ್ರಮಾಣ ಅಂದಾಜಿಸಲಾಗಿರುತ್ತದೆ. ಹರಾಜಿಗಿಟ್ಟ ಮಾಲನ್ನು ಹೆಚ್ಚು ಕಡಿಮೆ ಮಾಡುವ ಅಧಿಕಾರವನ್ನು ಮಾರಾಟ ಮಾಡುವ ಅಧಿಕಾರಿಗಳು ಹೊಂದಿರುತ್ತಾರೆ. (4) ಖರೀದಿದಾರರು ಹರಾಜಿನಲ್ಲಿ ಭಾಗವಹಿಸುವ ಪೂರ್ವದಲ್ಲಿ ಶ್ರೀಗಂಧದ ಎಣ್ಣೆಯ ಖರೀದಿಗೆ ಸಂಬಂಧಿಸಿದಂತೆ ಪ್ರತಿ ಅಥವಾ ಎಲ್ಲಾ ಲಾಟುಗಳಿಗೆ ಸೇರಿ **ರೂ. 10,00,000/-** ಠೇವಣಿ (ಇ.ಎಂ.ಡಿ) ಹಣ ಇಡತಕ್ಕದ್ದು. (5) ಬ್ಲಾಕ್ ಲಿಸ್ಟ ಬಿಡ್‌ದಾರರು, ತಪ್ಪಿತಸ್ಥರು, ಅಪ್ರಾಪ್ತ ವಯಸ್ಕರು ಮತ್ತು ದಿವಾಳಿ ಹೊಂದಿದವರು ಹರಾಜಿನಲ್ಲಿ ಭಾಗವಹಿಸಲು ಅಸ್ಪದವಿಲ್ಲ. (6) ಇ-ಹರಾಜಿನ ಪೂರ್ಣ ಷರತ್ತುಗಳನ್ನು www.mstcecommerce.com ಮುಖಾಂತರ ಪಡೆದುಕೊಳ್ಳತಕ್ಕದ್ದು ಸಂಖ್ಯೆ: MSTC/BLR/Karnataka Forest Department/1/Forest Complex/25-26/25521

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ ಧಾರವಾಡ ವಿಭಾಗ ಧಾರವಾಡ.
ವಾ.ಸಾ.ಇ/ಧಾರವಾಡ/561ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ, ಉತ್ತರ ಕನ್ನಡ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಉತ್ತರ ಕನ್ನಡ-ಕಾರವಾರ
Email: dhoukannada@gmail.com Phone: 08382-226339. Fax: 08382-222452
ಕ್ರ.ಸಂ: D-1/ENDO/07/2025-26 ದಿನಾಂಕ: 16/08/2025

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಎಂಡೋಸಲ್ಫಾನ್ ಪುನರ್ ವಸತಿ ಕಾರ್ಯಕ್ರಮದ ಅಡಿಯಲ್ಲಿ 2025-26ನೇ ಆರ್ಥಿಕ ಸಾಲಿಗೆ ಷರತ್ತಿಗೊಳಪಟ್ಟು ಹೊರ ಗುತ್ತಿಗೆ ಆಧಾರದ ಮೇಲೆ ಉತ್ತರ ಕನ್ನಡ ಜಿಲ್ಲೆಯ ಆರು ತಾಲೂಕುಗಳಾದ ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರದಲ್ಲಿ ಸಂಚಾರಿ ಆರೋಗ್ಯ ಘಟಕ ಸೇವೆಯನ್ನು ಪಡೆದುಕೊಳ್ಳಲು ಈ ಕೆಳಕಾಣಿಸಿದಂತೆ ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಈ ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ನೋಡಬಹುದಾಗಿದೆ.
ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ – ವಿವರಗಳು: (1) ಇ.ಎಂ.ಡಿ ಮೊತ್ತ 2% ರೂ.1,70,460-00 (2) ಇ-ಪ್ರೋಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಫಾರಂ ಡೌನಲೋಡ್ ಆರಂಭ ದಿನಾಂಕ: 16-08-2025, ಬೆಳ್ಳಿಗ್ಗೆ 10.00 ಘಂಟೆಯಿಂದ (3) ಟೆಂಡರ್‌ನಲ್ಲಿ ಅಕ್ಷೇಪಣೆಗಳಿದ್ದಲ್ಲಿ ಅಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 25-08-2025, ಸಾಯಂಕಾಲ 5-30 ಘಂಟೆಯವರೆಗೆ (4) ಇ-ಪ್ರೋಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 04-09-2025 ರ ಸಾಯಂಕಾಲ 5-30 ಘಂಟೆಯವರೆಗೆ (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 06-09-2025 (6) ಟೆಂಡರ ಅಂದಾಜು ಮೊತ್ತ: 85.23 ಲಕ್ಷ.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು, ಉ.ಕ ಕಾರವಾರ.
DIPR/ADK/KSMCA/390/25-26 dt. 16.08.2025

ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
(ಲೋಕೋಪಯೋಗಿ ಇಲಾಖೆ)
ಯೋಜನಾ ಅನುಷ್ಟಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
ಕೆ.ಆರ್.ವೃತ್ತ, ಬೆಂಗಳೂರು – 560001
KSHIP
ಸಂಖ್ಯೆ: PIU:KSHIP-III/O.S. Tender /2025-26 ದಿನಾಂಕ : 16.08.2025

KSHIP ಕಛೇರಿಗೆ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವ ಬಗ್ಗೆ

1. ಟೆಂಡರ್ ಅಧಿಸೂಚನೆ ಸಂಖ್ಯೆ: 1: KSHIP/2024-25/SE0001/CALL-3, Dtd:16.08.2025
2. ಟೆಂಡರ್ ಅಧಿಸೂಚನೆ ಸಂಖ್ಯೆ: 2: KSHIP/2024-25/SE0002/CALL-3, Dtd:16.08.2025

ಯೋಜನಾ ನಿರ್ದೇಶಕರು, ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ಕಛೇರಿಗೆ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸಲು ಎರಡು ಕವರ್ ವ್ಯವಸ್ಥೆಯಲ್ಲಿ ಕೆಳಗೆ ತಿಳಿಸಲಾದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕೆಲಸದ ಹೆಸರು	ಕಛೇರಿಗೆ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವ ಬಗ್ಗೆ
ಬಿಡ್‌ನ ಪ್ರಶ್ನೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	ದಿನಾಂಕ: 22.08.2025 ಸಮಯ 16:00 ಗಂಟೆವರೆಗೆ
ಪೂರ್ವ ಬಿಡ್ ಸಭೆಯ ಸಮಯ ಮತ್ತು ದಿನಾಂಕ	ದಿನಾಂಕ: 25.08.2025 ಸಮಯ 11:30 ಗಂಟೆಗಳು (ಯೋಜನಾ ನಿರ್ದೇಶಕರ ಕಛೇರಿ, ಕೆಶಿಪ್ ಬೆಂಗಳೂರು)
ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ: 30.08.2025 ಸಮಯ 16:00 ಗಂಟೆವರೆಗೆ
ಆನ್‌ಲೈನ್‌ನಲ್ಲಿ ಬಿಡ್‌ಗಳನ್ನು ತೆರೆಯುವ ಸಮಯ ಮತ್ತು ದಿನಾಂಕ	ದಿನಾಂಕ: 01.09.2025 ಸಮಯ 16:00 ಗಂಟೆವರೆಗೆ

ಟೆಂಡರ್ ಆಹ್ವಾನಿಸಿರುವ ಕುರಿತು ಹೆಚ್ಚಿನ ಮಾಹಿತಿಯನ್ನು ಯೋಜನಾ ನಿರ್ದೇಶಕರ ಕಛೇರಿ, ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್. ವೃತ್ತ, ಬೆಂಗಳೂರು ಇವರಿಂದ ಕಛೇರಿಯ ಕೆಲಸದ ದಿನಗಳಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ support@eprochelpdesk.com ರಲ್ಲಿಯೂ ಸಹಾ ಪಡೆಯಬಹುದಾಗಿದೆ. ಕೆಪಿಪಿ ಪೋರ್ಟಲ್ ಸಹಾಯವಾಣಿಯ ದೂರವಾಣಿ ಸಂಖ್ಯೆಗಳು:+91-8046010000/+91-8068948777

ಸಹಿ/-
ಯೋಜನಾ ನಿರ್ದೇಶಕರು, ಯೋ.ಅ.ಘ, ಕ.ರಾ.ಹೆ.ಅ.ಯೋ. ಬೆಂಗಳೂರು
ಡಿಐಪಿಆರ್/ಸಿಪಿ/2356/ಸಿಸಿಎಲ್/2025-26

ಅಘೋರಿಗಳ ಸಮ್ಮುಖದಲ್ಲಿ ಕೃಷ್ಣೆಯ ಪುಣ್ಯಸ್ನಾನ

ಮಾಜಿ ಸಚಿವ ಮುರುಗೇಶ ನಿರಾಣಿ ಜನ್ಮದಿನದ ಸಂಭ್ರಮ | ಗಂಗಾರತಿ ಮಾಡುವ ಪಂಡಿತರ ತಂಡದಿಂದ ಕೃಷ್ಣಾರತಿ

ಬಾಗಲಕೋಟೆ: ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ಮಾಜಿ ಸಚಿವ ಮುರುಗೇಶ ನಿರಾಣಿ ಅವರ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿದ್ದ ಕೃಷ್ಣೆಯ ಪುಣ್ಯಸ್ನಾನ ಹಾಗೂ ಕೃಷ್ಣಾರತಿ ಕಾರ್ಯಕ್ರಮ ಹಿಮಾಲಯದ ಅಘೋರಿ ಬಾಬಾಗಳು ಹಾಗೂ ನಾಗಾಸಾಧುಗಳ ನೇತೃತ್ವದಲ್ಲಿ ಅದ್ಧೂರಿಯಾಗಿ ಜರುಗಿತು.

ಜನ್ಮದಿನದ ಅಂಗವಾಗಿ ಕೃಷ್ಣಾ ಆರತಿ ಸೇವಾ ಸಮಿತಿ ಹಾಗೂ ಕೃಷ್ಣಾ ತೀರ ರೈತ ಬಾಂಧವರು ಮತ್ತು ಎಂ.ಆರ್.ಎನ್ ಫೌಂಡೇಷನ್ ವತಿಯಿಂದ ಜಿಲ್ಲೆಯ ಜಮಖಂಡಿ ತಾಲೂಕಿನ ಹಿಪ್ಪರಗಿ ಗ್ರಾಮದ ಸಂಗಮೇಶ್ವರ ಮಠದ ಆವರಣದಲ್ಲಿ ಎಲ್ಲ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ಜರುಗಿದವು.

ನಿರಾಣಿ ಕುಟುಂಬದಿಂದ ಪುಣ್ಯಸ್ನಾನ: ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ಹಾಗೂ ಅಘೋರಿಗಳ ಸಮ್ಮುಖದಲ್ಲಿ ಮುರುಗೇಶ ನಿರಾಣಿ ಹಾಗೂ ಕುಟುಂಬ, ವಿಧಾನ ಪರಿಷತ್ ಸದಸ್ಯ ಹನುಮಂತ ನಿರಾಣಿ ಹಾಗೂ ಕುಟುಂಬ, ನಿರಾಣಿ ಉದ್ಯಮ ಪರಿವಾರದ ಕಾರ್ಯನಿರ್ವಾಹಕ ನಿರ್ದೇಶಕ ಸಂಗಮೇಶ ನಿರಾಣಿ ಹಾಗೂ ಕುಟುಂಬ, ಲಕ್ಷ್ಮಣ ನಿರಾಣಿ ಹಾಗೂ ಕುಟುಂಬ ಸೇರಿದಂತೆ ನಿರಾಣಿ ಪರಿವಾರದ ಎಲ್ಲ ಸದಸ್ಯರು ಸೇರಿದಂತೆ ಕೃಷ್ಣಾ ತೀರದ ರೈತರು ಪವಿತ್ರ ಸ್ನಾನಕ್ಕೆ ಸಾಕ್ಷಿಯಾದರು.

ರೈತ ನಾಯಕನಿಗೆ ಶುಭ ಹಾರೈಕೆ: ಕೃಷಿ ಕುಟುಂಬದಿಂದ ಬಂದಿರುವ ಮುರುಗೇಶ ನಿರಾಣಿ ಅವರು, ಟ್ರ್ಯಾಕ್ಟರ್ ಟೇಲರ್ ಮಾಡುವ ಉದ್ಯಮ ಪ್ರಾರಂಭಿಸಿ ಇಂದು ಹತ್ತಾರು ಕಾರ್ಖಾನೆಗಳ ಕಟ್ಟಿ, ಅವುಗಳನ್ನು ಉತ್ತಮ ರೀತಿಯಲ್ಲಿ ನಡೆಸುವ ಮೂಲಕ ಯಶಸ್ವಿ ಉದ್ಯಮಿಯಾಗಿದ್ದಾರೆ. ರೈತರು ಕಬ್ಬು ನುರಿಸಲು ಪರದಾಡುವುದನ್ನು ನೋಡುತ್ತ ಸಕ್ಕರೆ ಕಾರ್ಖಾನೆ ಸ್ಥಾಪಿಸಿ, ಯಶಸ್ವಿಯಾಗಿದ್ದಾರೆ. ರಾಜಕೀಯದಲ್ಲಿ ಕೊಟ್ಟ ಎಲ್ಲ ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ಯಶಸ್ವಿಯಾದ ನೆಚ್ಚಿನ ನಾಯಕನಿಗೆ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಅಭಿಮಾನಿಗಳು ಕೃಷ್ಣಾ ತಟವಾದ ಹಿಪ್ಪರಗಿಗೆ ಆಗಮಿಸಿ ಮುರುಗೇಶ ನಿರಾಣಿ ಅವರಿಗೆ ಶುಭ ಕೋರಿರುವುದು ವಿಶೇಷವಾಗಿತ್ತು.

ಗಂಗಾರತಿ ಪಂಡಿತರಿಂದ ಕೃಷ್ಣೆಗೆ ಐತಿಹಾಸಿಕ ಆರತಿ

ಹಿಪ್ಪರಗಿಯಲ್ಲಿ ನಡೆದ ಕೃಷ್ಣಾ ಆರತಿ ಕಾರ್ಯಕ್ರಮ ವಾರಣಾಸಿಯ ಗಂಗಾ ತೀರವನ್ನು ಸಾಕ್ಷಾತ್ಕರಿಸಿದಂತಿತ್ತು. ವಿಶ್ವ ಪ್ರಸಿದ್ಧ ಗಂಗಾ ಆರತಿ ಮಾಡುವ ಪಂಡಿತರ ತಂಡವೇ ಮಹಾಮಾಯಿ ಕೃಷ್ಣೆಗೆ ಆರತಿ ಮಾಡಲು ಹಿಪ್ಪರಗಿಗೆ ಆಗಮಿಸಿದ್ದನ್ನು ಸುತ್ತಲಿನ ಗ್ರಾಮಗಳ ಗ್ರಾಮಸ್ಥರು ಕಣ್ತುಂಬಿಕೊಂಡರು. ಮನಮೋಹಕ ಆರತಿಯ ದೃಶ್ಯಗಳು ಸೇರಿದ್ದ ಜನರನ್ನು ರೋಮಾಂಚನ ಗೊಳಿಸಿದವು. ನದಿ ತೀರದ ಸ್ನಾನ ಘಟ್ಟದ ಮೇಲಿನ ಭವ್ಯವಾದ ಆರತಿ ವೇದಿಕೆಯ ದೀಪಾಲಂಕಾರದಲ್ಲಿ ಕೃಷ್ಣೆಯ ತೀರ ಝಗಮಗಿಸುತ್ತಿತ್ತು. ಗಂಗಾ ಆರತಿ ಮಾಡುವ ಪರಿಣಿತ ಪಂಡಿತರ ತಂಡದ ಆರತಿಯ ಮೋಡಿಗೆ ಸೇರಿದ್ದ ಜನ ಮೂಕವಿಸ್ಮಿತರಾದರು. ಎಲ್ಲೆಡೆ ಕೃಷ್ಣೆಯ ಭಕ್ತಿಯ ಪರಾಕಾಷ್ಠೆಲ್ಲಿ ಜನ ಮಿಂದೆದ್ದರು.

ಹಿಪ್ಪರಗಿಯ ಸಂಗಮೇಶ ದೇವಸ್ಥಾನದ ಆವರಣದ ಕೃಷ್ಣಾ ತೀರದಲ್ಲಿ ಗಂಗಾರತಿ ನಡೆಸುವ ಪಂಡಿತರ ತಂಡದಿಂದ ಕೃಷ್ಣೆಗೆ ಆರತಿ ನೆರವೇರಿಸಲಾಯಿತು.

ಅದ್ದೂರಿ ಶೋಭಾಯಾತ್ರೆ

ಮಾಜಿ ಸಚಿವ ಮುರುಗೇಶ ನಿರಾಣಿ ಜನ್ಮದಿನದ ಅಂಗವಾಗಿ ಸಂಭ್ರಮ ಮನೆಮಾಡಿದ್ದ ಹಿಪ್ಪರಗಿಯಲ್ಲಿ ಅದ್ದೂರಿ ಶೋಭಾಯಾತ್ರೆ ಜರುಗಿತು. ಬೆಳಗ್ಗೆ ಹಿಪ್ಪರಗಿ ಗ್ರಾಮಕ್ಕೆ ಆಗಮಿಸಿದ ಹಿಮಾಲಯದ ಅಘೋರಿಗಳು ಹಾಗೂ ನಾಗಾ ಸಾಧುಗಳನ್ನು ಸುಮಂಗಲಿಯರು ಪೂರ್ಣಕುಂಭ, ವಾದ್ಯಮೇಳಗಳೊಂದಿಗೆ ತೆರೆದ ವಾಹನದಲ್ಲಿ ಮುರುಗೇಶ ನಿರಾಣಿ ಅವರನ್ನು ಅವರ ಅಭಿಮಾನಿಗಳು ಸಾಧುಗಳ ಜತೆ ಕರೆದೊಯ್ದರು.

ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ಮಾಜಿ ಸಚಿವ ಮುರುಗೇಶ ನಿರಾಣಿ ಅವರ 60ನೇ ಜನ್ಮದಿನದ ಅಂಗವಾಗಿ ಜಮಖಂಡಿ ತಾಲೂಕಿನ ಹಿಪ್ಪರಗಿ ಗ್ರಾಮದ ಸಂಗಮೇಶ್ವರ ಮಠದ ಆವರಣದಲ್ಲಿ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ಮಾಜಿ ಸಚಿವ ಮುರುಗೇಶ ನಿರಾಣಿ, ವಿಪ ಸದಸ್ಯ ಹನುಮಂತ ನಿರಾಣಿ, ಉದ್ಯಮಿ ಸಂಗಮೇಶ ನಿರಾಣಿ, ಲಕ್ಷ್ಮಣ ನಿರಾಣಿ ಅವರು ತಮ್ಮ ಕುಟುಂಬದೊಂದಿಗೆ ಕೃಷ್ಣೆಯ ಪುಣ್ಯಸ್ನಾನ ಮಾಡಿದರು.

ಮಾಜಿ ಸಚಿವ ಮುರುಗೇಶ ನಿರಾಣಿ ಅವರ ಜನ್ಮದಿನದ ಅಂಗವಾಗಿ ಜಮಖಂಡಿ ತಾಲೂಕಿನ ಹಿಪ್ಪರಗಿಯಲ್ಲಿ ಅದ್ದೂರಿ ಶೋಭಾಯಾತ್ರೆ ಜರುಗಿತು.

ಸಮಾಚಾರ ಸಣ್ಣದಲ್ಲ

ಜಮೀನು ಸ್ವಾಧೀನ: ಮಹಿಳೆ ಆತ್ಮಹತ್ಯೆ

ಚಾಮರಾಜನಗರ: ಅಂಬೇಡ್ಕರ್ ಭವನ ನಿರ್ಮಾಣ ಮಾಡುವುದಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಜಮೀನು ವಶ ಪಡಿಸಿಕೊಂಡ ಹಿನ್ನೆಲೆಯಲ್ಲಿ ಮನನೊಂದು ಮಹಿಳೆ ನೇಣಿಗೆ ಶರಣಾದ ಘಟನೆ ಚಾಮರಾಜನಗರದಲ್ಲಿ ನಡೆದಿದೆ.

ರಾಜಮ್ಮ (52) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. ಚಾಮರಾಜ ನಗರ ಜಿಲ್ಲೆ ಹನೂರು ತಾಲೂಕಿನ ದೊಡ್ಡಾಲತ್ತೂರಿನಲ್ಲಿ ಘಟನೆ ನಡೆದಿದೆ. ರಾಜಮ್ಮರಿಗೆ ಪಿತ್ರಾರ್ಜಿತವಾಗಿ 90 ಸೆಂಟ್ಸ್ ಭೂಮಿ ಬಂದಿತ್ತು. ಇದ್ದ ಚೂರುಪಾರು ಭೂಮಿಯಲ್ಲಿ ಕುಟುಂಬ ವ್ಯವಸಾಯ ಮಾಡಿಕೊಂಡಿತ್ತು. ಕಳೆದ ವಾರ ಇದ್ದಕ್ಕಿದ್ದ ಹಾಗೆ ಬಂದ ಕಂದಾಯ ಇಲಾಖೆಯ ಅಧಿಕಾರಿಗಳು 20 ಸೆಂಟ್ಸ್ ಭೂಮಿ ವಶಪಡಿಸಿಕೊಂಡಿದ್ದರು. ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ ಜಮೀನು ವಶಪಡಿಸಿಕೊಳ್ಳಲಾಗಿತ್ತು. ಇದರಿಂದ ಬೇಸತ್ತು ರಾಜಮ್ಮ ಶನಿವಾರ ಮುಂಜಾನೆ ತಮ್ಮ ಜಮೀನಿನಲ್ಲಿ ನೇಣಿಗೆ ಶರಣಾಗಿದ್ದಾರೆ. ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಭೇಟಿ ನೀಡಬೇಕೆಂದು ಆಗ್ರಹಿಸಿದ ರಾಜಮ್ಮರ ಶವ ಇಟ್ಟು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಈ ಸಂಬಂಧ ರಾಮಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಥಿನ್ನರ್‌ಗೆ ಬಿದ್ದ ಬೆಂಕಿ: ಬಾಲಕ ಸಾವು

ಧಾರವಾಡ: ಉರುಳಿ ಬಿದ್ದ ಥಿನ್ನರ್ ಬಾಟಲಿಗೆ ಬೆಂಕಿ ತಗುಲಿ ನಾಲ್ಕು ವರ್ಷದ ಬಾಲಕ ಮೃತಪಟ್ಟ ಘಟನೆ ಇಲ್ಲಿನ ಕೆಲಗೇರಿಯ ಸಂತೋಷ ನಗರದಲ್ಲಿ ನಡೆದಿದೆ.

ಅಗಸ್ತ್ಯ ಮಾಶಾಳ್ (4) ದುರ್ಮರಣಕ್ಕೀಡಾಗಿದ್ದಾನೆ. ಮನೆಯಲ್ಲಿ ಬೆಂಕಿ ಕಾಯಿಸಿಕೊಳ್ಳಲೆಂದು ಕುಪ್ಪಡಿಗೆ ಇಡಲಾಗಿತ್ತು. ಅದರ ಪಕ್ಕದಲ್ಲೇ ಥಿನ್ನರ್ ಬಾಟಲಿ ಕೂಡ ಇತ್ತು. ಆಟವಾಡುತ್ತ ತೆರಳಿದ ಬಾಲಕ ಥಿನ್ನರ್ ಬಾಟಲಿಯನ್ನು ಕೆಡವಿದ್ದಾನೆ . ಆ ವೇಳೆ ಥಿನ್ನರ್‌ಗೆ ತಗುಲಿದ ಬೆಂಕಿ ಬಾಲಕನ ಮೈಗೂ ಹೊತ್ತಿಕೊಂಡಿದೆ. ಮಗನ ರಕ್ಷಣೆಗೆ ಧಾವಿಸಿದ ತಂದೆಗೂ ಸುಟ್ಟಗಾಯಗಳಾಗಿವೆ. ಕೂಡಲೇ ಇಬ್ಬರನ್ನೂ ಕಿಮ್ಸ್‌ಗೆ ರವಾನಿಸಲಾಯಿತಾದರೂ ಚಿಕಿತ್ಸೆ ಫಲಿಸದೇ ಬಾಲಕ ಮೃತಪಟ್ಟಿದ್ದಾನೆ. ಬಾಲಕನ ತಂದೆಗೆ ಚಿಕಿತ್ಸೆ ಮುಂದುವರೆದಿದ್ದು, ಈ ಬಗ್ಗೆ ಉಪನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಂತಿದ್ದ ಲಾರಿಗೆ ಬಸ್ ಡಿಕ್ಕಿ: ಮೂವರು ಸಾವು

ಕಾರವಾರ: ರಸ್ತೆ ಬದಿಯಲ್ಲಿ ನಿಂತಿದ್ದ ಲಾರಿಗೆ ಕೆಎಸ್ ಆರ್‌ಟಿಸಿ ಬಸ್ ಡಿಕ್ಕಿಯಾಗಿ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಯಲ್ಲಾಪುರದ ಮಾವಳ್ಳಿ ಕ್ರಾಸ್ ಬಳಿ ಶುಕ್ರವಾರ ಮಧ್ಯರಾತ್ರಿ ನಡೆದಿದೆ. ಅಪಘಾತದಲ್ಲಿ 7 ಜನ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತರನ್ನು ಬಾಗಲಕೋಟೆ ಮೂಲದ ನೀಲವ್ವ ಹರದೊಳ್ಳಿ (40), ಜಾಲಿಹಾಳ ಗ್ರಾಮದ ಗಿರಿಜವ್ವಾ ಬೂದನ್ನವರ (30) ಎಂದು ಗುರುತಿಸಲಾಗಿದೆ. ಮತ್ತೊಬ್ಬ 45 ವರ್ಷದ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. 7 ಹಾಗೂ 12 ವರ್ಷದ ಇಬ್ಬರು ಮಕ್ಕಳ ಸ್ಥಿತಿ ಗಂಭೀರವಾಗಿದೆ. ಬಾಗಲಕೋಟೆಯಿಂದ ಮಂಗಳೂರು ಕಡೆ ಹೊಗುತ್ತಿದ್ದ ಬಸ್, ಮಾವಳ್ಳಿ ಕ್ರಾಸ್ ಬಳಿ ಇಂಡಿಕೇಟರ್ ಹಾಕದೇ ನಿಲ್ಲಿಸಿದ್ದ ಕೇರಳ ಮೂಲದ ಲಾರಿಗೆ ಡಿಕ್ಕಿಯಾಗಿದೆ. ವೇಗವಾಗಿ ಗುದ್ದಿದ ಪರಿಣಾಮ ಬಸ್ ಒಂದು ಬದಿ ಸಂಪೂರ್ಣ ನಜ್ಜು ಗುಜ್ಜಾಗಿದೆ. ಮೃತರು ಕೆಲಸದ ನಿಮಿತ್ತ ಬಾಗಲಕೋಟೆಯಿಂದ ಮಂಗಳೂರು ಕಡೆಗೆ ಹೊರಟಿದ್ದರು ಎಂದು ತಿಳಿದು ಬಂದಿದೆ. ಗಾಯಾಳುಗಳನ್ನ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಸ್ ಚಾಲಕ ನಿರ್ವಾಹಕ ಪ್ರಾಣಾಪಾಯದಿಂದ ಪಾರಾಗಿದ್ದು, ಸ್ಥಳಕ್ಕೆ ಯಲ್ಲಾಪುರ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಕಾಮರಾಜ ರಸ್ತೆ ಬೆಂಗಳೂರು
- **ಸಮಸ್ಯೆಯೇನು?** ಪಾದಚಾರಿ ಮಾರ್ಗದಲ್ಲಿ ಬಿದ್ದಿರುವ ಮರದ ರೆಂಬೆಗಳನ್ನು ತೆರವು ಮಾಡುವ ಬಗ್ಗೆ.
- **ಪರಿಹಾರ:** ಬೆಂಗಳೂರಿನ ಭಾರತಿ ನಗರದ ಕಾಮರಾಜ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಬಿದ್ದಿದ್ದ ಮರದ ರೆಂಬೆಗಳನ್ನು ತೆರವು ಮಾಡಲು ಸ್ಥಳೀಯರೊಬ್ಬರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ಆಗ್ರಹಿಸಿದ್ದರು. ಬಿಬಿಎಂಪಿ ಅರಣ್ಯ ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿ, ಕ್ರಮ ಕೈಗೊಂಡಿದ್ದಾರೆ. ಪಾದಚಾರಿ ಮಾರ್ಗದ ಮೇಲೆ ಬಿದ್ದಿದ್ದ ಮರದ ಕೊಂಬೆ ತೆರವು ಮಾಡಿರುವುದನ್ನು ಉಪಗ್ರಹ ಲೊಕೇಷನ್ ಆಧಾರಿತ ಛಾಯಚಿತ್ರದ ಮೂಲಕ ದೃಢಿಕರಿಸಿದ್ದಾರೆ.

ರಾಜಣ್ಣ ಪುನಃ ಸಂಪುಟಕ್ಕೆ ಸೇರುವ ವಿಶ್ವಾಸ ಇದೆ

ತುಮಕೂರು: ಸಚಿವರಾಗಿ ರಾಜಣ್ಣ ಸಹಕಾರಿ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಸಚಿವ ಸ್ಥಾನದಿಂದ ವಜಾಗೊಳಿಸಿರುವ ಸುದ್ದಿ ಕೇಳಿ ಆಘಾತ ಆಗಿದೆ ಎಂದು ಶ್ರೀಸಿದ್ದಲಿಂಗಸ್ವಾಮಿಜಿ ಬೇಸರ ವ್ಯಕ್ತಪಡಿಸಿದರು.

ವಜಾಗೊಳಿಸಿರುವ ಸುದ್ದಿ ಕೇಳಿ ಆಘಾತ: ಶ್ರೀ ಸಿದ್ದಲಿಂಗ ಸ್ವಾಮಿಜಿ

ಸುದ್ದಿಗಾರರೊಂದಿಗೆ ಮಾತನಾಡಿ,ಅವರನ್ನು ಸಂಪುಟದಿಂದ ಕೈ ಬಿಟ್ಟಿರೋದು ನಿಜಕ್ಕೂ ಚಿಂತನೆ ಮಾಡುವ ವಿಚಾರವಾಗಿದೆ. ಅದರಲ್ಲೂ ತುಮಕೂರು ಜಿಲ್ಲೆಗೆ ವಿಶೇಷವಾಗಿ ನಷ್ಟವಾಗಿದೆ. ತುಮಕೂರಿನಲ್ಲಿ ಇಬ್ಬರು ಸಚಿವರಿದ್ದಾರೆ. ಇಬ್ಬರೂ ಒಳ್ಳೆ ಕೆಲಸ ಮಾಡುತ್ತಾ ಇದ್ದಾರೆ. ರಾಜಣ್ಣರನ್ನು ವಜಾಗೊಳಿಸಿರೋದು ನಿಜಕ್ಕೂ ನೋವುಂಟು ಮಾಡಿದೆ ಎಂದರು.

ರಾಜಣ್ಣನನ್ನು ಪುನಃ ಸಂಪುಟಕ್ಕೆ ಸೇರಿಸಿಕೊಳ್ತಾರೆ ಅನ್ನೋ ಭರವಸೆ ಇದೆ. ಆದಷ್ಟು ಬೇಗ ಈ ಕಗ್ಗಂಟು ಬಗೆಹರಿದು ಅವರನ್ನು ಸಂಪುಟಕ್ಕೆ ಮತ್ತೆ ಸೇರಿಸಿಕೊಳ್ಳಲಿ. ಅವರಿಗೆ ಮತ್ತೊಂದು ಅವಕಾಶ ಕೊಟ್ಟರೆ ಪಕ್ಷಕ್ಕೆ ಒಳ್ಳೆದಾಗುತ್ತದೆ, ಜನತೆಗೆ ಒಳ್ಳೆದಾಗುತ್ತದೆ. ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಗಮನ ಹರಿಸಿ ಹೈ ಕಮಾಂಡ್ ಮನವೊಲಿಸಿ ಮತ್ತೆ ಸಂಪುಟ ಸೇರಿಸಿಕೊಳ್ಳಲಿ ಎಂದರು. ರಾಜಣ್ಣ ಸಹಕಾರಿ ಸಚಿವ ಸ್ಥಾನವನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುತ್ತಿದ್ದರು. ರಾಜಣ್ಣ ನೇರವಾದ ವ್ಯಕ್ತಿತ್ವದವರು.ಯಾವುದೇ ಸಂದರ್ಭದಲ್ಲಿ ಒಳಗೊಂದು, ಹೊರಗೊಂದು ಮಾತನಾಡದೆ, ನೇರವಾಗಿ ಮಾತನಾಡುವವರು. ನೇರವಾದಿ ಲೋಕ ವಿರೋಧಿ ಅನ್ನುವ ಹಾಗೆ ರಾಜಣ್ಣಗೆ ತೊಂದರೆಯಾಗಿದೆ ಎಂದರು.

ಬೆಳಗಾವಿಯಲ್ಲಿ ವಿಮಾನ ತುರ್ತು ಭೂ ಸ್ಪರ್ಶ

ಬೆಳಗಾವಿ: ಪೈಲಟ್ ಸಮಪ್ರಜ್ಞೆಯಿಂದ ಭಾರೀ ಅನಾಹುತ ತಪ್ಪಿದ್ದು, ಮುಂಬೈಗೆ ಹೊರಟಿದ್ದ ವಿಮಾನ ತಾಂತ್ರಿಕ ದೋಷದಿಂದ ತುರ್ತು ಭೂಸ್ಪರ್ಶ ಮಾಡಿರುವ ಘಟನೆ ಶನಿವಾರ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ನಡೆದಿದೆ.

ಬೆಳಗಾವಿಯಿಂದ ಮುಂಬೈಗೆ ಶನಿವಾರ ಬೆಳಗ್ಗೆ ತೆರಳುತ್ತಿದ್ದ ಸ್ಟಾರ್‌ಏರ್‌ನ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಹಿನ್ನೆಲೆ ಮಾರ್ಗಮಧ್ಯದಿಂದ ವಾಪಸ್ ಆದ ವಿಮಾನ ಸಾಂಬ್ರಾ ನಿಲ್ದಾಣದಲ್ಲಿ ತುರ್ತು ಭೂ ಸ್ಪರ್ಶಿಸಿದೆ.

ಸ್ಟಾರ್ ಏರ್‌ನ ಎಸ್5111 ವಿಮಾನದಲ್ಲಿ 48 ಪ್ರಯಾಣಿಕರು ಪ್ರಯಾಣಿಸುತ್ತಿದ್ದರು.

ಬೆಳಗ್ಗೆ 7.50ಕ್ಕೆ ಟೇಕಾಫ್ ಆಗಿದ್ದ ವಿಮಾನ 8.50ಕ್ಕೆ ವ್ಂಬೈನ್‌ಲ್ಲಿ ಇಳಿಯಬೇಕಿತ್ತು.

ಆದರೆ, ತಾಂತ್ರಿಕ ದೋಷದ ಹಿನ್ನೆಲೆಯಲ್ಲಿ ಮುಂಬೈಗೆ ಹೋಗದೆ ಬೆಳಗಾವಿಯಲ್ಲೇ ಬಂದು ಇಳಿದಿದೆ. ಎಲ್ಲ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ. ಮತ್ತೊಂದು ವಿಮಾನದಲ್ಲಿ ಪ್ರಯಾಣಿಕರನ್ನು ಕಳುಹಿಸಲಾಗಿದೆ ಎಂದು ಸಾಂಬ್ರಾ ವಿಮಾನ ನಿಲ್ದಾಣ ನಿರ್ದೇಶಕ ಎಸ್.ತ್ಯಾಗರಾಜನ್ ತಿಳಿಸಿದರು.

ಆಲಮಟ್ಟಿ ಜಲಾಶಯ ಭರ್ತಿ



ಇಂದಿನ ನೀರಿನ ಮಟ್ಟ

- ಗರಿಷ್ಠ ಎತ್ತರ: 519.60 ಮೀಟರ್
- ನೀರು ಸಂಗ್ರಹ ಸಾಮರ್ಥ್ಯ: 123.081 ಟಿಎಂಸಿ
- ಪ್ರಸ್ತುತ ನೀರು ಸಂಗ್ರಹ: 123 ಟಿಎಂಸಿ
- ಒಳಹರಿವು: 30,000 ಕ್ಯೂಸೆಕ್
- ಹೊರ ಹರಿವು: 30,000 ಕ್ಯೂಸೆಕ್

ವಿಜಯಪುರ: ಮಹಾರಾಷ್ಟ್ರ ಭಾಗದಲ್ಲಿ ಆದ ಮಳೆಯಿಂದಾಗಿ ಉತ್ತರ ಕರ್ನಾಟಕದ ಜೀವನದಿ ಕೃಷ್ಣೆ ತುಂಬಿ ಹರಿಯುತ್ತಿದ್ದು, ಆಲಮಟ್ಟಿ ಜಲಾಶಯ ಸಂಪೂರ್ಣ ಭರ್ತಿಯಾಗಿದೆ. ನಿಡಗುಂದಿ ತಾಲೂಕಿನ ಆಲಮಟ್ಟಿಯಲ್ಲಿರುವ ಜಲಾಶಯ ಒಟ್ಟು 123 ಟಿಎಂಸಿ ಸಂಗ್ರಹಣ ಸಾಮರ್ಥ್ಯ ಹೊಂದಿದೆ. 123 ಟಿಎಂಸಿ ನೀರು ಸಂಗ್ರಹವಾಗಿದ್ದು, 30,000 ಕ್ಯೂಸೆಕ್ ಒಳಹರಿವು ಹಾಗೂ 30,000 ಕ್ಯೂಸೆಕ್ ಹೊರಹರಿವು ದಾಖಲಾಗಿದೆ. ಇದರಿಂದ ಜಿಲ್ಲೆಯ ರೈತರಲ್ಲಿ ಸಂಭ್ರಮ ಮನೆಮಾಡಿದೆ.

ಮೂವತ್ತಕ್ಕೂ ಹೆಚ್ಚು ಜನರ ಮೇಲೆ ಹುಚ್ಚುನಾಯಿ ದಾಳಿ

ಕೊಪ್ಪಳ: ಜಿಲ್ಲೆಯ ಕುಕನೂರು ತಾಲೂಕಿನ ತಳಕಲ್ ಹಾಗೂ ತಳಬಾಳ ಗ್ರಾಮಗಳಲ್ಲಿ ಹುಚ್ಚುನಾಯಿ ಕಡಿತದಿಂದ 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಒಬ್ಬ ಬಾಲಕನ ಸ್ಥಿತಿ ಗಂಭೀರವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಮನೆ ಪಕ್ಕದಲ್ಲಿ ಆಟವಾಡುತ್ತಿದ್ದ 8 ವರ್ಷದ ಯಮನೂರುಸಾಬ್ ಮಾಬುಸಾಬ್ ನದಾಫ್ ಎಂಬ ಬಾಲಕ ಬೀದಿನಾಯಿ ದಾಳಿಗೊಳಗಾಗಿ ಗಂಭೀರ ಗಾಯಗೊಂಡಿದ್ದಾನೆ. ಬಾಲಕನ ತುಟಿಯು ಸಂಪೂರ್ಣ ವಾಗಿ ಹರಿದು ಹೋಗಿದ್ದು, ತಲೆ, ಕೆನ್ನೆಗೆ ಗಂಭೀರ ಗಾಯಗಳಾಗಿವೆ. ರಸ್ತೆಯ ಮೇಲೆ ಹುಚ್ಚುನಾಯಿ ಏಕಾಏಕಿಯಾಗಿ ಆಕ್ರಮಣ ನಡೆಸಿದೆ. ಕಂಡಕಂಡವರ ಮೇಲೆ ಏಕಾಏಕಿ ಹುಚ್ಚುನಾಯಿ ದಾಳಿ ನಡೆಸಿದೆ. ಕಿರುಚಾಡಿದ ಬಾಲಕನನ್ನು ಸ್ಥಳೀಯರು ರಕ್ಷಣೆ ಮಾಡಿದ್ದಾರೆ. ಗಾಯಾಳು ಯಮನೂರ್‌ಸಾಬ್‌ಗೆ ಕುಕನೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಗಾಯಗೊಂಡಿದ್ದ ಬಾಲಕನನ್ನು ತಕ್ಷಣ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಬಾಲಕನನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಯಿಗಳನ್ನು ಸೆರೆ ಹಿಡಿಯುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಥಳೀಯರು ಆಗ್ರಹ ಮಾಡಿದ್ದಾರೆ.

ಮಂತ್ರಾಲಯದಲ್ಲಿ ಜನ್ಮಾಷ್ಟಮಿ ಸಂಭ್ರಮ

ರಾಯಚೂರು: ಮಂತ್ರಾಲಯ ಗುರು ರಾಘವೇಂದ್ರ ಸ್ವಾಮಿ ಮಠದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಸಂಭ್ರಮ, ಸಡಗರದಿಂದ ಆಚರಿಸಲಾಗಿದೆ. ಕೃಷ್ಣನ ಪೂಜೆಗೂ ಮುನ್ನ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರ ಶ್ರೀಗಳ ನೇತೃತ್ವದಲ್ಲಿ ಪಿಂಡ್ಲಿ ಉತ್ಸವ ಅದ್ಧೂರಿಯಾಗಿ ನೆರವೇರಿತು. ಮಠದ ಹೊರಗೆ ರಾಜ ಬೀದಿಯಲ್ಲಿ ಪಿಂಡಿ ಉತ್ಸವ ಆಯೋಜಿಸಲಾಗಿತ್ತು.

ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಶ್ರೀಗಳು ಪಿಂಡಿ ಉತ್ಸವದಲ್ಲಿ ಪಾಲ್ಗೊಂಡು ಮೊಸರು, ಹಾಲು, ಬೆಣ್ಣೆ ತುಂಬಿದ ಮಡಿಕೆಯನ್ನ ಒಡೆದರು. ಉತ್ಸವದಲ್ಲಿ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದ ವಿದ್ಯಾರ್ಥಿಗಳು ಹಾಗೂ ಮಠದ ಸಿಬ್ಬಂದಿ, ಭಕ್ತರು ಭಾಗವಹಿಸಿದ್ದರು. ವಿದ್ಯಾರ್ಥಿಗಳು ನಿರಂತರ ಎರಚುವ ಓಕಳಿ ಮಧ್ಯೆಯೇ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಗಡಿಗಿ ಹೊಡೆಯುವ ಸ್ಪರ್ಧೆಯಲ್ಲಿ ಭಾಗವಹಿಸಿ ಸಂಭ್ರಮಿಸಿದರು. ಬಳಿಕ ಮಠದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ನಿಮಿತ್ತ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ರಾಯಚೂರು ಜಿಲ್ಲೆಯ ಎಲ್ಲೆಡೆ ಕೃಷ್ಣ ಜನ್ಮಾಷ್ಟಮಿ ಸಂಭ್ರಮ ಮನೆ ಮಾಡಿತ್ತು. ನಗರದ ಗೀತಾ ಮಂದಿರ, ಶ್ರೀಕೃಷ್ಣ ದೇವಸ್ಥಾನದಲ್ಲಿ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು, ಪುಟ್ಟಮಕ್ಕಳು ಕೃಷ್ಣ ರಾಧ ವೇಷಧರಿಸಿ ಸಂಭ್ರಮಿಸಿದರು.

ಮಾರುಕಟ್ಟೆಗೆ ಲಗ್ಗೆಯಿಟ್ಟ ರೋಡ್‌ಸ್ಟರ್

ಯೆಜ್ಡಿ ಸಂಸ್ಥೆಯಿಂದ ನೂತನ ಮಾಡೆಲ್ ಅನಾವರಣ | ಗಮನ ಸೆಳೆಯುವ ವಿನ್ಯಾಸ, ಎಂಜಿನ್

ಅಶೋಕ್ ಮೂಡಲಗಿರಿ ಮುಂಬೈ

ಬೈಕ್ ಪ್ರಿಯರ ನೆಚ್ಚಿನ ಬ್ರ್ಯಾಂಡ್‌ಗಳಲ್ಲಿ ಒಂದಾಗಿರುವ ಯೆಜ್ಡಿ ಇದೀಗ ಬೈಕ್ ಸವಾರರಿಗೆ ಹೊಸ ಮಾಡೆಲ್ ಒಂದನ್ನು ಪರಿಚಯಿಸಿದೆ.

ಇತ್ತೀಚಿಗೆ ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಯೆಜ್ಡಿ ರೋಡ್ ಸ್ಟರ್' ಮಾಡೆಲ್ ಅನ್ನು ಐದು ಆಕರ್ಷಕ ಬಣ್ಣಗಳಲ್ಲಿ, ಗಮನ ಸೆಳೆಯುವ ವಿನ್ಯಾಸದೊಂದಿಗೆ ಹಾಗೂ ನಾವೀನ್ಯ ಎಂಜಿನ್, ವೈಶಿಷ್ಟ್ಯಗಳೊಂದಿಗೆ ಗ್ರಾಹಕರಿಗೆ ಪರಿಚಯಿಸಿದೆ.

ಎಕ್ಸ್‌ಷೋರೂಂ ದರವೇನು?

- ಶಾಕ್‌ಸ್ಕಿನ್ ಬ್ಲೂ 2,09,969 ರು.
- ಸ್ಮೋಕ್ ಗ್ರೇ 2,12,969 ರು.
- ಬ್ಲಡ್‌ರಶ್ ಮರೂನ್ 2,16,969 ರು.
- ಸ್ಯಾವೇಜ್ ಗ್ರೀನ್ 2,21,969 ರು.
- ಶ್ಯಾಡೋ ಬ್ಲಾಕ್ 2,25,969 ರು.

ಜಾವಾ ಯೆಜ್ಡಿ ಭಾರತದಲ್ಲಿ ರೋಡ್‌ಸ್ಟರ್ ಅಪ್‌ಡೇಟ್ ಆವೃತ್ತಿ ಇದಾಗಿದ್ದು, ಕಂಪನಿಯು ಈ ಬೈಕ್‌ನಲ್ಲಿ ಹಲವು ಬದಲಾವಣೆ ಮಾಡಿದೆ. ಇದರೊಂದಿಗೆ ಎಂಜಿನ್‌ವಿಷಯದಲ್ಲಿ ಹೆಚ್ಚು ಬದಲಾವಣೆ ಮಾಡದಿದ್ದರೂ, ಕೆಲವೊಂದಷ್ಟು ಕಾಸ್ಮೆಟಿಕ್ ಬದಲಾವಣೆಗಳನ್ನು ಮಾಡಲಾಗಿದೆ. 2025ರ ಯೆಜ್ಡಿ ರೋಡ್‌ಸ್ಟರ್ ಬೆಲೆ 2.10 ಲಕ್ಷದಿಂದ 2.26 ಲಕ್ಷ ರು. ಅಂತರದಲ್ಲಿದೆ.

ಯೆಜ್ಡಿ ರೋಡ್‌ಸ್ಟರ್ 334 ಸಿಸಿ ಸಿಂಗಲ್ - ಸಿಲಿಂಡರ್ ಲಿಕ್ವಿಡ್-ಕೂಲ್ಡ್ ಆಲ್ಫಾ 2 ಎಂಜಿನ್‌ನಿಂದ ನಿಯಂತ್ರಿಸಲ್ಪಡುತ್ತದೆ. ಇದು ಅಸಿಸ್ಟ್ ಮತ್ತು ಸ್ಲಿಪ್ಪರ್ ಕ್ಲಚರ್‌ನೊಂದಿಗೆ 6 - ಸ್ಪೀಡ್ ಗೇರ್ ಬಾಕ್ಸ್‌ಗಳೊಂದಿಗೆ ಕಾರ್ಯನಿರ್ವಹಿಸಲಿದೆ. ಇದರ ಎಂಜಿನ್ 29.6 ಬಿಎಚ್‌ಪಿ ಪವರ್ ಮತ್ತು 29.9 ಎನ್‌ಎಂ ಪೀಕ್ ಟಾರ್ಕ್ ಔಟ್‌ಪುಟ್ ಉತ್ಪಾದಿಸುತ್ತದೆ.

ಈ ಬೈಕ್‌ನಲ್ಲಿ ಡ್ಯುಯಲ್ ಚಾನೆಲ್ ಎಬಿಎಸ್ ಹೊಂದಿದ್ದು, 320 ಮಿಮಿ ಫ್ರಂಟ್ ಡಿಸ್ಕ್ ಬ್ರೇಕ್ ಹಾಗೂ 240 ಎಂಎಂ ರೇರ್ ಡಿಸ್ಕ್ ಬ್ರೇಕ್‌ಗಳನ್ನು ಹೊಂದಿದೆ. ಇದರೊಂದಿಗೆ, ಟೆಲಿಸ್ಕೋಪಿಕ್ ಫ್ರಂಟ್ ಸಸ್ಪೆನ್ಷನ್, ಡ್ಯುಯಲ್ ರಿಯರ್ ಶಾಕ್‌ಗಳಲ್ಲಿ ಸ್ಟೆಬಿಲಿಟಿ ಮತ್ತು ಸೌಕರ್ಯಕ್ಕಾಗಿ ಕ್ಯಾಲಿಬ್ರೇಟ್ ಮಾಡಲಾಗಿದೆ. 795 ಎಂಎಂ ಸೀಟ್ ಎತ್ತರ ಸೇರಿದಂತೆ ಹಲವು ಫೀಚರ್‌ಗಳನ್ನು ನೀಡಲಾಗಿದೆ ಎಂದು ಕಂಪನಿ ಹೇಳಿದೆ. ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಸುನೀಲ್ ಶೆಟ್ಟಿ ಹಾಗೂ ಉದ್ಯಮಿ ಆನಂದ್ ಮಹೀಂದ್ರ ಮಾತನಾಡಿದರು.

ಬೈಕ್ ಕಾಯ್ದಿರಿಸಲು ಮುಂಗಡ 999 ರು.

ಗ್ರಾಹಕರನ್ನು ಸೆಳೆಯುವ ಉದ್ದೇಶದಿಂದ 4 ವರ್ಷ ಅಥವಾ 50 ಸಾವಿರ ಕಿ.ಮೀ. ವರೆಗೆ ವಾರಂಟಿ ನೀಡಲಾಗುತ್ತಿದೆ. ವಾರಂಟಿ ಅವಧಿ ವಿಸ್ತರಿಸಿಕೊಳ್ಳುವ ಅವಕಾಶ ಗ್ರಾಹಕರಿಗಿದೆ. ಯೆಜ್ಡಿಯ ಈ ಹಿಂದಿನ ಅವತರಣಿಕೆಯ ಬೈಕ್‌ಗಳಿಗೆ ಹೋಲಿಸಿದರೆ ರೋಡ್ ಸ್ಟರ್‌ನ ಸೀಟ್ ಹಾಗೂ ಇಂಡಿಕೇಟರ್‌ಗಳ ವಿನ್ಯಾಸದಲ್ಲಿ ಬದಲಾವಣೆ ಕಾಣಬಹುದಾಗಿದೆ. ಗ್ರಾಹಕರು ಬೇಕಿದ್ದರೆ ಹಿಂದಿನ ಸೀಟ್ ತೆಗೆದಿಡಬಹುದು. ಅಗತ್ಯಬಿದ್ದರೆ ಮತ್ತೆ ಅಳವಡಿಸಿಕೊಳ್ಳಬಹುದು. ಆಸಕ್ತರು ಕಂಪನಿಯ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ, ಮುಂಗಡವಾಗಿ 999 ಪಾವತಿಸಿ ಆನ್‌ಲೈನ್ ಮೂಲಕ ಬೈಕ್ ಕಾಯ್ದಿರಿಸಬಹುದು. ಒಂದೊಮ್ಮೆ ಬುಕಿಂಗ್ ರದ್ದುಮಾಡಿದರೆ ಪೂರ್ಣ ಮೊತ್ತ ಮರುಪಾವತಿಸಲಾಗುತ್ತದೆ ಎಂದು ಜಾವಾ ಯೆಜ್ಡಿ ಮೋಟರ್ ಸೈಕಲ್‌ನ ಸಹ ಸಂಸ್ಥಾಪಕ ಅನುಪಮ್ ಥರೇಜಾ ತಿಳಿಸಿದರು.

ಜಾತಿ ತಿದ್ದಿದ ಮುಖ್ಯಶಿಕ್ಷಕನ ಅಮಾನತು

ಸುರಪುರ (ಯಾದಗಿರಿ): ಮೂಲ ಜಾತಿ ಬದಲು ಬೇರೊಂದು ಜಾತಿ ಹೆಸರಲ್ಲಿ ವಿದ್ಯಾರ್ಥಿಯನ್ನು ಶಾಲೆಗೆ ದಾಖಲು ಮಾಡಿಕೊಂಡ ಆರೋಪದಲ್ಲಿ ತಾಲೂಕಿನ ಕರಡಕಲ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರು ಮನೋಹರ ಪತ್ತಾರ ಅವರನ್ನು ಅಮಾನತುಗೊಳಿಸಿ ಡಿಡಿಪಿಐ ಚನ್ನಬಸಪ್ಪ ಮುಧೋಳ ಆದೇಶ ಹೊರಡಿಸಿದ್ದಾರೆ.

ಕರಡಕಲ್ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕನ ಅಮಾನತು

ವಿದ್ಯಾರ್ಥಿಗಳ ಜಾತಿ ಪರಿಶೀಲನೆ ವೇಳೆ ಈ ಪ್ರಕರಣ ಬೆಳಕಿಗೆ ಬಂದಿತ್ತು. ಈ ಬಗ್ಗೆ ಎಸ್ಟಿ ನಕಲಿ ಜಾತಿಗಳ ಪ್ರಮಾಣ ಪತ್ರ ತಡೆ ಸಮಿತಿ ಸುರಪುರ ತಾಲೂಕಾಧ್ಯಕ್ಷ ನಾಗರಾಜ ನಾಯಕ ಪ್ಯಾಪ್ಲಿ ದೂರು ನೀಡಿದ್ದರು. ಈ ದೂರಿನನ್ವಯ ತನಿಖೆ ನಡೆಸಿದ ಶಿಕ್ಷಣ ಸಂಯೋಜಕ ಮತ್ತು ಸಿ.ಆರ್.ಪಿ ಅವರು ತಮ್ಮ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದರು. ಇದನ್ನು ಆಧರಿಸಿ ಇದೀಗ ಕ್ರಮ ಕೈಗೊಳ್ಳಲಾಗಿದೆ.

ಏನಿದು ಪ್ರಕರಣ..?: ಶಾಲಾ ದಾಖಲಾತಿಯಲ್ಲಿ 2017-18ನೇ ಸಾಲಿನಲ್ಲಿ ವಿದ್ಯಾರ್ಥಿನಿಯ ಮೂಲ ದಾಖಲೆಗಳಲ್ಲಿ ಜಾತಿ ಕಾಲಂನಲ್ಲಿರುವುದನ್ನು ಪಾಲಕರಿಂದ ಹಣ ಪಡೆದು ಕಬ್ಬಲಿಗ ಎಂದಿರುವುದನ್ನು ತಳವಾರ ಎಂದು ತಿದ್ದುಪಡಿಗೊಳಿಸಿದ್ದಾರೆ ಎಂದು ಎಸ್.ಸಿ, ಎಸ್.ಟಿ ನಕಲಿ ಜಾತಿ ತಡೆ ಸಮಿತಿಯವರು ಸಲ್ಲಿಸಿದ ದೂರಿನ ಮೇರೆಗೆ ಡಿಡಿಪಿಐ ಅವರು ತನಿಖಾ ತಂಡವನ್ನು ರಚಿಸಿದ್ದರು. ಅದರಂತೆ ತನಿಖೆ ವೇಳೆ ವಿಚಾರಣೆಯಲ್ಲಿ ಜಾತಿ ತಿದ್ದುಪಡಿಗೊಳಿಸಿರುವುದು ಸಾಬೀತಾಗಿರುವುದರಿಂದ ಶಾಲೆಯ ಮುಖ್ಯಶಿಕ್ಷಕ ಮನೋಹರ ಪತ್ತಾರ ಅವರನ್ನು ಮೇಲೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತುಗೊಳಿಸಿ ಆದೇಶಿಸಿದ್ದಾರೆ.

ಮೌಲ್ಯಾಧಾರಿತ ಶಿಕ್ಷಣ ನೀಡುವ ಶಾಲೆಯ ಶಿಕ್ಷಕರು ಹಣದಾಸೆಗೆ ತಪ್ಪು ದಾರಿಗೆ ಬಿದ್ದಿರುವುದು ದುರದೃಷ್ಟಕರ. ಈ ಪ್ರಕರಣದಿಂದ ಇಡೀ ಶಿಕ್ಷಣ ಇಲಾಖೆಗೆ ಕಪ್ಪುಚುಕ್ಕೆಯಾಗಿದೆ. ಇನ್ನೂ ಪ್ರಕರಣದಲ್ಲಿ ಕೂಡಲೇ ಕ್ರಮ ಜರುಗಿಸಿರುವುದು ಸ್ವಾಗತಾರ್ಹವಾಗಿದೆ.

-ನಾಗರಾಜ ನಾಯಕ ಮಹರ್ಷಿ ವಾಲ್ಮೀಕಿ ಸಂಘದ ತಾಲೂಕು ಕಾರ್ಯದರ್ಶಿ

ನಿಜವಾದ ಗೆಳೆಯರು ಯಾರು? ಟೀಕಾಕಾರರು ಯಾರು?

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಇದು ಸುಮಾರು ಒಂದೂವರೆ ವರ್ಷದ ಹಿಂದಿನ ಮಾತು. ತಮಿಳುನಾಡಿನ ರಾಜಕೀಯ ನಾಯಕ ಕರುಣಾನಿಧಿ ಅವರು ತೀರಿಕೊಂಡಾಗ ಖ್ಯಾತ ಅಂಕಣಕಾರ ಎಸ್. ಗುರುಮೂರ್ತಿ ಅವರ ಬಗ್ಗೆ (ಕರುಣಾನಿಧಿ ಬಗ್ಗೆ) ಬರೆದ ಲೇಖನವೊಂದನ್ನು ಓದುತ್ತಿದ್ದೆ. ಗುರುಮೂರ್ತಿ ಅವರ ಲೇಖನದಲ್ಲಿ ಒಂದು ವಿಶೇಷ ಹೊಳಹು ಇರುತ್ತದೆ. ಅದರಲ್ಲೂ ಗಣ್ಯ ವ್ಯಕ್ತಿಗಳು ನಿಧನರಾದಾಗ ಅವರ ಕುರಿತು ಗುರುಮೂರ್ತಿ ಬರೆದರೆ ಸಾಮಾನ್ಯವಾಗಿ ನಾನು ಆ ಲೇಖನವನ್ನು ತಪ್ಪಿಸಿಕೊಳ್ಳುವುದಿಲ್ಲ. ಯಾರೊಂದಿಗೆ ಒಡನಾಟವಿದೆಯೋ, ಅಂಥವರ ಬಗ್ಗೆ ಮಾತ್ರ ಗುರುಮೂರ್ತಿ ಬರೆಯುತ್ತಾರೆ. ಈ ಕಾರಣದಿಂದ ಅವರ ಲೇಖನದಲ್ಲಿ ಯಾರಿಗೂ ಕಾಣದ ಒಂದಷ್ಟು ಹೊಸ ಸಂಗತಿಗಳು ಗೊತ್ತಾಗುತ್ತವೆ.

ಕಂಚಿ ಕಾಮಕೋಟಿ ಪೀಠದ ಜಯೇಂದ್ರ ಸರಸ್ವತಿ ಶಂಕರಾಚಾರ್ಯರು ನಿಧನರಾದಾಗ, 'ಔಟ್‌ಲುಕ್' ಮ್ಯಾಗಜಿನ್‌ನಲ್ಲಿ ಗುರುಮೂರ್ತಿಯವರು ಬರೆದ ಲೇಖನವು, ನಾನು ಓದಿದ ಎಲ್ಲಾ 'ನಿಧನರಾದಾಗ ಬರೆಯುವ ಲೇಖನ'ಕ್ಕಿಂತ (ಮೃತವೃತ್ತಾಂತ) ಅತ್ಯುತ್ತಮವಾಗಿತ್ತು. ಜಯೇಂದ್ರರ ಸುತ್ತ ಕವಿದ ವಿವಾದಗಳ ಮಧ್ಯೆಯೂ ಅವರಲ್ಲಿರುವ ಶ್ರೇಷ್ಠತೆಯನ್ನು ಅವರು ಪರಿಚಯಿಸಿದ್ದರು. ಒಂದು ವಿವಾದ, ಸಣ್ಣ ಓರೆಕೋರೆಗಳು ವ್ಯಕ್ತಿಯ ಇಡೀ ವ್ಯಕ್ತಿತ್ವವನ್ನು ನುಂಗದೇ, ಅಸಾಮಾನ್ಯರಾದವರು ಹೇಗೆ ಈ ಎಲ್ಲ ಅಪಸವ್ಯಗಳಿಂದ ಎತ್ತರದಲ್ಲಿರುತ್ತಾರೆ ಎಂಬುದನ್ನು ಗುರುಮೂರ್ತಿ ಬಹಳ ಪರಿಣಾಮಕಾರಿಯಾಗಿ ವಿವರಿಸಿದ್ದರು. ಅವರ ಜತೆಗಿನ ಸಾಮೀಪ್ಯದಿಂದಾಗಿ ಆ ಲೇಖನಕ್ಕೆ ವಿಶೇಷ ಮೆರುಗು ಮತ್ತು ಮೌಲಿಕತೆ ಬಂದಿತ್ತು.

ಕರುಣಾನಿಧಿ ಅವರ ಬಗ್ಗೆ ಬರೆದ ಲೇಖನವೂ ಅಪರೂಪದ ಮೃತವೃತ್ತಾಂತ. ಪ್ರಾಯಶಃ ಯಾರೂ ಅಷ್ಟೊಂದು ಆಪ್ತವಾಗಿ ಬರೆದಿದ್ದನ್ನು ನಾನಂತೂ ಓದಿಲ್ಲ. ಕರುಣಾನಿಧಿ ಅವರು ವೈಯಕ್ತಿಕವಾಗಿ ಹಲವಾರು ಸರಣಿ ಹಿನ್ನಡೆಗಳನ್ನು ಕಂಡವರು. ಆದರೆ ಈ ಹಿನ್ನಡೆಗಳ ಮಧ್ಯೆ ಅವರೆಂದೂ ತಮ್ಮ ಪಕ್ಷವು ಬಡವಾಗಲು ಬಿಡಲಿಲ್ಲ. ಅವರಿಗೆ ಹಿನ್ನಡೆಯಾದಾಗಲೆಲ್ಲ ಪಕ್ಷವನ್ನು ಬಲಪಡಿಸುತ್ತಿದ್ದರು. ಅವರು ರಾಷ್ಟ್ರ ರಾಜಕಾರಣದಲ್ಲಿ ಮೆರೆಯಬಹುದಿತ್ತು. ಆದರೆ ಉದ್ದೇಶಪೂರ್ವಕವಾಗಿ ಅವರು ತಮಿಳುನಾಡನ್ನು ಬಿಟ್ಟು ಕದಲಲೇ ಇಲ್ಲ. ಅವರಿಗೆ ತಮ್ಮ ಸಾಮರ್ಥ್ಯಕ್ಕಿಂತ ಬಲಹೀನತೆಗಳು ಚೆನ್ನಾಗಿ ಗೊತ್ತಿದ್ದವು. ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಭುತ್ವ ಸಾಧಿಸದೇ ರಾಷ್ಟ್ರ ರಾಜಕಾರಣದಲ್ಲಿ ಯಶಸ್ವಿಯಾಗುವುದು ಸಾಧ್ಯವಿಲ್ಲ ಎಂಬುದು ಅವರಿಗೆ ಗೊತ್ತಿತ್ತು. ಹೀಗಾಗಿ ಅವರು ತಮಿಳುನಾಡಿಗೆ ಸೀಮಿತರಾದರು. ಹಾಗೆ ನೋಡಿದರೆ ಅದು ಅವರ ಅತ್ಯುತ್ತಮ ನಿರ್ಧಾರಗಳಲ್ಲಿ ಒಂದಾಗಿತ್ತು. ಕರುಣಾನಿಧಿ ಅವರಿಗೂ, ಜಯಲಲಿತಾ ಅವರಿಗೂ ಒಂದು ಪ್ರಮುಖ ವ್ಯತ್ಯಾಸ ಇತ್ತು. ಅದೇನೆಂದರೆ, ಅವರಿಬ್ಬರೂ ತಮ್ಮ ವಿರೋಧಿಗಳನ್ನು ನಡೆಸಿಕೊಳ್ಳುತ್ತಿದ್ದ ರೀತಿ. ಜಯಾಗೆ ಯಾರಾದರೂ ಸೇರಿ ಬರೊಲ್ಲ ಅಂದರೆ ಯಾವತ್ತೂ ಸೇರಿ ಬರುತ್ತಿರಲಿಲ್ಲ. ವಿರೋಧಿಗಳ ಜತೆ ಸ್ವಲ್ಪವೂ ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ವಿರೋಧಿಗಳನ್ನು ಹೆಚ್ಚು ಹೆಚ್ಚು ವಿರೋಧಿಸುವುದರಲ್ಲಿ ಖುಷಿ ಕಾಣುತ್ತಿದ್ದರು. ಆದರೆ ಕರುಣಾನಿಧಿ ಹಾಗಿರಲಿಲ್ಲ. ವಿರೋಧಿಗಳನ್ನು ಮನ್ನಿಸುವ ದೊಡ್ಡ ಗುಣ ಅವರಲ್ಲಿತ್ತು. ಒಮ್ಮೆ ಸ್ವತಃ ಕರುಣಾನಿಧಿ ಅವರೇ ಬರೆದಿದ್ದರಂತೆ- ''ನನ್ನ ಕಟು ಟೀಕಾಕಾರರಾದ ಚೋ.ರಾಮಸ್ವಾಮಿ ಇದ್ದಾನಲ್ಲ, ಆತ ನನ್ನ ಉತ್ತಮ ಸ್ನೇಹಿತ. ಒಂದು ವೇಳೆ ಚೋ ನನ್ನನ್ನು ಇಷ್ಟು ಕಟುವಾಗಿ, ಕೆಟ್ಟದಾಗಿ ಟೀಕಿಸದಿದ್ದರೆ, ನಾನು ಇನ್ನೂ ದುಷ್ಟನಾಗುತ್ತಿದ್ದೆ. ಈ ಕಾರಣದಿಂದ ಅವನ ಬಗ್ಗೆ ನನಗೆ ಗೌರವ''. ನಮ್ಮ ರಾಜ್ಯದ ಎಷ್ಟು ಮಂದಿ ರಾಜಕಾರಣಿಗಳು ಈ ಸಾಲುಗಳನ್ನು ಓದಿದ್ದಾರೋ ಗೊತ್ತಿಲ್ಲ. ಈಗಾದರೂ ಓದಲಿ ಎಂದು ಇಲ್ಲಿ ಇದನ್ನು ಬರೆಯಬೇಕಾಯಿತು

ಎರಡು ರೀತಿಯ ಜನ

ಇದು ಯೋಗಿ ದುರ್ಲಭ ಜೀ ಹೇಳಿದ್ದು: ಜೀವನದಲ್ಲಿ ಎರಡು ರೀತಿಯ ಜನರನ್ನು ನಂಬಲೇಬಾರದಂತೆ. ಮೊದಲನೆಯದು, ಯಾರಿಗೆ ಮತ ಹಾಕಬೇಕು ಎಂದು ಹೇಳುವ ಧಾರ್ಮಿಕ ಮುಖಂಡ ಮತ್ತು ಎರಡನೆಯದು, ಯಾವ ರೀತಿ ಪ್ರಾರ್ಥನೆ ಮಾಡಬೇಕು ಎಂದು ಹೇಳುವ ರಾಜಕಾರಣಿ. ಇವರಿಬ್ಬರೂ ಸಮಾಜಕ್ಕೆ ಬಹಳ ಅಪಾಯಕಾರಿ. ನಮಗೆ ಧಾರ್ಮಿಕ ಮುಖಂಡರೂ ಬೇಕು ಮತ್ತು ರಾಜಕೀಯ ನಾಯಕರೂ ಬೇಕು. ಆದರೆ ಯಾವುದೇ ಕಾರಣಕ್ಕೂ ಇಬ್ಬರನ್ನೂ ಒಟ್ಟಿಗೇ ಇರಲು ಬಿಡಬಾರದಂತೆ. ಬಿಟ್ಟರೆ ಸಮಾಜಕ್ಕೆ ಏನೋ ಅಪಾಯ ಕಾದಿದೆ ಎಂದರ್ಥ.

ಒಂದು ಸಾಲಿನ ಕಥೆ!

ಕಥೆ ಎಂದರೆ ದೀರ್ಘವಾಗಿರಲೇಬೇಕು ಎಂದಿಲ್ಲ. ಇನ್ನೂರು-ಮುನ್ನೂರು ಪುಟಗಳಿರಲೇಬೇಕು ಎಂದಿಲ್ಲ. ಒಂದು ಸಾಲಿನಲ್ಲಿಯೂ ಸುಂದರವಾದ ಕಥೆ ಹೇಳಬಹುದು. ಆ ಒಂದು ಸಾಲು ಜೀವನ ಪರ್ಯಂತ ನೆನಪಿರುವಂತಿರಬಹುದು. ಕೆಲವು ವರ್ಷಗಳ ಹಿಂದೆ ನಾನೊಂದು ಕಥೆ ಓದಿದ್ದೆ. ಆ ಕಥೆಯಲ್ಲಿ ಎರಡು ವಾಕ್ಯಗಳಿದ್ದವು. ಆದರೆ ಒಂದೇ ಸಾಲಿತ್ತು- ಜಸ್ಟ್ ಮ್ಯಾರೀಡ್! ಅಪಘಾತದಲ್ಲಿ ಸಂಪೂರ್ಣ ನುಜ್ಜುಗುಜ್ಜಾದ ಕಾರಿನ ವಿಂಡ್‌ಸ್ಕ್ರೀನ್ ಮೇಲೆ ಹಾಗೆ ಬರೆದಿತ್ತು! ಈ ಒಂದು ಸಾಲು ಈಗಲೂ ನನ್ನಲ್ಲಿ ಒಂದು ದೀರ್ಘ ನಿಟ್ಟುಸಿರು ಮತ್ತು ಅತೀವ ವೇದನೆಯನ್ನು ಮೂಡಿಸುತ್ತದೆ. ನೂರಾರು ಪುಟಗಳಲ್ಲಿ ಹೇಳಬಹುದಾಗಿದ್ದನ್ನು ಈ ಒಂದು ಸಾಲಿನ ಕಥೆ ಹೇಳುತ್ತದೆ.

ಸೋಜಿಗವೆಂದರೆ ಈ ಒಂದು ಸಾಲನ್ನು ಪದೇಪದೆ ಓದಿದಾಗ ಬೇರೆ ಬೇರೆ ಕಥೆಗಳು ಬಂದು ಹೋಗುತ್ತವೆ. ಅಲ್ಲದೆ ಈ ಕಥೆಯನ್ನು ಹೇಗೆ ಬೇಕಾದರೂ ಬೆಳೆಸಬಹುದು. ಆ ಸಾಲೇ ಬೇರೆ ಬೇರೆ ಕಥೆ ಹೇಳುತ್ತಾ ಹೋಗುತ್ತದೆ. ಹಾಗೆ ಮತ್ತೊಂದು ಕಥೆ- ನಾನು ನನ್ನ ಅಂತರಂಗದ ಗೆಳತಿಯನ್ನು ಭೇಟಿ ಮಾಡಿದೆ. ಆದರೆ ಅವಳು ಭೇಟಿ ಮಾಡಲಿಲ್ಲ ಎಂಬ ಸಾಲು. ಇಲ್ಲಿ ಸಹ ಮುಂದೇನಾಯಿತು, ಯಾಕೆ ಹೀಗಾಯ್ತು, ಅವಳಿಗೇನಾಯ್ತು ಎಂಬ ಪ್ರಶ್ನೆಗಳು ಕಾಡುತ್ತಲೇ ಇರುತ್ತವೆ. ಈ ಸಾಲುಗಳು ಎಂದೆಂದೂ ಮರೆಯುವುದಿಲ್ಲ. ಪ್ರತಿ ಸಲ ಈ ಸಾಲುಗಳನ್ನು ನೆನಪಿಸಿಕೊಂಡಾಗ ಏನೋ ವಿಚಿತ್ರ ಭಾವ. ಅಂಥ ಕೆಲವು ಒಂದು ಸಾಲಿನ ಕಥೆಗಳು ಇಲ್ಲಿವೆ.

- ತಾಯಿ ನನಗೆ ಹೇಗೆ ಶೇವ್ ಮಾಡಿಕೊಳ್ಳಬೇಕು ಎಂಬುದನ್ನು ಹೇಳಿಕೊಟ್ಟಳು.
- ಸಿರಿ, ಪ್ಲೀಸ್ ಕಾಂಟಾಕ್ಟ್‌ನಿಂದ ನನ್ನ ತಾಯಿ ಹೆಸರನ್ನು ಡಿಲೀಟ್ ಮಾಡು.
- ತಂದೆ ಹೊರಟು ಹೋದರು, ಆದರೆ ರಾಷ್ಟ್ರಧ್ವಜ ಮನೆಗೆ ಬಂದಿತು.
- ಹಾರಿದೆ.. ನಂತರ ನನ್ನ ಮನಸ್ಸನ್ನು ಬದಲಿಸಿದೆ.
- ಅವಳು ಸತ್ತಳು ಎಂಬ ಸುದ್ದಿ ಕೇಳಿ ತಡೆದುಕೊಳ್ಳಲಾರದೇ ವಿಷ ಕುಡಿದೆ. ಆದರೆ ಸತ್ತಿಲ್ಲ ಎಂದು ಗೊತ್ತಾಯಿತು.
- ಇಂದು ಮತ್ತೊಮ್ಮೆ ತಾಯಿಗೆ ನನ್ನ ಪರಿಚಯ ಮಾಡಿಕೊಂಡೆ.
- ಶವದಪೆಟ್ಟಿಗೆ ಚಿಕ್ಕದಾಗಿದ್ದಷ್ಟು ಹೊರಲು ಭಾರವಾಗಿರುತ್ತದೆ.
- ಒಬ್ಬನೇ ಮಗ, ಮಡಚಿದ ರಾಷ್ಟ್ರಧ್ವಜ.
- ಲೇಡೀಸ್ ಅ್ಯಂಡ್ ಜಂಟಲ್‌ಮೆನ್ ಈಗ ಮಾತಾಡ್ತಾ ಇರೋ ನಾನು ನಿಮ್ಮ ಪೈಲಟ್ ಅಲ್ಲ.
- ನನ್ನ ಪ್ರತಿಬಿಂಬದಲ್ಲಿ ನಾನು ಕಣ್ಮುಚ್ಚುತ್ತಿರುವುದನ್ನು ನೋಡಿದೆ.
- ನಾನು ಸತ್ತ ನಂತರ ನನ್ನ ನಾಯಿಗೆ ಏನಾಗಬಹುದು?

ಬಿಟ್ಟೆನೆಂದರೂ ಬಿಡದೀ ಮಾಯೆ!

ಕೆಲವೊಂದು ಸಂಗತಿಗಳು ಹಾಗೇ, ಬಡವನಿಂದ ಶ್ರೀಮಂತರವರೆಗೂ ಎಲ್ಲರನ್ನೂ ಕಾಡುತ್ತವೆ, ಆಕರ್ಷಿಸುತ್ತವೆ. ಅಂಥವು ಇಲ್ಲಿವೆ.

ಪಾನಿಪೂರಿ ತಿಂದ ಮೇಲೆ ಸುಮ್ಮನೆ ಹೋಗುವ ಜಾಯಮಾನ ಯಾರದ್ದೂ ಇಲ್ಲ, ಸುಕ್ಕಾ ಪೂರಿ ಕೊಡದಿದ್ದರೆ ಜಗಳವೇ ಆಗಿಬಿಡುತ್ತದೆ. ಬೇಕರಿಗೆ, ಸ್ವೀಟ್ ಅಂಗಡಿಗೆ ಹೋದಾಗ ಯಾವುದಾದರೂ ಖಾದ್ಯಗಳನ್ನು ಖರೀದಿಸುವಾಗ, ಶ್ರೀಮಂತರಾಗಲೀ, ಬಡವರಾಗಲೀ ಕೇಳುವುದು ಒಂದೇ ಪ್ರಶ್ನೆ- ''ಸ್ಯಾಂಪಲ್ ಕೊಡ್ತಿಯೇನಪ್ಪಾ? ಚೆನ್ನಾಗಿದ್ರೆ ತಗೋತೀನಿ''. ಕುಳಿತು ತಿನ್ನುವ ಹೋಟೆಲ್‌ಗೆ ಹೋದಾಗ, ಊಟವಾದ ಮೇಲೆ ಬಿಲ್ ತಂದು ಕೊಡುವ ಕಪ್‌ನಲ್ಲಿ ಸೊಂಪು ಇರಲೇಬೇಕು. ಬಿಲ್ಲನ್ನಷ್ಟೇ ಇಟ್ಟರೆ, ಗ್ರಾಹಕರು ವೇಟರ್‌ನನ್ನು ಗುರಾಯಿಸುವ ಬಗೆ ನೋಡಬೇಕು. ಕಣ್ಣಲ್ಲೇ ಕೊಲ್ಲುತ್ತಿರುತ್ತಾರೆ! ಯಾವುದೇ ದೊಡ್ಡ ಅರತಕ್ಷತೆ ಕಾರ್ಯಕ್ರಮಕ್ಕೆ ಹೋಗಿ, ಅಲ್ಲಿ ಮೊಸರನ್ನ ಇದ್ದೇ ಇರುತ್ತದೆ. ಮೊಸರನ್ನ ಹಾಕಿಸಿಕೊಂಡವರಿಗೆ ಮುಂದಿನದ್ದು ಹಾಕುವತನಕ ಪುರುಸೊತ್ತು ಇರುವುದಿಲ್ಲ, ''ಸ್ವಲ್ಪ ಉಪ್ಪಿನಕಾಯಿ ಹಾಕ್ಬಿಡಿ!'' ಅಂತಾರೆ. ಉಪ್ಪಿನಕಾಯಿ ಇಲ್ಲ ಎಂದ ಭಟ್ಟನ ಕತೆ ಹೇಳತೀರದು.

ನಿಧನ ಸುದ್ದಿ

ಮುಲ್ಲಾ ನಸ್ರುದ್ದೀನ್‌ನ ಹೆಂಡತಿ ಬೆಳಗ್ಗೆ ಕಾಫಿ ಹೀರುತ್ತಾ ಪತ್ರಿಕೆ ಓದುತ್ತಿದ್ದಳು. ಒಳಪುಟ ತಿರುವಿದಾಗ ಅವಳ ಫೋಟೊ ಕಣ್ಣಿಗೆ ಬಿತ್ತು. ಕುತೂಹಲದಿಂದ ಕೆಳಗಿನ ಸುದ್ದಿ ಕಡೆ ಕಣ್ಣಾಡಿಸಿದರೆ ಅವಳ ನಿಧನದ ಸುದ್ದಿ!

ತಕ್ಷಣ ಮುಲ್ಲಾನಿಗೆ ಫೋನ್ ಮಾಡಿ, ''ವಿಷಯ ಗೊತ್ತಾ? ಇಂದಿನ ಪೇಪರ್ ಓದಿದಿಯಾ? ನಾನು ಸತ್ತು ಹೋಗಿದ್ದೀನಂತೆ!'' ಎಂದಳು. ಅದಕ್ಕೆ ಮುಲ್ಲಾ ಹೇಳಿದ- ''ಹೌದಾ? ಅದ್ಸರಿ ನೀನು ಎಲ್ಲಿಂದ ಫೋನ್ ಮಾಡ್ತಾ ಇದೀಯಾ ಮೊದಲು ಹೇಳು. ಆನಂತರ ನೀನು ಸತ್ತಿದ್ದೀಯಾ ಇಲ್ಲವಾ ಅಂತ ಹೇಳ್ತೇನೆ''.

ಅವನ ತಪ್ಪೇನಿದೆ?

ಅಪ್ಪನಿಗೆ ತನ್ನ ಮಗನ ಎರಡು ವರ್ತನೆ ಬಗ್ಗೆ ಅಪರಿಮಿತ ಅಸಮಾಧಾನವಿತ್ತು. ಹಂದಿ ಮಾಂಸ ಕಂಡರೆ ಸಾಕು ಮಗ ತಕ್ಷಣ ಬಾಯಿಬಿಡುತ್ತಿದ್ದ ಹಾಗೂ ಅಂದದ ಹುಡುಗಿಯರನ್ನು ಕಂಡರೆ ಚುಂಬಿಸುತ್ತಿದ್ದ. ಮಗನಿಗೆ ಅಪ್ಪ ಹೇಳುವಷ್ಟು ಬುದ್ಧಿ ಹೇಳಿದ. ಮನಃಶಾಸ್ತ್ರಜ್ಞರಲ್ಲಿಗೆ ಕರೆದುಕೊಂಡು ಹೋದ. ಆದರೆ ಪ್ರಯೋಜನವಾಗಲಿಲ್ಲ. ಮಗನ ಬುದ್ಧಿ ನೆಟ್ಟಗಾಗಲಿಲ್ಲ. ಬೇರೆ ದಾರಿ ಕಾಣದೇ ಧರ್ಮಗುರುವನ್ನು ಭೇಟಿ ಮಾಡಿ ಅವರ ಮುಂದೆ ಅಪ್ಪ ತನ್ನ ಮಗನ ವರ್ತನೆಯ ಬಗ್ಗೆ ಕಳವಳ ತೋಡಿಕೊಂಡ. ಸ್ವಾಮೀಜಿ ಮಗನನ್ನ ಕರೆದು ಗಟ್ಟಿ ದನಿಯಲ್ಲಿ, ''ಏನಯ್ಯಾ? ಇದು ನಿಜವೇನಯ್ಯಾ? ಹಂದಿ ಮಾಂಸ ಕಂಡರೆ ಬಾಯಿ ಬಿಡುತ್ತೀಯಂತೆ, ಸುಂದರ ತರುಣಿಯರನ್ನು ಕಂಡ ತಕ್ಷಣ ತಬ್ಬಿ ಮುದ್ದಾಡುತ್ತೀಯಂತೆ, ನಿನಗೇನಾಗಿದೆ?'' ಎಂದು ಕೇಳಿದರು. ಅದಕ್ಕೆ ಮಗ ಹೇಳಿದ- ''ನಾನೇನು ಮಾಡಲಿ ಸ್ವಾಮೀಜಿ. ನಾನು ಸ್ವಲ್ಪ ಕ್ರೇಜಿ, ಅದಕ್ಕೆ ಹೀಗೆಲ್ಲ ಮಾಡುತ್ತೀನಿ''. ಅದನ್ನು ಕೇಳುತ್ತಲೇ ಸ್ವಾಮೀಜಿ ತಂದೆಯನ್ನು ಕರೆದು ಹೇಳಿದರು- ''ನಿಮ್ಮ ಮಗ ಕರೆಕ್ಟ್ ಆಗಿದ್ದಾನೆ. ಅವನದೇನೂ ತಪ್ಪಿಲ್ಲ. ಹುಡುಗಿಯರನ್ನು ಕಚ್ಚಿ, ಮಾಂಸವನ್ನು ಚುಂಬಿಸಿದ್ದರೆ ಯೋಚನೆ ಮಾಡಬೇಕಿತ್ತು''.

ಯಾರು ಬುದ್ಧಿವಂತರು?

ತುಂಬಾ ಹಿಂದಿನ ರೀಡರ್ಸ್ ಡೈಜೆಸ್ಟ್ ಮಾಸಿಕದಲ್ಲಿ ಓದಿದ ಒಂದು ಪ್ರಸಂಗವಿದು. ಮುಸ್ಸೋಲಿನಿ ಅಧಿಕಾರಕೆ ಬಂದ ಕೆಲ ದಿನಗಳಲ್ಲಿ ಅಮೆರಿಕದ ಶ್ರೀಮಂತ ಆರ್ಟ್ ಸಂಗ್ರಹಕಾರ ಇಟಲಿಗೆ ಬಂದು, ಹದಿನಾರನೇ ಶತಮಾನದ ಪ್ರಸಿದ್ಧ ಕಲಾವಿದ ಟಿಟಿಯನ್‌ನ ಬೃಹತ್ ವರ್ಣಚಿತ್ರವನ್ನು ಭಾರಿ ಬೆಲೆಗೆ ಖರೀದಿಸಿದ. ಅದನ್ನು ಅಮೆರಿಕಕ್ಕೆ ತೆಗೆದುಕೊಂಡು ಹೋಗುವುದು ಅವನ ಉದ್ದೇಶವಾಗಿತ್ತು. ಆದರೆ ಅದನ್ನು ಇಟಲಿಯಿಂದ ಹೊರಗೆ ತೆಗೆದುಕೊಂಡು ಹೋಗಲು ಮುಸ್ಸೋಲಿನಿ ಸರಕಾರ ಅನುಮತಿ ನೀಡಲಿಕ್ಕಿಲ್ಲ ಎಂದು ಅವನಿಗೆ ಕೆಲವರು ಹೇಳಿದರು. ಆಗ ಆ ಅಮೆರಿಕನ್ ಕಲಾಸಂಗ್ರಹಕಾರನಿಗೆ ಅತೀವ ಬೇಸರವಾಯಿತು. ಇದನ್ನು ತನ್ನ ದೇಶಕ್ಕೆ ತೆಗೆದುಕೊಂಡು ಹೋಗುವುದು ಹೇಗೆ ಎಂದು ಆತ ಒಬ್ಬ ಸಲಹೆಗಾರನನ್ನು ಕೇಳಿದ.

ಅದಕ್ಕೆ ಆತ ಒಂದು ಸಲಹೆ ನೀಡಿದ- ''ಒಂದು ಕೆಲಸ ಮಾಡಿ, ಟಿಟಿಯನ್‌ನ ವರ್ಣಚಿತ್ರದ ಮೇಲೆ ಮುಸ್ಸೋಲಿನಿ ವರ್ಣಚಿತ್ರವನ್ನು ಬಿಡಿಸುವಂತೆ ಸ್ಥಳೀಯ ಕಲಾವಿದನಿಗೆ ಹೇಳಿ. ಆತ ಅದನ್ನು ಬಿಡಿಸಿಕೊಡುತ್ತಾನೆ. ಮುಸ್ಸೋಲಿನಿ ಆಡಳಿತದ ಅಧಿಕಾರಿಗಳು ತಮ್ಮ ನಾಯಕನ ಚಿತ್ರವನ್ನು ಅಮೆರಿಕಕ್ಕೆ ತೆಗೆದುಕೊಂಡು ಹೋಗುವವನು ಮುಸ್ಸೋಲಿನಿ ಅಭಿಮಾನಿಯಿರಬೇಕೆಂದು, ತಕ್ಷಣ ಸಂತೋಷದಿಂದ ಅನುಮತಿ ನೀಡುತ್ತಾರೆ. ಅಮೆರಿಕಕ್ಕೆ ಹೋದ ನಂತರ, ಮೇಲಿನ ಪೇಂಟಿಂಗ್‌ನ್ನು ಕೆರೆಸಿ ತೆಗೆದುಹಾಕಿ''.

ಅಮೆರಿಕದ ಕಲಾ ಸಂಗ್ರಹಕಾರನಿಗೆ ಇದು ಅದ್ಭುತ ಐಡಿಯಾ ಎಂದೆನಿಸಿತು. ಆತ ತಕ್ಷಣ ಸ್ಥಳೀಯ ಕಲಾಕಾರನನ್ನು ಕರೆಯಿಸಿ, ಟಿಟಿಯನ್ ಪೇಂಟಿಂಗ್ ಮೇಲೆ ಮುಸ್ಸೋಲಿನಿ ಪೇಂಟಿಂಗ್ ಬಿಡಿಸಿಕೊಡುವಂತೆ ಹೇಳಿದ. ಆತ ಬಿಡಿಸಿಕೊಟ್ಟ. ಮುಂದೆ ಆತ ಅಂದುಕೊಂಡಂತೆ ಆಯಿತು. ಯಾವ ತೊಂದರೆಯೂ ಇಲ್ಲದೇ ಪೇಂಟಿಂಗ್ ಅನ್ನು ಸುಲಭವಾಗಿ ಅಮೆರಿಕಕ್ಕೆ ತೆಗೆದುಕೊಂಡು ಬಂದ. ಬಂದವನೇ ಆ ಪೇಂಟಿಂಗ್ ಮೇಲೆ ಬಿಡಿಸಿದ ಮುಸ್ಸೋಲಿನಿ ಚಿತ್ರವನ್ನು ಕೆರೆಸಿ ಹಾಕುವಂತೆ ನುರಿತ ಪೇಂಟರ್‌ಗೆ ಹೇಳಿದ. ಆತ ಹರಿತವಾದ ಚಾಕುವಿನಿಂದ ಬಹಳ ನಾಜೂಕಿನಿಂದ ಮೇಲಿನ ಪದರ ಕೆರೆಸಿ ಹಾಕಿದ. ಟಿಟಿಯನ್‌ನ ಅದ್ಭುತ ಪೇಂಟಿಂಗ್ ಎದ್ದು ಕಂಡಿತು. ಅಷ್ಟಕ್ಕೇ ಸುಮ್ಮನಾಗದ ಪೇಂಟರ್, ''ಸರ್, ಈ ಟಿಟಿಯನ್ ಪೇಂಟಿಂಗ್ ಕೆಳಗೆ ಬೇರೆ ಇನ್ನೊಂದು ಪೇಂಟಿಂಗ್ ಇರುವಂತಿದೆ'' ಎಂದು ಹೇಳಿದ. ಕಲಾ ಸಂಗ್ರಹಕಾರನಿಗೆ ದಿಗಿಲಾಯಿತು. ಆ ಪೇಂಟರ್, ಟಿಟಿಯನ್‌ನ ಪೇಂಟಿಂಗ್ ಅನ್ನು ಕೆರೆಸುತ್ತಿದ್ದಂತೆ ಮತ್ತೊಂದು ಚಿತ್ರ ಎದ್ದು ಬಂದಿತು. ನೋಡಿದರೆ ಮುಸ್ಸೋಲಿನಿ ಪೇಂಟಿಂಗ್!

ಖುಲಾಸೆ ಅಂದ್ರೆ ಏನರ್ಥ?

ಬೆಳಗ್ಗೆ ಪತ್ರಿಕೆ ಓದುವಾಗ, ಮಂತ್ರಿ ಖುಷಿಯಿಂದ ಬೀಗುತ್ತಿದ್ದ. ತನ್ನ ಹತ್ತಿರದ ಸಂಬಂಧಿಕರಿಗೆ ಲಾಭ ಮಾಡಿಕೊಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋರ್ಟ್ ತೀರ್ಪು ನೀಡಿತ್ತು. ಅದರಂತೆ, ಮಂತ್ರಿಯನ್ನು ಸ್ವಜನಪಕ್ಷಪಾತ ಆಪಾದನೆಯಿಂದ ಖುಲಾಸೆಗೊಳಿಸಲಾಗಿತ್ತು. ಮುಖಪುಟದಲ್ಲಿ ಪ್ರಕಟವಾದ ಈ ಸುದ್ದಿ ನೋಡಿ ಮಂತ್ರಿಗೆ ಅತೀವ ಆನಂದವಾಗಿತ್ತು. ಸದಾ ಗಂಭೀರವದನನಾಗಿ ಪತ್ರಿಕೆ ಓದುವ ಅಪ್ಪ, ಇಂದು ನಗುತ್ತಾ ಖುಷಿಯಲ್ಲಿರುವುದನ್ನು ಕಂಡು ಮಗನಿಗೆ ತುಸು ಆಶ್ಚರ್ಯವಾಯಿತು.

''ಅಪ್ಪ, ನೀನು ಖುಷಿಪಡುವಂಥ ವಿಷಯ ಪತ್ರಿಕೆಯಲ್ಲಿ ಪ್ರಕಟವಾಗಿದೆಯಾ? ಅದು ಯಾವ ಸುದ್ದಿ?'' ಎಂದು ಮಗ ಕೇಳಿದ. ''ನಾನು ಎಲ್ಲಾ ಆರೋಪಗಳಿಂದ ಖುಲಾಸೆ ಆಗಿದ್ದೇನೆ ಗೊತ್ತಾ? ಇದಕ್ಕಿಂತ ಖುಷಿ ಮತ್ತೇನಿದೆ?'' ಎಂದು ಮಂತ್ರಿ ಮಗನಿಗೆ ಹೇಳಿದ. ಮಗನಿಗೆ ಖುಲಾಸೆ ಪದದ ಅರ್ಥ ಗೊತ್ತಾಗಲಿಲ್ಲ. ''ಅಪ್ಪ, ಖುಲಾಸೆ ಅಂದ್ರೆ ಏನು?'' ಅಂತ ಕೇಳಿದ. ''ಅಷ್ಟೂ ಗೊತ್ತಾಗುವುದಿಲ್ಲವಾ? ಖುಲಾಸೆ ಅಂದ್ರೆ ನಾನು ಏನೂ ಮಾಡಿಲ್ಲ ಅಂತ ಅರ್ಥ'' ಎಂದ ಮಂತ್ರಿ. ಅದಕ್ಕೆ ಮಗ ಹೇಳಿದ: ''ಈ ಮಾತನ್ನು ನಮ್ಮ ಕಾಲೇಜಿನಲ್ಲೂ ಎಲ್ಲರೂ ಹೇಳ್ತಾರೆ. ನಿನ್ನಪ್ಪ ಏನೂ ಮಾಡಲ್ಲ ಅಂತ''.

ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ..

ಇದು ಬಹಳ ಹಿಂದೆ ಯೋಗಿ ದುರ್ಲಭಜೀ ಹೇಳಿದ ಒಂದು ತಮಾಷೆ ಪ್ರಸಂಗ. ಮೊಬೈಲ್ ಫೋನ್ ಇಲ್ಲದ ಕಾಲದಲ್ಲಿ ನಡೆದ ಪ್ರಸಂಗವಿದು. ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಕೆಲವರು ತಪ್ಪಾಗಿ ಭಾವಿಸುತ್ತಾರೆ ಎಂಬುದನ್ನು ವಿವರಿಸಲು ಅವರು ಈ ಘಟನೆ ಹೇಳಿದ್ದರು. ಯುವ ವಿದ್ಯಾರ್ಥಿಯೊಬ್ಬ ಲೈಬ್ರರಿಯಿಂದ ಹೊರಡುವಾಗ ರಾತ್ರಿ ಹತ್ತು ಗಂಟೆಯಾಗಿತ್ತು. ಲೈಬ್ರರಿಯಿಂದ ನಿರ್ಗಮಿಸಿ ದವರಲ್ಲಿ ಅವನೇ ಕೊನೆಯವನಾಗಿದ್ದ. ಪಾರ್ಕಿಂಗ್ ತಾಣದಲ್ಲಿ ನಿಲ್ಲಿಸಿದ್ದ ಕಾರನ್ನು ಸ್ಟಾರ್ಟ್ ಮಾಡಬೇಕು ಎಂದು ಚಾವಿ ತಿರುವಿದರೆ, ಬ್ಯಾಟರಿ ಡೆಡ್ ಆಗಿತ್ತು. ಮೆಕಾನಿಕ್‌ಗೆ ಫೋನ್ ಮಾಡಿ ಕರೆಯೋಣ ಅಂದರೆ ಫೋನ್ ಬೂತ್ ದೂರದಲ್ಲಿತ್ತು. ಬೇರೆ ದಾರಿ ಕಾಣದೇ ಹತ್ತಿರದಲ್ಲಿರುವ ಲೇಡೀಸ್ ಹಾಸ್ಟೆಲ್‌ಗೆ ಹೋದ. ಬಾಗಿಲಲ್ಲಿ ಯುವತಿಯೊಬ್ಬಳು ಕುಳಿತಿದ್ದಳು. ತನ್ನ ಸಮಸ್ಯೆಯನ್ನು ಅವಳಿಗೆ ಹೇಳಿದ. ಅವಳು ಹಾಸ್ಟೆಲ್ ವರಾಂಡದಲ್ಲಿರುವ ಫೋನ್ ತೋರಿಸುತ್ತಾ, ''ಪರವಾಗಿಲ್ಲ, ಒಳಗೆ ಹೋಗಿ, ಫೋನ್ ಮಾಡಿ'' ಎಂದು ಹೇಳಿದಳು. ಆತ ಒಳಬಂದು ಮೆಕಾನಿಕ್‌ಗೆ ಫೋನ್ ಮಾಡಿದ. ಮೆಕಾನಿಕ್‌ಗೆ ಸರಿಯಾಗಿ ಕೇಳಿಸುತ್ತಿರಲಿಲ್ಲ. ಹೀಗಾಗಿ ಯುವಕ ಜೋರಾಗಿ ಕಿರುಚುತ್ತಿದ್ದ. ಆ ಹೊತ್ತಿನಲ್ಲಿ ಗಂಡಸಿನ ದನಿಯನ್ನು ಕೇಳಿದ ಮೊದಲ ಮಹಡಿಯಲ್ಲಿದ್ದ ಹಾಸ್ಟೆಲ್ ಸಂಘದ ಸೆಕ್ರೆಟರಿ ಗಾಬರಿಗೊಂಡಳು. ಬಾಗಿಲಲ್ಲಿ ಕುಳಿತಿದ್ದ ಯುವತಿಗೆ ಹೇಳಿದಳು- ''ಏನಮ್ಮಾ, ಯಾವನೋ ಗಂಡಸು ಹಾಸ್ಟೆಲ್ ಒಳಗೆ ಬಂದಂತಿದೆ. ರಾತ್ರಿ ಹತ್ತು ಗಂಟೆ ನಂತರ, ಹಾಸ್ಟೆಲ್ ಒಳಗೆ ಗಂಡಸರನ್ನು ಒಳಬಿಡಬಾರದು ಎಂಬುದು ಗೊತ್ತಿಲ್ಲವಾ?''. ಅದಕ್ಕೆ ಬಾಗಿಲಲ್ಲಿ ನಿಂತವಳು ಜೋರಾಗಿ ಹೇಳಿದಳು- ''ಪರವಾಗಿಲ್ಲ ಬಿಡಮ್ಮ, ಅವನ ಬ್ಯಾಟರಿ ಡೆಡ್ ಆಗಿದೆಯಂತೆ''.

ಹೀಗೊಂದು ಸಂಭಾಷಣೆ

ಕೆಲವು ವರ್ಷಗಳ ಹಿಂದೆ, ನಾನು ಸ್ವೀಡನ್ ರಾಜಧಾನಿ ಸ್ಟಾಕ್‌ಹೋಮ್‌ಗೆ ಹೋದಾಗ ಅಲ್ಲಿ ಕೇಳಿದ್ದು. ಒಮ್ಮೆ ಅಮೆರಿಕದ ಪ್ರವಾಸಿಗ ಸ್ಟಾಕ್‌ಹೋಮ್‌ನಲ್ಲಿ ಬಸ್ಸಿನಲ್ಲಿ ಹೋಗುತ್ತಿದ್ದ. ಅವನ ಪಕ್ಕದಲ್ಲಿ ಸ್ವೀಡಿಷ್ ಪ್ರಜೆ ಕುಳಿತಿದ್ದ. ಇಬ್ಬರೂ ಪರಸ್ಪರ ಪರಿಚಿತರಾದರು. ಹರಟೆ ಹೊಡೆಯಲಾರಂಭಿಸಿದರು. ಅಮೆರಿಕನ್ ಪ್ರಜೆ ಬಡಾಯಿ ಕೊಚ್ಚಿಕೊಳ್ಳುತ್ತಿದ್ದ- ''ಜಗತ್ತಿನಲ್ಲಿಯೇ ಅಮೆರಿಕದಂಥ ಪ್ರಜಾಸತ್ತಾತ್ಮಕ ದೇಶ ಮತ್ತೊಂದಿಲ್ಲ. ವೈಟ್ ಹೌಸಿಗೆ ಹೋಗಿ ಅಧ್ಯಕ್ಷನನ್ನು ಭೇಟಿ ಮಾಡಬಹುದು. ಅವನ ಜತೆ ಕೈಕುಲುಕಬಹುದು. ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಬಹುದು. ಇವೆಲ್ಲಾ ಬೇರೆ ದೇಶಗಳಲ್ಲಿ ಸಾಧ್ಯವಿಲ್ಲ. ಅದರಲ್ಲೂ ನಿಮ್ಮ ದೇಶದಲ್ಲಂತೂ ಸಾಧ್ಯವೇ ಇಲ್ಲವೇನೋ?''.

ಇದೇನು ಅಮೆರಿಕನ್ ಪ್ರವಾಸಿಗ ತನ್ನ ದೇಶದ ಬಗ್ಗೆ ಬಹಳ ಬಡಾಯಿ ಕೊಚ್ಚಿಕೊಳ್ಳುತ್ತಾನಲ್ಲ ಎಂದು ಸ್ವೀಡಿಷ್ ಪ್ರಜೆಗೆ ಅನಿಸಿತು. ಆತ ಅಷ್ಟು ಹೇಳಿದ ನಂತರ ತಾನೂ ತನ್ನ ದೇಶದ ಬಗ್ಗೆ ಹೇಳದಿದ್ದರೆ ಹೇಗೆ ಎಂದು ಅನಿಸಿತು. ''ನಿಮ್ಮದೇನು ಮಹಾ? ನಮ್ಮ ದೇಶದಲ್ಲಿ ರಾಜ ಮತ್ತು ಶ್ರೀಸಾಮಾನ್ಯ ಒಂದೇ ಬಸ್ಸಿನಲ್ಲಿ ಕುಳಿತುಕೊಂಡು ಪ್ರಯಾಣ ಮಾಡುತ್ತಾರೆ, ಗೊತ್ತಾ?'' ಎಂದ ಸ್ವೀಡಿಷ್ ಪ್ರಜೆ. ಅಷ್ಟೊತ್ತಿಗೆ ಮುಂದಿನ ಸ್ಟಾಪ್ ಬಂತು. ಸ್ವೀಡಿಷ್ ಪ್ರಜೆ ಬಸ್ಸಿನಿಂದ ಇಳಿದು ಹೋದ. ಅವರಿಬ್ಬರ ಸಂಭಾಷಣೆಯನ್ನು ಮತ್ತೊಬ್ಬ ಕೇಳಿಸಿಕೊಳ್ಳುತ್ತಿದ್ದ. ''ನಿಮ್ಮ ಪಕ್ಕದಲ್ಲಿ ಕುಳಿತಿದ್ದವ ಯಾರು ಗೊತ್ತಾಯಿತಾ?'' ಎಂದು ಕೇಳಿದಕ್ಕೆ ಅಮೆರಿಕದ ಪ್ರವಾಸಿಗ ಗೊತ್ತಿಲ್ಲ ಎಂದು ತಲೆ ಅಲ್ಲಾಡಿಸಿದ.

''ಆತನೇ ಸ್ವೀಡನ್‌ನ ಆರನೇ ರಾಜ ಗುಸ್ತಾಫ್ ಅಡಾಲ್ಫ್!''

ರಾಮಾಯಣ ಕಾಲದಿಂದಲೂ ಕಾಗೆಗೆ ಒಂದೇ ಕಣ್ಣು!

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಳಿಲು ಶ್ರೀರಾಮನಿಗೆ ಸಹಾಯ ಮಾಡಿತು, ಶ್ರೀರಾಮ ಅದನ್ನೆತ್ತಿಕೊಂಡು ಮುದ್ದಾಡಿದನು, ಬೆನ್ನು ನೇವರಿಸಿ ಕೃತಜ್ಞತೆ ಸಲ್ಲಿಸಿದನು. ಬೆನ್ನಮೇಲೆ ಶ್ರೀರಾಮನ ಬೆರಳಿನಚ್ಚು ಮೂಡಿ ಅದೊಂದು ಶಾಶ್ವತ ಗುರುತಾಯಿತು. ಆದರೆ ಕಾಗೆಯ ಕಥೆ ಹಾಗಲ್ಲ. ಕಾಗೆ ಸೀತೆಗೆ ಉಪದ್ರವ ಕೊಟ್ಟಿತು. ಶ್ರೀರಾಮನಿಗೆ ಸಿಟ್ಟು ಬಂತು. ಒಕ್ಕಣ್ಣನಾಗುವಂತೆ ಕಾಗೆಗೆ ಶಿಕ್ಷೆ ಕೊಟ್ಟುಬಿಟ್ಟನು! ಅಲ್ವೇ ಮತ್ತೆ? ಹೆಂಡತಿಗೆ ಕಾಟ ಕೊಟ್ಟರೆ ಗಂಡನಾದವನು ಸುಮ್ಮನಿರುವುದಕ್ಕಾಗುತ್ತದೆಯೇ? ಶ್ರೀರಾಮ ಸಿಟ್ಟಾದದ್ದಷ್ಟೇ ಅಲ್ಲ, ಕಾಗೆಯ ಮೇಲೆ ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸಿಬಿಟ್ಟನು! ಆ ಕಾಗೆಯೂ ಅಂಥಿಂಥದಲ್ಲ, ಇಂದ್ರನ ಮಗ ಜಯಂತನೇ ಕಾಗೆಯ ರೂಪದಲ್ಲಿ ಬಂದು ಸೀತೆಯನ್ನು ಕೆಣಕಿದ್ದು. ಆ ವಿಷಯ ಗೊತ್ತಾಗಿಯೇ ಶ್ರೀರಾಮನೂ ಶಿಕ್ಷೆ ಕೊಡುವುದಕ್ಕೆ ಮುಂದಾದದ್ದು. ಇದು ರಾಮಾಯಣದಲ್ಲೊಂದು ಸ್ವಾರಸ್ಯಕರ ಪ್ರಸಂಗ. ವಾಲ್ಮೀಕಿ ರಾಮಾಯಣದಲ್ಲಿ ಬರುವಂಥದ್ದು. ಇಂದಿನ ಪುರಾಣಶ್ರವಣಕ್ಕೆ ಆಯ್ದುಕೊಂಡಿರುವುದು.

ರಾವಣನಿಂದ ಅಪಹೃತಳಾದ ಸೀತೆಯನ್ನು ಹುಡುಕುವ ಘನ ಉದ್ದೇಶದಿಂದ ಲಂಕೆಗೆ ಹಾರಿದ ಹನುಮಂತನು, ಅಲ್ಲಿ ನಿಜವಾದ ಸೀತೆಯನ್ನೇ ಭೇಟಿಯಾಗಿ ಬಂದನು ಎಂಬುದನ್ನು ಶ್ರೀರಾಮನಿಗೆ ಮನವರಿಕೆ ಮಾಡಿಕೊಡಲು ಏನಾದರೊಂದು ಚಿಹ್ನೆಯನ್ನು ಕೊಡುವಂತೆ ಸೀತೆಯನ್ನು ವಿನಂತಿಸಿದನು. ಸೀತೆ ತನ್ನ ಮುಡಿಯಲ್ಲಿದ್ದ ಚೂಡಾಮಣಿ ಆಭರಣವನ್ನು ತೆಗೆದುಕೊಟ್ಟಳು. ಅದಷ್ಟೇ ಸಾಲದೆಂದು ಹನುಮಂತ ಹೇಳಿದಾಗ ಸೀತೆ ಈ ಹಿಂದೆ ಚಿತ್ರಕೂಟ ಪರ್ವತದಲ್ಲಿ ನಡೆದಿದ್ದ ಒಂದು ಘಟನೆಯನ್ನು ಬಣ್ಣಿಸಿದಳು. ಆ ವಿವರಗಳನ್ನು ಶ್ರೀರಾಮನಿಗೆ ತಿಳಿಸಿದರೆ ಆತನಿಗೆ ಮನವರಿಕೆ ನಿಶ್ಚಿತವಾಗಿ ಆಗುವುದೆಂದು ಹನುಮಂತನಲ್ಲಿ ವ್ಯಕ್ತಪಡಿಸಿದಳು.

ರಾಮ-ಸೀತೆ-ಲಕ್ಷ್ಮಣರು ಚಿತ್ರಕೂಟ ಪರ್ವತದ ತಪ್ಪಲಲ್ಲಿ ಮಂದಾಕಿನೀ ನದೀತೀರದ ಪ್ರದೇಶದಲ್ಲಿ ವಾಸವಾಗಿದ್ದ ದಿನಗಳವು. ಒಂದು ದಿನ ಮಧ್ಯಾಹ್ನದ ಊಟವಾದ ಬಳಿಕ ಮಿಕ್ಕುಳಿದ ಹಣ್ಣು-ಹಂಪಲು ಗೆಡ್ಡೆ-ಗೆಣಸುಗಳನ್ನು ಕಾಯುತ್ತ ಸೀತೆ ಕುಳಿತಿದ್ದಳು. ಅವಳ ಸನಿಹದಲ್ಲೇ ಶ್ರೀರಾಮನೂ ಇದ್ದನು. ಲಕ್ಷ್ಮಣ ಯಥಾಪ್ರಕಾರ ಪರ್ಣಕುಟೀರದಿಂದ ಹೊರಗೆ ರಕ್ಷಣಾ ಕಾರ್ಯದಲ್ಲೋ ಆಹಾರಸಂಗ್ರಹಣೆಯಲ್ಲೋ ತೊಡಗಿದ್ದನಿರಬಹುದು. ಕುಟೀರದ ಸುತ್ತಮುತ್ತ ಹಿತವಾಗಿ ತಂಗಾಳಿ ಬೀಸುತ್ತಿತ್ತು. ಪತಿಪತ್ನಿಯರಲ್ಲಿ ಮೃದುವಾಗಿ ಸರಸಸಲ್ಲಾಪ, ಶೃಂಗಾರ ಚೇಷ್ಟೆಗಳು ನಡೆದಿದ್ದವು. ಆಗ ಆಹಾರದ ಆಸೆಯಿಂದ ಒಂದು ಕಾಗೆ ಅಲ್ಲಿಗೆ ಬಂದಿತು. ಸೀತೆಯು ಒಂದು ಮಣ್ಣಿನ ಹೆಂಟೆಯಿಂದ ಹೊಡೆದು ಕಾಗೆಯನ್ನು ಓಡಿಸಲು ಯತ್ನಿಸಿದಳು. ಆದರೆ ಆ ಕಾಗೆ ಮತ್ತೆಮತ್ತೆ ಅವಳ ಹತ್ತಿರವೇ ಹಾರತೊಡಗಿತು. ಒಮ್ಮೆಯಂತೂ ಸೀತೆಯ ಮುಖವನ್ನು ತನ್ನ ಕೊಕ್ಕಿನಿಂದ ಕುಕ್ಕಿ, ಉಗುರುಗಳಿಂದ ಪರಚಿ ನೋವನ್ನುಂಟುಮಾಡಿತು. ಸೀತೆಗೆ ಅತಿಯಾದ ಕೋಪ ಬಂತು. ಕಾಗೆ ಇನ್ನಷ್ಟು ಉಪದ್ರವ ಕೊಟ್ಟು ಸೀತೆಯನ್ನು ಹೈರಾಣು ಮಾಡಿತು. ದಣಿದ ಸೀತೆ ವಿಶ್ರಮಿಸಲೆಂದು ಶ್ರೀರಾಮನ ತೊಡೆಯ ಮೇಲೆ ತಲೆಯಿಟ್ಟು ಮಲಗಿದಳು. ಮರಕ್ಕೆ ಒರಗಿ ಕುಳಿತಿದ್ದ ಶ್ರೀರಾಮನಿಗೂ ಅಲ್ಲಿಯೇ ಜೊಂಪು ಹತ್ತಿತು.

ಆದರೆ ಕಾಗೆ ಬಿಡಬೇಕಲ್ಲ? ''ಸ ತತ್ರ ಪುನರೇವಾಥ ವಾಯಸಃ ಸಮುಪಾಗಮತ್। ತತಃ ಸುಪ್ತಪ್ರಬುದ್ಧಾಂ ಮಾಂ ರಾಘವಾಂಕಾತ್ಸಮುತ್ಥಿತಾಮ್'' ಎಂದು ಬರೆದಿದ್ದಾರೆ ವಾಲ್ಮೀಕಿ. ಅಂದರೆ, ಕಾಗೆ ಮತ್ತೆ ಅಲ್ಲಿಗೇ ಬಂತು. ಸೀತೆಗೆ ಎಚ್ಚರವಾಗಿ ಶ್ರೀರಾಮನ ತೊಡೆಯ ಮೇಲಿನಿಂದ ತಲೆಯನ್ನೆತ್ತಿ ಎದ್ದು ಬದಿಗೆ ಕುಳಿತಳು. ಒಮ್ಮೆಲೇ ಆ ಕಾಗೆಯು ಅವಳತ್ತ ಬಂದು ಅವಳ ವಕ್ಷಃಸ್ಥಳದ ಭಾಗವನ್ನು ಪರಚಿತು. ಎಷ್ಟು ಓಡಿಸಿದರೂ ಮತ್ತೆಮತ್ತೆ ಹಾರಿ ಬಂದು ವಕ್ಷಸ್ಥಳವನ್ನು ಪರಚುತ್ತಿತ್ತು. ಸೀತೆಯ ಎದೆಯ ಭಾಗದಿಂದ ಬಿದ್ದ ರಕ್ತದ ಹನಿಗಳ ಕಾರಣ ಶ್ರೀರಾಮನು ಎಚ್ಚರಗೊಂಡನು. ಸೀತೆಯ ಸ್ತನಗಳೆರಡಕ್ಕೂ ಪರಚಿದ ಗಾಯಗಳಾಗಿರುವುದನ್ನು ಗಮನಿಸಿದ ಶ್ರೀರಾಮನು ಸಿಡಿಮಿಡಿಗೊಂಡನು. ಸೀತೆಯನ್ನು ಕುರಿತು ''ಕೇನ ತೇ ನಾಗನಾಸೋರು ವಿಕ್ಷತಂ ವೈ ಸ್ತನಾಂತರಮ್। ಕಃ ಕ್ರೀಡತಿ ಸ ರೋಷೇಣ ಪಂಚವಕ್ತ್ರೇಣ ಭೋಗಿನಾ'' ಎಂದನು. ಅಂದರೆ, ''ಎಲೈ ಮುಗುದೆಯೇ, ಯಾರು ನಿನ್ನ ಸ್ತನಗಳ ಮಧ್ಯದಲ್ಲಿ ಪರಚಿದರು? ಅಂಥ ಕುಚೇಷ್ಟೆ ಮಾಡುವ ಧೈರ್ಯ ಯಾರಿಗೆ ಬಂತು?'' ಹೀಗೆನ್ನುತ್ತಿದ್ದಂತೆ ಶ್ರೀರಾಮನ ದೃಷ್ಟಿಯು ಅಲ್ಲಿಯೇ ಅತ್ತಿಂದಿತ್ತ ಠಳಾಯಿಸುತ್ತಿದ್ದ ಕಾಗೆಯತ್ತ ಹೋಯಿತು. ತತ್‌ಕ್ಷಣ ಕಾಗೆ ಒಂದು ಪೊದೆಯ ಹಿಂದೆ ಮರೆಯಾಯಿತು. ''ಪುತ್ರಃ ಕಿಲ ಸ ಶಕ್ರಸ್ಯ ವಾಯಸಃ ಪತತಾಂ ವರಃ''- ಅಂದರೆ ಪಕ್ಷಿಗಳಲ್ಲಿ ಚಾಣಾಕ್ಷನೆನಿಸಿದ ಆ ಕಾಗೆಯು ಶಕ್ರನ ಮಗನೇ ಮಾರುವೇಷದಲ್ಲಿ ಬಂದದ್ದೆಂದು ಶ್ರೀರಾಮನಿಗೆ ಗೊತ್ತಾಯಿತು.

ಕ್ರೋಧಗೊಂಡ ಶ್ರೀರಾಮನು ಬ್ರಹ್ಮಾಸ್ತ್ರದಿಂದ ಮಂತ್ರಿಸಿದ ಒಂದು ದರ್ಭೆಯನ್ನು ಆ ಕಾಗೆಯ ಮೇಲೆ ಬಿಟ್ಟನು. ಆಗ ಆ ಕಾಗೆ ಪೊದೆಯ ಮರೆಯಿಂದ ಹೊರಗೆ ಬಂದು ಆಕಾಶದತ್ತ ಹಾರಿತು. ಕಾಗೆ ಹೋದತ್ತ ಆ ಮಂತ್ರಿಸಿದ ದರ್ಭೆಯೂ ಬೆನ್ನಟ್ಟಿತು. ದರ್ಭೆಯಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಕಾಗೆ ಮೂರು ಲೋಕಗಳನ್ನೂ ಸುತ್ತಿತು. ಎಲ್ಲಿಯೂ ಅದಕ್ಕೆ ಆಸರೆ ಸಿಗಲಿಲ್ಲ. ಬ್ರಹ್ಮ, ಶಿವ, ಇಂದ್ರ, ಋಷಿಗಳು ಮುಂತಾಗಿ ಯಾರ ನೆರವನ್ನು ಕೇಳಿದರೂ ಕಾಗೆಗೆ ರಕ್ಷಣೆ ದೊರಕಲಿಲ್ಲ, ಹೋದಲ್ಲೆಲ್ಲ ದರ್ಭೆಯೂ ಕಾಗೆಯನ್ನು ಹಿಂಬಾಲಿಸುತ್ತಿತ್ತು. ಕೊನೆಗೂ ಆ ಕಾಗೆ ಮರಳಿಬಂದು ಶ್ರೀರಾಮನಿಗೆ ಶರಣಾಯಿತು. ಪ್ರಾಣವನ್ನು ಉಳಿಸುವಂತೆ ಅವನನ್ನು ಪ್ರಾರ್ಥಿಸಿ ಅಂಗಲಾಚಿತು. ಶರಣಾಗತರಿಗೆ ಅಭಯವನ್ನೀಯುವುದು ಶ್ರೀರಾಮನ ತತ್ತ್ವವಾದ್ದರಿಂದ, ಮತ್ತು ಕಾಗೆಯ ಬಗ್ಗೆ ಅವನಿಗೆ ಕನಿಕರ ಉಂಟಾಗಿದ್ದರಿಂದ ಅದನ್ನುದ್ದೇಶಿಸಿ ಇಂತೆಂದನು: ''ಈ ಬ್ರಹ್ಮಾಸ್ತ್ರವು ಎಂದಿಗೂ ವ್ಯರ್ಥವಾಗಲಾರದು. ಅಂದಬಳಿಕ ಈ ಅಸ್ತ್ರದಿಂದ ನಿನ್ನ ಯಾವ ಭಾಗವು ನಾಶವಾಗಲಿ ಎಂಬುದನ್ನು, ಆ ಅವಯವದ ಆಸೆಯನ್ನು ಬಿಟ್ಟು, ನೀನೇ ಹೇಳು! ಆಗಲೇ ಈ ಅಸ್ತ್ರವು ಸಫಲವಾಗುವುದು. ನಿನ್ನ ಪ್ರಾಣವೂ ಉಳಿಯುವುದು!''. ಅದಕ್ಕೆ ಕಾಗೆಯು, ''ಹಾಗಿದ್ದರೆ ಈ ಅಸ್ತ್ರವನ್ನು ನನ್ನ ಒಂದು ಕಣ್ಣಿನ ಮೇಲೆ ಪ್ರಯೋಗಿಸಿ ಸಾರ್ಥಕಗೊಳಿಸು'' ಎಂದು ಬೇಡಿಕೊಂಡಿತು. ತಥಾಸ್ತು ಎಂದ ಶ್ರೀರಾಮ, ಬ್ರಹ್ಮಾಸ್ತ್ರ ಮಂತ್ರಿತ ದರ್ಭೆಯನ್ನು ಕಾಗೆಯ ಕಣ್ಣಿಗೆ ಚುಚ್ಚುವಂತೆ ಮಾಡಿದನು. ಅಂದಿನಿಂದ ಕಾಗೆ ಒಂದು ಕಣ್ಣಿನಲ್ಲಿ ಮಾತ್ರ ದೃಷ್ಟಿಯುಳ್ಳದ್ದಾಯಿತು.

ಈ ಸಂದರ್ಭವು ಕಾಗೆ ಸಂತತಿಗೆ ಸಂದ ಶಾಪ ಎಂಬಂತೆ ಕಂಡುಬಂದರೂ ನಿಜವಾಗಿ ಶಾಪವಲ್ಲ. ಶ್ರೀರಾಮನು ಕಾಗೆಗೆ ಶಾಪ ನೀಡದೆ ಅದರ ಅಧಿಕಪ್ರಸಂಗತನಕ್ಕಾಗಿ ಶಿಕ್ಷೆಯನ್ನಷ್ಟೇ ಕೊಟ್ಟಿದ್ದಾನೆ. ಹಾಗೆ ನೋಡಿದರೆ ಶಾಪ ಕೊಡುವ ಸಾಮರ್ಥ್ಯ ಶ್ರೀರಾಮನಿಗೆ ಇದ್ದಿತಾದರೂ ರಾಮಾಯಣದಲ್ಲಿ ಅವನು ಯಾರಿಗೂ ಶಾಪ ಕೊಟ್ಟಿದ್ದಿಲ್ಲ. ಅದೇರೀತಿ ಆತನಿಗೆ ಒದಗಿಬಂದ ವರಗಳನ್ನು ಸಹ ವಿನಯಪೂರ್ವಕವಾಗಿ ನಿರಾಕರಿಸಿದ್ದಾನೆ. ಒಂದೊಮ್ಮೆ ವರಗಳನ್ನು ಸ್ವೀಕರಿಸಿದ್ದರೂ ಸ್ವಂತದ ಲಾಭಕ್ಕಾಗಿ ಅಲ್ಲ, ಅವುಗಳನ್ನು ಸಮಾಜಕಾರ್ಯಕ್ಕಾಗಿ ಬಳಸಿಕೊಂಡಿದ್ದಾನೆ. ಒಮ್ಮೆ ಸಮುದ್ರರಾಜನೊಡನೆ, ಒಮ್ಮೆ ಪ್ರಸ್ರವಣ ಪರ್ವತದೊಡನೆ, ಮತ್ತ್ಯಾವಾಗಲೋ ಒಮ್ಮೆ ಒಂದು ನದಿಯೊಡನೆ ಶ್ರೀರಾಮನೂ ಏರುದನಿಯಿಂದ ಬಿರುನುಡಿಗಳನ್ನು ಆಡಬೇಕಾದ ಸಂದರ್ಭಗಳು ಬಂದದ್ದಿವೆ. ಆ ಮಾತುಗಳೆಲ್ಲ ಯಾವುದೋ ಷರತ್ತಿನ ಮೇಲೆಂಬಂತೆ ಆಡಿದ್ದವು, ಷರತ್ತು ಪಾಲನೆಯಾದ ಮೇಲೆ ಶಪಿಸುವ ಪ್ರಮೇಯವೇ ಇರುತ್ತಿರಲಿಲ್ಲ. ಅದಕ್ಕೇ ಅಲ್ಲವೇ ಶ್ರೀರಾಮನನ್ನು ಮರ್ಯಾದಾ ಪುರುಷೋತ್ತಮ ಎನ್ನುವುದು?

ಇಲ್ಲಿ ವಾಲ್ಮೀಕಿ ಮಹರ್ಷಿಯ ಕಾವ್ಯಸೂಕ್ಷ್ಮತೆಯನ್ನೂ ನಾವು ಗಮನಿಸಬೇಕು, ಮೆಚ್ಚಬೇಕು. ಕಾಗೆಯ ಪ್ರಸಂಗ ನಡೆದದ್ದು ರಾಮ-ಸೀತೆ-ಲಕ್ಷ್ಮಣರು ಚಿತ್ರಕೂಟ ಪರ್ವತದ ತಪ್ಪಲಲ್ಲಿದ್ದಾಗ. ಆದರೆ ಅದರ ವರ್ಣನೆ ಬರುವುದು ಆಮೇಲೆ ಸುಂದರಕಾಂಡದಲ್ಲಿ, ಫ್ಲ್ಯಾಷ್‌ಬ್ಯಾಕ್ ರೀತಿಯಲ್ಲಿ. ಅದಾದರೂ ವಿಶೇಷ ಸಂಗತಿಯೇನಲ್ಲ. ಆದರೆ ಪರಸ್ಪರ ಎಂದೂ ನೋಡಿ ಪರಿಚಯವಿಲ್ಲದ ಹನುಮಂತ ಮತ್ತು ಸೀತೆ, ಒಬ್ಬರನ್ನೊಬ್ಬರು ನಂಬುವಂತೆ, ಸಂದೇಶವಾಹಕನಾಗಿ ಹನುಮಂತನು ಶ್ರೀರಾಮಚಂದ್ರ ಮತ್ತು ಸೀತೆಯ ನಿಜ ಅಸ್ಮಿತೆಯನ್ನು ಕಾಪಾಡಿಕೊಳ್ಳುವಂತೆ ಇರುವ ಅಂಶಗಳನ್ನೂ ವಾಲ್ಮೀಕಿ ಕಥಾಹಂದರಲ್ಲಿ ನಾಜೂಕಾಗಿ ಹೆಣೆದಿದ್ದಾರೆ ಎನ್ನುವುದು ಗಮನಾರ್ಹ. ಹೇಳಿಕೇಳಿ ಅದು ಲಂಕೆ, ರಾಕ್ಷಸರ ಸಾಮ್ರಾಜ್ಯ. ಯಾವ್ಯಾವ ಮಾಯ-ಮಾಟ-ಮಂತ್ರಗಳಿಂದಾಗಿ ಸಾಮಾನ್ಯ ಮನುಷ್ಯರು ಭ್ರಮೆಗೊಳಗಾಗುವಂತೆ ಕಪಟಗಳು

ನಡೆಯುತ್ತಿದ್ದವೋ ಯಾರಿಗೆ ಗೊತ್ತು! ಆದ್ದರಿಂದಲೇ ಮಹೇಂದ್ರಪರ್ವತದಿಂದ ನೆಗೆದು ಲಂಕೆಯತ್ತ ಸಾಗರೋಲ್ಲಂಘನ ಮಾಡಿದಾಗ ಹನುಮಂತನು ಶ್ರೀರಾಮನ ಗುರುತೆಂದು, ಸೀತೆಗೆ ತೋರಿಸುವುದಕ್ಕೆಂದು, ಶ್ರೀರಾಮನದೊಂದು ಉಂಗುರ ಒಯ್ದಿದ್ದನು. ಅಶೋಕವನದಲ್ಲಿ ಸೀತೆಗೆ ಅದನ್ನು ತೋರಿಸಿದಾಗ ಅವಳಿಗೆ ಹನುಮಂತನ ಮೇಲೆ ವಿಶ್ವಾಸ ಮೂಡಿತ್ತು. ಅಂತೆಯೇ, ಸೀತೆಯನ್ನು ಭೇಟಿಯಾಗಿ ಅವಳ ಗುರುತೆಂದು, ಶ್ರೀರಾಮನಿಗೆ ತೋರಿಸಲಿಕ್ಕೆಂದು, ಹನುಮಂತನು ಸೀತೆಯಿಂದ ಚೂಡಾಮಣಿಯನ್ನು ಕೇಳಿ ತಂದಿದ್ದನು. ಶ್ರೀರಾಮನಿಗೆ ಅದು ತಲುಪಿದಾಗ, ಹನುಮಂತ ಪತ್ತೆ ಮಾಡಿದ್ದು ಸೀತೆಯನ್ನೇ ಹೌದು ಎಂದು ಸಾಬೀತಾಗಿತ್ತು, ಮಾತ್ರವಲ್ಲ ಶ್ರೀರಾಮನಿಗಂತೂ ದುಃಖ ಉಮ್ಮಳಿಸಿಬಂದಿತ್ತು.

ಉಂಗುರ ಮತ್ತು ಚೂಡಾಮಣಿ ಚಿಕ್ಕ ಆಭರಣಗಳು. ಅವೇನಿದ್ದರೂ ಭೌತಿಕ ವಸ್ತುಗಳಾದುವು. ಒಂದುವೇಳೆ ಹನುಮಂತನ ಸಾಗರೋಲ್ಲಂಘನದ ವೇಳೆ ಅವು ಕಳೆದುಹೋದರೆ? ಅಥವಾ ಹನುಮಂತನಿಂದ ಯಾರಾದರೂ ಅವುಗಳನ್ನು ಅಪಹರಿಸಿದರೆ? ಉದ್ದೇಶವೇ ವಿಫಲವಾದಂತಾಯ್ತಲ್ಲ! ಹಾಗಾದ ಪಕ್ಷದಲ್ಲೂ, ಯಾರೇ ಅಪಹರಿಸಲಾಗದ್ದು ಏನಾದರೂ ಗುರುತಿಗಿರಲಿ ಎಂಬ ದೃಷ್ಟಿಯಿಂದಲೇ ಹನುಮಂತನು ಸೀತೆಯಿಂದ ಏನೋ ಒಂದು ವಿಶೇಷವಾದ, ತೀರ ಖಾಸಗಿಯಾದ ಘಟನೆಯನ್ನು ಕೇಳಿ ತಿಳಿದಿಟ್ಟುಕೊಂಡಿದ್ದು. ಮತ್ತು, ಹನುಮಂತನ ಆ ಕೋರಿಕೆಯನ್ನು ಮನ್ನಿಸುತ್ತ ಸೀತೆ 'ಕಾಗೆಯ ಕಾಟ' ಕಥೆಯನ್ನು ಅವನಿಗೆ ವರ್ಣಿಸಿದ್ದು. ನೆನಪಿರಲಿ, ಅದು ಶ್ರೀರಾಮ ಮತ್ತು ಸೀತೆಯ ನಡುವಿನ ತೀರಾ ಅಂದರೆ ತೀರಾ ಖಾಸಗಿ ಸಮಾಚಾರ. ಲಕ್ಷ್ಮಣನಿಗೂ ಗೊತ್ತಿಲ್ಲದ್ದು. ಅಂಥದ್ದನ್ನು ಹನುಮಂತನಿಗೆ ಹೇಳಲು ಸೀತೆ ಮುಂದಾದಳೆಂದರೆ ಹನುಮಂತ ಅದೆಷ್ಟು ಮಟ್ಟದಲ್ಲಿ ಸೀತೆಯ ನಂಬಿಕೆ ವಿಶ್ವಾಸಗಳನ್ನು ಗೆದ್ದಿರಬೇಡ?! ಭೌತಿಕ ವಸ್ತುಗಳಿಗಿಂತ ಬೌದ್ಧಿಕ ತಿಳಿವಳಿಕೆಯೇ ಹೆಚ್ಚಿನದು ಎಂದು ಸೀತೆಗೂ ಅನಿಸಿದ್ದರಿಂದಲೇ ತಾನೆ ಅವಳೂ ಇಂಥದೊಂದು ಪ್ರಸಂಗವನ್ನು ಮುಚ್ಚುಮರೆಯಿಲ್ಲದೆ ಬಿಚ್ಚಿಟ್ಟದ್ದು?

ಭೌತಿಕಕ್ಕಿಂತ ಬೌದ್ಧಿಕ ಶ್ರೇಷ್ಠ ಎನ್ನುವಾಗ ಇನ್ನೊಂದು ಅಂಶವನ್ನೂ ನಾವು ಗಮನಿಸಬಹುದು. ಭಾರತೀಯ ಸನಾತನ ಸಂಸ್ಕೃತಿಯ ಜ್ಞಾನಭಂಡಾರ ಹಿಂದಿನಕಾಲದಿಂದಲೂ ಭೌತಿಕ ರೂಪದಲ್ಲಲ್ಲದೆ ಬೌದ್ಧಿಕ ರೂಪದಲ್ಲಷ್ಟೇ ಏಕೆ ಇರುತ್ತಿತ್ತು, ಶ್ರುತಿ-ಸ್ಮೃತಿ (ಕಿವಿಯಿಂದ ಕೇಳುವುದು ಮತ್ತು ನೆನಪಲ್ಲಿಟ್ಟುಕೊಳ್ಳುವುದು) ವಿಧಾನವೇ ಏಕೆ ಪ್ರಾಮುಖ್ಯ ಪಡೆದಿತ್ತು ಎನ್ನುವುದಕ್ಕೆ ಇಲ್ಲಿ ಉತ್ತರ ಸಿಗುತ್ತದೆ. ನಳಂದದಂಥ ಪುರಾತನ ವಿಶ್ವವಿದ್ಯಾಲಯಗಳನ್ನೂ, ಅಲ್ಲಿನ ಗ್ರಂಥಾಲಯಗಳನ್ನೂ, ಸೂಕ್ಷ್ಮಾತಿಸೂಕ್ಷ್ಮ ಕುಸುರಿಕೆತ್ತನೆಗಳ ಮೂಲಕವೇ ಜ್ಞಾನಪ್ರಸರಣ ಮಾಡುತ್ತಿದ್ದ ಅನೇಕ ದೇವಾಲಯಗಳನ್ನೂ, ದಾಳಿಕೋರರು ಸುಟ್ಟು ವಿಧ್ವಂಸ ಮಾಡಿದರೂ 'ಜ್ಞಾನ'ವನ್ನು ನಾಶಪಡಿಸುವುದು ಅವರಿಂದಾಗಲಿಲ್ಲ. ಇದು ಭಾರತೀಯರಾಗಿ ನಾವೆಲ್ಲರೂ ಗರ್ವಪಡಬೇಕಾದ ಅದ್ಭುತ ಸಂಗತಿಯೇ!

ಮತ್ತೆ ಕಾಗೆಯ ಕಥೆಗೇ ಬರುವುದಾದರೆ, ಸೀತೆಗೆ ಉಪದ್ರವ ಕೊಟ್ಟ ಆ ಕಾಗೆ ಯಃಕಶ್ಚಿತ್ ಕಾಗೆ ಅಲ್ಲ, ಇಂದ್ರನ ಮಗ ಜಯಂತನೇ ಕಾಗೆಯ ವೇಷ ಧರಿಸಿದ್ದು, ಅದರಲ್ಲೂ ಸೀತೆಯ ವಕ್ಷಸ್ಥಳಕ್ಕೇ ದಾಳಿಯಿಟ್ಟದ್ದು ಗಂಭೀರ ವಿಚಾರವೇ. ಮಾರುವೇಷ ಧರಿಸಿ ಬರುವುದು ಪುರಾಣಕಥೆಗಳಲ್ಲಿ ಹೊಸದೇನಲ್ಲ. ರಾಮಾಯಣದಲ್ಲೇ ಮಾರೀಚ ಬಂಗಾರದ ಜಿಂಕೆಯ ವೇಷದಲ್ಲಿ ಬಂದಿದ್ದನು; ಸೀತೆಯನ್ನು ಅಪಹರಿಸಲಿಕ್ಕೆಂದು ರಾವಣ ಬಡಬ್ರಾಹ್ಮಣನ ವೇಷ ಧರಿಸಿ ಬಂದಿದ್ದನು. ಅವರೆಲ್ಲ ದುಷ್ಟರು. ದುಷ್ಕೃತ್ಯಕ್ಕಾಗಿ ವೇಷ ಮರೆಸಿದರು. ಆದರೆ ಇಂದ್ರನ ಮಗ ಜಯಂತ ವೇಷ ಮರೆಸಿ ಕಾಗೆಯಂತೆ ಬರುವುದೆಂದರೆ? ಅದರಲ್ಲೂ ಶ್ರೀಮನ್ನಾರಾಯಣ-ಲಕ್ಷ್ಮಿಯರ ಅವತಾರವಾದ ಶ್ರೀರಾಮ-ಸೀತೆಯರನ್ನೇ ಕೆಣಕುವುದೆಂದರೆ? ಅಧಿಕಾರದಲ್ಲಿರುವವರ, ದೊಡ್ಡವರೆನಿಸಿಕೊಂಡವರ, ಮದೋನ್ಮತ್ತ ಮಕ್ಕಳು ಏನು ಬೇಕಾದರೂ ಮಾಡಬಹುದು ಎನ್ನುವ ಉದ್ಧಟತನವನ್ನೇ ಅಲ್ಲವೇ ಜಯಂತನೂ ಪ್ರದರ್ಶಿಸಿದ್ದು? ತುಲಸೀದಾಸರು ರಾಮಚರಿತಮಾನಸದಲ್ಲಿ ಈ ಕಾಗೆ ಪ್ರಸಂಗವನ್ನು ಬಣ್ಣಿಸುವಾಗ ಜಯಂತನನ್ನು ಮಂದಮತಿ, ಮೂಢ, ಮೂರ್ಖ ಅಂತೆಲ್ಲ ಮೂದಲಿಸಿದ್ದಾರೆ. ''ಸುರಪತಿ ಸುತ ಧರಿ ಬಾಯಸ ಬೇಷಾ। ಸಠ ಚಾಹತ ರಘುಪತಿ ಬಲ ದೇಖಾ। ಜಿಮಿ ಪಿಪೀಲಿಕಾ ಸಾಗರ ಥಾಹಾ। ಮಹಾ ಮಂದಮತಿ ಪಾವನ ಚಾಹಾ...'' (ದೇವರಾಜ ಇಂದ್ರನ ಮೂರ್ಖ ಪುತ್ರ ಜಯಂತನು ಕಾಗೆಯ ರೂಪ ಧರಿಸಿ ಶ್ರೀರಾಮನ ಬಲಪರೀಕ್ಷೆ ಮಾಡಲು ಯತ್ನಿಸಿದನು- ಸಮುದ್ರದ ಶಕ್ತಿಯನ್ನು ಪರೀಕ್ಷಿಸಲು ಹೊರಟ ಇರುವೆಯಂತೆ!)

ಹಾಗಂತ, ಜಯಂತ ಒಳ್ಳೆಯ ಕೆಲಸಕ್ಕೂ ಕಾಗೆಯ ವೇಷ ಧರಿಸಿದ್ದಿದೆಯೆಂದು ಕೆಲವು ಪುರಾಣಗಳು ಬಣ್ಣಿಸುತ್ತವೆ. ಸಮುದ್ರಮಥನದಲ್ಲಿ ಅಮೃತದ ಬಿಂದಿಗೆ ಹೊರಹೊಮ್ಮಿದಾಗ, ಅಸುರರು ಅದನ್ನು ವಶಪಡಿಸಿಕೊಳ್ಳಲು ಯತ್ನಿಸಿದಾಗ, ಇಂದ್ರಪುತ್ರ ಜಯಂತನೇ ಕಾಗೆಯ ವೇಷ ಧರಿಸಿ ಅಮೃತದ ಬಿಂದಿಗೆಯನ್ನು ಕೊಕ್ಕಿನಲ್ಲಿ ಕಚ್ಚಿಕೊಂಡು ಹಾರಿದ್ದನಂತೆ. ಅಸುರರು ಬೆನ್ನಟ್ಟಿದ್ದರೂ ನಿರಂತರ ಹನ್ನೆರಡು ದಿನಗಳವರೆಗೆ ಹಾರಿಕೊಂಡು ಅಮೃತವನ್ನು ಸುರಕ್ಷಿತ ಸ್ಥಳಕ್ಕೆ ಒಯ್ದಿಟ್ಟಿದ್ದನಂತೆ. ಹಾಗೆ ಹಾರುವಾಗ ಪ್ರಯಾಗರಾಜ, ಹರಿದ್ವಾರ, ಉಜ್ಜೈನಿ, ಮತ್ತು ನಾಸಿಕಗಳಲ್ಲಿ ಅವನು ಕ್ಷಣಹೊತ್ತು ವಿಶ್ರಾಂತಿ ತೆಗೆದುಕೊಂಡಿದ್ದನು, ಆ ನಾಲ್ಕು ಕಡೆಗಳಲ್ಲಿ ಅಮೃತದ ಬಿಂದಿಗೆಯಿಟ್ಟಿದ್ದ ಸ್ಥಳದಲ್ಲೇ ಈಗಲೂ ಕುಂಭಮೇಳಗಳು ನಡೆಯುವುದು- ಅಂತೊಂದು ಪ್ರತೀತಿಯೂ ಇದೆ.

ಜಯಂತನಿಗೆ ಸಂಬಂಧಿಸಿದಂತೆ ಇನ್ನೆರಡು ಸ್ವಾರಸ್ಯಕರ ಕಥೆಗಳಿವೆ: ಒಮ್ಮೆ ರಾವಣನು ಇಂದ್ರನ ಮೇಲೆ ಯುದ್ಧ ಸಾರಿದ್ದಾಗ ಜಯಂತನು ರಾವಣನ ಮಗ ಮೇಘನಾದನೊಡನೆ ಸೆಣಸಿದ್ದನು. ಮೇಘನಾದನಿಂದ ಸೋತು ಪ್ರಜ್ಞಾಹೀನನಾಗಿ ಬಿದ್ದಿದ್ದ ಜಯಂತನನ್ನು ಅವನ ತಾತ, ಅಂದರೆ ಇಂದ್ರಪತ್ನಿ ಶಚಿದೇವಿಯ ತಂದೆ ಪುಲೋಮನು ಸಮುದ್ರದೊಳಗೆ ಅಡಗಿಸಿಟ್ಟಿದ್ದನು. ಜಯಂತ ಸತ್ತೇ ಹೋದ ಎಂದುಕೊಂಡ ಇಂದ್ರ ಮತ್ತಷ್ಟು ಕೆಚ್ಚಿನಿಂದ ರಾವಣ ಮತ್ತು ಮೇಘನಾದರೊಡನೆ ಹೋರಾಡಿದನು. ಕೊನೆಗೂ ಮೇಘನಾದ ಇಂದ್ರನನ್ನು ಸೋಲಿಸಿದನು. ವಾಯುಪುರಾಣದಲ್ಲಿ ಬರುವ ಇನ್ನೊಂದು ಕಥೆಯಲ್ಲಿ, ಒಮ್ಮೆ ಅಗಸ್ತ್ಯ ಮಹರ್ಷಿಯು ಇಂದ್ರಲೋಕಕ್ಕೆ ಭೇಟಿಯಿತ್ತಾಗ ಅವರ ಗೌರವಾರ್ಥ ಊರ್ವಶಿಯ ನೃತ್ಯಪ್ರದರ್ಶನ ಏರ್ಪಡಿಸಲಾಗಿತ್ತು. ಸ್ವತಃ ನಾರದರೇ ತಮ್ಮ ಮಹತೀ ವೀಣೆಯನ್ನು ನೃತ್ಯಕ್ಕೆ ಸಂಗೀತವಾಗಿ ನುಡಿಸಿದ್ದರು. ನೃತ್ಯ ಮಾಡುತ್ತಿರುವಾಗಲೇ ಊರ್ವಶಿಯ ದೃಷ್ಟಿ ಅಲ್ಲೇ ಇದ್ದ ಸುರಸುಂದರಾಂಗ ಜಯಂತನತ್ತ ತಿರುಗಿತು. ಅವರಿಬ್ಬರ ಕಣ್ಣುಗಳು ಸಂಧಿಸಿದವು. ಜಯಂತನನ್ನು ನೋಡಿದ ಊರ್ವಶಿಗೆ ಅವನಲ್ಲಿ ಪ್ರೇಮವುಕ್ಕಿತು. ಒಂದು ಕ್ಷಣ ವಿಚಲಿತಳಾಗಿ ಆಕೆ ನೃತ್ಯದ ಹೆಜ್ಜೆ ತಪ್ಪಿದಳು. ನಾರದರ ವೀಣಾವಾದನಕ್ಕೆ ನೃತ್ಯಭಂಗಿಗಳು ಹೊಂದಾಣಿಕೆ ಆಗಲಿಲ್ಲ. ಒಟ್ಟಿನಲ್ಲಿ ಎಲ್ಲ ತಾಳಮೇಳ ತಪ್ಪಿ ಆ ನೃತ್ಯಪ್ರದರ್ಶನ ಅಸ್ತವ್ಯಸ್ತವಾಯಿತು. ಅಗಸ್ತ್ಯರಿಗದು ಗೊತ್ತಾಯಿತು. ಅದು ಎಲ್ಲರೂ ಸೇರಿ ತನಗೆ ಮಾಡಿದ ಅವಮಾನ ಎಂದು ಸಿಟ್ಟಾದರು. ಊರ್ವಶಿಯನ್ನು ಭೂಲೋಕದಲ್ಲಿ ಮಾಧವಿಯೆಂಬ ಕನ್ಯೆಯಾಗಿಯೂ, ಜಯಂತನನ್ನು ವಿಂಧ್ಯಪರ್ವತದಲ್ಲಿ ಒಂದು ಬಿದಿರಿನ ಮೆಳೆಯಾಗಿಯೂ ಹುಟ್ಟುವಂತೆ ಶಪಿಸಿದರು. ನಾರದರ ಮಹತೀ ವೀಣೆ ಮಹತ್ತ್ವ ಕಳೆದುಕೊಂಡು ಅದು ಭೂಲೋಕದಲ್ಲಿ ಜನಸಾಮಾನ್ಯರ ವೀಣೆಯಾಗಲಿ ಎಂದು ಕೂಡ ಶಾಪವಿತ್ತರು. ಒಬ್ಬ ಜಯಂತನಿಂದಾಗಿ ಏನೇನೆಲ್ಲ ಆಯ್ತು ನೋಡಿ!

ಇದೇ ಶಕ್ರಪುತ್ರ ಜಯಂತನ ಉಲ್ಲೇಖ ಬರುವುದು ಜನಪ್ರಿಯ ''ತಕ್ರಂ ಶಕ್ರಸ್ಯ ದುರ್ಲಭಮ್'' ಸುಭಾಷಿತದ ಪೂರ್ವಾರ್ಧದಲ್ಲಿ. ''ಭೋಜನಾಂತೇ ಚ ಕಿಂ ಪೇಯಂ ಜಯಂತಃ ಕಸ್ಯ ವೈ ಸುತಃ। ಕಥಂ ವಿಷ್ಣುಪದಂ ಪ್ರೋಕ್ತಂ ತಕ್ರಂ ಶಕ್ರಸ್ಯ ದುರ್ಲಭಮ್'' ಎಂದು ಆ ಸುಭಾಷಿತದ ಪೂರ್ಣರೂಪ. ಊಟದ ಕೊನೆಯಲ್ಲಿ ಏನನ್ನು ಕುಡಿಯಬೇಕು? ಜಯಂತ ಯಾರಿಗೆ ಮಗನಾಗುತ್ತಾನೆ ಗೊತ್ತೇ? ವಿಷ್ಣುಪದ ಎಲ್ಲರಿಗೂ ಸುಲಭವಾಗಿ ಸಿಗುತ್ತದೆಯೇ? ಎಂಬ ಮೂರು ಪ್ರತ್ಯೇಕ ಪ್ರಶ್ನೆಗಳಿಗೆ, ಅನುಕ್ರಮ ಉತ್ತರಗಳು ಸೇರಿಕೊಂಡು ನಾಲ್ಕನೆಯ ವಾಕ್ಯ ಆಗುವುದು- ''ಮಜ್ಜಿಗೆ ಇಂದ್ರನಿಗೆ ಸಿಗುವುದಿಲ್ಲ'' ಎಂದು! ಇಂದ್ರಪದವಿಗಿಂತಲೂ ಮಜ್ಜಿಗೆ ಶ್ರೇಷ್ಠ ಅಂತಲೂ ಅದನ್ನು ಅರ್ಥೈಸಬಹುದು. ಸದ್ಯ ಶ್ರಾವಣ ಮಾಸದ ನಾಲ್ಕು ಭಾನುವಾರಗಳಂದು ತಿಳಿರುತೋರಣದಲ್ಲಿ ಪ್ರಸ್ತುತಪಡಿಸಿದ ಪುರಾಣಕಥನವೆಂಬ ರಸದೌತಣವನ್ನು ಮಜ್ಜಿಗೆಯಿಂದಲೇ ಸಂಪನ್ನಗೊಳಿಸುತ್ತಿದ್ದೇನೆ. ಓದಿದ ಕೇಳಿದ ಆನಂದಿಸಿದ ಎಲ್ಲರಿಗೂ ಸಕಲ ಸನ್ಮಂಗಳವಾಗಲಿ.

ಸಭಾಮರ್ಯಾದೆಯನ್ನು ಸರ್ವಥಾ ಮರೆಯಬಾರದು



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com
vinayakavbhat@autoaxle.com

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಇತ್ತೀಚೆಗೆ ಬೆಂಗಳೂರಿಗೆ ಭೇಟಿಯಿತ್ತಿದ್ದರು. ಅವರ ನಾಲ್ಕು ತಾಸುಗಳ ಭೇಟಿಯಲ್ಲಿ ಒಂದು ಸಭಾಕಾರ್ಯಕ್ರಮವೂ ಸೇರಿತ್ತು. ಪ್ರಧಾನಮಂತ್ರಿಗಳ ಸಭೆ ಅಂದಮೇಲೆ, ಅದರಲ್ಲಿ ಯಾರು ಎಲ್ಲಿ ಕುಳಿತುಕೊಳ್ಳಬೇಕು, ಯಾರಾದ ಮೇಲೆ ಯಾರು ಮಾತನಾಡಬೇಕು, ರಾಜ್ಯದ ಪರವಾಗಿ ಅವರಿಗೆ ಸ್ಮರಣಿಕೆಯನ್ನು ಯಾರು ನೀಡಬೇಕು ಎನ್ನುವುದೆಲ್ಲ ಪೂರ್ವನಿರ್ಧರಿತವಾಗಿರುತ್ತದೆ. ಅವರ ಸಭೆಗಳಲ್ಲಿ ಸುರಕ್ಷತೆ ಮುಂತಾದ ಶಿಷ್ಟಾಚಾರಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕಾಗುತ್ತದೆ.

ಆದರೆ ಅಂದು ಬೆಂಗಳೂರಿನ ವೇದಿಕೆಯಲ್ಲಿ ನಡೆದದ್ದೇ ಬೇರೆ. ಪ್ರಧಾನಮಂತ್ರಿಗಳ ಪಕ್ಕದಲ್ಲಿ ಕುಳಿತಿದ್ದ ನಮ್ಮ ಮುಖ್ಯಮಂತ್ರಿಗಳು ಭಾಷಣಮಾಡಲು ತಮ್ಮ ಆಸನದಿಂದೆದ್ದು ಹೋಗಿದ್ದೇ ತಡ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತರಾತುರಿಯಿಂದ ತಮ್ಮ ಜಾಗದಿಂದ ಎದ್ದು, ಪ್ರಧಾನಮಂತ್ರಿಗಳ ಪಕ್ಕದಲ್ಲಿ ಬಂದು ಕುಳಿತರು. ಕೈಯಲ್ಲಿದ್ದ ಏನೋ ಕಾಗದಗಳನ್ನು ಪ್ರಧಾನಮಂತ್ರಿಗಳಿಗೆ ತೋರಿಸುತ್ತಾ ಅವರ ಜತೆಗೆ ಗುಸುಗುಸು ಮಾತಿಗಿಳಿದರು. ಪಾಪ, ಪ್ರಧಾನಮಂತ್ರಿಗಳು ಉಪಮುಖ್ಯಮಂತ್ರಿಗಳ ಮಾತುಗಳನ್ನು ಅತ್ಯಂತ ಸಹನೆಯಿಂದಲೇ ಆಲಿಸಿ, ಅವರಿಗೆ ಏನೋ ಸಮಾಧಾನ ಹೇಳಿದರು. ಅತ್ತ ಮುಖ್ಯಮಂತ್ರಿಗಳ ಭಾಷಣ ನಡೆದೇ ಇತ್ತು. ಆದರೆ, ಸಭಾಸದರ ಗಮನವೆಲ್ಲ ಡಿ.ಕೆ. ಶಿವಕುಮಾರ್ ಮತ್ತು ಪ್ರಧಾನಮಂತ್ರಿಗಳ ನಡುವೆ ನಡೆಯುತ್ತಿದ್ದ 'ಗುಪ್ತಸಮಾಲೋಚನೆ'ಯ ಮೇಲೆಯೇ ಇತ್ತು.

ಆಮೇಲೆ, ಸಾಮಾನ್ಯವಾಗಿ ರಾಜ್ಯದ ಪರವಾಗಿ ರಾಜ್ಯಪಾಲರು ಅಥವಾ ಮುಖ್ಯಮಂತ್ರಿಗಳು ಪ್ರಧಾನಿಗೆ ಒಂದು ಸ್ಮರಣಿಕೆಯನ್ನು ಕೊಡುವುದು ವಾಡಿಕೆ. ಅದರಂತೆ, ಮುಖ್ಯಮಂತ್ರಿಗಳು ಸ್ಮರಣಿಕೆಯನ್ನು ನೀಡಿದರು. ನಮ್ಮ ಉಪಮುಖ್ಯಮಂತ್ರಿಗಳು ಸುಮ್ಮನಿರಬೇಕಲ್ಲ, ಯಾರೋ ತಂದಿಟ್ಟುಕೊಂಡಿದ್ದ ಒಂದು ಬೆಳ್ಳಿಯ ಗಣಪತಿಯ ವಿಗ್ರಹವನ್ನು ತಂದು ಪ್ರಧಾನಮಂತ್ರಿಗಳಿಗೆ ನೀಡಿದರು. ಪ್ರಧಾನಿಗೆ ಆಶ್ಚರ್ಯವಾದರೂ, ನಿರುಪಾಯರಾಗಿ ಎರಡೂ ಸ್ಮರಣಿಕೆಗಳನ್ನು ಸ್ವೀಕರಿಸಿದರು. ದೆಹಲಿಗೆ ಬಂದು ನಿಮ್ಮನ್ನು ಭೇಟಿಯಾಗಿ ಮಾತಾಡಿದರೆ ನಮ್ಮ ಪಕ್ಷದಲ್ಲಿ ಅದಕ್ಕೆ ಬೇರೆ ಬೇರೆ ಅರ್ಥ ಬಂದುಬಿಡುತ್ತದೆ, ಹಾಗಾಗಿ ನೀವು ಸಿಕ್ಕಾಗಲೇ ಮಾತಾಡಿ ಮುಗಿಸಿಬಿಡುತ್ತೇನೆ ಎನ್ನುವಂತಿದ್ದ ಉಪಮುಖ್ಯಮಂತ್ರಿಗಳ ಸಲುಗೆಯ ವರ್ತನೆ, ಸಭೆಯಲ್ಲಿದ್ದ ಎಲ್ಲರಿಗೂ ಸ್ವಲ್ಪ ಕಸಿವಿಸಿ ಉಂಟುಮಾಡಿತು.

ಪ್ರಧಾನಮಂತ್ರಿಗಳ ಕಾರ್ಯಕ್ರಮದಲ್ಲಾದ ಈ ಘಟನೆಗೆ ಸ್ವಲ್ಪ ದಿನಕ್ಕೆ ಮುಂಚೆ, ಮಲ್ಲಿಕಾರ್ಜುನ ಖರ್ಗೆಯವರು ರಾಜಕೀಯ ವೇದಿಕೆಯೊಂದರಲ್ಲಿ ಭಾಷಣ ಮಾಡುತ್ತಿರುವಾಗ, ಸಿದ್ದರಾಮಯ್ಯನವರು ಮತ್ತು ಅವರ ಆಪ್ತ ಸಚಿವ ಮಹದೇವಪ್ಪನವರು ಹೀಗೇ ಗುಪ್ತಸಮಾಲೋಚನೆಯಲ್ಲಿ ತೊಡಗಿದ್ದರು. ಇದನ್ನು ಗಮನಿಸಿದ ಖರ್ಗೆಯವರು, ''ರೀ ಮಹದೇವಪ್ಪಾ ಸ್ವಲ್ಪ ಸುಮ್ಮನಿರ್ರೀ, ಸಿದ್ದರಾಮಯ್ಯ ನನ್ನ ಭಾಷಣ ಕೇಳಿಸಿಕೊಳ್ಳಲಿ ಬಿಡ್ರೀ, ಅವರ ಕಿವಿಕಚ್ಚುತ್ತಿರಬೇಡಿ'' ಎಂದು ಹೇಳಿ, ಸಾರ್ವಜನಿಕವಾಗಿ ಅವರುಗಳನ್ನು ಮುಜುಗರಕ್ಕೀಡುಮಾಡಿದರು.

ವೇದಿಕೆಯ ಮೇಲೆ ಒಬ್ಬರು ಮಾತನಾಡುತ್ತಿರುವಾಗ, ಸ್ವಾಗತ ಗೀತೆ ಹಾಡುತ್ತಿರುವಾಗ ಅಥವಾ ಇನ್ನಾವುದೋ ಕಲಾಪಗಳು ಅಲ್ಲಿ ನಡೆಯುತ್ತಿರುವಾಗ, ಅತಿಥಿಗಳು ಗಂಭೀರವಾಗಿದ್ದುಕೊಂಡು ಅದರ ಕಡೆಗೆ ಗಮನ ಕೊಡಬೇಕಾಗುತ್ತದೆ. ಅದುಬಿಟ್ಟು, ಪರಸ್ಪರರು ಮಾತನಾಡಿಕೊಳ್ಳುತಿರುವುದು ಅಥವಾ ಎದ್ದು ಅತ್ತಿಂದಿತ್ತ ಓಡಾಡುವುದು ಮಾಡಿದರೆ, ನೋಡುಗರಿಗೆ ಬಹಳ ಆಭಾಸವೆನಿಸುತ್ತದೆ. ಪ್ರಧಾನಿಗಳ ಬೆಂಗಳೂರಿನ ಸಭೆಯಲ್ಲಿ ನಡೆದ ಆಭಾಸದ ವರ್ತನೆಯನ್ನು ಹಾಗೂ ಖರ್ಗೆಯವರ ಭಾಷಣದ ಘಟನೆಯನ್ನು ಒಂದು ಉದಾಹರಣೆಯಾಗಿ ಮಾತ್ರ ಇಲ್ಲಿ ಹೇಳಿದ್ದೇನೆ. ಇದೇ ರೀತಿಯ ವರ್ತನೆಗಳನ್ನು ರಾಜಕೀಯೇತರವಾದ ಸಭಾಕಾರ್ಯಕ್ರಮಗಳಲ್ಲಿಯೂ ನಾವು ನೋಡುತ್ತೇವೆ.

ಅದು ರಾಜಕೀಯ ವೇದಿಕೆಯಾಗಿರಲಿ, ಸಂಗೀತದ ವೇದಿಕೆಯಾಗಿರಲಿ, ಪ್ರಶಸ್ತಿ ಪುರಸ್ಕಾರಗಳನ್ನು ನೀಡುವ ವೇದಿಕೆಯಾಗಿರಲಿ ಅಥವಾ ಪುಸ್ತಕ ಲೋಕಾರ್ಪಣೆ ಮುಂತಾದ ಸಾಹಿತ್ಯಿಕ ವೇದಿಕೆಯಾಗಿರಲಿ, ವೇದಿಕೆ ಅಂದಮೇಲೆ ಅದಕ್ಕೊಂದು ಮರ್ಯಾದೆ ಅಂತ ಇರುತ್ತದೆ. ಪ್ರೇಕ್ಷಕರಿಗೆ ವೇದಿಕೆಯ ಮೇಲಿರುವವರಿಂದ ಒಂದು ನಿರೀಕ್ಷೆ ಅಂತ ಇರುತ್ತದೆ. ಹಾಗೆ, ಗೌರವದಿಂದ ಆ ಸಭೆಯ ಆಯೋಜಕರ ಆಶಯಕ್ಕೆ ತಕ್ಕುದಾಗಿ ಮತ್ತು ಪ್ರೇಕ್ಷಕರಿಗೆ ಮಾದರಿಯಾಗಿ ನಡೆದುಕೊಳ್ಳುವುದು ವೇದಿಕೆಯ ಮೇಲಿರುವವರ ಜವಾಬ್ದಾರಿಯಾಗಿರುತ್ತದೆ.

ಕೆಲವರಂತೂ ತಮಗಿತ್ತ ಆಸನದಲ್ಲಿ ಭದ್ರವಾಗಿ ಕುಳಿತುಕೊಳ್ಳಲೂ ಆಗದೇ, ಸತತವಾಗಿ ನುಲಿಯುತ್ತಲೇ ಇರುತ್ತಾರೆ. ಇನ್ನು ಕೆಲವರು ಏನನ್ನಾದರೂ ತಿನ್ನುತ್ತಿರುತ್ತಾರೆ. ವೇದಿಕೆಯ ಮೇಲೆ ಕುಳಿತವರು ಮೈಮರೆತು ನಿದ್ದೆ ಮಾಡುವುದನ್ನೂ ನಾವು ಬಹಳ ನೋಡಿದ್ದೇವೆ. ಪ್ರಧಾನಮಂತ್ರಿಗಳಾಗಿದ್ದಾಗ ದೇವೇಗೌಡರು ವೇದಿಕೆಯ ಮೇಲಿನ ತಮ್ಮ ನಿದ್ದೆಯಿಂದಾಗಿಯೇ ಬಹಳ ಟೀಕೆಗೊಳಗಾಗಿದ್ದನ್ನು ನಾವು ನೋಡಿದ್ದೇವೆ. ''ನಾನು ವೇದಿಕೆಯ ಮೇಲೆ ನಿದ್ದೆ ಮಾಡುವುದಲ್ಲ, ದೇಶದ ಕುರಿತು ಏಕಾಗ್ರತೆಯಿಂದ ಚಿಂತಿಸುತ್ತಿರುತ್ತೇನೆ'' ಎನ್ನುವ ಅವರ ಸಮಜಾಯಿಷಿಯನ್ನೂ ಕೇಳಿದ್ದೇವೆ. ನಿದ್ದೆಯ ವಿಷಯದಲ್ಲಿ ನಮ್ಮ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರೂ ದೇವೇಗೌಡರಿಗಿಂತ ಹಿಂದೇನೂ ಇಲ್ಲ. ಸಿದ್ದರಾಮಯ್ಯನವರಿಗೆ 'ಸ್ಲೀಪ್ ಆಪ್ನಿಯಾ' ಎನ್ನುವ ಕಾಯಿಲೆಯಿಂದಾಗಿ ರಾತ್ರಿ ಸರಿಯಾಗಿ ನಿದ್ದೆ ಬರದೇ, ಹಗಲಿನಲ್ಲಿ ತೂಕಡಿಸುವಂತಾಗುತ್ತಿತ್ತಂತೆ. ಏನೂ ಇರಲಿ, ಪ್ರೇಕ್ಷಕನ ದೃಷ್ಟಿಯಲ್ಲಿ ವೇದಿಕೆಯ ಮೇಲಿನ ಈ ವ್ಯವಹಾರಗಳೆಲ್ಲಾ ಆಭಾಸಗಳೇ ಆಗುತ್ತವೆ.

ಹೀಗೆ, ಆಭಾಸಗಳಿಗೆ-ಮುಜುಗರಗಳಿಗೆ ಅವಕಾಶವಾಗಬಾರದೆಂದು, ಆರೋಗ್ಯದ ಸಮಸ್ಯೆಯಿಂದ ಬಹಳ ಹೊತ್ತು ವೇದಿಕೆಯ ಮೇಲೆ ಕುಳಿತುಕೊಳ್ಳಲಾಗದ ವಯೋವೃದ್ಧರುಗಳು ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳುವುದೇ ಇಲ್ಲ. ಒಮ್ಮೆ ಡಿ.ವಿ. ಗುಂಡಪ್ಪನವರನ್ನು (ಡಿವಿಜಿ) ಕಾರ್ಯಕ್ರಮವೊಂದಕ್ಕೆ ಅತಿಥಿಯಾಗಿ ಬರಬೇಕೆಂದು ಆಮಂತ್ರಿಸಲು ಹೋದವರಿಗೆ, ''ನನಗೆ ಸ್ವಲ್ಪ ಅನಾರೋಗ್ಯವಿದೆ, ನಿಮ್ಮ ಕಾರ್ಯಕ್ರಮಕ್ಕೆ ಬರಲಿಕ್ಕಾಗದು'' ಎಂದರಂತೆ. ಕರೆಯಲು ಬಂದವರು, ''ನೀವು ಗುಂಡಪ್ಪನವರಲ್ಲವೇ! ಈ ಸಣ್ಣ ಅನಾರೋಗ್ಯವನ್ನು ನಿಭಾಯಿಸಬಲ್ಲಿರಿ'' ಎನ್ನುತ್ತಾ, ಬರಲೇಬೇಕೆಂದು ವರಾತ ಮಾಡಿದರಂತೆ. ಅದಕ್ಕೆ ಡಿವಿಜಿಯವರು, ''ನಾನು ಗುಂಡಪ್ಪನಾದೊಡೇನ್ ಕುಂಡೆಯದು ನೋಯದೇ'' ಎಂದು ಕಾವ್ಯಾತ್ಮಕವಾಗಿ ತಮ್ಮ ಮೂಲವ್ಯಾಧಿಯ ಸಮಸ್ಯೆಯನ್ನು ಅವರ ಮುಂದಿಟ್ಟು, ಆಮಂತ್ರಣವನ್ನು ನಿರಾಕರಿಸಿದ್ದರಂತೆ. ಇದು ಪ್ರಾಜ್ಞರ ಲಕ್ಷಣ. ಸಾಮಾನ್ಯವಾಗಿ ವೇದಿಕೆಯ ಮೇಲೆ ಸ್ಥಾನಪಡೆದವರು, ಪ್ರೇಕ್ಷಕ ವರ್ಗದಲ್ಲಿ ಕುಳಿತಿರುವವರಿಗಿಂತ ಹೆಚ್ಚಿನ ಸಾಧನೆ ಮಾಡಿದವರು ಅಥವಾ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುವವರೂ ಆಗಿರುತ್ತಾರೆ. ಹಾಗಾಗಿ, ಆ ಮೇಲ್ಮೆಯನ್ನು ಕಾಪಾಡಿಕೊಳ್ಳುವುದು ಅವರಿಗೆ ಅನಿವಾರ್ಯವಾಗಬೇಕಾಗುತ್ತದೆ.

ಇನ್ನು, ಮುಖ್ಯ ಅತಿಥಿಗಳು ತಮ್ಮ ತುರ್ತು ಕೆಲಸದ ನಿಮಿತ್ತ ಕಾರ್ಯಕ್ರಮದ ಅರ್ಧದಲ್ಲೇ ವೇದಿಕೆಯಿಂದ ಎದ್ದುಹೋಗುವುದಿದೆಯಲ್ಲ, ಅದಂತೂ ಸಭೆಯ ಹಾಗೂ ಅತಿಥಿಗಳ ಮರ್ಯಾದೆಯನ್ನು ತಾವೇ ಕೈಯಾರೆ ಕೊಲೆ ಮಾಡಿದಂತೇ ಆಗುತ್ತದೆ. ಆ ವೇದಿಕೆಯ ರಸಾಭಾಸಕ್ಕೆ ಅವರ ಅಸಮಯದ ಆಗಮನ ಅಥವಾ ಅನಿಯಂತ್ರಿತ ನಿರ್ಗಮನ ಕಾರಣವಾಗಿಬಿಡುತ್ತದೆ. ಪ್ರೇಕ್ಷಕರು ಮನಸ್ಸಿನಲ್ಲಾದರೂ ಇಂಥವರನ್ನು ಬೈದುಕೊಳ್ಳದೇ ಬಿಡುವುದಿಲ್ಲ. ಹಾಗಾಗಿ, ಅಷ್ಟು ತುರ್ತು ಕೆಲಸಗಳಿರುವ ಗಣ್ಯರುಗಳು, ಆಮಂತ್ರಣವನ್ನು ಮೊದಲೇ ನಯವಾಗಿ ತಿರಸ್ಕರಿಸಿಬಿಡುವುದೊಳಿತು.

1986ರಲ್ಲಿ ಬೆಂಗಳೂರಿನಲ್ಲಿ 'ಸಾರ್ಕ್' ಸಮ್ಮೇಳನದ ನಿಮಿತ್ತ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಕಲಾಕ್ಷೇತ್ರದಲ್ಲಿ ಪಂ. ಭೀಮಸೇನ ಜೋಶಿಯವರ ಗಾಯನ ಕಾರ್ಯಕ್ರಮವೂ ಇತ್ತು. ಜೋಶಿಯವರು ವಿಲಂಬಿತ ಲಯವನ್ನು ದಾಟಿ ಮಧ್ಯ ಲಯದಲ್ಲಿ ತಮ್ಮ ಗಾಯನವನ್ನು ಸಾದರಪಡಿಸುತ್ತಿದ್ದರು. ಇದ್ದಕ್ಕಿದ್ದಂತೆ ಪ್ರೇಕ್ಷಕರಲ್ಲಿ ಗುಸುಗುಸು ಪ್ರಾರಂಭವಾಯಿತು, ನೋಡಿದರೆ, ರಾಜ್ಯದ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರು ಅಲ್ಲಿಗೆ ಆಗಮಿಸಿದ್ದರು. ಕಾರ್ಯಕ್ರಮದ ಆರಂಭಕ್ಕೆ ಬರಬೇಕಾಗಿದ್ದ ಹೆಗಡೆಯವರು, ಮುಕ್ಕಾಲು ಗಂಟೆ ತಡವಾಗಿ ಆಗಮಿಸಿದ್ದರು. ಮುಂದಿನ ಸಾಲಿನಲ್ಲಿ ಕುಳಿತು ಸ್ವಲ್ಪ ಹೊತ್ತು ಜೋಶಿಯವರ ಗಾಯನವನ್ನು ಆಲಿಸಿದರು. 'ಧ್ರುತ್' ಲಯದಲ್ಲಿ ಜೋಶಿಯವರು ಅಬ್ಬರದ ತಾನುಗಳನ್ನು ತೋರಿಸುತ್ತಿರುವಾಗ, ವೇದಿಕೆಗೆ ಕೈಮುಗಿದು ತಮ್ಮ ಕಾರ್ಯಬಾಹುಳ್ಯದ ಕಾರಣದಿಂದ ಹೆಗಡೆಯವರು ಎದ್ದು ಹೊರನಡೆದರು. ಅವರು ಸಭಾಂಗಣದ ಬಾಗಿಲನ್ನು ದಾಟುತ್ತಿದ್ದಂತೆ, ಜೋಶಿಯವರು ತಮ್ಮ ಗಾಯನವನ್ನು ನಿಲ್ಲಿಸಿ, ''ಸಂಗೀತದಲ್ಲಿ ಆಸಕ್ತಿ ಇರದ ಅತಿಥಿಗಳನ್ನು ನೀವು ಕಾರ್ಯಕ್ರಮಕ್ಕೆ ಕರೆಯುವುದಾದರೂ ಏಕೆ? ಹೀಗೆ ಮಧ್ಯದಲ್ಲಿ ಬಂದು, ಬೇಕಾದಾಗ ಎದ್ದುಹೊರಟರೆ ಹಾಡುಗಾರನಿಗೂ ಹಾಗೂ ಕೇಳುಗನಿಗೂ ತಾಳಲಾರದ ರಸಭಂಗವಾಗುವುದಿಲ್ಲವೇ?'' ಎಂದು ಆಯೋಜಕರಲ್ಲಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ರಾಮಕೃಷ್ಣ ಹೆಗಡೆಯವರು ಅತ್ಯಂತ ಸೂಕ್ಷ್ಮತನ ಉಳ್ಳ ಅಪರೂಪದ ರಾಜಕಾರಣಿಯೇ ಆಗಿದ್ದರು. ಸಾಮಾನ್ಯವಾಗಿ ಅವರು ಇಂಥ ಮುಜುಗರಕ್ಕೆ ಅವಕಾಶವನ್ನು ಕಲ್ಪಿಸಿಕೊಡುವವರಾಗಿರಲಿಲ್ಲ, ಆದರೆ ಅಂದೇಕೋ ಹಾಗಾಗಿಹೋಗಿತ್ತು.

ಇನ್ನು, ಕಾರ್ಯಕ್ರಮದ ನಿರೂಪಕರುಗಳು ವೇದಿಕೆಯ ಮೇಲೆ ಸುಖಾಸುಮ್ಮನೇ ಅತ್ತಿಂದಿತ್ತ ಓಡಾಡುವುದು, ಹಿಂದಿನಿಂದ ಬಂದು ಕುಳಿತಿರುವ ಅತಿಥಿಗಳನ್ನು ಮಾತಿಗೆಳೆಯುವುದು ಅಥವಾ ಭಾಷಣಕಾರ ಮಾತನಾಡುತ್ತಿರುವಾಗ ಆತನ ಹಿಂದೆಯೇ ನಿಂತಿರುವುದು ಇತ್ಯಾದಿಯನ್ನು ಮಾಡುವುದುಂಟು. ಇಂಥ ನಡವಳಿಕೆಗಳನ್ನು ನೋಡುವಾಗ, ಪ್ರಸಿದ್ಧ ದೇವಸ್ಥಾನಗಳಲ್ಲಿ, ಕ್ಷಣಮಾತ್ರದ ದೇವರ ದರ್ಶನಕ್ಕೆ ತಾಸುಗಟ್ಟಲೇ ಸರತಿ ಸಾಲಿನ ನೂಕುನುಗ್ಗಲನ್ನು ಅನುಭವಿಸಿ ನುಜ್ಜುಗುಜ್ಜಾದ ಸ್ಥಿತಿಯಲ್ಲಿ ದೇವರ ಮುಂದೆ ಬಂದರೆ, ದೇವರನ್ನು ನೋಡುವುದಕ್ಕಿಂತ ಹೆಚ್ಚಾಗಿ, ಅಲ್ಲಿ ದೇವರ ಮುಂದೆಯೇ ಎಡೆಬಿಡದೇ ಓಡಾಡುವ ಅರ್ಚಕರ ಬೆನ್ನು ನೋಡುವಂತಾಗುವ ಸಂದರ್ಭ ನೆನಪಿಗೆ ಬರುತ್ತದೆ. ವ್ಯವಸ್ಥಿತವಾಗಿ ಆಯೋಜಿಸಲ್ಪಡುವ ವೇದಿಕೆಗಳಲ್ಲಿ, ನಿರೂಪಕರಿಗೂ ಕುಳಿತುಕೊಳ್ಳಲು ತೆರೆಯ ಹಿಂದೆ ಆಸನದ ವ್ಯವಸ್ಥೆ ಮಾಡಿರಲಾಗುತ್ತದೆ. ಅವರು ತಮ್ಮ ಕೆಲಸ ಬರುವವರೆಗೆ ಅಲ್ಲಿ ಕುಳಿತುಕೊಳ್ಳಬೇಕಷ್ಟೆ. ಒಂದು ಸಭಾಕಾರ್ಯಕ್ರಮದ ಯಶಸ್ಸಿನಲ್ಲಿ ನಿರೂಪಕ ನಿರ್ಣಾಯಕ ಪಾತ್ರವಹಿಸುತ್ತಾನೆ ಎನ್ನುವುದನ್ನು ಅವರು ಗಮನದಲ್ಲಿಡಬೇಕು.

ಸಭಾಮರ್ಯಾದೆಗೆ ಧಕ್ಕೆ ತರುವ ಈ ಎಲ್ಲ ನಡವಳಿಕೆಗಳ ನಡುವೆ, ಮಾದರಿಯೆನಿಸುವ ಘಟನೆಯೊಂದನ್ನು ಇಲ್ಲಿ ಹೇಳಬೇಕು. ನಾನು ಧಾರವಾಡದಲ್ಲಿ ಸಿಎಸ್ಐ ಕಾಲೇಜಿನಲ್ಲಿ ಓದುತ್ತಿರುವಾಗ, ಕಾಲೇಜಿನ ಒಂದು ಕಾರ್ಯಕ್ರಮಕ್ಕೆ ಸಾಹಿತಿ ಸಿದ್ದಲಿಂಗ ಪಟ್ಟಣಶೆಟ್ಟಿಯವರನ್ನು ಅತಿಥಿಯಾಗಿ ಕರೆದಿದ್ದೆವು. ಅತಿಥಿಗಳಿಗೆ ಸ್ವಾಗತ ಕೋರುವ ಸಲುವಾಗಿ ತಾಜಾ ಹೂವಿನಿಂದ ತಯಾರಿಸಿದ ಒಂದು ಹಾರವನ್ನು ಅವರಿಗೆ ಹಾಕಲಾಯಿತು. ಸಿದ್ದಲಿಂಗ ಪಟ್ಟಣಶೆಟ್ಟಿಯವರು ಹಾರವನ್ನು ಪ್ರೀತಿಯಿಂದ ಹಾಕಿಸಿಕೊಂಡು ಕೈಮುಗಿದು ಕುಳಿತುಬಿಟ್ಟರು. ವಿದ್ಯಾರ್ಥಿಗಳಾದ ನಮಗೆ ಇದು ವಿಚಿತ್ರವೆನಿಸಿತು. ಸಾಮಾನ್ಯವಾಗಿ ಅತಿಥಿಗಳು ಹಾರವನ್ನು ಪೂರ್ತಿ ಕೊರಳಿಗೆ ಹಾಕಲು ಬಿಡುವುದೇ ಇಲ್ಲ. ಹಾರ ಹಾಕಲು ಬಂದವರ ಕೈಯನ್ನು ತಡೆದು, ಆ ಹಾರವನ್ನು ತಮ್ಮ ಕೈಗೆ ತೆಗೆದುಕೊಳ್ಳುವುದು ವಾಡಿಕೆ. ಹೆಚ್ಚೆಂದರೆ, ಹಾರ ಹಾಕಿದ ಕೂಡಲೇ ಅದನ್ನು ಕೊರಳಿನಿಂದ ತೆಗೆದು, ತಮ್ಮ ಮುಂದಿರುವ ಮೇಜಿನಮೇಲೆ ಇಟ್ಟುಬಿಡುತ್ತಾರೆ. ಹಾಗಾಗಿ, ನಮಗೆ ಪಟ್ಟಣಶೆಟ್ಟಿಯವರ ಈ ನಡೆ ವಿಚಿತ್ರವಾಗಿಯೂ, ಹಾಸ್ಯಮಯವಾಗಿಯೂ ತೋರಿತು. ನಾವು ಸುಮ್ಮನಿರಬೇಕಲ್ಲ! 'ಹೋ..' ಎಂದು ಅಪಹಾಸ್ಯ ಮಾಡುತ್ತಾ ಕಿರುಚಲಾರಂಭಿಸಿದೆವು. ಸಿದ್ದಲಿಂಗ ಪಟ್ಟಣಶೆಟ್ಟಿಯವರು, ಹಾಕಿದ ಹಾರವನ್ನು ತೆಗೆಯಲು ಮರೆತುಬಿಟ್ಟಿದ್ದಾರೆ ಎನ್ನುವುದು ನಮ್ಮ ಭಾವನೆಯಾಗಿತ್ತು. ಮುಂದೆ ಭಾಷಣದ ಸಮಯ ಬಂದಾಗ ಪಟ್ಟಣಶೆಟ್ಟಿಯವರು, ''ನಾನು ಹಾರ ಹಾಕಿಸಿಕೊಂಡಿರುವುದು ಮರೆತು ಹಾಗೆಯೇ ಕುಳಿತಿರುವುದಲ್ಲ, ನನಗಾಗಿ ನೀವುಗಳು ಹಣ ಖರ್ಚುಮಾಡಿ ಹಾರ ತಂದಿದ್ದೀರಿ. ನಿಮ್ಮ ಶ್ರಮವು ಸಾರ್ಥಕವಾಗಬೇಕು ಎನ್ನುವ ಕಾರಣಕ್ಕೆ ಗೌರವ ಸೂಚಕವಾಗಿ ಹಾರವನ್ನು ಕೊರಳಲ್ಲಿ ಇನ್ನೂ ಧರಿಸಿದ್ದೇನೆ. ನೀವು ತಂದ ಹಾರ, ನನ್ನ ಕೊರಳಿಗೇ ಹಾಕಲು ತಂದಿದ್ದು ಎಂದು ಭಾವಿಸಿದ್ದೇನೆ, ಕೈಗೆ ಹಾಕಲು ತಂದಿದ್ದಲ್ಲವಲ್ಲ ಅದು! ಹಾಗಾಗಿ, ನೀವು ಪ್ರೀತಿಯಿಂದ ನನಗಾಗಿ ತಂದ ಈ ಹಾರ ಕಾರ್ಯಕ್ರಮ ಮುಗಿಯುವವರೆಗೂ ನನ್ನ ಕೊರಳಲ್ಲೇ ಇರಲಿದೆ. ನೀವು ನನ್ನ ಕೊರಳಲ್ಲಿರುವ ಹಾರದ ಕುರಿತು ಹೆಚ್ಚು ಚಿಂತಿಸದೇ, ನನ್ನ ಭಾಷಣದ ಕಡೆಗೆ ಗಮನಕೊಡಿ'' ಎನ್ನುತ್ತಾ ತಮ್ಮ ಭಾಷಣವನ್ನು ಮುಂದುವರಿಸಿದ್ದರು. ಅವರು ಹೇಳಿದ ಹಾಗೆ ನಡೆದುಕೊಂಡರು ಕೂಡಾ. ಪಟ್ಟಣಶೆಟ್ಟಿಯವರ ಈ ನಡೆ, ವೇದಿಕೆಗಳಲ್ಲಿ ಅತಿಥಿಗಳಾಗುವವರಿಗೆ ಮಾದರಿಯಾಗುವ ಪ್ರಶಂಸನಾರ್ಹವಾದ ನಡೆಯಾಗಿತ್ತು.

ಇನ್ನು ಅತಿಥಿಗಳ ಭಾಷಣಗಳ ವಿಷಯಕ್ಕೆ ಬರುವುದಾದರೆ, ಅದು ಅಂದಿನ ಕಾರ್ಯಕ್ರಮಕ್ಕೆ ಪ್ರಸ್ತುತವೂ, ಸಂಕ್ಷಿಪ್ತವೂ ಮತ್ತು ಔಚಿತ್ಯಪೂರ್ಣವೂ ಆಗಿರಬೇಕಾಗುತ್ತದೆ. ಔಚಿತ್ಯವನ್ನು ಬಿಟ್ಟು ಆಡುವ ಮಾತುಗಳು, ಮಾತುಗಾರನಿಗೂ ಹಾಗೂ ಆ ಕಾರ್ಯಕ್ರಮಕ್ಕೂ ಅಗೌರವವಾಗಿ ತೋರ್ಪಡುತ್ತದೆ. ಕೆಲವು ಕಾರ್ಯಕ್ರಮಗಳಲ್ಲಿ ತಮಗೆ ಸಿಕ್ಕಿದ್ದೇ ಅವಕಾಶವೆಂದು ಭಾವಿಸಿ ತಾಸುಗಟ್ಟಲೇ ಕೊರೆಯುವವರನ್ನು ನಾವು ನೋಡುತ್ತೇವೆ. ಈತ ಯಾವಾಗ ಭಾಷಣವನ್ನು ಮುಗಿಸುತ್ತಾನಪ್ಪಾ! ಎಂದು ಪ್ರೇಕ್ಷಕರು ಆಕಳಿಸುವಂತಾಗಿಬಿಡುತ್ತದೆ. ಇನ್ನು ಕೆಲವು 'ಭಾಷಣಕೋರರು' ವೇದಿಕೆಯ ಮೇಲಿರುವ ಸಹ ಅತಿಥಿಗಳಿಗೆ ಮುಜುಗರವಾಗುವ ಅಥವಾ ನೋವಾಗುವ ಹಾಗೆ ಮಾತಾಡುವುದೂ ಇದೆ. ಹಾಗೆ ಮುಜುಗರ ಪಟ್ಟುಕೊಂಡವರು ತಮ್ಮ ಪಾಳಿಬಂದಾಗ ಮೊದಲು ಮಾತಾಡಿದವರ ಕಾಲೆಳೆಯಬೇಕಾಗುತ್ತದೆ. ಹೀಗೆ, ಸಭೆಯಲ್ಲಿ ಬೇಡದ ಮಾತುಗಳನ್ನಾಡಿ ರಾಜಕಾರಣಿಗಳು ವಿವಾದಕ್ಕೀಡಾಗುವುದನ್ನೂ ನಾವು ನಿತ್ಯ ನೋಡುತ್ತೇವೆ.

ಭಾಷಣಕಾರನೊಬ್ಬ ತಿಳಿದುಕೊಳ್ಳಬೇಕಾದ ಇನ್ನೊಂದು ಪ್ರಮುಖ ಸಂಗತಿಯೆಂದರೆ, ಪೂರ್ವತಯಾರಿ ಮಾಡಿಕೊಂಡು ಬಂದು ಮಾತಾಡಬೇಕು ಎನ್ನುವುದು. ಈ ವಿಷಯಕ್ಕೆ ಸರ್ ಎಂ. ವಿಶ್ವೇಶ್ವರಯ್ಯನವರು ಎಲ್ಲ ಭಾಷಣಕಾರರಿಗೂ ಮಾದರಿಯಾಗುತ್ತಾರೆ. ಒಮ್ಮೆ ಅವರು ತಮ್ಮ ಹುಟ್ಟೂರಿಗೆ ಹೋಗಿದ್ದರಂತೆ. ಇವರು ಬಂದ ಸುದ್ದಿ ತಿಳಿದು, ಅಲ್ಲಿಯ ಸರಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ಅವರನ್ನು ಕಂಡು, ಈಗಲೇ ತಮ್ಮ ಶಾಲೆಗೆ ಆಗಮಿಸಿ ಮಕ್ಕಳಿಗೆ ನಾಲ್ಕು ಹಿತವಚನಗಳನ್ನು ಹೇಳಬೇಕೆಂದು ಒತ್ತಾಯಿಸಿದರಂತೆ. ಅವರ ಒತ್ತಾಯಕ್ಕೆ ಮಣಿದು, ವಿಶ್ವೇಶ್ವರಯ್ಯನವರು ಶಾಲೆಗೆ ತೆರಳಿ ಮಕ್ಕಳಿಗೆ ನಾಲ್ಕು ಪ್ರೋತ್ಸಾಹಪೂರ್ವಕ ಮಾತುಗಳನ್ನಾಡಿದರಂತೆ. ಆದರೆ, ವಿಶ್ವೇಶ್ವರಯ್ಯನವರಿಗೇಕೋ ಸಮಾಧಾನವಾಗಲಿಲ್ಲ. ತಾವು ಆ ಮಕ್ಕಳಿಗೆ ನ್ಯಾಯ ಸಲ್ಲಿಸಿದಂತಾಗಲಿಲ್ಲ ಎನಿಸಿತು. ಮುಖ್ಯೋಪಾಧ್ಯಾಯರನ್ನು ಕರೆದು, ಮರುದಿನ ಮತ್ತೆ ಶಾಲೆಯಲ್ಲಿ ತಮ್ಮ ಭಾಷಣವನ್ನು ಏರ್ಪಡಿಸುವಂತೆ ಸೂಚಿಸಿದರಂತೆ. ರಾತ್ರಿಯೆಲ್ಲಾ ಕುಳಿತು, ಮಕ್ಕಳಿಗೆ ಹೇಳಬೇಕಾದ ವಿಚಾರಗಳನ್ನು ಅಧ್ಯಯನ ಮಾಡಿ, ಮರುದಿನ ತಮ್ಮ ಭಾಷಣವನ್ನು ವ್ಯವಸ್ಥಿತವಾಗಿ ಪ್ರಸ್ತುತಪಡಿಸಿದ್ದರಂತೆ. ತನ್ನ ಪ್ರೇಕ್ಷಕರ ಕುರಿತು ಭಾಷಣಕಾರನಿಗೆ ಈ ಮಟ್ಟದ ಬದ್ಧತೆ ಇರಬೇಕಾಗುತ್ತದೆ.

ಹೀಗೆ, ಒಂದು ಸಭಾಕಾರ್ಯಕ್ರಮವನ್ನು ಯೋಜಿಸಿ, ಎಲ್ಲೂ ಆಭಾಸವಾಗದೇ ಅದು ಸಾದ್ಗುಣ್ಯತೆಯನ್ನು ಹೊಂದುವುದು ಸುಲಭದ ಮಾತಲ್ಲ. ಉತ್ತಮ ಯೋಚನೆ ಮತ್ತು ಅಗತ್ಯ ಪೂರ್ವಯೋಜನೆ ಇರುವ ಸುಮನಸ್ಕ ಆಯೋಜಕನಿಗೆ ಮಾತ್ರ ಇದು ಸಾಧ್ಯವಾಗುವಂಥಾ ಕೆಲಸ. ಸರ್ವಾಂಗ ಸುಂದರವಾದ ಹಾಗೂ ಸುವ್ಯವಸ್ಥಿತವಾಗಿ ಮೂಡಿಬರುವ ಒಂದು ಸಭಾಕಾರ್ಯಕ್ರಮವನ್ನು ಉದಾಹರಿಸುವುದಾದರೆ, ನಮ್ಮ ವಿಶ್ವೇಶ್ವರ ಭಟ್ಟರ ಸಾರಥ್ಯದ 'ವಿಶ್ವವಾಣಿ' ಬಳಗದವರು ಆಯೋಜಿಸುವ ಕಾರ್ಯಕ್ರಮಗಳನ್ನು ನೋಡಬೇಕು. ಅಲ್ಲಿ ಸಭಾಮರ್ಯಾದೆ ಅಥವಾ ಪಾವಿತ್ರ್ಯವನ್ನು ಸರ್ವಥಾ ಕಾಪಾಡಲಾಗುತ್ತದೆ. ಸಭ್ಯ ಸಭಾಸದರು ಹಾಗೂ ಪ್ರಬುದ್ಧ ಅತಿಥಿಗಳು ಭಟ್ಟರ ಕಾರ್ಯಕ್ರಮದಲ್ಲಿ ನಮಗೆ ನೋಡಸಿಗುತ್ತಾರೆ. ರಾಜಕಾರಣಿಗಳು, ಧರ್ಮಾಧಿಕಾರಿಗಳು, ಅಂಕಣಕಾರರು, ಸಾಹಿತಿಗಳು ಹಾಗೂ ಪತ್ರಕರ್ತರು ಹೀಗೆ ಎಲ್ಲರೂ ತಮ್ಮ ಭೇದ-ವೈರವನ್ನು ಮರೆತು ಅಲ್ಲಿ ಸಮಾಹಿತರಾಗುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ, ಅಚ್ಚುಕಟ್ಟುತನ, ಆಡಂಬರ ರಹಿತವಾದ ಶಿಸ್ತು ಮತ್ತು ಆತ್ಮೀಯ ವಾತಾವರಣ, ಸಮಯಪಾಲನೆ, ಪ್ರೀತಿಯ ಆತಿಥ್ಯ ಅಲ್ಲಿ ನೋಡಲು ಸಿಗುತ್ತದೆ. ಈ ಕಾರ್ಯಕ್ರಮಕ್ಕೆ ಬಂದ ಉದ್ದೇಶ ಸಾರ್ಥಕವಾಯಿತು ಎನ್ನುವ ಭಾವನೆ, ಅತಿಥಿಗಳನ್ನೂ ಸೇರಿ ಕಾರ್ಯಕ್ರಮಕ್ಕೆ ಆಗಮಿಸಿದವರೆಲ್ಲರಲ್ಲೂ ಮೂಡುತ್ತದೆ.

ಸರ್ವಸಂಗ ಪರಿತ್ಯಾಗಿಯೇ ವ್ಯಾಮೋಹಕ್ಕೆ ಹಾಸಿಗೆ ಹಾಸಿದಾಗ...



ರಸದೌತಣ
ಯಗಟಿ ರಘು ನಾಡಿಗ್
vveditoped@gmail.com
naadigru@gmail.com

ಭಾಗ-14

ಅಮಾಯಕಿ ಶಾರದೆಗೆ ಒದಗಿದ ನೋವಿನ ಕಥೆಯನ್ನು ಅವಧೂತರಿಂದ ಕೇಳುತ್ತಿದ್ದ ಶಿಷ್ಯರಲ್ಲೊಬ್ಬರು ಕೊಂಚ ವ್ಯಗ್ರರಾಗಿದ್ದರು. ''ಸರ್ವಸಂಗ ಪರಿತ್ಯಾಗಿಯಾಗಿ ಇರಬೇಕಾಗಿದ್ದ ಮಠದ ಸ್ವಾಮೀಜಿ ತನ್ನ ಕಾವಿಯನ್ನು ಕೊಂಚ ಸಡಿಲಿಸಿದ್ದೇ ಅಪಸವ್ಯದ ಮುಂದುವರಿಕೆಗೆ ಮುನ್ನುಡಿಯಾಯಿತು'' ಎಂಬ ಅವಧೂತರ ಮಾತು ಇದಕ್ಕೆ ಕಾರಣ. ತೀವ್ರ ಉಸಿರಾಟದಿಂದ ಕೂಡಿದ್ದ ಆ ಶಿಷ್ಯರ ದೇಹಭಾಷೆಯು ಅವರ ವ್ಯಗ್ರತೆಯನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸುತ್ತಿತ್ತು. ''ಕೊಂಚ ಶಾಂತತೆಯನ್ನು ಕಾಯ್ದುಕೊಳ್ಳಿ, ಆ 'ಧರ್ಮಸೂಕ್ಷ್ಮದ ಉಲ್ಲಂಘನೆ'ಯ ಕುರಿತು ವಿವರಿಸುವೆ'' ಎನ್ನುತ್ತಾ ಅವಧೂತರು ತಲೆ ನೇವರಿಸಿ ಸಮಾಧಾನಿಸಿದ್ದರೂ ಆ ಶಿಷ್ಯರ ವ್ಯಗ್ರತೆ ತಹಬಂದಿಗೆ ಬಂದಿರಲಿಲ್ಲ.

ಹಾಗಂತ ಅವಧೂತರೂ ಒಂದೇ ಉಸಿರಿಗೆ ಕಥೆಯನ್ನು ಮುಂದುವರಿಸಿಬಿಡುವ ಧಾವಂತವನ್ನು ತೋರಲಿಲ್ಲ. ಕೆಸರಿನಂತೆ ರಾಡಿಯಾಗಿದ್ದ ಶಿಷ್ಯರ ಮನವು ಮಣ್ಣನ್ನು ಕೆಳಕ್ಕೆ ತಳ್ಳಿ ತಿಳಿಯಾಗಲಿ ಎಂದು ಅವರು ಕಾಯುತ್ತಿದ್ದರು. ಅದು ಕೆಲವೇ ಕ್ಷಣವಷ್ಟೇ. ಆ ಶಿಷ್ಯರ ಮನದಲ್ಲಿ ಭುಗಿಲೆದ್ದಿದ್ದ ಬಿರುಗಾಳಿ ಶಮನವಾಯಿತು. ಅವಧೂತರು ಕಥೆಯನ್ನು ಮುಂದುವರಿಸಿದರು...

''ನೋಡ್ರಯ್ಯಾ, ವ್ಯಕ್ತಿಯೊಬ್ಬ ಆಯ್ದುಕೊಂಡಿರುವ ಕಸುಬು ಯಾವುದೇ ಇರಲಿ, ಆತನ ಕಾರ್ಯಕ್ಷೇತ್ರ ಎಂಥದ್ದೇ ಇರಲಿ, ಅದಕ್ಕೆ ತಳಹದಿಯಾಗಿ ಅದರದೇ 'ಧರ್ಮ' ಮತ್ತು 'ಧರ್ಮಸೂಕ್ಷ್ಮ' ಅಂತ ಇರುತ್ತವೆ. ಇದನ್ನು ಪ್ರತಿಯೊಬ್ಬರೂ ಮನವರಿಕೆ ಮಾಡಿಕೊಂಡಿರಬೇಕು. ತಳಹದಿಯಾಗಿರುವ ಈ ನಿಯಮಗಳಿಂದ ವಿಮುಖವಾದರೆ ಅಥವಾ ಅವುಗಳ ಅನುಸರಣೆಯಲ್ಲಿ ನಿರ್ಲಕ್ಷ್ಯ ತೋರಿದರೆ ಅಪಾಯ ಕಟ್ಟಿಟ್ಟಬುತ್ತಿ. ಈಗ ಮಠದ ಸ್ವಾಮೀಜಿಯ ವಿಷಯವನ್ನೇ ತೆಗೆದುಕೊಳ್ಳಿ. 'ಸರ್ವಸಂಗ ಪರಿತ್ಯಾಗ'ದ ಪರಿಕಲ್ಪನೆಯನ್ನು ಅಪ್ಪಿಕೊಳ್ಳಬೇಕಾದವರು ಇಂಥ ಕಾವಿಧಾರಿ ಸ್ವಾಮಿಗಳು. ಲೌಕಿಕ ಬದುಕಿನಿಂದ, ಅಂದರೆ ಪ್ರಾಪಂಚಿಕ ವಸ್ತುಗಳ ಮೇಲಿನ ಆಸಕ್ತಿಯಿಂದ ಮತ್ತು ಕೌಟುಂಬಿಕ ಸಂಬಂಧಗಳಿಂದ ದೂರವಿದ್ದು ಆಧ್ಯಾತ್ಮಿಕ ಅನ್ವೇಷಣೆಯಲ್ಲಿ ತೊಡಗುವುದು ಇಂಥವರ ಉಸಿರಾಗಬೇಕು. ಸನ್ಯಾಸಾಶ್ರಮವನ್ನು ಸ್ವೀಕರಿಸಿದವರು ತಮ್ಮ ಪೂರ್ವಾಶ್ರಮದ ಕುಟುಂಬಿಕರು ಮತ್ತು ಇತರ ಬಂಧುಗಳ ಮೇಲಿನ ವ್ಯಾಮೋಹವನ್ನು ಕಿತ್ತೊಗೆಯಬೇಕು, ತ್ಯಾಗ ಮತ್ತು ವೈರಾಗ್ಯವೇ ಅವರ ಲಾಂಛನವಾಗಬೇಕು. ಸಾಂಪ್ರದಾಯಿಕ ಶಿಕ್ಷಣ, ಶಾಸ್ತ್ರಗಳ ಅಧ್ಯಯನ, ವಿಶಿಷ್ಟ ವಿಷಯಗಳನ್ನು ಕಡೆದು ಜ್ಞಾನದ ನವನೀತವನ್ನು ದಕ್ಕಿಸಿಕೊಳ್ಳುವಿಕೆ ಮತ್ತು ಉಪನ್ಯಾಸದ ವೇಳೆ ಕೇಳುಗರ ಎದುರು ಅದನ್ನು ಹದವಾಗಿ ಮಂಡಿಸಬಲ್ಲ ಪ್ರಾವೀಣ್ಯ, ಸಂದರ್ಭಾನುಸಾರ ಮತ್ತು ವಿಷಯಾನುಸಾರ ಹೊಮ್ಮಬೇಕಾದ ವಾಕ್ಪಟುತ್ವ ಈ ಎಲ್ಲ ಬಾಬತ್ತುಗಳಲ್ಲೂ ಈ ಸ್ವಾಮೀಜಿ ಪರಿಣತರೇ ಆಗಿದ್ದರು. ಆದರೆ, ಒಂದು ವಿಷಯದಲ್ಲಿ ಮಾತ್ರ ಸ್ವಾಮೀಜಿ ಎಡವಿಬಿಟ್ಟರು; ಅವರು ಹಾಗೆ ಕೆಲಕಾಲದವರೆಗೆ ಕಾವಿಯನ್ನು ಸಡಿಲಿಸಿದ್ದೇ ಸಂಸ್ಥೆಯ ಆವರಣದಲ್ಲಿ 'ಅಪಸವ್ಯ'ದ ಮುಂದುವರಿಕೆಗೆ ಮೂಲವಾಯಿತು...'' ಎಂದು ಹೇಳಿ ಅರೆಕ್ಷಣ ನಿಲ್ಲಿಸಿದರು.

'ಸ್ವಾಮೀಜಿ ಕೆಲ ಕಾಲದವರೆಗೆ ಕಾವಿಯನ್ನು ಸಡಿಲಿಸಿಬಿಟ್ಟರು' ಎಂಬ ತಮ್ಮ ಮಾತನ್ನು ಶಿಷ್ಯರು 'ಯಾವ ನೆಲೆಯಲ್ಲಿ' ಗ್ರಹಿಸುತ್ತಾರೆ ಎಂಬುದನ್ನು ಅಳೆಯುವುದು ಅವಧೂತರ ಇರಾದೆಯಾಗಿತ್ತು. ಹೀಗಾಗಿ, ಎಲ್ಲ ಶಿಷ್ಯರ ಮುಖವನ್ನೂ ಒಮ್ಮೆ ಅವಲೋಕಿಸಿಕೊಂಡು ಬಂದರು. ಕೆಲ ಹೊತ್ತಿನ ಮುಂಚೆ ವ್ಯಗ್ರರಾಗಿದ್ದ ಶಿಷ್ಯರು ಏನನ್ನೋ ಹೇಳಲು ತವಕಿಸುತ್ತಿದ್ದುದನ್ನು ಕಂಡು, ಮಾತಾಡುವಂತೆ ಸೂಚಿಸಿದರು ಅವಧೂತರು.

''ಸ್ವಾಮೀಜಿ ಕೆಲ ಕಾಲದವರೆಗೆ ಕಾವಿಯನ್ನು ಸಡಿಲಿಸಿಬಿಟ್ಟರು ಅಂದರೆ, ಸನ್ಯಾಸ ಧರ್ಮದ ಮಿಕ್ಕೆಲ್ಲ ಆಯಾಮಗಳಲ್ಲೂ ಪರಿಣತರಾಗಿದ್ದ ಸ್ವಾಮೀಜಿ, ಕಾಮವನ್ನು ಗೆಲ್ಲುವಲ್ಲಿ ವಿಫಲರಾದರು ಅಂತ ಅಲ್ಲವೇ ಗುರುಗಳೇ? ಹೀಗಾಗಿ, ಶಾರದೆಯ ಮೇಲೆ ಕಣ್ಣುಹಾಕಿದ ರಣಹದ್ದಿನಿಂದ ಶುರುವಾದ ಅಪಸವ್ಯವನ್ನು ಅವರು ಮುಂದುವರಿಸಿದರು ಅಂತ ಅರ್ಥ ತಾನೇ?'' ಎಂದು ಆ ಶಿಷ್ಯರು ಮನದಾಳದ ಮಾತಿಗೆ ದನಿಯಾದರು.

ಈ ಮಾತಿಗೆ ಲಘುವಾಗಿ ನಕ್ಕ ಅವಧೂತರು, ''ನಿಮ್ಮ ಮನವನ್ನು ಪೂರ್ವಗ್ರಹಪೀಡಿತ ಭಾವನೆ ಆವರಿಸಿದಂತಿದೆ. 'ಸ್ವಾಮೀಜಿ ಕೆಲ ಕಾಲದವರೆಗೆ ಕಾವಿಯನ್ನು ಸಡಿಲಿಸಿಬಿಟ್ಟರು' ಎಂದಮಾತ್ರಕ್ಕೆ ಅವರೂ ಶಾರದೆಯ ಮೇಲೆ ಕಣ್ಣುಹಾಕಿದರು ಎಂದೇಕೆ ನೀವು ಅರ್ಥೈಸಿಕೊಳ್ಳಬೇಕು? ಸನ್ಯಾಸಧರ್ಮದಲ್ಲಿ ಸೂಚಿಸಲಾಗಿರುವ ನಿಯಮಗಳ ಪೈಕಿ ಒಂದನ್ನು ಅನುಸರಿಸದಿದ್ದರೂ ಕಾವಿಯನ್ನು ಸಡಿಲಿಸಿದಂತೆಯೇ ಎಂದೇಕೆ ನೀವು ಭಾವಿಸಲಿಲ್ಲ? 'ಸಡಿಲಿಸಿಬಿಟ್ಟರು' ಎಂಬ ಪದವನ್ನು ನಾನು ಬಳಸಿದ ಮಾತ್ರಕ್ಕೆ 'ಸ್ವಾಮೀಜಿ ಲೈಂಗಿಕ ತೃಷೆಯನ್ನು ಈಡೇರಿಸಿಕೊಳ್ಳಲು ಹಾತೊರೆದರು' ಎಂದೇಕೆ ನೀವು ಭಾವಿಸಬೇಕು?'' ಎಂದು ಆ ಶಿಷ್ಯರಿಗೆ ಚುರುಕು ಮುಟ್ಟಿಸಿದರು.

ಈ 'ಶಾಕ್'ನಿಂದ ಗೊಂದಲಗೊಂಡ ಆ ಶಿಷ್ಯರು, ''ಹಾಗಾದರೆ ಸ್ವಾಮೀಜಿಯಿಂದ ಅಪಚಾರ ಆಗಿಲ್ಲವೇ? ಸಂಸ್ಥೆಯಲ್ಲಿ ತೂರಿಕೊಂಡಿರುವ ಕಳ್ಳಬೆಕ್ಕುಗಳಲ್ಲಿ ಅವರೂ ಒಬ್ಬರು ಎಂದು ನಾವು ಪರಿಗಣಿಸುವಂತಿಲ್ಲವೇ? ಅವರಿಂದ ತಪ್ಪಾಗಿಲ್ಲ ಎಂದಾದರೆ, ಶಿವರಾತ್ರಿಯ ಜಾಗರಣೆಯ ಸಂದರ್ಭದಲ್ಲಿ ನೀವು ಸೂಚಿಸಿದಂತೆ ಉನ್ನತ ವ್ಯಾಸಂಗಕ್ಕೆ ವಾರಾಣಸಿಗೆ ತೆರಳುವ ಬದಲು ಅವರು ತಪ್ಪೊಪ್ಪಿಕೊಳ್ಳಲು ಈ ಮನೆಯವರೆಗೆ ನಿಮ್ಮನ್ನು ಹುಡುಕಿಕೊಂಡು ಬಂದಿದ್ದೇಕೆ, ಏಕಾಂತದಲ್ಲಿ ಮಾತಾಡಲು ಅವಕಾಶ ನೀಡುವಂತೆ ಕೋರಿದ್ದೇಕೆ? ಮಾತು ಮುಗಿದ ನಂತರ ಇಲ್ಲಿಂದ ತೆರಳುವಾಗ ಅವರ ಕಂಗಳು ನೀರಾಡಿದ್ದೇಕೆ? ಅದೆಲ್ಲಾ ಇರಲಿ, ಸ್ವಲ್ಪ ಹೊತ್ತಿಗೆ ಮುಂಚೆ ನೀವು ಹೇಳಿದ 'ತಪ್ಪೆಸಗಿದ್ದು ಮರಿಪುಢಾರಿ ಮಾತ್ರವೇ ಅಲ್ಲ, ಸ್ವಾಮೀಜಿ, ಮ್ಯಾನೇಜರ್, ಅಡುಗೆಭಟ್ಟ ಮುಂತಾದವರೂ ಎಡವಿದ್ದಾರೆ' ಎಂಬ ಮಾತಿನ ಅರ್ಥವೇನು ಗುರುಗಳೇ?'' ಎಂದು ಒಂದೇ ಉಸಿರಿನಲ್ಲಿ ಪ್ರಶ್ನಿಸಿದರು.

ಒಮ್ಮೆ ನೀಳವಾಗಿ ಉಸಿರೆಳೆದುಕೊಂಡ ಅವಧೂತರು, ''ಅಯ್ಯಾ ಗಮನವಿಟ್ಟು ಕೇಳಿಸಿಕೊಳ್ಳಿ. 'ಸರ್ವಸಂಗ ಪರಿತ್ಯಾಗಿ' ಎನಿಸಿಕೊಂಡವನು ಪೂರ್ವಾಶ್ರಮದ ಕುಟುಂಬಿಕರು ಮತ್ತು ಬಂಧುಗಳ ಮೇಲಿನ ವ್ಯಾಮೋಹವನ್ನೂ, ಪ್ರಾಪಂಚಿಕ ವಸ್ತುಗಳ ಮೇಲಿನ ಆಸಕ್ತಿಯನ್ನೂ ಕಿತ್ತೊಗೆಯಬೇಕು ಎಂದು ಕೆಲ ಕ್ಷಣಗಳ ಮುಂಚೆ ನಾನು ಹೇಳಿದೆನಲ್ಲವೇ? ಮಠದ ಸ್ವಾಮೀಜಿ ಎಡವಿದ್ದು ಈ ಬಾಬತ್ತುಗಳಲ್ಲೇ. ಅವರು ಸಾಕಷ್ಟು ವಿದ್ಯಾವಂತರೇ, ಶಾಸ್ತ್ರಪಾರಂಗತರೇ. ಸನ್ಯಾಸ ಸ್ವೀಕಾರಕ್ಕೆ ಸಂಬಂಧಿಸಿದ ಮಿಕ್ಕೆಲ್ಲ ಅರ್ಹತೆಗಳನ್ನೂ ಹೊಂದಿದ್ದ ಇವರಲ್ಲಿ ಕುಟುಂಬ ವ್ಯಾಮೋಹವಿನ್ನೂ ಮನೆಮಾಡಿತ್ತು, ವೈರಾಗ್ಯವೆಂಬುದು ಮನದಲ್ಲಿ ಪರಿಪೂರ್ಣವಾಗಿ ಕೆನೆಗಟ್ಟಿರಲಿಲ್ಲ, ಪ್ರಾಪಂಚಿಕ ವಸ್ತುಗಳ ಮೇಲಿನ ಆಸಕ್ತಿ ತಗ್ಗಿರಲಿಲ್ಲ. ಅವರ ಕಾವಿ ಸಡಿಲಗೊಂಡಿದ್ದು ಈ ವಿಷಯಗಳಲ್ಲಿ. ಸಂಸ್ಥೆಯ ಆವರಣದಲ್ಲಿ ಹೂವಾಗಿ ಅರಳಬೇಕಿದ್ದ ಶಾರದೆಯ ಮೇಲೆ ರಣಹದ್ದುಗಳ ದೃಷ್ಟಿ ಬೀಳುವಂತಾಗುವುದಕ್ಕೆ ಇದು ಉತ್ತೇಜನ ನೀಡಿತು'' ಎಂದರು. ಶಿಷ್ಯರಲ್ಲಿದ್ದ ಗೊಂದಲ ಮತ್ತಷ್ಟು ಹೆಚ್ಚಾಯಿತು. ಅವರು ತವಕದಿಂದ ಅವಧೂತರೆಡೆಗೆ ಬಾಗಿ, ''ಅಂದರೆ ಗುರುಗಳೇ? ಸ್ಪಷ್ಟವಾಗಲಿಲ್ಲ..'' ಎಂದರು.

ಆ ಶಿಷ್ಯರ ಆಸಕ್ತಿಯಿಂದ ಉತ್ತೇಜಿತರಾದ ಅವಧೂತರು, ''ನೋಡ್ರಯ್ಯಾ, ಮಠ-ಮಾನ್ಯಗಳು ಸಾರ್ವಜನಿಕರಿಂದ, ಅವರು ನೀಡುವ ದವಸ-ಧಾನ್ಯ, ಕಾಣಿಕೆ-ದೇಣಿಗೆಗಳಿಂದ ನಡೆಯಬೇಕು, ಬೆಳೆಯಬೇಕು ಅನ್ನೋದೇನೋ ನಿಜವೇ. ಆದರೆ ಹಾಗೆ ಕೊಡುಗೆ-ದೇಣಿಗೆಗಳನ್ನು ಸ್ವೀಕರಿಸುವಾಗಲೂ ಸಂಬಂಧಪಟ್ಟವರಲ್ಲಿ ವಿವೇಚನೆ ಇರಬೇಕು. ಆದರೆ ಈ ಸ್ವಾಮೀಜಿಯೋ ರಾತ್ರೋರಾತ್ರಿ ಮಠದ ಉದ್ಧಾರವಾಗಬೇಕು ಎಂಬ ಹುಕಿಯಲ್ಲಿ, ಹಲವು ವಿರೋಧಗಳ ನಡುವೆಯೂ, ಪಟ್ಟಣದ ಆ ಹಿರಿಯ ರಾಜಕಾರಣಿಯಿಂದ ಹರಿದುಬರುವ ಹಣಕ್ಕೆ ಕೈಯೊಡ್ಡಿಬಿಟ್ಟರು. ಆತನ ಅಗಾಧ ಸಂಪಾದನೆಯ ಮೂಲ ಯಾವುದು ಎಂಬುದನ್ನು ತರ್ಕಿಸುವ ಗೋಜಿಗೇ ಅವರು ಹೋಗಲಿಲ್ಲ. ಅದಾಗಿದ್ದೇ ಆಗಿದ್ದು, ಆತನ ದಾಕ್ಷಿಣ್ಯಕ್ಕೆ ಸ್ವಾಮೀಜಿ ಸಿಲುಕಿದರು. ಇದು ಮೊದಲನೇ ಎಡವಟ್ಟು. ಇನ್ನು ಎರಡನೆಯದಾಗಿ, ಸನ್ಯಾಸ ಸ್ವೀಕಾರದ ನಂತರವೂ 'ಬಂಧು-ವ್ಯಾಮೋಹ'ದ ಜೇಡರಬಲೆಯಿಂದ ಬಿಡಿಸಿಕೊಳ್ಳುವುದರ ಬದಲಿಗೆ ತಾವೇ ಅದರಲ್ಲಿ ಸಿಲುಕಿದ ನೊಣವಾಗಿಬಿಟ್ಟರು. ಮಠದ ಸ್ವಾಮೀಜಿಯಾಗಿ ತಮಗೆ ಹಂತಹಂತವಾಗಿ ದಕ್ಕತೊಡಗಿದ ಪ್ರಭಾವ ಮತ್ತು ವರ್ಚಸ್ಸನ್ನು ಮೂಲಧನವಾಗಿ ಇಟ್ಟುಕೊಂಡು, ಒಂದಷ್ಟು ಪ್ರಾಪಂಚಿಕ ವಿಷಯಗಳಲ್ಲಿ ಮೂಗು ತೂರಿಸತೊಡಗಿದರು. ಸಂಸ್ಥೆಗೊಬ್ಬ ಮ್ಯಾನೇಜರ್‌ರನ್ನು ನೇಮಕ ಮಾಡಿಕೊಳ್ಳುವ ವಿಷಯ ಚರ್ಚೆಗೆ ಬಂದಾಗ, ಪತ್ರಿಕೆಯಲ್ಲಿ ಜಾಹೀರಾತು ನೀಡಿ, ಅದಕ್ಕೆ ಓಗೊಟ್ಟು ಬಂದವರ ಪೈಕಿ ಅರ್ಹರನ್ನು ಆ ಹುದ್ದೆಗೆ ಆಯ್ಕೆಮಾಡಬೇಕು ಎಂಬ ಹಲವರ ಅಪೇಕ್ಷೆ ಮತ್ತು ನಿರೀಕ್ಷೆಯನ್ನು ಕಡೆಗಣಿಸಿ, ತಮ್ಮ ಪೂರ್ವಾಶ್ರಮದ ಬಂಧುವೊಬ್ಬನನ್ನು ಆ ಹುದ್ದೆಯಲ್ಲಿ ಪ್ರತಿಷ್ಠಾಪಿಸಬೇಕೆಂದು ಹಠ ಹಿಡಿದರು. ಸ್ವಾಮೀಜಿಯ ಪ್ರಭಾವ ಮತ್ತು ವರ್ಚಸ್ಸಿನ ಬಲದಿಂದಾಗಿ ಅದಾಗಲೇ ಸಾಕಷ್ಟು ಮಂದಿ ಮಠಕ್ಕೆ ಅನುಯಾಯಿಗಳಾಗಿದ್ದರಿಂದ, ಅವರ ಈ ಹಠಕ್ಕೆ ಎದುರಾಡಲು ಸಂಸ್ಥೆಯ ಮಿಕ್ಕವರಿಗೆ ಆಗಲಿಲ್ಲ. ಹೀಗಾಗಿ, ಶಾಸ್ತ್ರ ಪಾರಂಗತರಾಗಿದ್ದರೂ ಆ ಸ್ವಾಮೀಜಿಯು ಆಧ್ಯಾತ್ಮಿಕ ವಿಷಯಗಳಲ್ಲಿ ತೊಡಗಿಸಿಕೊಂಡು ಭಕ್ತರಲ್ಲಿ ಅರಿವು ಮೂಡಿಸುವುದರ ಬದಲಿಗೆ, ಕಾವಿಯಲ್ಲಿದ್ದುಕೊಂಡೇ ಇಂಥ 'ಲೌಕಿಕ' ವ್ಯವಹಾರಗಳಲ್ಲಿ ಹೆಚ್ಚೆಚ್ಚು ವ್ಯಸ್ತರಾಗುವಂತಾಯಿತು...'' ಎಂದು ವಿವರಿಸಿ ನೀಳವಾಗಿ ಉಸಿರೆಳೆದುಕೊಂಡರು.

ಅಲ್ಲಿಯವರೆಗೂ ಮೌನವಾಗಿದ್ದುಕೊಂಡೇ ಕಥೆಗೆ ಕಿವಿಯಾಗಿದ್ದ ಮತ್ತೊಬ್ಬ ಶಿಷ್ಯರು ''ಆದರೆ, ಸ್ವಾಮೀಜಿಯ ಈ ಚಟುವಟಿಕೆಗಳಿಗೂ, ಅಮಾಯಕಿ ಶಾರದೆಯ ಮೇಲೆ ರಣಹದ್ದಿನ ಕಣ್ಣು ಬೀಳುವುದಕ್ಕೂ ಏನು ಸಂಬಂಧ ಗುರುಗಳೇ?'' ಎಂದು ಕುತೂಹಲಭರಿತರಾಗಿ ಪ್ರಶ್ನಿಸಿದರು.

ಆಗ ಅವಧೂತರು, ''ಅಲ್ಲೇ ಇರೋದು ಸೂಕ್ಷ್ಮ. ಸ್ವಾಮೀಜಿ ತಮ್ಮ 'ಕಾವಿ'ಯನ್ನು ಕೆಲಮಟ್ಟಿಗೆ ಹೀಗೆ ಸಡಿಲಬಿಟ್ಟಿದ್ದಕ್ಕೇ ಅವರ ಪೂವಾಶ್ರಮದ ಬಂಧುವು ಸಂಸ್ಥೆಯ ಮ್ಯಾನೇಜರ್ ಆಗುವಂತಾಯಿತು. ಅಷ್ಟೇ ಆಗಿದ್ದರೆ ಹೋಗಲಿ ಎನ್ನಬಹುದಿತ್ತೇನೋ? ಆದರೆ ಆ ಮ್ಯಾನೇಜರ್ ಮಹಾಶಯನು ಸ್ವಾರ್ಥಕ್ಕೆ ಸಿಲುಕಿ ಕೆಲಕಾಲ ತನ್ನ ಕರ್ತವ್ಯಪ್ರಜ್ಞೆಯನ್ನು ಮರೆತ ಕಾರಣ, ಅಡುಗೆಭಟ್ಟ 'ನಳಪಾಕ', ಹಿರಿಯ ರಾಜಕಾರಣಿಯ ಮಗ 'ಮರಿ ಪುಢಾರಿ' ಮುಂತಾದವರು ಮಠದ ಆವರಣದೊಳಗೆ ತೂರಿಕೊಳ್ಳುವಂತಾಯಿತು. ಅಲ್ಲಿಂದ ಕರಿಛಾಯೆ ಆವರಿಸಿತು, ಅನಾಚಾರದ ಸರಣಿ ಶುರುವಾಯಿತು'' ಎಂದರು. ಶಿಷ್ಯರ ಮುಖದಲ್ಲಿನ್ನೂ ಪ್ರಶ್ನಾರ್ಥಕ ಚಿಹ್ನೆ ಮಾಯವಾಗಿರಲಿಲ್ಲದ ಕಾರಣ ಅವಧೂತರು, ''ಎಲ್ಲರೂ ಹೊಟ್ಟೆಗೆ ಏನಾದರೂ ಹಾಕಿಕೊಂಡು ನಂತರ ಕಥೆ ಮುಂದುವರಿಸೋಣ ಕಣ್ರಯ್ಯಾ'' ಎಂದು ಗಡ್ಡವನ್ನು ನೀವಿಕೊಂಡರು...

(ಮುಂದುವರಿಯುವುದು)

ಜೈಲಲ್ಲಿರೋ ಕೈದಿಗಳು: 'ಬಂದರೋ ಬಂದರೋ ಭಾವ ಬಂದರೋ'

ಸಿನಿಗನ್ನಡ

ಅಭಿಮಾನ್ ಸ್ಟುಡಿಯೋದಲ್ಲಿ ಇದ್ದ ಡಾ. ವಿಷ್ಣುವರ್ಧನ್ ಅವರ ಸ್ಮಾರಕವನ್ನು ನೆಲಸಮಗೊಳಿಸಿದ ವಿಚಾರಕ್ಕೆ ತಗಾದೆಗಳು ಎದ್ದಿವೆ. ಅಂದಹಾಗೆ ಇದು ಖಾಸಗಿ ಆಸ್ತಿ ಆದ್ದರಿಂದ ಅದರ ಮಾಲೀಕರು ಖಾಸಗಿ ಕಾರಣಕ್ಕಾಗಿ ಸ್ಮಾರಕವನ್ನು ಕೆಡವಿದ್ದಾರೆ. ಆದರೆ ಇದಕ್ಕೆ ಬೇರೆ ಬಣ್ಣ ಬಳಿದು, ಅಭಿಮಾನ್ ಸ್ಟುಡಿಯೋದಲ್ಲಿ ಆಗಿದ್ದಕ್ಕೆ ಇವರೇ ಕಾರಣ ಅಂತ ಯಾರ್‍ಯಾರ ಕಡೆಗೋ ಬೆರಳು ತೋರಿಸಿ ವಿಷ್ಣು ಅಭಿಮಾನಿಗಳು ಕಿರಿಕಿರಿ ಮಾಡ್ತಾ ಇದ್ದಾರೆ. ಮತ್ತು ಎಂದಿನಂತೆ ಡಾ. ರಾಜ್‌ಕುಮಾರ್ ಅವರ ಬಗ್ಗೆ ಅವರ ಕುಟುಂಬದ ಬಗ್ಗೆ ಅನಗತ್ಯ ಮಾತುಗಳು ಕೇಳಿಬರುತ್ತಿವೆ. ಈ ವಿಷಯವನ್ನು ನ್ಯೂಟ್ರಲ್ ಮನಸ್ಸಿನಿಂದ ನೋಡಿದರೆ ಸತ್ಯ ಅರ್ಥ ಆಗುತ್ತದೆ. ಒಬ್ಬ ಮನುಷ್ಯನಿಗೆ ಸತ್ತ ಮೇಲೆ ಒಂದು ಕಡೆ ಸ್ಮಾರಕ ಮಾಡ್ತಾರೆ. ಹಾಗೆ ವಿಷ್ಣುವರ್ಧನ್ ಅವರ ವಿಚಾರದಲ್ಲಿ ಅದು ಕೆಲವು ವಿವಾದಗಳ ನಂತರ ತಡವಾಗಿ ಮೈಸೂರಲ್ಲಿ ಆಗಿದೆ. ಹಾಗಾಗಿ ಇಲ್ಲಿ ಬೆಂಗಳೂರಲ್ಲಿ ಕೂಡ ಇನ್ನೊಂದು ಸ್ಮಾರಕ ಇರಬೇಕು ಅಂತ ನಿರೀಕ್ಷೆ ಮಾಡೋದೇ ತಪ್ಪು. ಹಾಗಾಗಿ ಸ್ಮಾರಕವನ್ನು ಯಾರಿಗೂ ಹೇಳದೇ ರಾತ್ರೋರಾತ್ರಿ ಕೆಡವಿದ ರೀತಿ ಸರಿ ಅಲ್ಲ ಅಷ್ಟೇ. ಆದರೆ ವಿಷ್ಣು ಅವರಿಗೆ ಇದ್ದ ಒಂದೇ ಒಂದು ಸ್ಮಾರಕವನ್ನು ಕೆಡವಿದ್ದಾರೆ ಅನ್ನೋ ರೀತಿ ಮಾತಾಡೋದು ತಪ್ಪು. ಮತ್ತು ಅದಕ್ಕಾಗಿ ರಾಜ್‌ಕುಮಾರ್ ಅವರ ಫ್ಯಾಮಿಲಿ ಮೇಲೆ ಗೂಬೆ ಕೂರಿಸೋದು ಇನ್ನೂ ದೊಡ್ಡ ತಪ್ಪು. ಎರಡೆರಡು ಕಡೆ ಸ್ಮಾರಕ ಇದ್ರೆ ಅದು ಸ್ವತಃ ವಿಷ್ಣು ಅವರ ಅಭಿಮಾನಿಗಳಲ್ಲೂ ಗೊಂದಲ ಮೂಡಿಸುತ್ತಿತ್ತು. ಅಲ್ಲದೆ ಸ್ಮಾರಕವನ್ನು ಸರಕಾರ ಅಥವಾ ಇನ್ಯಾವುದೇ ಮೂರನೇ ಶಕ್ತಿ ನಿರ್ನಾಮ ಮಾಡಿಲ್ಲ. ಅದರ ಮಾಲೀಕರು ಜಾಗಕ್ಕೆ ಸಂಬಂಧಿಸಿದ ವ್ಯಾಜ್ಯದ ಕಾರಣಕ್ಕೆ ಈ ಕೆಲಸ ಮಾಡಿದ್ದಾರೆ. ಅವರನ್ನೂ ಈ ವಿಷಯದಲ್ಲಿ ದೂರುವ ಹಾಗಿಲ್ಲ. ಆದರೆ ಮೈಸೂರಲ್ಲಿ ನಮ್ಮ ನೆಚ್ಚಿನ ನಟನ ಸ್ಮಾರಕ ಇದ್ದೇ ಇದೆ. ಎಂದಿಗೂ ಇರುತ್ತದೆ. ಹಾಗಾಗಿ ಈ ವಿಷಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ನಿಜಕ್ಕೂ ಅನವಶ್ಯಕ ಅನ್ನೋದಂತೂ ಸತ್ಯ.

ತುಂಟರಗಾಳಿ
ಹರಿ ಪರಾಕ್
vveditoped@gmail.com

ಲೂಸ್ ಟಾಕ್ › ಪರಮೇಶ್ವರ್, ಗೃಹಸಚಿವ

- **ಅದೇನ್ ಪರಮೇಶ್ವರ್ ಸರ್, ಮಾಧ್ಯಮದವರು ಏನೇ ಪ್ರಶ್ನೆ ಕೇಳಿದ್ರೂ, ನೀವು ಗೊತ್ತಿಲ್ಲ ಅಂತೀರಲ್ಲ?**
- ಹೌದ್ರೀ, ನಾನು ತುಂಬಾ ಸಜ್ಜನ. ನಂಗೆಲ್ಲಾ ಗೊತ್ತು ಅನ್ನೋದು ಅಹಂಕಾರ. ನಾನು ಅಂಥ ಪರಮಜ್ಞಾನಿ ಅಲ್ಲ. ಅದಕ್ಕೇ ನಂಗೇನು ಗೊತ್ತಿಲ್ಲ ಅನ್ನೋ ವಿನೀತಭಾವ ನನ್ನದು.
- **ಅಯ್ಯೋ, ದೊಡ್ಡ ಮಾತು. ಆದ್ರೂ ಹೋಮ್ ಮಿನಿಸ್ಟರ್ ಆಗಿರೋ ನಿಮ್ಮ ಮಾತು ಕೇಳಿ ಜನ ಏನಂದುಕೊಳ್ಳೋದಿಲ್ಲ?**
- ಏನಂದುಕೋತಾರೆ? ಇಷ್ಟು ದಿನ 'ಗತ್ತಿಲ್ಲದ' ಹೋಮ್ ಮಿನಿಸ್ಟರ್ ಅಂತಿದ್ರು. ಈಗ 'ಗೊತ್ತಿಲ್ಲದ' ಹೋಮ್ ಮಿನಿಸ್ಟರ್ ಅಂತಾರೆ ಅಷ್ಟೇ.
- **ಅದ್ಸರಿ, ನೀವು ಮನೇಲೂ ಹಿಂಗೆನಾ? ಹೆಂಡತಿ ಕೇಳೋ ಪ್ರಶ್ನೆಗಳಿಗೂ ಹಿಂಗೇ ಹೇಳ್ತೀರಾ?**
- ಅಯ್ಯೋ, ಎಲ್ಲಾದ್ರೂ ಉಂಟೇ. ಹೆಂಡತಿ ಪ್ರಶ್ನೆಗಳಿಗೆ ಉತ್ತರ ಹೇಳಲೇ ಬೇಕು.ಆ ವಿಷಯದಲ್ಲಿ ನಾನು ಪತಿ ಪರಮೇಶ್ವರ.
- **ಮುಂದೆ ನೀವು ಮುಖ್ಯಮಂತ್ರಿ ಆಗೋ ಸಾಧ್ಯತೆಗಳೇನಾದ್ರೂ ಇವೆಯಾ?**
- ಗೊತ್ತಿಲ್ಲ. ಅದರ ಬಗ್ಗೆ ನಂಗೆ ಮಾಹಿತಿ ಬಂದಿಲ್ಲ.
- **ಹ್ಞಾ, ಇದು ಸರಿಯಾದ ಉತ್ತರ. ಹೋಗ್ಲಿ, ದರ್ಶನ್ ಮತ್ತೆ ಜೈಲಿಗೆ ಹೋಗಿದ್ದಾರೆ. ಹೋಮ್ ಮಿನಿಸ್ಟರ್ ಆಗಿರೋ ನಿಮಗೆ ಇದಾದ್ರೂ ಗೊತ್ತಾ?**
- ಗೊತ್ತು ಕಣ್ರೀ. ಆದ್ರೂ ಪಾಪ, ಇಂಡಿಪೆಂಡೆನ್ಸ್ ಡೇಗೆ ಒಂದಿನ ಮುಂಚೆ ಅವರಿಗೆ ಹಿಂಗಾಗಬಾರದಿತ್ತು.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು, ರಾಮು, ಸೋಮು ಒಂದೇ ಆಫೀಸಿನಲ್ಲಿ ಕೆಲಸ ಮಾಡ್ತಾ ಇದ್ರು. ಮೂವರೂ ಒಳ್ಳೆಯ ಗೆಳೆಯರು. ಹಾಗಾಗಿ ಮೂವರೂ ಪ್ರತಿದಿನ ಲಂಚ್ ಬ್ರೇಕ್‌ನಲ್ಲಿ ಒಟ್ಟಿಗೇ ಕೂತು ಊಟ ಮಾಡ್ತಾ ಇದ್ರು. ಮೂವರೂ ತಮ್ಮ ತಮ್ಮ ಮನೆಯಿಂದ ಊಟವನ್ನು ಲಂಚ್ ಬಾಕ್ಸ್‌ನಲ್ಲಿ ತರ್ತಾ ಇದ್ರು. ಅವರೆಲ್ಲರಿಗೂ ಒಂದು ವಿಷಯದ ಬಗ್ಗೆ ಕಿರಿಕಿರಿ ಆಗ್ತಾ ಇತ್ತು. ಸೋಮು ಅವತ್ತು ಕ್ಯಾಂಟೀನ್‌ನಲ್ಲಿ ಕೂತು, ''ನನ್ ಹೆಂಡ್ತಿ ಬೆಳಗ್ಗೆ ಮಾಡಿದ ತಿಂಡಿನೇ ಲಂಚ್‌ಗೂ ಹಾಕಿಕೊಡ್ತಾಳೆ. ಅದೂ ಬರೀ ಮೊಸರನ್ನ. ಹೆಂಗಪ್ಪಾ ತಿನ್ನೋದು?'' ಅಂತ ತನ್ನ ಕಷ್ಟ ಹೇಳಿಕೊಂಡು, ''ನೋಡು, ನನ್ನ ಬಾಕ್ಸ್‌ನಲ್ಲಿ ಇವತ್ತೂ ಮೊಸರನ್ನ ಇದ್ರೆ, ನಾನು ಈ ಬಿಲ್ಡಿಂಗ್ ಮೇಲಿಂದ ಹಾರಿ ಕೆಳಗೆ ಬಿದ್ದು ಸತ್ತೋಗ್ತೀನಿ'' ಅಂತ ಬಾಕ್ಸ್ ಓಪನ್ ಮಾಡಿದ. ಮೊಸರನ್ನ ಇತ್ತು. ರಾಮು ಮುಖ ನೋಡಿದ. ರಾಮು ಕೂಡಾ ಅದೇ ಮಾತನ್ನ ಹೇಳಿ, ''ನೋಡು, ಇವತ್ತೂ ನನ್ನ ಬಾಕ್ಸ್‌ನಲ್ಲಿ ಚಿತ್ರಾನ್ನ ಇದ್ರೆ ನಾನೂ ಮೇಲಿಂದ ಬಿದ್ದು ಸಾಯ್ತೀನಿ'' ಅಂತ ಓಪನ್ ಮಾಡಿದ. ಚಿತ್ರಾನ್ನವೇ ಇತ್ತು. ಇವರಿಬ್ಬರ ನಂತರ ಖೇಮು ಕೂಡಾ, ''ಇವತ್ತೂ ನನ್ನ ಕ್ಯಾರಿಯರ್‌ನಲ್ಲಿ ಉಪ್ಪಿಟ್ಟು ಇದ್ರೆ, ನಾನೂ ಸಾಯ್ತೀನಿ'' ಅಂತ ಅಂದ. ತೆಗೆದು ನೋಡಿದ್ರೆ, ಉಪ್ಪಿಟ್ಟೇ ಇತ್ತು. ಮೂವರೂ ಮೇಲಿಂದ ಬಿದ್ದು ಸತ್ತೋದ್ರು. ಪೊಲೀಸರು ಬಂದು ವಿಚಾರಣೆ ಮಾಡುವಾಗ ಸೋಮು ಹೆಂಡ್ತಿ, ''ಅಯ್ಯೋ ಅವರಿಗೆ ಮೊಸರನ್ನ ಕಂಡ್ರೆ ಇಷ್ಟ ಇಲ್ಲ ಅಂತ ನಂಗೊತ್ತಿರಲಿಲ್ಲ'' ಅಂದಳು. ರಾಮು ಹೆಂಡ್ತಿ, ''ಅಯ್ಯೋ, ಅವರಿಗೆ ಚಿತ್ರಾನ್ನ ಕಂಡ್ರೆ ಇಷ್ಟ ಇಲ್ಲ ಅಂತ ಗೊತ್ತಿರಲಿಲ್ಲ'' ಅಂದಳು. ಕೊನೆಗೆ ಖೇಮು ಹೆಂಡ್ತಿ ಹೇಳಿದಳು- ''ಅದೇನಾಯ್ತು ಅಂತಲೇ ಗೊತ್ತಾಗ್ತಿಲ್ಲ, ಡೈಲಿ ಅವರ ಲಂಚ್ ಅವರೇ ಪ್ರಿಪೇರ್ ಮಾಡ್ಕೊತಾ ಇದ್ರು''.

ಲೈನ್‌ಮ್ಯಾನ್

- **ದರ್ಶನ್ ಮತ್ತೆ ಜೈಲಿಗೆ**
- ಜೈಲಲ್ಲಿರೋ ಕೈದಿಗಳು 'ಬಂದರೋ ಬಂದರೋ ಭಾವ ಬಂದರೋ' ಅಂತ ಹಾಡ್ತಾ ಇದ್ದಾರಂತೆ
- **ಡೆವಿಲ್ ಚಿತ್ರದ 'ಇದ್ರೆ, ನೆಮ್ದಿಯಾಗ್ ಇರ್ಬೇಕು' ಹಾಡು ಬಿಡುಗಡೆ**
- ನೆಮ್ದಿಯಾಗ್ ಇರೋಕೆ ನಾವ್ ಬಿಡ್ಬೇಕಲ್ಲ: ಸುಪ್ರೀಂ ಕೋರ್ಟ್
- **ಜೀವನದಲ್ಲಿ ನಗು ಅನ್ನೋದೇ ಇಲ್ಲದಿದ್ರೆ, ಏನಾಗುತ್ತೆ?**
- ನಾಲ್ಕ್ ಜನ ನನ್ನ ನೋಡಿ ನಗ್ತಾರೆ ಅನ್ನೋ ಭಯ ಇರಲ್ಲ
- **ಹೊಸ ರೀತಿಯ ಬರಹಗಾರರು ಬೇಕು ಅಂದ್ರೆ, ಏನ್ ಮಾಡಬೇಕು?**
- 'ನ್ಯೂ ಟೈಪ್- ರೈಟರ್' ತರಬೇಕು
- **ಯಾರಿಗೂ ಗೊತ್ತಾಗದ ಹಾಗೆ ಮೆಲ್ಲಗೆ ಟೇಬಲ್ ಕೆಳಗಿಂದ ಹುಡುಗಿ ಕಾಲು ಟಚ್ ಮಾಡೋನು**
- 'ಜೆಂಟಲ್' ಮ್ಯಾನ್
- **ಮೆಳ್ಳೆಗಣ್ಣಿನ ದೃಷ್ಟಿ ದೋಷಕ್ಕೆ ಏನಂತಾರೆ ?**
- 'ಕಾರ್ನರ್' 'ಸ್ಟೈಟ್'
- **ದಾರಿಯಲ್ಲಿ ಒಂಟಿಯಾಗಿ ಹೋಗ್ತಾ ಇದ್ದ ಆಮೆ ಮೇಲೆ ಮೂರ್ನಾಲ್ಕು ಬಸವನ ಹುಳುಗಳು ದಾಳಿ ಮಾಡಿದ್ವು. ಅವುಗಳ ವಿರುದ್ಧ ಕಂಪ್ಲೇಂಟ್ ಕೊಡೋಣ ಅಂತ ಆಮೆ ಪೊಲೀಸ್ ಸ್ಟೇಷನ್‌ಗೆ ಹೋಯ್ತು. ಅಲ್ಲಿ ಪೊಲೀಸ್ ಅಧಿಕಾರಿ ಕೇಳಿದ- ''ನಿನ್ನ ಮೇಲೆ ಅಟ್ಯಾಕ್ ಮಾಡಿದ ಯಾರನ್ನಾದ್ರೂ ನೀನು ಗುರುತು ಹಿಡಿಯೋಕೆ ಸಾಧ್ಯನಾ?''.**
- ಅದಕ್ಕೆ ಆಮೆ ಹೇಳ್ತು, ''ಇಲ್ಲ, ಅದೆಲ್ಲಾ ಎಷ್ಟು ಫಾಸ್ಟ್ ಆಗಿ ಆಯ್ತು ಅಂದ್ರೆ, ನಂಗೆ ಏನೂ ಗೊತ್ತೇ ಆಗ್ಲಿಲ್ಲ''.
- **ಸದಾ ಅಭಿವೃದ್ಧಿಯ ಜಪ ಮಾಡೋ ದೇಶ**
- 'ಜಪಾ'ನ್

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:215

ಸಮಾಚಾರ ಸಣ್ಣದಲ್ಲ

ಮ.ಪ್ರ: ಟ್ರಕ್‌ಗೆ ಮಿನಿ ಬಸ್ ಡಿಕ್ಕಿ: 4 ಸಾವು

ಶಿವಪುರಿ: ಮಧ್ಯ ಪ್ರದೇಶದ ಶಿವಪುರಿ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ-46ರಲ್ಲಿ ಶನಿವಾರ ನಸುಕಿನ 5ರ ವೇಳೆ ಮಿನಿ ಟ್ರಕ್‌ಗೆ ಮಿನಿ ಬಸ್ ಡಿಕ್ಕಿ ಹೊಡೆದಿದ್ದು, ಗುಜರಾತ್‌ನ ಮ್ಯೂಸಿಕ್ ಬ್ಯಾಂಡ್‌ನ ನಾಲ್ವರು ಸಾವನ್ನಪ್ಪಿದ್ದಾರೆ. ಇತರೆ 11 ಜನರು ಗಾಯ ಗೊಂಡಿದ್ದಾರೆ. ಮಿನಿ ಬಸ್‌ನಲ್ಲಿದ್ದ ಸಂಗೀತಗಾರರ ತಂಡ ವಾರಣಾಸಿಯ ಕಾಶಿ ವಿಶ್ವನಾಥ ದೇವಸ್ಥಾನದಲ್ಲಿ ಕಾರ್ಯಕ್ರಮ ನೀಡಿ ಗುಜರಾತ್‌ಗೆ ವಾಪಸಾಗುತ್ತಿದ್ದಾಗ ಅಪಘಾತವಾಗಿದೆ. ಚಾಲಕನ ನಿಯಂತ್ರಣ ತಪ್ಪಿದ್ದರಿಂದ ಮಿನಿ ಬಸ್, ಡಿವೈಡರ್ ದಾಟಿ ಎದುರಿನಿಂದ ಬರುತ್ತಿದ್ದ ಮಿನಿ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಗಾಯಾಳುಗಳನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಮಿನಿ ಬಸ್‌ನಲ್ಲಿ ಒಟ್ಟು 17 ಜನರಿದ್ದರು. ಚಾಲಕ ನಿದ್ರೆಗೆ ಜಾರಿದ್ದರಿಂದ ವಾಹನ ಪಕ್ಕದ ಲೇನ್‌ಗೆ ನುಗ್ಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೌದಿಯಲ್ಲಿ ಕೊಲೆ ಕೃತ್ಯ 26 ವರ್ಷ ಬಳಿಕ ಸೆರೆ

ದೆಹಲಿ: ಸೌದಿ ಅರೇಬಿಯಾದಲ್ಲಿ 1999ರಲ್ಲಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಉತ್ತರ ಪ್ರದೇಶ ಮೂಲದ ಆರೋಪಿ ಮೊಹಮ್ಮದ್ ದಿಲ್ಶಾದ್ 26 ವರ್ಷಗಳ ಬಳಿಕ ಭಾರತದಲ್ಲಿ ಸೆರೆ ಸಿಕ್ಕಿದ್ದಾನೆ.

ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಿಬಿಐ ಇತ್ತೀಚೆಗೆ ಬಂಧಿಸಿದೆ. ಹೆಸರು ಬದಲಿಸಿಕೊಂಡು ಹೊಸ ಪಾಸ್‌ಪೋರ್ಟ್ ಮಾಡಿಸಿಕೊಂಡು ಮದೀನಾದಿಂದ ಜೆಡ್ಡಾ ಮೂಲಕ ಭಾರತಕ್ಕೆ ಮರಳಿದ ಆರೋಪಿಯನ್ನು ಸೌದಿ ಪೊಲೀಸರ ಕೋರಿಕೆ ಮೇರೆಗೆ ಬಂಧಿಸಲಾಗಿದೆ ಎಂದು ಸಿಬಿಐ ಅಧಿಕಾರಿ ಸುದ್ದಿಸಂಸ್ಥೆಗೆ ಶನಿವಾರ ಮಾಹಿತಿ ನೀಡಿದ್ದಾರೆ. ರಿಯಾದ್‌ನಲ್ಲಿ ಕೆಲ ಕಾಲ ಮೋಟಾರ್ ಮೆಕ್ಯಾನಿಕ್, ಕೆಲ ಸಮಯ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡಿದ್ದ ದಿಲ್ಶಾದ್, 1999ರಲ್ಲಿ ಕೆಲಸದ ಸ್ಥಳದಲ್ಲಿ ಒಬ್ಬನ ಕೊಲೆ ಮಾಡಿ ಭಾರತಕ್ಕೆ ಮರಳಿ ಹೆಸರು, ಚಹರೆ ಬದಲಿಕೊಂಡು ವಾಸಿಸುತ್ತಿದ್ದ.

ಸಚಿವ ಪೆರಿಯಸಾಮಿ ಮನೆಗೆ ಇ.ಡಿ. ದಾಳಿ

ದಿಂಡಿಗಲ್: ತಮಿಳುನಾಡು ಡಿಎಂಕೆ ಸರಕಾರದ ಗ್ರಾಮೀಣಾಭಿವೃದ್ಧಿ ಸಚಿವ ಐ.ಪೆರಿಯಸಾಮಿ ಮತ್ತು ಅವರ ಪುತ್ರ, ಡಿಎಂಕೆ ಶಾಸಕ ಐ. ಪಿ. ಸೆಂಥಿಲ್ ಕುಮಾರ್ ಮತ್ತು ಪುತ್ರಿ ಇಂದ್ರಾಣಿ ಅವರ ದಿಂಡಿಗಲ್‌ನ ದೊರೈರಾಜ್ ನಗರ, ಸೀಲಪಾಡಿ ಮತ್ತು ವಲ್ಲಾಲರ್ ನಗರಗಳಲ್ಲಿನ ಮನೆಗಳು ಸೇರಿದಂತೆ ಹಲವೆಡೆ ಜಾರಿ ನಿರ್ದೇಶನಾಲಯ(ಇ.ಡಿ) ಅಧಿಕಾರಿಗಳು ಶನಿವಾರ ಮುಂಜಾನೆಯೇ ದಾಳಿ ನಡೆಸಿ ಶೋಧ ಕಾರ್ಯ ಕೈಗೊಂಡರು. ಮದ್ರಾಸ್ ಹೈಕೋರ್ಟ್ ಏ.29ರಂದು ಸಚಿವ ಪೆರಿಯಸಾಮಿ ಮತ್ತು ಕುಟುಂಬ ಸದಸ್ಯರ ವಿರುದ್ಧ ದಾಖಲಾಗಿದ್ದ ಅಕ್ರಮ ಆಸ್ತಿ ಪ್ರಕರಣದಲ್ಲಿ ವಿಚಾರಣೆ ನಡೆಸಿತ್ತು. ಇದೇ ಹಗರಣದಲ್ಲಿ ಅಕ್ರಮ ಹಣ ವರ್ಗಾವಣೆ ಆಗಿರುವ ಮಾಹಿತಿ ಮೇರೆಗೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಂಬೈ ಮಳೆಗೆ ಗುಡ್ಡ ಕುಸಿದು 2 ಸಾವು

ಮುಂಬೈ: ಮಹಾರಾಷ್ಟ್ರದಲ್ಲಿ ಮುಂಬೈ ಸೇರಿದಂತೆ ಹಲವೆಡೆ ಶನಿವಾರ ಭಾರಿ ಮಳೆಯಾಗಿದೆ. ಮುಂಬೈನ ಪೂರ್ವ ಉಪನಗರ ವಿಖ್ರೋಲಿಯಲ್ಲಿ ಗುಡ್ಡ ಕುಸಿದು ಮನೆ ಮೇಲೆ ಜಾರಿದ್ದರಿಂದ ಮನೆಯಲ್ಲಿದ್ದ ಇಬ್ಬರು ಸಾವಿಗೀಡಾಗಿದ್ದಾರೆ. ಹಲವರು ಗಾಯಗೊಂಡಿದ್ದಾರೆ. ವಿಖ್ರೋಲಿಯ ವರ್ಷಾ ನಗರದಲ್ಲಿ ಶನಿವಾರ ನಸುಕಿನ 2.39ರಲ್ಲಿ ಗುಡ್ಡ ಕುಸಿದು ಕೆಳಭಾಗದಲ್ಲಿದ್ದ ಮನೆಯ ಛಾವಣಿ ಮೇಲೆ ಬಿದ್ದಿದೆ. ಒಂದೇ ಕುಟುಂಬದ ನಾಲ್ವರು ಗಾಯ ಗೊಂಡರು. ಗಾಯಾಳುಗಳನ್ನು ರಾಜವಾಡಿ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಬಳಿಕ ಚಿಕಿತ್ಸೆಗೆ ಸ್ಪಂದಿಸದೇ ಶಾಲು ಮಿಶ್ರಾ(19) ಮತ್ತು ಸುರೇಶ್ ಮಿಶ್ರಾ(50) ಸಾವನ್ನಪ್ಪಿದರು ಎಂದು ಮಹಾನಗರ ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ. ಅಗ್ನಿಶಾಮಕ ದಳ, ಸ್ಥಳೀಯ ಪೊಲೀಸರು ಮತ್ತು ನಾಗರಿಕ ಸಿಬ್ಬಂದಿ ರಕ್ಷಣಾ ಕಾರ್ಯ ನಡೆಸಿದರು. ಪ್ರದೇಶದ ಇತರೆ ಮನೆಗಳಲ್ಲಿನ ನಿವಾಸಿಗಳನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಗಿದೆ.

{ ಒಮರ್ ಅಬ್ದುಲ್ಲಾ } ಜಮ್ಮು-ಕಾಶ್ಮೀರ ಸಿಎಂ

ಜಮ್ಮು-ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯಲ್ಲಿನ ಛೊಸೊತಿ ಗ್ರಾಮದಲ್ಲಿ ಮೇಘಸ್ಫೋಟವಾಗಿ 60 ಮಂದಿ ಮೃತಪಟ್ಟು, ನೂರಾರು ಮಂದಿ ಕಣ್ಮರೆಯಾಗಿರುವುದರಿಂದ ಜನಾಕ್ರೋಶ ಸಹಜ. ರಕ್ಷಣಾ ಕಾರ್ಯಾಚರಣೆ ನಡೆದಿದ್ದು, ಶನಿವಾರ ಇನ್ನಷ್ಟು ತ್ವರಿತಗೊಳಿಸಲಾಗಿದೆ. ಕಣ್ಮರೆಯಾದವರನ್ನು ಪತ್ತೆ ಮಾಡುವುದಕ್ಕೆ ರಕ್ಷಣಾ ಕಾರ್ಯಾಚರಣೆ ತಂಡಗಳು ಸಮರೋಪಾದಿ ಕೆಲಸ ಮಾಡುತ್ತಿವೆ.

ಅಲಾಸ್ಕಾ ಸಭೆ ಬಳಿಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಣೆ | ಯುದ್ಧ ನಿಲ್ಲಿಸಲು ಸಿದ್ಧ, ಪರಿಸ್ಥಿತಿ ಇನ್ನಷ್ಟು ತಿಳಿಗೊಳ್ಳಬೇಕಿದೆ: ಪುಟಿನ್

ಕದನ ವಿರಾಮವಲ್ಲ, ಶಾಂತಿ ಒಪ್ಪಂದವೇ ಗುರಿ

ಅಲಾಸ್ಕಾ: ಬಹು ನಿರೀಕ್ಷೆಯ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನಡುವಿನ 'ಅಲಾಸ್ಕಾ ಸಭೆ' ಸಣ್ಣ ಆಶಾವಾದದೊಂದಿಗೆ ಶನಿವಾರ ಬೆಳಗ್ಗೆ ಕೊನೆಗೊಂಡಿದೆ. ಸದ್ಯಕ್ಕೆ ಯುದ್ಧ ನಿಲುಗಡೆಯಾಗಲೀ, ಕದನ ವಿರಾಮವಾಗಲೀ ಘೋಷಣೆ ಆಗಿಲ್ಲ ಎಂಬುದು ಉಲ್ಲೇಖಾರ್ಹ.

ಆದರೆ, ಪುಟಿನ್ ಜತೆಗಿನ ಸಭೆ ಬಗ್ಗೆ ಡೊನಾಲ್ಡ್ ಟ್ರಂಪ್ ಸಮಾಧಾನ ವ್ಯಕ್ತಪಡಿಸಿದ್ದಾರೆ. 'ಸಭೆಯಲ್ಲಿನ ಮಾತುಕತೆ ಉತ್ತಮ ರೀತಿ ನಡೆದಿದೆ. ನಮ್ಮ ಮಾತುಕತೆಯ ಉದ್ದೇಶ ಕದನ ವಿರಾಮ ಎಂಬ ತಾತ್ಕಾಲಿಕ ಯುದ್ಧ ನಿಲುಗಡೆಗಿಂತಲೂ ಹಿರಿದಾಗಿದೆ. 'ಪೂರ್ಣ ಪ್ರಮಾಣದ ಶಾಂತಿ ಒಪ್ಪಂದ' ಎಂಬುದೇ ನಮ್ಮ ಗುರಿಯಾಗಿದೆ ಎಂದು ಭಾರೀ ವಿಶ್ವಾಸದಿಂದ ಹೇಳಿದ್ದಾರೆ.

ಸುದೀರ್ಘ ಮೂರು ಗಂಟೆಗಳ ಸಭೆ ಬಳಿಕ ಟ್ರಂಪ್ ಮತ್ತು ಪುಟಿನ್ ಜಂಟಿ ಸುದ್ದಿಗೋಷ್ಠಿ ನಡೆಸಿದರು. 'ನಾವಿಬ್ಬರೂ ಸುದೀರ್ಘ ಮಾತುಕತೆ ನಡೆಸಿದ್ದೇವೆ. ಸಭೆಯಲ್ಲಿ ಹಲವು ವಿಚಾರಗಳು ಪ್ರಸ್ತಾಪವಾಗಿವೆ. ಕೆಲವು ವಿಚಾರಗಳಲ್ಲಿ ನಿರ್ಧಾರ ತೆಗೆದುಕೊಳ್ಳಲು ಆಗಿಲ್ಲ. ಆದರೆ, ಮಾತುಕತೆಯಲ್ಲಿ ಒಂದಿಷ್ಟು ಪ್ರಗತಿ ಆಗಿದೆ. ನಮ್ಮ ಉದ್ದೇಶ ತಾತ್ಕಾಲಿಕ ಪರಿಹಾರವಲ್ಲ, ಶಾಶ್ವತ ಶಾಂತಿಯೇ ನಮ್ಮ ಗುರಿಯಾಗಿದೆ' ಎಂದು ಹೇಳಿದರು. ರಷ್ಯಾ-ಉಕ್ರೇನ್ ನಡುವಿನ ಯುದ್ಧ ಕೆಲವು ಪ್ರಾದೇಶಿಕ ವಿನಾಯಿತಿಗಳೊಂದಿಗೆ ಕೊನೆಗೊಳ್ಳುವ ನಿರೀಕ್ಷೆ ಇದೆ. ಉಕ್ರೇನ್ ಹಾಗೂ ರಷ್ಯಾ ಮಧ್ಯೆ ಭೂಪ್ರದೇಶಗಳ ವಿನಿಮಯ ಒಪ್ಪಂದವಾಗಬೇಕಿದೆ. ಅದೇ ರೀತಿ, ಉಕ್ರೇನ್ ದೇಶಕ್ಕೆ ಅಮೆರಿಕ ಭದ್ರತೆಯ ಖಾತರಿ ಒದಗಿಸುವ ಬಗೆಗೂ ಚರ್ಚೆ ಆಗಬೇಕಿದೆ ಎಂದು ಟ್ರಂಪ್ ಹೇಳಿದ್ದಾರೆ.

ಭಾರತ ಪ್ರತಿಕ್ರಿಯೆ: ಡೊನಾಲ್ಡ್ ಟ್ರಂಪ್ ಮತ್ತು ವ್ಲಾದಿಮಿರ್ ಪುಟಿನ್ ನಡುವಿನ ಸಭೆ ಸಕಾರಾತ್ಮಕ ಹಾದಿಯಲ್ಲಿ ಸಾಗುತ್ತಿರುವುದು ಸ್ವಾಗತಾರ್ಹ ಎಂದಿರುವ ಭಾರತ, ಆದಷ್ಟು ಬೇಗ ರಷ್ಯಾ-ಉಕ್ರೇನ್ ನಡುವಿನ ಯುದ್ಧ ಕೊನೆಗೊಳ್ಳಲಿದೆ ಎಂಬ ಆಶಾವಾದ ವ್ಯಕ್ತಪಡಿಸಿದೆ.

ಅಲಾಸ್ಕಾದಲ್ಲಿ ಒಂದು ಅದ್ಭುತ-ಅತ್ಯಂತ ಯಶಸ್ವಿ ದಿನ ಇದು. ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜತೆಗಿನ ಸಭೆ ಬಹಳ ಚೆನ್ನಾಗಿ ನಡೆಯಿತು. ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ಅವರು ಅಮೆರಿಕಕ್ಕೆ ಬರಲಿದ್ದು, ಅವರ ಜತೆಗೂ ಸೋಮವಾರ ಮಧ್ಯಾಹ್ನ ವಾಷಿಂಗ್ಟನ್ ಡಿಸಿಯ ಓವಲ್ ಕಚೇರಿಯಲ್ಲಿ ಮಾತುಕತೆ ನಡೆಸುವೆ. ನಂತರದಲ್ಲಿ ರಷ್ಯಾ-ಉಕ್ರೇನ್ ನಡುವೆ ಶಾಶ್ವತ ಶಾಂತಿ ಒಪ್ಪಂದ ಖಚಿತ. ಅದು ಕೈಗೂಡಿದರೆ ಲಕ್ಷಾಂತರ ಜನರ ಜೀವ ಉಳಿಯಲಿದೆ.

– ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷ

ಭಾರತಕ್ಕೆ ಹೆಚ್ಚುವರಿ ಸುಂಕ ಮರು ಪರಿಶೀಲನೆ: ಟ್ರಂಪ್

ಉಕ್ರೇನ್ ಮೇಲೆ ಯುದ್ಧ ಮಾಡುತ್ತಿರುವ ರಷ್ಯಾ ಜತೆ ಯಾವ ದೇಶವೂ ವ್ಯಾಪಾರ ನಡೆಸಬಾರದು ಎನ್ನುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಳ ಉದ್ದೇಶ ಅಲಾಸ್ಕಾದಲ್ಲಿ ಜಂಟಿ ಪತ್ರಿಕಾಗೋಷ್ಠಿ ಯಲ್ಲೇ ಬಹಿರಂಗವಾಯಿತು. ಟ್ರಂಪ್ 2ನೇ ಬಾರಿ ಅಮೆರಿಕ ಅಧ್ಯ ಕ್ಷರಾದ ಬಳಿಕವೇ ರಷ್ಯಾ ಜತೆಗಿನ ಅಮೆರಿಕ ವ್ಯಾಪಾರ ಶೇ.20ರಷ್ಟು ಹೆಚ್ಚಾಗಿದೆ ಎಂಬ ಅಂಶ ಹೊರ ಬಂದಿತು. ರಷ್ಯಾದಿಂದ ಕಚ್ಚಾತೈಲ ಆಮದು ಮಾಡಿ ಕೊಳ್ಳುತ್ತಿದೆ ಎಂಬ ಕಾರಣಕ್ಕೇ ಟ್ರಂಪ್, ಭಾರತದ ಮೇಲೆ ಶೇ.25 ಹೆಚ್ಚುವರಿ ಪ್ರತಿಸುಂಕ ಮತ್ತು ಶೇ.25ರಷ್ಟು ದಂಡ ಶುಲ್ಕ ವಿಧಿಸಿ ದ್ದರು. ಆ ಬಳಿಕ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ರಷ್ಯಾ ದಿಂದ ಕಚ್ಚಾತೈಲ ಖರೀದಿಸುವ ದೇಶಗಳ ಮೇಲಿನ ಹೆಚ್ಚುವರಿ ಪ್ರತಿ ಸುಂಕದ ಬಗ್ಗೆ ಮುಂದಿನ 2-3 ವಾರಗಳಲ್ಲಿ ಮರುಪರಿ ಶೀಲನೆ ನಡೆಸುವೆ ಎಂದು ಟ್ರಂಪ್ ಹೇಳಿದರು.

ಪರಿಸ್ಥಿತಿ ಇನ್ನಷ್ಟು ತಿಳಿಗೊಳ್ಳಬೇಕಿದೆ: ಪುಟಿನ್

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಸಮಾಧಾನಕರ ರೀತಿಯಲ್ಲಿ ಪ್ರತಿಕ್ರಿಯೆ ನೀಡಿದ್ದರೆ, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, 'ಯುದ್ಧ ನಿಲುಗಡೆಗೆ ರಷ್ಯಾ ಸಿದ್ಧವಾಗಿಯೇನೋ ಇದೆ. ಆದರೆ, ಈಗಿನ ಪರಿಸ್ಥಿತಿ ನಾವು ನಿರೀಕ್ಷೆ ಮಾಡಿದ ರೀತಿಯಲ್ಲಿಲ್ಲ. ಪರಿಸ್ಥಿತಿ ಇನ್ನಷ್ಟು ತಿಳಿಗೊಳ್ಳಬೇಕಿದೆ. ರಷ್ಯಾದ ಭದ್ರತೆಗೆ ಪಶ್ಚಿಮದ ಕಡೆಯಿಂದ ಆತಂಕ ಇರುವುದರಿಂದ ಉಕ್ರೇನ್ ದೇಶಕ್ಕೆ ಸಂಬಂಧಿಸಿದಂತೆ ನಮ್ಮ ನಿಲುವಿನಲ್ಲಿ ಸದ್ಯಕ್ಕೆ ಬದಲಾವಣೆ ಇಲ್ಲ' ಎಂದು ಹೇಳಿದ್ದಾರೆ. ಪುಟಿನ್ ಮಾತಿನ ಅರ್ಥ, 'ಸದ್ಯಕ್ಕೆ ರಷ್ಯಾ-ಉಕ್ರೇನ್ ನಿಲುಗಡೆ ಇಲ್ಲ' ಎಂಬುದೇ ಆಗಿದೆ ಎಂದೇ ವಿಶ್ಲೇಷಿಸಲಾಗಿದೆ. ನ್ಯಾಟೊ ದೇಶಗಳು ಉಕ್ರೇನ್ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಪುಟಿನ್ ತೀವ್ರ ವಿರೋಧ ಮುಂದುವರಿದಿದೆ ಎನ್ನಲಾಗಿದೆ.

ಟ್ರಂಪ್-ಪುಟಿನ್ ಸಭೆ ಸ್ಥಳ!

ಭಾರೀ ನಿರೀಕ್ಷೆ ಹುಟ್ಟುಹಾಕಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನಡುವಿನ ಮಹತ್ವದ ಸಭೆ ಅಲಾಸ್ಕಾದ ಅಂಕೊರೇಜ್‌ನಲ್ಲಿ ಜರುಗಿತು. ಅಂಕೊರೇಜ್ ಪ್ರದೇಶ ಅಮೆರಿಕದ ಸೇನಾಪಡೆಗಳ ಮೂಲ ಸೌಕರ್ಯಗಳಿರುವ ತಾಣವಾಗಿದೆ. ಅಂಕೊರೇಜ್‌ನಲ್ಲಿರುವ 'ಜಾಯಿಂಟ್ ಬೇಸ್ ಎಲ್‌ಮೆಂಡಾರ್ಫ್-ರಿಚರ್ಡ್ಸನ್' ಕಟ್ಟಡದಲ್ಲಿ ಭಾರೀ ಬಿಗಿ ಭದ್ರತೆ ನಡುವೆ ಇಬ್ಬರೂ ದಿಗ್ಗಜ ದೇಶಗಳ ಅಧ್ಯಕ್ಷರ ಸಭೆ ನಡೆದಿದೆ. ಈ ಸಂದರ್ಭ ಅಮೆರಿಕ ವಾಯುಪಡೆಯ ಯುದ್ಧ ವಿಮಾನಗಳು ಆಕಾಶದಲ್ಲಿ ಸತತ ಹಾರಾಟ ನಡೆಸುತ್ತಾ ಕಾವಲು ಕಾಯುತ್ತಿದ್ದವು ಎಂಬುದು ಉಲ್ಲೇಖಾರ್ಹ.

- ಉಕ್ರೇನ್ ಝೆಲನ್‌ಸ್ಕಿ ಜತೆ ಚರ್ಚೆ ಬಳಿಕ ಮತ್ತೆ ಪುಟಿನ್ ಸಭೆ: ಟ್ರಂಪ್
- ರಷ್ಯಾ-ಉಕ್ರೇನ್ 3 ವರ್ಷಗಳ ಯುದ್ಧ ಶೀಘ್ರ ಕೊನೆಗೊಳ್ಳಲಿ: ಭಾರತ

ಯುದ್ಧವೇ ಆಗುತ್ತಿರಲಿಲ್ಲ: ಟ್ರಂಪ್

2022ರಲ್ಲಿ ರಷ್ಯಾ-ಉಕ್ರೇನ್ ಯುದ್ಧ ಶುರುವಾಯಿತು. ಆಗೇನಾದರೂ ನಾನು ಅಮೆರಿಕ ಅಧ್ಯಕ್ಷನಾಗಿದ್ದಿದ್ದರೆ ಈ ಯುದ್ಧ ಆರಂಭವಾಗುವುದಕ್ಕೆ ಅವಕಾಶವನ್ನೇ ಕೊಡುತ್ತಿರಲಿಲ್ಲ ಎಂದೂ ಟ್ರಂಪ್ ಹೇಳಿದ್ದಾರೆ. ಈ ಮಾತಿಗೆ ರಷ್ಯಾ ಅಧ್ಯಕ್ಷ ಪುಟಿನ್ ಕೂಡಾ ಸಹಮತ ವ್ಯಕ್ತಪಡಿಸಿದ್ದಾರೆ. 2022ರಲ್ಲಿ ಜೋ ಬೈಡನ್ ಅಮೆರಿಕ ಅಧ್ಯಕ್ಷರಾಗಿದ್ದರು. ಯೂರೋಪ್‌ನ 'ನ್ಯಾಟೊ' ಒಕ್ಕೂಟದ ಸದಸ್ಯ ರಾಷ್ಟ್ರಗಳು ಉಕ್ರೇನ್‌ಗೆ ಸದಸ್ಯತ್ವ ನೀಡುವುದಾಗಿ ಪ್ರಕಟಿಸಿದ್ದರಿಂದಲೇ ರಷ್ಯಾ ಉಕ್ರೇನ್ ಆಕ್ರಮಣಕ್ಕೆ ಮುಂದಾಯಿತು ಎಂಬುದು ಉಲ್ಲೇಖಾರ್ಹ. 'ಉಕ್ರೇನ್ ಅಧ್ಯಕ್ಷ ವೊಲಿದಿಮಿರ್ ಝೆಲನ್‌ಸ್ಕಿ ಜತೆ ಮುಂದಿನ ಸಭೆ ನಡೆಸಲಾಗುವುದು. ಅವರಿಗೆ ಪುಟಿನ್ ಜತೆಗಿನ ಸಭೆಯ ಅಂಶಗಳನ್ನು ತಿಳಿಸಿಕೊಡಬೇಕಿದೆ. ಯುದ್ಧ ನಿಲುಗಡೆ ಮತ್ತು ಶಾಶ್ವತ ಶಾಂತಿ ಒಪ್ಪಂದಕ್ಕೆ ಅವರನ್ನೂ ಒಪ್ಪಿಸುವೆ. ನ್ಯಾಟೊ ದೇಶಗಳ ಮುಖಂಡರಿಗೂ ವಿಷಯ ತಿಳಿಸಬೇಕಿದೆ. ಎಲ್ಲರ ಸಭೆ ಕರೆಯಲಾಗುವುದು' ಎಂದು ಟ್ರಂಪ್ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು. 'ಮುಂದಿನ ಬಾರಿ ನಮ್ಮಿಬ್ಬರ ನಡುವಿನ ಜಂಟಿ ಸಭೆ ಅಲಾಸ್ಕಾದಲ್ಲಲ್ಲ, ಮಾಸ್ಕೊದಲ್ಲಿ ನಡೆಯಲಿದೆ' ಎಂದು ಪುಟಿನ್ ಸ್ಪಷ್ಟಪಡಿಸಿದರು. ಈ ಮಾತಿಗೆ ಟ್ರಂಪ್ ಸಮ್ಮತಿಯಿಂದ ನಕ್ಕರು.

ಲಾ ಪತಾ ಓಟ್ ಕಾಂಗ್ರೆಸ್ ವಿಡಿಯೊ

ದೆಹಲಿ: ಚುನಾವಣಾ ಆಯೋಗದ ವಿರುದ್ಧ 'ಮರಕಳವು' ಆರೋಪ ಮತ್ತು ಹೋರಾಟವನ್ನು ಮುಂದುವರಿಸಿರುವ ಕಾಂಗ್ರೆಸ್, ಬಾಲಿವುಡ್‌ನ ಜನಪ್ರಿಯ ಸಿನಿಮಾ 'ಲಾಪತಾ ಲೇಡೀಸ್' ಶೀರ್ಷಿಕೆ ರೀತಿಯಲ್ಲೇ 'ಲಾ ಪತಾ ಓಟ್' ಕಿರುಚಿತ್ರ ನಿರ್ಮಿಸಿ ಶನಿವಾರ ಬಿಡುಗಡೆ ಮಾಡಿದೆ.

'ಚೋರಿ ಚೋರಿ, ಚುಪ್ಕೆ ಚುಪ್ಕೆ' ಆಟ ಇನ್ನು ಮುಂದೆ ನಡೆಯಲ್ಲ, ಈಗಾಗಲೇ ಮತದಾರರು ಎಚ್ಚೆತ್ತುಕೊಂಡಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ತಮ್ಮದೇ 'ಎಕ್ಸ್' ಖಾತೆಯಲ್ಲಿ 'ಲಾ ಪತಾ ಓಟ್' ಕಿರುಚಿತ್ರ ಹಂಚಿಕೊಂಡಿದ್ದಾರೆ. ಅದರೊಟ್ಟಿಗೇ 'ಮತದಾರರೇ ಎಲ್ಲರೂ ಒಟ್ಟಾಗಿ ಮತ ಕಳವು ವಿರುದ್ಧ ಧ್ವನಿ ಎತ್ತೋಣ-ನಮ್ಮ ಹಕ್ಕುಗಳನ್ನು ಉಳಿಸೋಣ' ಎಂದೂ ಕರೆ ನೀಡಿದ್ದಾರೆ. ಪೊಲೀಸ್ ಠಾಣೆ ಪ್ರವೇಶಿಸುವ ಮತದಾರನೊಬ್ಬ 'ನನ್ನ ಮತ ಕಳವಾಗಿದೆ' ಎಂದು ದೂರು ನೀಡಲು ಮುಂದಾಗುವ ದೃಶ್ಯಗಳ ವಿಡಿಯೊವನ್ನು ಕಾಂಗ್ರೆಸ್ ನಿರ್ಮಿಸಿದೆ. 'ದೇಶದ ವಿವಿಧೆಡೆ ಲಕ್ಷಾಂತರ ಮತಗಳನ್ನು ಕಳವು ಮಾಡಲಾಗುತ್ತಿದೆ. ಅದನ್ನು ನೀವು ತಡೆಯಬೇಕು' ಎಂದು ಮತದಾರ ಹೇಳುವ, ಆಗ ಪೊಲೀಸರು, 'ನಿಮ್ಮ ಮತವನ್ನೂ ಕದ್ದಿದ್ದಾರೆಯೇ?' ಎಂದು ಆಶ್ಚರ್ಯ ಪಡುವ ದೃಶ್ಯಗಳು ಒಂದು ನಿಮಿಷದ 'ಲಾ ಪತಾ ಓಟ್' ವಿಡಿಯೊದಲ್ಲಿವೆ. 'ಆಪ್ ಕೆ ಓಟ್ ಕಿ ಚೋರಿ, ಆಪ್ ಕೆ ಅಧಿಕಾರ್ ಕಿ ಚೋರಿ, ಆಪ್ ಕಿ ಪೆಹಚಾನ್ ಕಿ ಚೋರಿ ಹೈ'(ನಿಮ್ಮ ಮತ ಕಳವು, ನಿಮ್ಮ ಅಧಿಕಾರದ ಕಳವು, ನಿಮ್ಮ ಗುರುತಿನ ಕಳವು) ಎಂದು ರಾಹುಲ್ ಗಾಂಧಿ 'ಎಕ್ಸ್'ನಲ್ಲಿ ಬರೆದಿದ್ದಾರೆ. ಇಷ್ಟೇ ಅಲ್ಲದೇ, 'ಮತ ಕಳವು' ಮನೆ ಮನೆ ಅಭಿಯಾನಕ್ಕೂ ರಾಹುಲ್ ಗಾಂಧಿ ಶನಿವಾರ ಚಾಲನೆ ನೀಡಿದ್ದಾರೆ.

ಅಟಲ್ ಪುಣ್ಯತಿಥಿ: ನಮನ

ದೆಹಲಿ: ಮಾಜಿ ಪ್ರಧಾನಿ, ಬಿಜೆಪಿಯ ಹಿರಿಯ ಅಟಲ್ ಬಿಹಾರಿ ವಾಜಪೇಯಿ ಅವರ ಪುಣ್ಯತಿಥಿ ಪ್ರಯುಕ್ತ ದೇಶಾದ್ಯಂತ 'ಸದೈವ ಅಟಲ್' ಕಾರ್ಯಕ್ರಮದಡಿ ಗೌರವ ಸಲ್ಲಿಸಲಾಯಿತು. ಅಟಲ್ ಸ್ಮಾರಕಕ್ಕೆ ಭೇಟಿ ನೀಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತಿತರ ಗಣ್ಯರು ವಾಜ ಪೇಯಿ ಅವರಿಗೆ ಪುಷ್ಪ ನಮನ ಸಲ್ಲಿಸಿದರು.

ವಾಜಪೇಯಿ ಅವರ ದೂರದೃಷ್ಟಿಯ ಆಡಳಿತ ಮತ್ತು ರಾಷ್ಟ್ರೀಯತೆಗೆ ನೀಡಿದ ಕೊಡುಗೆಗಳನ್ನು ಗಣ್ಯರು ಸ್ಮರಿಸಿದರು. ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ರಾಜ್ಯಸಭೆ ಉಪಾಧ್ಯಕ್ಷ ಹರಿವಂಶ್, ದೆಹಲಿ ಸಿಎಂ ರೇಖಾ ಗುಪ್ತಾ, ಅಟಲ್ ಅವರ ದತ್ತು ಪುತ್ರಿ ನಮಿತಾ ಕೌಲ್ ಭಟ್ಟಾಚಾರ್ಯ ಗೌರವ ನಮನ ಸಲ್ಲಿಸಿದರು. 'ವಾಜಪೇಯಿ ಅವರ ಆದರ್ಶಗಳು ಭಾರತದ ಪ್ರಗತಿಯ ದಾರಿದೀಪ. ಅವರ ನಾಯಕತ್ವದಲ್ಲಿ ದೇಶ ಆರ್ಥಿಕವಾಗಿ, ರಕ್ಷಣಾ ಕ್ಷೇತ್ರದಲ್ಲಿ ಮತ್ತು ರಾಜಕೀಯವಾಗಿ ದೃಢ ಹೆಜ್ಜೆಗಳನ್ನಿಟ್ಟು ಅಭಿವೃದ್ಧಿಯ ಪಥದಲ್ಲಿ ಮುಂದೆ ಸಾಗಿತು' ಎಂದು ಪ್ರಧಾನಿ ಮೋದಿ 'ಎಕ್ಸ್' ಸಂದೇಶದಲ್ಲಿ ತಿಳಿಸಿದ್ದಾರೆ.

ಬೆಂಗಾಲ್ ಫೈಲ್ಸ್ ಟ್ರೇಲರ್ ಕೋಲ್ಕತ್ತ ಪೊಲೀಸ್ ತಡೆ

ಕೋಲ್ಕತ್ತ: 1990ರ ನಿಜ ಘಟನೆ ಆಧರಿಸಿದ 'ದಿ ಕಾಶ್ಮೀರ್ ಫೈಲ್ಸ್' ಮತ್ತು ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ನಿಗೂಢ ಸಾವಿನ ಕುರಿತು 'ದಿ ತಾಷ್ಕೆಂಟ್ ಫೈಲ್ಸ್' ಸಿನಿಮಾಗಳನ್ನು ನಿರ್ಮಿಸಿ ನಿರ್ದೇಶಿಸಿದ್ದ ಖ್ಯಾತ ಸಿನಿಮಾ ನಿರ್ದೇಶಕ ವಿವೇಕ್ ರಂಜನ್ ಅಗ್ನಿಹೋತ್ರಿ ಅವರ ಹೊಸ ಸಿನಿಮಾ 'ದಿ ಬೆಂಗಾಲ್ ಫೈಲ್ಸ್'ಗೆ ಸಂಕಷ್ಟ ಎದುರಾಗಿದೆ.

1946ರಲ್ಲಿ ಅವಿಭಜಿತ ಬಂಗಾಳದಲ್ಲಿ ನಡೆದ ಕೋಮು ಹಿಂಸಾಚಾರ ಆಧರಿಸಿದ 'ದಿ ಬೆಂಗಾಲ್ ಫೈಲ್ಸ್' ಸಿನಿಮಾ ಸೆಪ್ಟೆಂಬರ್‌ನಲ್ಲಿ ತೆರೆಗೆ ಬರಲು ಸಿದ್ಧವಾಗಿದ್ದು, ಈಗ ಅದ ಟ್ರೇಲರ್ ಬಿಡುಗಡೆಗೆ ಕೋಲ್ಕತ್ತ ಪೊಲೀಸರು ತಡೆ ಒಡ್ಡಿದ್ದಾರೆ. ಶನಿವಾರ ಮಧ್ಯಾಹ್ನ ಕೋಲ್ಕತ್ತ ಪಂಚತಾರಾ ಹೋಟೆಲ್‌ನಲ್ಲಿ ಟ್ರೇಲರ್ ಬಿಡುಗಡೆ ಕಾರ್ಯಕ್ರಮವಿತ್ತು. ಪೊಲೀಸರು ಕಾರ್ಯಕ್ರಮಕ್ಕೆ ತಡೆ ಒಡ್ಡಿದ್ದಾರೆ. ಸೆನ್ಸಾರ್ ಮಂಡಳಿಯೇ ಚಿತ್ರಕ್ಕೆ ಅನುಮತಿ ನೀಡಿದೆ. ಸಿನಿಮಾ ನಿಷೇಧಿಸುವ ರಾಜ್ಯ ಸರಕಾರದ ಕ್ರಮಕ್ಕೆ ಕೋಲ್ಕತ್ತ ಹೈಕೋರ್ಟ್ ಕೂಡಾ ತಡೆಯಾಜ್ಞೆ ನೀಡಿದೆ. ಹಾಗಿದ್ದರೂ ಪೊಲೀಸರು ನಿರ್ಬಂಧ ವಿಧಿಸಿರುವುದು ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ದಾಳಿ ಎಂದು ಚಿತ್ರ ನಿರ್ಮಾಪಕ- ನಿರ್ದೇಶಕರೂ ಆಗಿರುವ ಅಗ್ನಿಹೋತ್ರಿ ಕಿಡಿಕಾರಿದ್ದಾರೆ.

ಬೇಹು: ಜ್ಯೋತಿ ವಿರುದ್ಧ ದೋಷಾರೋಪ ಪಟ್ಟಿ

ಹರಿಯಾಣ: ಪಾಕಿಸ್ತಾನದ ಪರ ಬೇಹುಗಾರಿಕೆ ನಡೆಸಿದ ಆರೋಪದಡಿ ಬಂಧಿತಳಾಗಿರುವ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ವಿರುದ್ಧ 'ವಿಶೇಷ ತನಿಖಾ ತಂಡ'(ಎಸ್‌ಐಟಿ) ನ್ಯಾಯಾಲಯಕ್ಕೆ 2500 ಪುಟಗಳಷ್ಟು ದೀರ್ಘವಾದ ದೋಷಾರೋಪ ಪಟ್ಟಿ ಸಲ್ಲಿಸಿದೆ. ಜ್ಯೋತಿ ಮಲ್ಹೋತ್ರಾಳ ಪಾಕಿಸ್ತಾನಿ ಏಜೆಂಟ್ ಆಗಿ ಭಾರತದ ಮಹತ್ವದ ಮಾಹಿತಿಗಳನ್ನು ಸೋರಿಕೆ ಮಾಡಿದ್ದಾಳೆ. ಪಾಕ್ ಬೇಹುಗಾರರ ಜತೆ ನಿರಂತರ ಸಂಪರ್ಕದಲ್ಲಿದ್ದಳು ಎಂದು ಪೊಲೀಸರು ಆರೋಪಿಸಿದ್ದಾರೆ.

ಜ್ಯೋತಿಯ ಮೊಬೈಲ್ ಫೋನ್‌ನಿಂದ ಹಲವು ಪ್ರಮುಖ ಮಾಹಿತಿಗಳು ಸಿಕ್ಕಿವೆ. ಪಾಕ್ ಹೈಕಮಿಷನ್‌ನಲ್ಲಿ ನಿಯೋಜಿತರಾಗಿದ್ದ ಡ್ಯಾನಿಶ್ ಅಲಿಯೊಂದಿಗೆ ಜ್ಯೋತಿ ನಿರಂತರ ಸಂಪರ್ಕದಲ್ಲಿದ್ದಳು. ಜ್ಯೋತಿಯನ್ನು ಪಾಕಿಸ್ತಾನ ಟೂಲ್ ಕಿಟ್ ಆಗಿ ಬಳಸುತ್ತಿತ್ತು ಎಂದು ಎಸ್‌ಐಟಿ ದೋಷಾರೋಪ ಪಟ್ಟಿಯಲ್ಲಿ ಹೇಳಿದೆ.

ಮತಕಳವು-ಕೈ ಆರೋಪ, ಎಸ್‌ಐಆರ್ ಪ್ರಶ್ನೆ ಕುತೂಹಲ

ಇಂದು ಚು.ಆಯೋಗ ಸುದ್ದಿಗೋಷ್ಠಿ

ದೆಹಲಿ: ಭಾರತೀಯ ಚುನಾವಣಾ ಆಯೋಗ ಭಾನುವಾರ ಮಧ್ಯಾಹ್ನ 3 ಗಂಟೆಗೆ ಮಹತ್ವದ ಸುದ್ದಿಗೋಷ್ಠಿ ಕರೆದಿರುವುದು ಭಾರೀ ಕುತೂಹಲಕ್ಕೆ ಕಾರಣವಾಗಿದೆ.

ದೆಹಲಿಯ ರೈಸಿನಾ ರಸ್ತೆಯಲ್ಲಿರುವ ನ್ಯಾಷನಲ್ ಮೀಡಿಯಾ ಸೆಂಟರ್‌ನಲ್ಲಿ ಸುದ್ದಿಗೋಷ್ಠಿ ನಡೆಯಲಿದೆ ಎಂದು ಚುನಾವಣಾ ಆಯೋಗ ಶನಿವಾರ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದೆ.

ಬಿಹಾರದಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆ ಪೂರ್ಣಗೊಂಡು ಕರಡು ಮತದಾರರ ಪಟ್ಟಿ ಪ್ರಕಟಿಸಿದ ನಂತರ ಆಯೋಗ ಇದೇ ಮೊದಲ ಬಾರಿಗೆ ಸುದ್ದಿಗೋಷ್ಠಿ ನಡೆಸುತ್ತಿದೆ. ಪಿಐಬಿ ಮಾನ್ಯತೆ ಪಡೆದ ಪತ್ರಕರ್ತರು, ಟಿವಿ ಕ್ಯಾಮೆರಾಮನ್‌ಗಳಿಗಷ್ಟೇ ಭಾಗವಹಿಸಲು ಅನುಮತಿ ನೀಡಲಾಗಿದೆ. ಬಿಹಾರ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದೆ. ಇನ್ನೊಂದೆಡೆ, ಕಾಂಗ್ರೆಸ್ 'ಮತ ಕಳವು' ಆರೋಪ ಮಾಡುತ್ತಾ ಚುನಾವಣಾ ಆಯೋಗದ ವಿರುದ್ಧ ತೀವ್ರ ಸ್ವರೂಪದಲ್ಲಿ ದಾಳಿ ಮಾಡುತ್ತಿದೆ. ಉಪ ರಾಷ್ಟ್ರಪತಿ ಚುನಾವಣೆಯೂ(ಸೆ.9) ಸಮೀಪದಲ್ಲೇ ಇದೆ. ಈ ಅಂಶಗಳ ಹಿನ್ನೆಲೆಯಲ್ಲಿ ಆಯೋಗ ಸುದ್ದಿಗೋಷ್ಠಿ ಕರೆದಿರುವುದು ಭಾರೀ ನಿರೀಕ್ಷೆಗಳನ್ನು ಹುಟ್ಟುಹಾಕಿದೆ.

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಆ.1ರಂದು ಚುನಾವಣಾ ಆಯೋಗದ ವಿರುದ್ಧ ಬೆಂಗಳೂರು ನಗರ ವ್ಯಾಪ್ತಿಯ ಮಹದೇವ ಪುರದಲ್ಲಿ ಲಕ್ಷ ಮತಗಳು ಅಕ್ರಮ ನಡೆದಿದೆ. ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅಕ್ರಮವಾಗಿದೆ ಎಂದು ಗಂಭೀರ ಆರೋಪಗಳನ್ನು ಮಾಡಿದ್ದರು. 'ಮತ ಕಳವು' ಆರೋಪ ಸಂಬಂಧ ಪುರಾವೆಗಳಿವೆ ಎಂದೂ ಹೇಳಿದ್ದರು. ಈ ಹಿನ್ನೆಲೆಯಲ್ಲಿ ಆಯೋಗದ ಸುದ್ದಿಗೋಷ್ಠಿ ಬಗ್ಗೆ ಕುತೂಹಲ ಹೆಚ್ಚಿದೆ.

ಭಾರತದ 79ನೇ ಸ್ವಾತಂತ್ರ್ಯೋತ್ಸವ ಅಮೆರಿಕದಲ್ಲಿಯೂ ವಿಶೇಷ ರೀತಿ ಆಚರಣೆಗೊಂಡಿದೆ. ಸಿಯಾಟಲ್ ನಗರದಲ್ಲಿ ಬಾಹ್ಯಾಕಾಶ ಕೇಂದ್ರವಿರುವ 605 ಅಡಿಗಳಷ್ಟು ಎತ್ತರದ ಬೃಹತ್ ಕಟ್ಟಡದ ಮೇಲೆ ಭಾರತದ ರಾಷ್ಟ್ರಧ್ವಜವನ್ನು ಆ.15ರಂದು ಹಾರಿಸಲಾಗಿದೆ. ಸಿಯಾಟಲ್ ನಗರದಲ್ಲಿನ ಭಾರತದ ಕಾನ್ಸುಲ್ ಜನರಲ್ ಪ್ರಕಾಶ್ ಗುಪ್ತಾ 'ಇದು ಐತಿಹಾಸಿಕ ಕ್ಷಣ' ಎಂದಿದ್ದಾರೆ. ಮೇಯರ್ ಬ್ರೂಸ್ ಹರ್ರೆಲ್ ಈ ಸಂದರ್ಭ ಉಪಸ್ಥಿತರಿದ್ದರು.

ತಾಯ್ನಾಡಿಗೆ ಮರಳುವ ಖುಷಿ

ಅಮೆರಿಕದ ಹೊರಟಾಗ ವಿಮಾನದಲ್ಲಿ ಕುಳಿತು ನಗುತ್ತಿರುವ ಫೋಟೋವನ್ನು ಶುಕ್ಲಾ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿ ಕೊಂಡಿದ್ದಾರೆ. 'ಭಾರತಕ್ಕೆ ಮರಳಲು, ಎಲ್ಲರೊಂದಿಗೆ ಗಗನ ಯಾತ್ರೆಯ ಅನುಭವಗಳನ್ನು ಹಂಚಿಕೊಳ್ಳಲು ಉತ್ಸುಕನಾಗಿ ದ್ದೇನೆ. ಭಾರತಕ್ಕೆ ಹಿಂತಿರುಗಲು ವಿಮಾನದಲ್ಲಿ ಕುಳಿತಾಗ ನನ್ನ ಹೃದಯದಲ್ಲಿ ಮಿಶ್ರಭಾವ. ಒಂದು ವರ್ಷದಿಂದ ಗಗನಯಾತ್ರೆ ತರಬೇತಿ ಮತ್ತು ಕಾರ್ಯಾಚರಣೆ ಸಮಯದಲ್ಲಿ ಸಹೋದ್ಯೋಗಿಗಳೇ ಕುಟುಂಬವಾಗಿದ್ದರು. ಆ ಅದ್ಭುತ ಜನರನ್ನು ಬಿಟ್ಟು ತೆರಳುವುದು ದುಃಖ ತಂದಿದೆ. ಇನ್ನೊಂದೆಡೆ ವರ್ಷದ ಬಳಿಕ ಮಾತೃಭೂಮಿಗೆ ಮರಳುತ್ತಿರುವ ಖುಷಿ. ವಿದಾಯ-ನಿರೀಕ್ಷೆ ಒಂದೇ ಬಾರಿಗೆ ಅನುಭವವಾಗುತ್ತಿದೆ. ಜೀವನ ಎಂದರೆ ಇದೇ ಎಂದು ಭಾವಿಸುತ್ತೇನೆ. ಜೀವನದಲ್ಲಿ ಚಲಿಸುತ್ತಲೇ ಇರಬೇಕು. ಕಮಾಂಡರ್ ಪೆಗ್ಗಿ ವಿಟ್ಸನ್ ಹೇಳುವಂತೆ, 'ಬಾಹ್ಯಾಕಾಶ ಹಾರಾಟದಲ್ಲಿ ಏಕೈಕ ಸ್ಥಿರ ಸ್ಥಿತಿ ಎಂದರೆ ಅದು ಬದಲಾವಣೆ'. ಈ ಅಂಶ ಜೀವನಕ್ಕೂ ಅನ್ವಯಿಸುತ್ತದೆ' ಎಂದು ಶುಕ್ಲಾ ಬರೆದಿದ್ದಾರೆ.

ಭಾರತಕ್ಕಿಂದು ಶುಭಾಂಶು: ಮೊದಲಿಗೆ ಪ್ರಧಾನಿ ಭೇಟಿ

ದೆಹಲಿ: ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ(ಐಎಸ್‌ಎಸ್‌ಗೆ) ತೆರಳಿ 18 ದಿನಗಳ ಕಾಲ ಉಳಿದು, ದೇಶದ ವಿವಿಧ ಸಂಸ್ಥೆಗಳ ಹಲವಾರು ಪ್ರಯೋಗಗಳನ್ನು ಕೈಗೊಂಡು, ಬಳಿಕ ಭೂಮಿಗೆ ಸುರಕ್ಷಿತವಾಗಿ ಮರಳಿದ ಭಾರತದ ಗಗನಯಾತ್ರಿ ಶುಭಾಂಶು ಶುಕ್ಲಾ ಭಾನುವಾರ ಅಮೆರಿಕದಿಂದ ಭಾರತಕ್ಕೆ ಬರುತ್ತಿದ್ದಾರೆ. ಮೊದಲಿಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲಿದ್ದಾರೆ.

ಇಸ್ರೊದ ಮೊದಲ ಮಾನವ ಸಹಿತ 'ಗಗನ ಯಾತ್ರೆ' 2027ರಲ್ಲಿ ಕೈಗೊಳ್ಳಲಿದೆ. ಹಾಗಾಗಿ ಶುಭಾಂಶು ಬಾಹ್ಯಾಕಾಶ ಯಾನ ಅನುಭವ ವನ್ನು 'ಇಸ್ರೊ'ದ ಸಹೋದ್ಯೋಗಿಗಳ ಜತೆ ಹಂಚಿಕೊಳ್ಳಲು ಉತ್ಸುಕರಾಗಿದ್ದಾರೆ. ಬಳಿಕ ಹುಟ್ಟೂರು ಲಖನೌಗೆ ತೆರಳಲಿ ಪೋಷರನ್ನು ಕೂಡಿಕೊಳ್ಳಲಿದ್ದಾರೆ. ನಂತರ ಆ.22-23ರಂದು ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯಲ್ಲಿ ಭಾಗವಹಿಸಲು ಶುಕ್ಲಾ ದೆಹಲಿಗೆ ಹಿಂತಿರುಗುವ ನಿರೀಕ್ಷೆಯಿದೆ. ಶುಕ್ಲಾ ಗಗನಯಾನ ತರಬೇತಿ ಮತ್ತು ಆಕ್ಸಿಯೊಂ-4 ಮಿಷನ್‌ನಲ್ಲಿ ಭಾಗಿಯಾಗುವ ಸಲುವಾಗಿ ಕಳೆದೊಂದು ವರ್ಷದಿಂದ ಅಮೆರಿಕದಲ್ಲಿದ್ದರು.

ದೇಹಸ್ಥಿತಿ ದುರ್ಬಲ: ಗಗನಯಾತ್ರೆಯಿಂದ ಸುರಕ್ಷಿತವಾಗಿ ಮರಳಿದ ಬಳಿಕ ನಾಲ್ವರೂ ಗಗನಯಾತ್ರಿಗಳು ವಾರಗಳ ಕಾಲ ಏಕಾಂತ ವಾಸದಲ್ಲಿದ್ದರು. ಗುರುತ್ವಾಕರ್ಷಣೆ ಶೂನ್ಯವಾಗಿರುವ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಎರಡೂವರೆ ವಾರಗಳ ಕಾಲ ಉಳಿದಿದ್ದರಿಂದ ಶುಕ್ಲಾ ಸೇರಿದಂತೆ ಗಗನಯಾತ್ರಿಗಳ ದೇಹಸ್ಥಿತಿಯಲ್ಲಿ(ಮುಖ್ಯವಾಗಿ ಮೂಳೆಗಳ ಸಾಂದ್ರತೆ ಮತ್ತು ದೃಢತೆ) ಬಹಳಷ್ಟು ಬದಲಾವಣೆಗಳಾಗಿದ್ದವು.

ನಡಿಗೆ ಕಲಿಕೆ: ಭೂಮಿಗೆ ಮರಳಿದ ಮೊದಲಿಗೆ ಸ್ವತಃ ನಿಲ್ಲುವುದೇ ಕಷ್ಟವಾದ ಪರಿಸ್ಥಿತಿ. ಎರಡೂ ಕಾಲುಗಳ ಮೇಲೆ ದೃಢವಾಗಿ ನಿಲ್ಲುವ, ನಿಧಾನವಾಗಿ ನಡೆಯುವುದನ್ನೆಲ್ಲಾ ಸತತವಾಗಿ ಅಭ್ಯಾಸ ಮಾಡಿದ ಬಳಿಕವಷ್ಟೇ ಶುಕ್ಲಾ ದೇಹಸ್ಥಿತಿ ಸಹಜತೆಗೆ ಮರಳಿದೆ. ಆ ಬಳಿಕವಷ್ಟೇ ಅವರನ್ನು ಭಾರತಕ್ಕೆ ಕಳುಹಿಸಿಕೊಡಲಾಗುತ್ತಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಪ್ರಧಾನಿ, ಇಸ್ರೊ ಜತೆ ಐಎಸ್‌ಎಸ್ ಅನುಭವ ಹಂಚಿಕೆ



ಇಸ್ರೊ ಕಚೇರಿಗೆ ಭೇಟಿ, ನಂತರ ಲಖನೌ ಮನೆಗೆ

ನಾಲ್ವರ ಗಗನಯಾನ

ಅಮೆರಿಕದ ಖಾಸಗಿ ಬಾಹ್ಯಾಕಾಶ ಯಾನ ಸಂಸ್ಥೆಯಾದ ಆಕ್ಸಿಯೋಂನ ಮಿಷನ್-4ರಲ್ಲಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ಯಾನ ಜೂನ್ 25ರಿಂದ ಜುಲೈ 15ರವರೆಗೂ ನಡೆಯಿತು. ಅಮೆರಿಕದ ಫ್ಲೋರಿಡಾದ ನಾಸಾ ಉಡ್ಡಯನ ಕೇಂದ್ರದಿಂದ ಜೂ.25ರಂದು ಗಗನಕ್ಕೆ ಜಿಗಿದ 4 ಗಗನಯಾತ್ರಿಗಳಿದ್ದ ರಾಕೆಟ್, ಜೂ.26ರಂದು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ತಲುಪಿತು. 18 ದಿನಗಳ ಕಾಲ ಐಎಸ್‌ಎಸ್‌ನಲ್ಲಿದ್ದ 4 ಗಗನಯಾತ್ರಿಗಳನ್ನು ಹೊತ್ತ ಸ್ಪೇಸ್ ಎಕ್ಸ್ ಕಂಪನಿಯ 'ಡ್ರ್ಯಾಗನ್' ಕ್ಯಾಪ್ಸೂಲ್ ಜುಲೈ 15ರಂದು ಭೂಮಿಗೆ ಮರಳಿತು.

ಸಮಾಚಾರ ಸಣ್ಣದಲ್ಲ

ತಾನ್ಯಾ ಹೇಮಂತ್‌ಗೆ ಚಾಂಪಿಯನ್ ಪಟ್ಟ



ದೆಹಲಿ: ಭಾರತದ ಉದಯೋನ್ಮುಖ ತಾರೆ ತಾನ್ಯಾ ಹೇಮಂತ್ ಅವರು ಸೈಪಾನ್ ಇಂಟರ್‌ನ್ಯಾಷನಲ್ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ನಲ್ಲಿ ಜಪಾನ್‌ನ ಕನೆ ಸಕೈ ಅವರನ್ನು ನೇರ ಗೇಮ್‌ಗಳಿಂದ ಮಣಿಸಿ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಮೈಸೂರಿನ 21 ವರ್ಷದ ತಾನ್ಯಾ, ಉತ್ತರ ಮರೀನಾ ದ್ವೀಪಗಳ ಒಲ್ಲೆ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಶನಿವಾರ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 15–10, 15–8ರಿಂದ ಜಪಾನ್ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು. ಇದರೊಂದಿಗೆ ತಮ್ಮ ನಾಲ್ಕನೇ ಇಂಟರ್‌ನ್ಯಾಷನಲ್ ಸರಣಿಯ ಪ್ರಶಸ್ತಿಗೆ ಮುತ್ತಿಕ್ಕಿದರು. ವಿಶ್ವದ 86ನೇ ಕ್ರಮಾಂಕದ ತಾನ್ಯಾ ಅವರು ಈ ಹಿಂದೆ ಇಂಡಿಯಾ ಇಂಟರ್‌ನ್ಯಾಷನಲ್ (2022), ಇರಾನ್ ಫಜ್ರ್ ಇಂಟರ್‌ನ್ಯಾಷನಲ್ (2023) ಮತ್ತು ಬೆಂಡಿಗೊ ಇಂಟರ್‌ನ್ಯಾಷನಲ್ (2024) ಪ್ರಶಸ್ತಿ ಜಯಿಸಿದ್ದರು. ಕಳೆದ ವರ್ಷ ಅಜರ್‌ಬೈಜಾನ್ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ಅವರು ರನ್ನರ್ ಅಪ್ ಆಗಿದ್ದರು. ಸೈಪಾನ್‌ನಲ್ಲಿ ಪ್ರಶಸ್ತಿ ಗೆಲ್ಲುವ ಹಾದಿಯಲ್ಲಿ ತಾನ್ಯಾ ಸೆಮಿಫೈನಲ್‌ನಲ್ಲಿ ಜಪಾನ್‌ನ ರಿರಿನಾ ಹಿರಮೊಟೊ ವಿರುದ್ಧ, ಕ್ವಾರ್ಟರ್ ಫೈನಲ್‌ನಲ್ಲಿ ಸಿಂಗಪುರದ ಲೀ ಕ್ಸಿನ್ ಯಿ ಮೇಗನ್ ವಿರುದ್ಧ, ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಜಪಾನ್‌ನ ನೋಡೋಕಾ ಸುನಕಾವಾ ವಿರುದ್ಧ ಗೆಲುವು ಸಾಧಿಸಿದ್ದರು.

ಮಹಾರಾಜ ಕ್ರಿಕೆಟ್ ಟ್ರೋಫಿ: ಗುಲ್ಬರ್ಗಾಕ್ಕೆ ಭರ್ಜರಿ ಜಯ

ಮೈಸೂರು: ಇಲ್ಲಿ ಶನಿವಾರ ನಡೆದ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಗುಲ್ಬರ್ಗಾ ತಂಡವು ಶಿವಮೊಗ್ಗ ಲಯನ್ಸ್ ತಂಡವನ್ನು 10 ವಿಕೆಟ್‌ಗಳಿಂದ ಸೋಲಿಸಿತು. ಪಂದ್ಯಕ್ಕೆ ಮಳೆ ಅಡ್ಡಿ ಪಡಿಸಿದ್ದ ಕಾರಣಕ್ಕೆ ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ ತಂಡವು 15.5 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 127 ರನ್ ಮಾಡಿತು. ಶಿವಮೊಗ್ಗ ತಂಡದ ಪರವಾಗಿ ಧ್ರುವ್ ಪ್ರಭಾಕರ್ 44 ರನ್ ಬಾರಿಸಿದರೆ, ತುಷಾರ್ ಸಿಂಗ್ 22 ರನ್ ಗಳಿಸಿದರು. ಗುಲ್ಬರ್ಗಾ ಪರ, ಶಶಿ ಕುಮಾರ್ 2 ವಿಕೆಟ್ ಪಡೆದರೆ ವೈಶಾಖ್ ವಿಜಯ್ ಕುಮಾರ್ ಮತ್ತು ಮೋನಿಶ್ ರೆಡ್ಡಿ ತಲಾ 1 ವಿಕೆಟ್ ಪಡೆದರು. ಮಳೆಯು ಪಂದ್ಯಕ್ಕೆ ಅಡ್ಡಿ ಪಡಿಸಿದ್ದ ಕಾರಣಕ್ಕಾಗಿ ಗುಲ್ಬರ್ಗಾ ತಂಡದ ಓವರ್‌ಗಳನ್ನು ಹಾಗೂ ಗುರಿಯನ್ನು ಕಡಿತಗೊಳಿಸಲಾಗಿತ್ತು. ಗುರಿಯನ್ನು ಬೆಂಬತ್ತಿದ ಗುಲ್ಬರ್ಗಾ ತಂಡವು 6.3 ಓವರ್‌ಗಳಲ್ಲಿ ಯಾವುದೇ ವಿಕೆಟ್ ನಷ್ಟಕ್ಕೆ 93 ರನ್ ಗಳಿಸಿ 10 ವಿಕೆಟ್‌ಗಳ ಭರ್ಜರಿ ಜಯ ಗಳಿಸಿತು. ಗುಲ್ಬರ್ಗಾ ಪರ ಲುವ್ನಿತ್ ಸಿಸೋಡಿಯಾ 24 ಬಾಲ್‌ಗಳಲ್ಲಿ 58 ರನ್ ಗಳಿಸಿದರೆ, ನಿಕಿನ್ ಜೋಸ್ 15 ಬಾಲ್‌ಗಳಲ್ಲಿ 34 ರನ್ ಗಳಿಸಿ ತಂಡಕ್ಕೆ ಸುಲಭ ಜಯವನ್ನು ತಂದುಕೊಟ್ಟರು.

ಐರ್ಲೆಂಡ್ ವಿರುದ್ಧದ ಟಿ20 ಸರಣಿ | ಇಂಗ್ಲೆಂಡ್ ತಂಡಕ್ಕೆ ಅತ್ಯಂತ ಕಿರಿಯ ನಾಯಕನ ಆಯ್ಕೆ

ಇಂಗ್ಲೆಂಡ್ ಟಿ20 ತಂಡಕ್ಕೆ ಜೇಕಬ್ ಬೆಥಲ್ ನಾಯಕ

ಲಂಡನ್: 21 ವರ್ಷ ವಯಸ್ಸಿನ ಜೇಕಬ್ ಬೆಥಲ್ ಅವರು ಮುಂದಿನ ತಿಂಗಳು ಐರ್ಲೆಂಡ್ ಎದುರು ನಡೆಯಲಿರುವ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಇಂಗ್ಲೆಂಡ್ ತಂಡವನ್ನು ಮುನ್ನಡೆಸಲಿದ್ದಾರೆ. ಮೂರು ಪಂದ್ಯಗಳ ಈ ಸರಣಿಯು ಡಬ್ಲಿನ್‌ನಲ್ಲಿ ನಡೆಯಲಿದೆ. ಮುಂದಿನ ವರ್ಷ ಭಾರತ ಮತ್ತು ಶ್ರೀಲಂಕಾದ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪೂರ್ವಸಿದ್ಧತೆಯ ದೃಷ್ಟಿಯಿಂದ ಈ ಸರಣಿಯು ಇಂಗ್ಲೆಂಡ್‌ಗೆ ಮಹತ್ವ ಎನಿಸಲಿದೆ.

ವಾರ್ವಿಕ್ ಶೈರ್ ಕ್ಲಬ್ ಆಲ್‌ರೌಂಡರ್ ಆಗಿರುವ ಬೆಥೆಲ್, ಇಂಗ್ಲೆಂಡ್‌ನ ಉದಯೋನ್ಮುಖ ಆಟಗಾರರಲ್ಲಿ ಒಬ್ಬರಾಗಿದ್ದಾರೆ. ಇದುವರೆಗೂ ಅವರು ಯಾವುದೇ ಮಾದರಿಯ ಕ್ರಿಕೆಟ್‌ನಲ್ಲಿಯೂ ಶತಕ ದಾಖಲಿಸಿಲ್ಲ.

21ರ ವಯಸ್ಸಿನ ಬೆಥೆಲ್ ಅಂತಾರಾಷ್ಟ್ರೀಯ ಪಂದ್ಯವೊಂದರ ನಾಯಕನಾಗಿ ಕಣಕ್ಕಿಳಿಯುತ್ತಿರುವುದರಿಂದ ಅತೀ ಚಿಕ್ಕ ವಯಸ್ಸಿನ ಇಂಗ್ಲೆಂಡ್ ಕ್ರಿಕೆಟ್ ತಂಡದ ನಾಯಕ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದು, ಇಂಗ್ಲೆಂಡ್‌ನ ಮಾಜಿ ನಾಯಕ ಮಾಂಟಿ ಬೌಡೆನ್ ಅವರ ದಾಖಲೆಯನ್ನು ಅಳಿಸಿದ್ದಾರೆ. 1888–89ರಲ್ಲಿ ಕೇಪ್‌ಟೌನ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಆಡಿದ್ದ ಇಂಗ್ಲೆಂಡ್ ತಂಡವನ್ನು ಮಾಂಟಿ ಮುನ್ನಡೆಸಿದ್ದಾಗ ಅವರಿಗೆ 23 ವರ್ಷ, 144 ದಿನಗಳ ವಯಸ್ಸಾಗಿತ್ತು.

ಜೇಕಬ್ ಬೇಥಲ್ ಇದುವರೆಗೆ ನಾಲ್ಕು ಟೆಸ್ಟ್, 13 ಟಿ20 ಮತ್ತು 12 ಏಕದಿನ ಪಂದ್ಯಗಳಲ್ಲಿ ಇಂಗ್ಲೆಂಡ್ ತಂಡವನ್ನು ಪ್ರತಿನಿಧಿಸಿದ್ದಾರೆ. ಇತ್ತೀಚೆಗೆ ಲಂಡನ್‌ನ ಓವಲ್‌ನಲ್ಲಿ ನಡೆದಿದ್ದ ಭಾರತ ಮತ್ತು ಇಂಗ್ಲೆಂಡ್ ನಡುವಣ ಸರಣಿಯ ಐದನೇ ಟೆಸ್ಟ್‌ನಲ್ಲಿ ಅವರು ಆಡಿದ್ದರು. ಆದರೆ ಎರಡು ಇನಿಂಗ್ಸ್‌ಗಳಲ್ಲಿ ಕ್ರಮವಾಗಿ ಆರು ಮತ್ತು ಐದು ರನ್ ಅಷ್ಟೇ ಗಳಿಸಿದ್ದರು. ಎಡಗೈ ಸ್ಪಿನ್ನರ್ ಆಗಿರುವ ಅವರು ಬೌಲಿಂಗ್‌ನಲ್ಲಿ ವಿಕೆಟ್ ಗಳಿಸಿರಲಿಲ್ಲ.

ಐರ್ಲೆಂಡ್ ಪ್ರವಾಸ: ಇಂಗ್ಲೆಂಡ್ ಟಿ20 ತಂಡ

ಜಾಕೋಬ್ ಬೆಥೆಲ್ (ನಾಯಕ), ರೆಹಾನ್ ಅಹ್ಮದ್, ಸೋನಿ ಬೇಕರ್, ಟಾಮ್ ಬ್ಯಾಂಟನ್, ಜೋಸ್ ಬಟ್ಲರ್ , ಲಿಯಾಮ್ ಡಾಸನ್, ಟಾಮ್ ಹಾರ್ಟ್ಲಿ, ವಿಲ್ ಜ್ಯಾಕ್ಸ್, ಸಾಕಿಬ್ ಮಹಮೂದ್, ಜೇಮೀ ಓವರ್ಟನ್, ಮ್ಯಾಥ್ಯೂ ಪಾಟ್ಸ್, ಆದಿಲ್ ರಶೀದ್, ಫಿಲ್ ಸಾಲ್ಟ್, ಲ್ಯೂಕ್‌ವುಡ್.

ಅಧಿಕೃತ ಪ್ರಕಟಣೆ ಹೊರಡಿಸಿರುವ ಇಸಿಬಿ, 'ಇಂಗ್ಲೆಂಡ್ ತಂಡದಲ್ಲಿ ಜೇಕಬ್ ಬೆಥೆಲ್ ತಮ್ಮ ನಾಯಕತ್ವದ ಗುಣಗಳಿಂದ ಪ್ರಭಾವಿತರಾಗಿದ್ದಾರೆ, ಹಾಗಾಗಿ ಐರ್ಲೆಂಡ್ ವಿರುದ್ಧದ ಸರಣಿಯಲ್ಲಿ ಆ ಕೌಶಲಗಳನ್ನು ಮತ್ತಷ್ಟು ಬೆಳೆಸಲೆಂದು ಅವರಿಗೆ ನಾಯಕನಾಗಿ ಅವಕಾಶವನ್ನು ನೀಡಲಾಗಿದೆ' ಎಂದು ತಿಳಿಸಿದೆ.

ಐರ್ಲೆಂಡ್ ಪ್ರವಾಸದ ಟಿ20 ಇಂಗ್ಲೆಂಡ್ ತಂಡಕ್ಕೆ ಮಾರ್ಕಸ್ ಟ್ರೆಸ್ಕೊಥಿಕ್ ಹೆಡ್‌ಕೋಚ್ ಆಗಿ ನೇಮಕವಾಗಿದ್ದಾರೆ.

ಸೇಂಟ್ ಲೂಯಿ ಚೆಸ್ ಟೂರ್ನಿ | ಪ್ರಶಸ್ತಿ ಗೆದ್ದ ಅರೋನಿಯನ್

ಗುಕೇಶ್‌ಗೆ ಜಂಟಿ 6ನೇ ಸ್ಥಾನ

ಸೇಂಟ್ ಲೂಯಿ (ಅಮೆರಿಕ): ಅಮೆರಿಕದ ಲೆವೋನ್ ಅರೋನಿಯನ್ ಅವರು ಸೇಂಟ್ ಲೂಯಿ ರ್‍ಯಾಪಿಡ್ ಮತ್ತು ಬ್ಲಿಟ್ಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಈ ಟೂರ್ನಿಯ ಕಣದಲ್ಲಿದ್ದ ಭಾರತದ ಏಕೈಕ ಆಟಗಾರ ಡಿ. ಗುಕೇಶ್ ಜಂಟಿ ಆರನೇ ಸ್ಥಾನ ಪಡೆಯಲಷ್ಟೇ ಶಕ್ತರಾದರು.

ವಿಶ್ವ ಚಾಂಪಿಯನ್ ಗುಕೇಶ್, ಟೂರ್ನಿಯ ಕೊನೆಯ ದಿನ ಮೊದಲ ನಾಲ್ಕು ಬ್ಲಿಟ್ಸ್ ಪಂದ್ಯಗಳಲ್ಲಿ 3.5 ಅಂಕ ಪಡೆದು ಪುನರಾಗಮನ ಮಾಡುವಂತೆ ಕಂಡರು, ಆದರೆ ಕೊನೆಯ ಐದು ಪಂದ್ಯಗಳಲ್ಲಿ ಮೂರನ್ನು ಡ್ರಾ ಮಾಡಿಕೊಂಡ ಅವರು ಎರಡರಲ್ಲಿ ಸೋತು ಉತ್ತಮ ಆರಂಭದ ಲಾಭ ಪಡೆಯಲಾಗಲಿಲ್ಲ.

ರ್‍ಯಾಪಿಡ್ ಮತ್ತು ಬ್ಲಿಟ್ಸ್‌ನಲ್ಲಿ ಒಟ್ಟು 24.5 ಅಂಕ ಕಲೆ ಹಾಕಿದ ಆರೋನಿಯನ್ ಚಾಂಪಿಯನ್ ಆಗಿ ಟ್ರೋಫಿ ಜೊತೆ ರು.35 ಲಕ್ಷ ನಗದು ಬಹುಮಾನ ಪಡೆದರು. ಜುಲೈನಲ್ಲಿ ಲಾಸ್ ವೇಗಸ್ ಫ್ರೀಸ್ಟೈಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ 42 ವರ್ಷ ವಯಸ್ಸಿನ ಆರೋನಿಯನ್ ಇದೀಗ ಸತತ ಎರಡನೇ ಪ್ರಶಸ್ತಿ ಗೆದ್ದಂತಾಗಿದೆ.

ಅಮೆರಿಕದ ಇನ್ನೊಬ್ಬ ಆಟಗಾರ ಫ್ಯಾಬಿಯಾನೊ ಕರುವಾನ (21.5) ಎರಡನೇ ಮತ್ತು ಅರ್ಧ ಪಾಯಿಂಟ್ ಅಂತರದಿಂದ ಹಿಂದೆ ಬಿದ್ದ ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾಮ್ (21) ಮೂರನೇ ಸ್ಥಾನ ಗಳಿಸಿದರು. ನದಿರ್ಬೆಕ್ ಅಬ್ದುಸತ್ತಾರೋವ್ (20.5) ಮತ್ತು ವೆಸ್ಲಿ ಸೊ (19) ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಗಳಿಸಿದರು.

ಗುಕೇಶ್ 18 ಪಾಯಿಂಟ್‌ಗಳೊಡನೆ ಪಂದ್ಯ ಮುಗಿಸಿದರು. ವಿಯೆಟ್ನಾಮಿನ ಲೀಮ್ ಲೆ ಕ್ವಾಂಗ್ ಸಹ ಇಷ್ಟೇ ಅಂಕ ಸಂಪಾದಿಸಿದರು. ಶುಕ್ರವಾರ ಮೊದಲ ಪಂದ್ಯ ಡ್ರಾ ಮಾಡಿಕೊಂಡಿದ್ದ ಗುಕೇಶ್, ನಂತರ ಶಂಕ್ಲಾಂಡ್, ವೆಸ್ಲಿ ಸೊ ಮತ್ತು ಅಬ್ದುಸತ್ತಾರೋವ್ ಅವರನ್ನು ಮಣಿಸಿದ್ದರು, ಆದರೆ ಅದೇ ಲಯದಲ್ಲಿ ಸಾಗಲು ಅವರಿಂದ ಕೊನೆಯ ವರೆಗೂ ಸಾಧ್ಯವಾಗಲಿಲ್ಲ.

ಆಸೀಸ್‌ಗೆ ರೋಚಕ ಗೆಲುವು

ದಕ್ಷಿಣ ಆಫ್ರಿಕಾ ಬೌಲರ್‌ಗಳನ್ನು ಬೆಂಡೆತ್ತಿದ ಗ್ಲೆನ್ ಮ್ಯಾಕ್ಸ್‌ವೆಲ್

ಕೈರ್ನ್ಸ್: ಇಲ್ಲಿನ ಕಸಾಲಿಸ್ ಸ್ಟೇಡಿಯಂನಲ್ಲಿ ಶನಿವಾರ ನಡೆದ 3ನೇ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ದ. ಆಫ್ರಿಕಾ ವಿರುದ್ಧ 2 ವಿಕೆಟ್‌ಗಳ ರೋಚಕ ಗೆಲುವನ್ನು ಸಾಧಿಸಿತು. ಮೊದಲು ಬ್ಯಾಟ್ ಮಾಡಿದ್ದ ದ. ಆಫ್ರಿಕಾ ತಂಡವು ನಿಗದಿತ ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 172 ರನ್‌ಗಳನ್ನು ಗಳಿಸಿತು. ಆ ಗುರಿಯನ್ನು ಬೆಂಬತ್ತಿದ ಆಸ್ಟ್ರೇಲಿಯಾ ತಂಡವು 19.5 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 173 ರನ್ ಗಳಿಸಿ ತನ್ನ ಗೆಲುವನ್ನು ದಾಖಲಿಸಿಕೊಂಡಿತು.

ಆಸ್ಟ್ರೇಲಿಯಾದ ನಾಯಕ ಮಿಚೆಲ್ ಮಾರ್ಷ್ ಟಾಸ್ ಗೆದ್ದು ದಕ್ಷಿಣ ಆಫ್ರಿಕಾ ತಂಡವನ್ನು ಮೊದಲ ಬ್ಯಾಟಿಂಗ್‌ಗೆ ಕಳಿಸಿದರು. ಎರಡನೇ ಟಿ20 ಪಂದ್ಯದಲ್ಲಿ ಬಿರುಸಿನ ಶತಕ ಸಿಡಿಸಿದ ಡೆವಾಲ್ಡ್ ಬ್ರೆವಿಸ್ ಮೂರನೇ ಪಂದ್ಯದಲ್ಲೂ ತಮ್ಮ ಆಕರ್ಷಕ ಬ್ಯಾಟಿಂಗ್ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಆಸ್ಟ್ರೇಲಿಯಾದ ಬೌಲರ್‌ಗಳಿಗೆ ಬೆವರಿಳಿಸಿದ ಅವರು, ತಮ್ಮ ಸ್ಫೋಟಕ ಇನ್ನಿಂಗ್ಸ್ ಪ್ರದರ್ಶಿಸಿದರು. ಆರೋನ್ ಹಾರ್ಡಿ ಅವರ ಒಂದು ಓವರ್‌ನಲ್ಲಿ ಹ್ಯಾಟ್ರಿಕ್ ಸಿಕ್ಸರ್ ಸಹಿತ 26 ರನ್ ಸಿಡಿಸಿದರು. 26 ಎಸೆತಗಳಲ್ಲಿ 53 ರನ್ ಗಳಿಸಿದ್ದ ವೇಳೆ, ಡೆವಾಲ್ಡ್ ಬ್ರೆವಿಸ್ ಅವರನ್ನು ನೇಥನ್ ಎಲ್ಲಿಸ್ ಔಟ್ ಮಾಡಿದರು.

ರಾಸಿ ವ್ಯಾನ್ ಡೆರ್ ಡಸೆನ್ 38 ರನ್ ಗಳಿಸಿ, ಕೊನೆಯವರೆಗೂ ಅಜೇಯರಾಗುಳಿದರು. ಟ್ರಿಸ್ಟನ್ ಸ್ಟಬ್ಸ್ 25 ರನ್‌ಗಳ ಇನ್ನಿಂಗ್ಸ್ ಆಡಿದರು. ನೇಥನ್ ಎಲ್ಲಿಸ್ 3 ವಿಕೆಟ್ ಪಡೆದು ಆಸ್ಟ್ರೇಲಿಯಾದ ಅತ್ಯಂತ ಯಶಸ್ವಿ ಬೌಲರ್ ಎನಿಸಿದರೆ, ಹೇಜಲ್‌ವುಡ್ ಮತ್ತು ಆ್ಯಡಮ್ ಝಂಪಾ ತಲಾ ಎರಡು ವಿಕೆಟ್ ಪಡೆದರು.

ಗುರಿ ಬೆನ್ನಟ್ಟಿದ್ದ ಆಸ್ಟ್ರೇಲಿಯಾ ಉತ್ತಮ ಆರಂಭವನ್ನೇ ಪಡೆಯಿತು. ನಾಯಕ ಮಿಚೆಲ್ ಮಾರ್ಷ್ 37 ಬಾಲ್‌ಗಳಲ್ಲಿ 54 ರನ್ ಗಳಿಸಿ ತಂಡಕ್ಕೆ ಆರಂಭದಲ್ಲೇ ತಂಡಕ್ಕೆ ಭದ್ರ ಬುನಾದಿ ಹಾಕಿದರು. ಆದರೆ ಮಧ್ಯಮ ಕ್ರಮಾಂಕದ ಆಸೀಸ್ ಬ್ಯಾಟರ್‌ಗಳಿಂದ ನಿರೀಕ್ಷಿತ ಮಟ್ಟದ ಪ್ರದರ್ಶನ ಮೂಡಿ ಬರಲಿಲ್ಲ. ಬಳಿಕ ಗ್ಲೆನ್ ಮ್ಯಾಕ್ಸ್‌ವೆಲ್ 36 ಬಾಲ್‌ಗಳಲ್ಲಿ 62 ರನ್ ಬಾರಿಸಿ ಅಜೇಯರಾಗುಳಿದು ಆಸೀಸ್ ತಂಡವನ್ನು ಗೆಲುವಿನತ್ತ ಕೊಂಡೊಯ್ದರು.

ಆಸೀಸ್ ಕ್ರಿಕೆಟ್ ದಿಗ್ಗಜ ಬಾಬ್ ಸಿಮ್ಸನ್ ನಿಧನ

ಸಿಡ್ನಿ: ಆಸ್ಟ್ರೇಲಿಯಾ ಟೆಸ್ಟ್ ಕ್ರಿಕೆಟ್ ತಂಡದ ಮಾಜಿ ನಾಯಕ ಬಾಬ್ ಸಿಮ್ಸನ್ ಅವರು ನಿಧನರಾಗಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ (ಸಿ.ಎ) ಶನಿವಾರ ತಿಳಿಸಿದೆ, ಅವರಿಗೆ 89 ವರ್ಷ ವಯಸ್ಸಾಗಿತ್ತು.

ಆಲ್‌ರೌಂಡರ್ ಆಗಿದ್ದ ಸಿಮ್ಸನ್, ಆಸ್ಟ್ರೇಲಿಯಾ ತಂಡದ ಪರ 1957–78ರ ಅವಧಿಯಲ್ಲಿ 62 ಟೆಸ್ಟ್ ಆಡಿದ್ದಾರೆ. 10 ಶತಕ ಸಹಿತ 4,869 ರನ್ ಗಳಿಸಿರುವ ಅವರು, 71 ವಿಕೆಟ್‌ಗಳನ್ನೂ ಗಳಿಸಿದ್ದಾರೆ.



ಆಸ್ಟ್ರೇಲಿಯಾ ಕ್ರಿಕೆಟ್‌ನ ಸುವರ್ಣಯುಗಕ್ಕೆ ನಾಂದಿ ಹಾಡಿದ್ದ ಕ್ರಿಕೆಟಿಗ

'ಆಸ್ಟ್ರೇಲಿಯಾದ ಶ್ರೇಷ್ಠ ಕ್ರಿಕೆಟಿಗರಲ್ಲಿ ಬಾಬ್ ಸಿಮ್ಸನ್ ಕೂಡ ಒಬ್ಬರು. ಅವರ ಆಟವನ್ನು ವೀಕ್ಷಿಸಿದ್ದ ಯಾರಿಗೇ ಆದರೂ ಅವರ ಅಗಲುವಿಕೆ ಅತ್ಯಂತ ದುಃಖದ ದಿನ. ಪ್ರತಿಭಾವಂತ ಆರಂಭಿಕ ಬ್ಯಾಟರ್, ಅತ್ಯುತ್ತಮ ಸ್ಲಿಪ್ ಫೀಲ್ಡರ್ ಮತ್ತು ಉತ್ತಮ ಸ್ಪಿನ್ ಬೌಲರ್ ಆಗಿದ್ದ ಸಿಮ್ಸನ್, 1960ರ ದಶಕದಲ್ಲಿ ಆಸ್ಟ್ರೇಲಿಯಾದ ಬಲಿಷ್ಠ ತಂಡದ ಪ್ರಮುಖ ಆಟಗಾರನಾಗಿದ್ದರು. ಆಸ್ಟ್ರೇಲಿಯಾ ತಂಡ ಹಾಗೂ ನ್ಯೂ ಸೌತ್ ವೇಲ್ಸ್‌ನ ನಾಯಕ ಮತ್ತು ಕೋಚ್ ಆಗಿ ಹೊರಹೊಮ್ಮಿದ್ದರು' ಎಂದು ಕ್ರಿಕೆಟ್ ಆಸ್ಟ್ರೇಲಿಯಾ ಮುಖ್ಯಸ್ಥ ಮೈಕ್ ಬೇರ್ಡ್ ಹೇಳಿದ್ದಾರೆ. ಅವರು ತರಬೇತುದಾರರಾಗಿದ್ದ ಸಂದರ್ಭದಲ್ಲಿ ಆಸ್ಟ್ರೇಲಿಯಾ ಕ್ರಿಕೆಟ್‌ನ ಸುವರ್ಣಯುಗ ಆರಂಭವಾಯಿತು' ಎಂದೂ ಅಭಿಪ್ರಾಯಪಟ್ಟಿದ್ದಾರೆ. ಆಸೀಸ್ ತಂಡದಲ್ಲಿ ಶಿಸ್ತು ಮೂಡಿಸಿದ್ದ ಸಿಮ್ಸನ್, ಆಸ್ಟ್ರೇಲಿಯಾ ಪಡೆಯು ಅಲನ್ ಬಾರ್ಡರ್ ನಾಯಕತ್ವದಲ್ಲಿ 1987ರ ಏಕದಿನ ವಿಶ್ವಕಪ್ ಗೆಲ್ಲಲು ಮತ್ತು ಆ್ಯಷಸ್ ಟೂರ್ನಿಯಲ್ಲಿ ಜಯ ಸಾಧಿಸಲು ಕಾರಣರಾಗಿದ್ದರು. 'ಬಾಬ್ ಸಿಮ್ಸನ್ ಅವರ ಅಸಾಧಾರಣ ಸೇವೆಯು ಆಸ್ಟ್ರೇಲಿಯಾ ಕ್ರಿಕೆಟ್ ಅನ್ನು ತಲೆಮಾರುಗಳವರೆಗೆ ಅವರಿಸಿದೆ' ಎಂದು ಆಸ್ಟ್ರೇಲಿಯಾ ಪ್ರಧಾನಿ ಅಂಥೋಣಿ ಅಲ್ಬನೀಸ್ ಟ್ವೀಟ್ ಮಾಡಿದ್ದಾರೆ.

ಸುಪ್ರೀಂಕೋರ್ಟ್‌ಗೆ ಐಎಸ್‌ಎಲ್ ಬಿಕ್ಕಟ್ಟು

ದೆಹಲಿ: ಇಂಡಿಯನ್ ಸೂಪರ್ ಲೀಗ್‌ನ (ಐಎಸ್‌ಎಲ್) ಬಿಕ್ಕಟ್ಟನ್ನು ಸುಪ್ರೀಂ ಕೋರ್ಟ್ ಮುಂದೆ ಪ್ರಸ್ತಾಪಿಸಲು ಅಖಿಲ ಭಾರತ ಫುಟ್ಬಾಲ್ ಫೆಡರೇಷನ್ ಸಿದ್ಧತೆ ನಡೆಸಿದೆ. ಎಐಎಫ್‌ಎಫ್ ಸಂವಿಧಾನದ ಕರಡಿಗೆ ಸಂಬಂಧಿಸಿದಂತೆ ತೀರ್ಪನ್ನು ಸುಪ್ರೀಂಕೋರ್ಟ್ ಕಾಯ್ದಿರಿಸಿದ್ದು, ಈ ಕುರಿತಾದ ವಿಚಾರಣೆ ಸೋಮವಾರ ನಿಗದಿಯಾಗಿದೆ. ಅಂದು ಇಂಡಿಯನ್ ಸೂಪರ್ ಲೀಗ್ ಸಮಸ್ಯೆ ಕುರಿತು ಪ್ರಸ್ತಾಪಿಸಲಿದೆ. ಎಐಎಫ್‌ಎಫ್ ಮತ್ತು ಲೀಗ್ ಆಯೋಜಕರಾದ ಎಫ್‌ಎಸ್‌ಡಿಎಲ್ ನಡುವೆ ಮಾಸ್ಟರ್ ರೈಟ್ಸ್ ಒಪ್ಪಂದ ನವೀಕರಣಕ್ಕೆ ಸಂಬಂಧಿಸಿದ ಗೊಂದಲ ಬಗೆಹರಿದಿಲ್ಲದ ಕಾರಣ ಈ ಸಲದ ಲೀಗ್ ಅನಿಶ್ಚಿತತೆಗೆ ಸಾಗಿದೆ. ಮತ್ತೊಂದೆಡೆ ಬಿಕ್ಕಟ್ಟು ಶಮನ ಆಗುವವರೆಗೂ ಆಟಗಾರರು ಮತ್ತು ಸಹಾಯಕ ಸಿಬ್ಬಂದಿಯ ವೇತನವನ್ನು ಕ್ಲಬ್‌ಗಳು ತಡೆ ಹಿಡಿದಿವೆ.

ಫಾರ್ಮ್‌ಗೆ ಮರಳಿದ ಸಂಜು ಸ್ಯಾಮ್ಸನ್

ತಿರುವನಂತಪುರ: 2025ರ ಏಷ್ಯಾ ಕಪ್ ಟೂರ್ನಿಯ ಭಾರತ ತಂಡ ಪ್ರಕಟವಾಗುವ ಮೊದಲೇ ಕೇರಳ ಬ್ಯಾಟರ್ ಸಂಜು ಸ್ಯಾಮ್ಸನ್ ಕೇರಳ ಕ್ರಿಕೆಟ್ ಅಸೋಸಿಯೇಶನ್ ಕಾರ್ಯದರ್ಶಿ ತಂಡದ ಪರ ಅದ್ಭುತ ಇನಿಂಗ್ಸ್ ಆಡಿ ಆಯ್ಕೆ ಸಮಿತಿಯ ಗಮನ ಸೆಳೆದಿದ್ದಾರೆ. ತಿರುವನಂತಪುರದ ಗ್ರೀನ್‌ಫೀಲ್ಡ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ 36 ಎಸೆತಗಳಲ್ಲಿ 2 ಬೌಂಡರಿ ಮತ್ತು 3 ಸಿಕ್ಸರ್‌ಗಳೊಂದಿಗೆ 54 ರನ್ ಬಾರಿಸಿದ್ದಾರೆ.

ಕೂಲಿಯ ಕಲ್ಯಾಣಿಗೆ ಭರ್ಜರಿ ಡಿಮ್ಯಾಂಡ್

ಸ್ಯಾಂಡಲ್‌ವುಡ್‌ನ ಡಿಂಪಲ್ ಕ್ವೀನ್ ರಚಿತಾ ರಾಮ್, ಕಾಲಿವುಡ್ ಅಂಗಳದಲ್ಲಿ ಬ್ಯುಸಿಯಾಗಿದ್ದಾರೆ. ರಚ್ಚು, ಕೂಲಿ ಚಿತ್ರದಲ್ಲಿ ಕಲ್ಯಾಣಿ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಹೊಸ ಪಾತ್ರದಲ್ಲಿ ಕಮಾಲ್ ಮಾಡಿದ್ದಾರೆ. ಕಲ್ಯಾಣಿ ರೋಷಾ ಆವೇಶ ಭರಿತ ಪಾತ್ರವಾಗಿದ್ದು, ರಚಿತಾಗೆ ಪ್ರಸಿದ್ಧಿ ತಂದುಕೊಟ್ಟಿದೆ. ಈ ಹಿಂದಿನ ಎಲ್ಲಾ ಸಿನಿಮಾಗಳಲ್ಲಿ ಗ್ಲಾಮರ್ ಲುಕ್‌ನಲ್ಲಿ ಮಿಂಚಿದ್ದ ರಚ್ಚು, ಕೂಲಿಯಲ್ಲಿ ಡಿಗ್ಲಾಮರ್ ಆಗಿ ಕಾಣಿಸಿಕೊಂಡಿದ್ದಾರೆ. ತನ್ನ ತಂಟೆಗೆ ಬಂದವರನ್ನು ಸದೆ ಬಡಿಯುವ ಆ್ಯಕ್ಷನ್ ದೃಶ್ಯದಲ್ಲಿಯೂ ಅಬ್ಬರಿಸಿದ್ದಾರೆ. ಕಲ್ಯಾಣಿ ನೆಗೆಟಿವ್ ಶೇಡ್ ಆಗಿದ್ದು, ಆ ಪಾತ್ರಕ್ಕೆ ಬಹಳ ಪ್ರಾಮುಖ್ಯತೆಯೂ ಇದೆ. ರಚಿತಾ ಈ ಹಿಂದೆಯೇ ನನಗೆ ನೆಗೆಟಿವ್ ಪಾತ್ರದಲ್ಲಿ ನಟಿಸಬೇಕು ಎಂದುಕೊಂಡಿದ್ದರು, ಅದು ಈ ಸಿನಿಮಾದ ಮೂಲಕ ಈಡೇರಿದೆ. ಕೂಲಿಯಲ್ಲಿ ರಚ್ಚು ನೋಡಿದ ಅಭಿಮಾನಿಗಳು ಬಹುಪರಾಕ್ ಎಂದಿದ್ದಾರೆ. ಕಲ್ಯಾಣಿ ಪಾತ್ರ ರಚ್ಚುಗೆ ಬಿಗ್ ಬ್ರೇಕ್ ನೀಡಿದ್ದು, ತಮಿಳಿನ ಸಿನಿಮಾಗಳಲ್ಲಿ ನಟಿಸಲು ಸಾಲು ಸಾಲು ಅವಕಾಶಗಳು ಅರಸಿ ಬರುತ್ತಿವೆ. ಹಾಗಾಗಿ ಕಾಲಿವುಡ್ ಅಂಗಳದಲ್ಲಿ ರಚ್ಚುಗೆ ಭರ್ಜರಿ ಬೇಡಿಕೆ ಇದೆ. ಈ ಹಿಂದೆ ತೆಲುಗು ಚಿತ್ರದಲ್ಲಿಯೂ ರಚಿತಾ ಬಣ್ಣಹಚ್ಚಿದ್ದರು, ಆದರೆ ಟಾಲಿವುಡ್ ಅಂಗಳದಲ್ಲಿ ಯಶಸ್ಸು ಕಾಣಲಿಲ್ಲ. ಈಗ ಕೂಲಿಯ ಮೂಲಕ ಕಾಲಿವುಡ್‌ನಲ್ಲಿ ಯಶಸ್ಸು ಸಿಕ್ಕಿದೆ. ಸದ್ಯ ಕನ್ನಡದ ಅಯೋಗ್ಯ 2, ಕಲ್ಟ್ ಸೇರಿದಂತೆ ಹಲವು ಸಿನಿಮಾಗಳಲ್ಲಿ ರಚಿತಾ ನಟಿಸುತ್ತಿದ್ದಾರೆ.

ಮಹನ್ಮೌನದ ಮಧುರ ಗಾನ

ಹೊಸಬರೇ ನಿರ್ಮಿಸಿ, ನಿರ್ದೇಶಿಸಿರುವ ಆಸ್ಟಿನ್‌ನ ಮಹನ್ಮೌನ ಚಿತ್ರದ ಹಾಡುಗಳು ಬಿಡುಗಡೆಯಾಗಿವೆ. ವಿನಯ್ ಕುಮಾರ್ ವೈದ್ಯನಾಥನ್ ಈ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದು ನಾಯಕನಾಗಿಯೂ ಅಭಿನಯಿಸಿದ್ದಾರೆ. ರಂಗಭೂಮಿಯಲ್ಲಿ ಗುರುತಿಸಿಕೊಂಡಿರುವ ರಿಷಾ ಗೌಡ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಚಿತ್ರದಲ್ಲಿ ಹೋಮ್ಲಿ ಹುಡುಗಿಯಾಗಿ ಅಭಿನಯಿಸಿದ್ದೇನೆ. ಚಿತ್ರದ ಕಂಟೆಂಟ್ ಅದ್ಭುತವಾಗಿದ್ದು, ಸಿನಿಮಾ ಸೊಗಸಾಗಿ ಮೂಡಿ ಬಂದಿದೆ ಎಂದು ರಿಷಾ ಸಂತಸದಿಂದ ನುಡಿದರು. ಪ್ರಕೃತಿ ಪ್ರಸಾದ್ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ರಘು ರಾಮನ ಕೊಪ್ಪ, ಜಗಪ್ಪ, ಸ್ವಾತಿ ಸೇರಿದಂತೆ ಹಲವು ಕಲಾವಿದರು ತಾರಾಗಣದಲ್ಲಿದ್ದಾರೆ. ಚಿತ್ರದಲ್ಲಿ ಒಟ್ಟು ಆರು ಹಾಡುಗಳಿದ್ದು, ಅದರಲ್ಲಿ ಒಂದು ಹಾಡು ಲಾಟಿನ್ ಭಾಷೆಯಲ್ಲಿ ಮೂಡಿಬಂದಿರುವುದು ವಿಶೇಷವಾಗಿದೆ. ಚಿತ್ರದ ಹಾಡುಗಳಿಗೆ ವಿಶ್ವಿ ಸಂಗೀತ ಸಂಯೋಜಿಸಿದ್ದಾರೆ. ರಾಜಕಾಂತ್ ಛಾಯಾಗ್ರಹಣ, ಶ್ರೀನಿವಾಸ್ ಹಾಗೂ ಶಶಿಧರ್ ಸಂಕಲನ ಈ ಸಿನಿಮಾಗಿದೆ. ಎರಡು ವರ್ಷಗಳ ಹಿಂದೆ ಆರಂಭಗೊಂಡ ಈ ಚಿತ್ರ ಮೈಸೂರು, ಹೊನ್ನಾವರ ಹಾಗೂ ಚಿಕ್ಕಮಗಳೂರು ಸುತ್ತಮುತ್ತ ಸುಮಾರು 23 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಸದ್ಯದಲ್ಲಿಯೇ ಸಿನಿಮಾದ ಟ್ರೇಲರ್ ರಿಲೀಸ್ ಆಗಲಿದ್ದು, ಸೆಪ್ಟಂಬರ್ 5ರಂದು ಚಿತ್ರ ರಾಜ್ಯಾದ್ಯಂತ ತೆರೆಗೆ ಬರಲಿದೆ.

ಇದೊಂದು ಪ್ಯೂರ್ ಎಮೋಷನಲ್, ಲವ್, ಥ್ರಿಲ್ಲಿಂಗ್ ಸ್ಟೋರಿಯನ್ನು ಒಳಗೊಂಡಿದೆ. ಆಸ್ಟಿನ್ ಎನ್ನುವುದು ನಾಯಕನ ಪಾತ್ರದ ಹೆಸರು, ಈ ಚಿತ್ರದಲ್ಲಿ ನನ್ನದು ಎರಡು ಶೇಡ್‌ಗಳಲ್ಲಿ ಬರುವಂತಹ ಪಾತ್ರ. ಅದು ಯಾಕೆ ಏನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಈ ಚಿತ್ರದಲ್ಲಿ ಇರುವ ಎಲ್ಲಾ ಪಾತ್ರಗಳು ಕ್ರಿಶ್ಚಿಯನ್ ಧರ್ಮದಾಗಿದ್ದು, ತೊಂಬತ್ತರ ಕಾಲಘಟ್ಟದಲ್ಲಿ ನಡೆಯುವ ಕಥಾನಕವನ್ನು ಒಳಗೊಂಡಿದೆ.

– ವಿನಯ್ ಕುಮಾರ್ ವೈದ್ಯನಾಥನ್ ನಿರ್ದೇಶಕ

ವಿಟಾಕೀಸ್

ಲುಕ್ ಬದಲಾಗಿದೆ ಲಕ್ ಒಲಿಯಲಿದೆ

ಮಹಾಬಲನಾಗಿ ಕರಾವಳಿಯ ಸೊಗಡಿನ ಸಂಭಾಷಣೆಯಲ್ಲಿ ಮನಗೆದ್ದರೆ, ಲ್ಯಾಂಡ್‌ಲಾರ್ಡ್‌ನಲ್ಲಿ ಕೋಲಾರದ ಭಾಷೆ ಇದೆ. ಮಹಾನ್‌ನಲ್ಲಿ ಮಂಡ್ಯದ ಡೈಲಾಗ್ ಮನಸೆಳೆಯುವಂತಿದೆ.

ಪ್ರಶಾಂತ್.ಟಿ.ಆರ್

ನಟ ಮಿತ್ರನ ಹೆಸರು ಕೇಳಿದಾಕ್ಷಣ ಅವರ ಕಾಮಿಡಿ ಸನ್ನಿವೇಶಗಳು ನಮ್ಮ ಕಣ್ಣ ಮುಂದೆ ಹಾದು ಹೋಗುತ್ತವೆ. ಹಾಗಂತ ಮಿತ್ರ ಈಗ ಹಾಸ್ಯ ಪಾತ್ರಗಳಿಗೆ ಸೀಮಿತವಾಗಿಲ್ಲ, ಹೊಸತನಕ್ಕೆ ಹೊರಳಿದ್ದು, ಭಿನ್ನ, ವಿಭಿನ್ನ ಪಾತ್ರಗಳನ್ನು ಆಯ್ದುಕೊಳ್ಳುತ್ತಿದ್ದಾರೆ. ಗಂಭೀರವಾದ ಪಾತ್ರಗಳಿಗೆ ಜೀವ ತುಂಬುತ್ತಿದ್ದಾರೆ. ತಮ್ಮ ಇತ್ತೀಚಿನ ಸಿನಿಮಾಗಳು, ಪಾತ್ರಗಳ ಬಗ್ಗೆ ಮಿತ್ರ, ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

- **ಹಾಸ್ಯದಿಂದ ಗಂಭೀರವಾದ ಪಾತ್ರಗಳತ್ತ ಹೊರಳಿದ್ದು?**

ಮಿತ್ರ: ನಾನು ಎರಡು ದಶಕಗಳಿಂದ ಹಾಸ್ಯಮಯ ಪಾತ್ರಗಳಲ್ಲಿಯೇ ಪ್ರೇಕ್ಷಕರನ್ನು ರಂಜಿಸಿದ್ದೆ. ಈ ನಡುವೆ ನನಗೂ ಪ್ರಬುದ್ಧ ಪಾತ್ರಗಳನ್ನು ನಿರ್ವಹಿಸಬೇಕು ಎಂಬ ಹಂಬಲವಿತ್ತು. ರಾಗ ಮತ್ತು ಪರಸಂಗ ಸಿನಿಮಾಗಳಲ್ಲಿ ಹೊಸತನ ಪಾತ್ರಗಳನ್ನು ಆಯ್ದುಕೊಂಡೆ. ಈ ಸಿನಿಮಾಗಳಲ್ಲಿ ನನ್ನ ಪಾತ್ರ ಎಮೋಷನ್ ಆಗಿ ಸಾಗಿತು. ಮುಂದಿನ ಸಿನಿಮಾಗಳಲ್ಲಿ ಮತ್ತಷ್ಟು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಮನಸಾಯಿತು. ಆಗ ಸಿಕ್ಕಿದ್ದು, ಕರಾವಳಿ ಸಿನಿಮಾದ ಪವರ್ ಫುಲ್ ಪಾತ್ರ.

- **ಕರಾವಳಿಯಲ್ಲಿ ನಿಮ್ಮ ಪಾತ್ರ ?**

ಮಿತ್ರ : ಕರಾವಳಿಯಲ್ಲಿ ಮಹಾಬಲ ಎನ್ನುವ ಪಾತ್ರ ನಿರ್ವಹಿಸಿದ್ದೇನೆ. ಮಹಾಬಲ ಕಂಡ ಕನಸೆ ಕರಾವಳಿ. ಇದು ಅತ್ಯದ್ಭುತಪಾತ್ರವಾಗಿದ್ದು, ಬಹಳ ಪ್ರಾಮುಖ್ಯತೆ ಇದೆ. ಕಂಬಳ ಹಿನ್ನೆಲೆಯಲ್ಲಿ ಸಾಗುವ ಕರಾವಳಿಯಲ್ಲಿ ಸಂಘರ್ಷ, ಕ್ರೌರ್ಯ, ಜಾತಿ ವ್ಯವಸ್ಥೆ ಅದರ ಹಿಂದಿನ ಕಿಚ್ಚು ಇದೆಲ್ಲವೂ ಅಡಕವಾಗಿದೆ. ಈ ಸಿನಿಮಾ ಹೊಸ ಬೆಂಚ್ ಮಾರ್ಕ್ ಕ್ರಿಯೇಟ್ ಮಾಡಲಿದೆ ಎನ್ನುವ ನಂಬಿಕೆ ನನಗಿದೆ.

- **ಮಹಾನ್‌ನಲ್ಲಿ ವಿಲನ್ ಪಾತ್ರವೆ?**

ಮಿತ್ರ : ಪಿ.ಸಿ.ಶೇಖರ್ ನಿರ್ದೇಶನದ ಮಹಾನ್ ಹೊಸತನದ ಕಥೆಯನ್ನು ಹೊತ್ತು ಬರುತ್ತಿದೆ. ಮಹಾನ್‌ನಲ್ಲಿ ನನ್ನದು ಮಹಾಭಾರತದಲ್ಲಿನ ಅರ್ಜುನನಂತಹ ಪಾತ್ರ. ನಾಯಕನ ಕೃಷಿ ಕ್ರಾಂತಿಗೆ ಸಾಥ್ ನೀಡುವ ನನ್ನ ಪಾತ್ರ ಪ್ರಬುದ್ಧವಾಗಿ ಮೂಡಿಬಂದಿದೆ. ಈ ಹಿಂದೆ ನಾನು ಅಭಿನಯಿಸಿದ್ದ ರಾಗ ಚಿತ್ರದಲ್ಲಿ ನನ್ನ ಅಭಿನಯದ ಹಂಬಲವನ್ನು ಕಂಡಿದ್ದ ಪಿ.ಸಿ.ಶೇಖರ್ ಈ ಚಿತ್ರದಲ್ಲಿ ವಿಭಿನ್ನ ಪಾತ್ರ ನೀಡಿದ್ದಾರೆ. ಮಹಾನ್‌ನಲ್ಲಿ ನನ್ನ ಲುಕ್ ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ವಿಭಿನ್ನವಾಗಿದೆ.

ಇತ್ತೀಚೆಗೆ ನಾನು ಆಯ್ದುಕೊಳ್ಳುತ್ತಿರುವ ಪಾತ್ರಗಳಲ್ಲಿ ನನ್ನ ಲುಕ್ ಬದಲಾಗಿದೆ, ಅಂತೆಯೇ ನನ್ನ ಲಕ್ ಕೂಡ ಬದಲಾಗಲಿದೆ ಎಂಬ ನಿರೀಕ್ಷೆ ನನಗಿದೆ.

- **ಲ್ಯಾಂಡ್ ಲಾರ್ಡ್ ಹೊಸತನ ತರಲಿದೆಯೆ?**

ಜಡೇಶ್ ಕುಮಾರ್ ಸಾರಥ್ಯ ದಲ್ಲಿ ಲ್ಯಾಂಡ್ ಲಾರ್ಡ್ ಅದ್ದೂರಿಯಾಗಿ ಸಿದ್ಧವಾಗು ತ್ತಿದೆ. ಕರಾವಳಿ, ಮಹಾನ್ ಸಿನಿಮಾಕ್ಕಿಂತ ಇಲ್ಲಿ ಭಿನ್ನ ಪಾತ್ರ ನಿರ್ವಹಿಸಿದ್ದೇನೆ. ನಿರ್ದೇಶಕ ಜಡೇಶ್ ಕುಮಾರ್ ಒಳ್ಳೆಯ ಕಥೆ ಹೆಣೆದು ಅದನ್ನು ಎಲ್ಲರಿಗೂ ಮೆಚ್ಚುವಂತೆ ಕಟ್ಟಿಕೊಡುತ್ತಿದ್ದಾರೆ. ದುನಿಯಾ ವಿಜಯ್, ರಚಿತಾ ರಾಮ್ ಸೇರಿದಂತೆ ದೊಡ್ಡ ಕಲಾವಿದರ ದಂಡೇ ಸಿನಿಮಾದಲ್ಲಿದೆ.

ಪ್ರವಾಸೋದ್ಯಮ ಮತ್ತು ಆತಿಥ್ಯ ಕ್ಷೇತ್ರಕ್ಕೆ ಮೀಸಲಾದ ವಿಶೇಷ, ನೂತನ ವಾರ ಪತ್ರಿಕೆ 'ಪ್ರವಾಸಿ ಪ್ರಪಂಚ'ಕ್ಕೆ ರಾಜ್ಯಾದ್ಯಂತ ಬೇಡಿಕೆ ಹೆಚ್ಚಿದ್ದು, ಬೆಂಗಳೂರು, ಹಾಸನ, ಮೈಸೂರು ಮತ್ತು ತುಮಕೂರು ನಗರಗಳಲ್ಲಿ ಎಲ್ಲೆಲ್ಲಾ ಲಭ್ಯವಿದೆ ? ಸ್ಟಾಲ್ ಹಾಗೂ ಏಜೆಂಟರ ಸಂಪರ್ಕ ಮಾಹಿತಿ ನಿಮಗಾಗಿ.

ಪ್ರವಾಸಿ ಪ್ರಪಂಚ

ವಿಹಾರವೇ ವಿಶ್ವ!

ಬೆಂಗಳೂರು

ಸಪ್ನ ಬುಕ್ಸ್ ಸ್ಟಾಲ್
ಗಾಂಧಿ ನಗರ, 080 - 40114455

ಸ್ನೇಹ ಬುಕ್ಸ್ ಸ್ಟಾಲ್
ಶ್ರೀನಗರ ಬಸ್ ಸ್ಟ್ಯಾಂಡ್, 9845031335

ರಾಮಣ್ಣ ಸ್ಟೋರ್
15ನೇ ಕ್ರಾಸ್, ಮಲ್ಲೇಶ್ವರಂ, 9686080425

ವಿಕೆಜಿ ಸ್ಟೋರ್
ಮಾರ್ಗೋಸಾ ರಸ್ತೆ, ವೀಣಾ ಸ್ಟೋರ್ ಹೊಟೇಲ್ ಹತ್ತಿರ, ಮಲ್ಲೇಶ್ವರಂ, 9108559070

ರಾಘವೇಂಧ್ರ ಸ್ಟೋರ್
ಮಾರ್ಗೋಸಾ ರಸ್ತೆ, 8ನೇ ಕ್ರಾಸ್, ಮಲ್ಲೇಶ್ವರಂ, 9482558153

ಆನಂದ್ ರಾವ್ ಸ್ಟೋರ್
ಸಾಯಿ ಬಾಬ ದೇವಸ್ಥಾನದ ಮುಂಭಾಗ, ಸಂಪಿಗೆ ರಸ್ತೆ, ಮಲ್ಲೇಶ್ವರಂ, 8762228792

ಸುಬ್ರಹ್ಮಣಿ ಸ್ಟೋರ್
ಶ್ರೀರಾಂಪುರ ಮೆಟ್ರೋ ಸ್ಟೇಷನ್ ಮುಂಭಾಗ, 7338554290

ಶ್ರೀ ಮಂಜುನಾಥ ಸ್ಟೋರ್
ವಿತ್ರ ಪ್ಯಾರಡೈಸ್, ಬಸವೇಶ್ವರ ನಗರ ಹತ್ತಿರ 9620888827

ಪ್ರಗತಿ ಬುಕ್ಸ್ ಸ್ಟೋರ್
ಮತ್ತಿಕೆರೆ, 9986717802

ಮಂದಾರತಿ ನ್ಯೂಸ್ ಏಜೆನ್ಸಿ
ನಂಜಪ್ಪ ಸರ್ಕಲ್ ಹತ್ತಿರ, ವಿದ್ಯಾರಣ್ಯಪುರ 9206110759

ಪುಟ್ಟಣ್ಣ ನ್ಯೂಸ್ ಏಜೆನ್ಸಿ
ಆರ್ಟಿಓ ಹತ್ತಿರ, ಯಶವಂತಪುರ 9206110759

ಮಾರುತಿ ನ್ಯೂಸ್ ಏಜೆನ್ಸಿ
ಸುಂಕದಕಟ್ಟೆ ಬಸ್ ನಿಲ್ದಾಣ, 9480322492

ಬುಕ್ ವಾರ್ಡ್
ಅಲಂಕಾರ್ ಪ್ಲಾಜಾ, ಪೋತೀಸ್ ಮುಂಭಾಗ, ಗಾಂಧಿ ನಗರ, 9242889199

ಬಿಟಿಎಸ್ ಸ್ಟೋರ್
ಬಿಎಂಟಿಸಿ ಬಸ್ ನಿಲ್ದಾಣ, ಮೆಜೆಸ್ಟಿಕ್, 9844891514

ಗಣೇಶ ಸ್ಟೋರ್
ರಾಜೀವ್ ಗಾಂಧಿ ಪ್ರತಿಮೆ ಮುಂಭಾಗ, ಶೇಷಾದ್ರಿಪುರಂ, 8482896768

ಅಶೋಕ್ ಬುಕ್ಸ್ ಸ್ಟೋರ್
ವಿಲ್ಸನ್ ಗಾರ್ಡನ್, 9036815343

ಶ್ರೀ ಮಂಜುನಾಥ ಸ್ಟೋರ್
ಆಂಜನೇಯ ದೇವಸ್ಥಾನದ ಹತ್ತಿರ, ಬೊಮ್ಮನಹಳ್ಳಿ, 9742226703

ರೂಪ ಸ್ಟೋರ್
ಗಂಗಾನಗರ್ ಬಿಟಿಎಸ್ ಬಸ್ ನಿಲ್ದಾಣ 9740187308

ವಿಜಯ್ ನಗರ ಬುಕ್ಸ್ ಸ್ಟೋರ್
ವಿಜಯನಗರ, 9535328004

ಅರುಣ ಸ್ಟೋರ್
ಗಾಂಧಿನಗರ ಮುಖ್ಯ ರಸ್ತೆ, ಕಪಾಲಿ ಚಿತ್ರಮಂದಿರದ ಮುಂಭಾಗ, 9845002619

ಅಂಭಾ ಸ್ಟೋರ್
ಮಲ್ಲೇಶ್ವರಂ ಗುಟ್ಟಳ್ಳಿ ರಸ್ತೆ, 8762228792

ಅಮೃತಾ ಸ್ಟೋರ್
ಮಲ್ಲೇಶ್ವರಂ, 11ನೇ ಅಡ್ಡರಸ್ತೆ, 9845827795

ಅನುರಾಧಾ ಸ್ಟೋರ್
ಶ್ರೀರಾಂಪುರ ಮೆಟ್ರೋ ಹಿಂಭಾಗ, 9008277200

ಕುಸುಮ ಸ್ಟೋರ್
ಡಾ.ರಾಜ್ ಕುಮಾರ್ ರಸ್ತೆ, 3ನೇ ಬ್ಲಾಕ್ ರಾಜಾಜಿನಗರ, 9880553010

ಕೃಷ್ಣ ಸ್ಟೋರ್
ರಾಮಮಂದಿರ, ರಾಜಾಜಿನಗರ, 9845199217

ಶಿವ ಸ್ಟೋರ್
ರಾಮಮಂದಿರ, ರಾಜಾಜಿನಗರ, 9945221286

ಮಧು ಶ್ರೀ ಸ್ಟೋರ್
ವಿನಾಯಕ ಸರ್ಕಲ್, ಪಿಜಿ ಹಳ್ಳಿ, 9980188785

ಮಂಜುನಾಥ ನ್ಯೂಸ್ ಏಜೆನ್ಸಿ
ಎನ್ ಆರ್ ಕಾಲೋನಿ, ದ್ವಾರಕಾ ಹೊಟೇಲ್ ಪಕ್ಕದ ಬಿಲ್ಡಿಂಗ್, 9980605026

ರಾಜ್ ಕಮಲ್
ಎನ್ ಆರ್ ಕಾಲೋನಿ, ದ್ವಾರಕಾ ಹೊಟೇಲ್ ಮುಂಭಾಗ, 9341909110

ರಾಘವೇಂದ್ರ ಸ್ಟೋರ್
ಎನ್ ಆರ್ ಕಾಲೋನಿ, ನೆಟ್ಕಲಪ್ಪ ಸರ್ಕಲ್ ಹತ್ತಿರ, 9108903704

ಕಾಮತ್ ಸ್ಟೋರ್
ಗಾಂಧಿಬಜಾರ್, ಶಿವ ದೇವಸ್ಥಾನದ ಹತ್ತಿರ 9845935391

ಸುವರ್ಣ ಸ್ಟೋರ್
ಗಾಂಧಿಬಜಾರ್, ಠಾಗೋರ್ ಸರ್ಕಲ್ 9980860349

ಸೌತ್ ಎಂಡ್ ಸ್ಟೋರ್
ಬಸವನಗುಡಿ, ಸೌತ್ ಎಂಡ್ ಸರ್ಕಲ್ ಹತ್ತಿರ 9945580868

ಅಮೃತಾ ಸ್ಟೋರ್
ಶ್ರೀನಿವಾಸ ನಗರ ಮುಖ್ಯರಸ್ತೆ 9986385999

ಶಾರದಾ ಸ್ಟೋರ್
ನಿರ್ಮಲ ಸ್ಟೋರ್ , ಹನುಮಂತನಗರ ಮುಖ್ಯರಸ್ತೆ, 9845456072

ಮಹಾರಾಜ ಸ್ಟೋರ್
ಬ್ಯಾಂಕ್ ಕಾಲೋನಿ, 9632438363

ವಿಜಯಲಕ್ಷ್ಮಿ ಸ್ಟೋರ್
ಎನ್ ಆರ್ ಕಾಲೋನಿ,9900215042

ಸುಬ್ರಹ್ಮಣ್ಯ ಸ್ಟೋರ್
ವಿದ್ಯಾಪೀಠ ಸರ್ಕಲ್, 8861967790

ಎಸ್ ಎಲ್ ವಿ ಹೊಟೇಲ್ ಸ್ಟಾಲ್
ಪದ್ಮನಾಭ ನಗರ, 9535442356

ಅಭಿ ಸ್ಟಾಲ್
ಉತ್ತರಹಳ್ಳಿ ಮುಖ್ಯರಸ್ತೆ , 9743197271

ರಾಜು ನ್ಯೂಸ್ ಪೇಪರ್ ಸ್ಟಾಲ್
ಇಸ್ರೋ ಲೇಔಟ್, 9535198761

ನಂದಿನಿ ಪಾರ್ಲರ್
ಎಇಸಿಎಸ್ ಲೇಔಟ್, ಕುಂದನಹಳ್ಳಿ, ಮಾರತಹಳ್ಳಿ, 9060391499

ಜೆ ಆರ್ ಎಮ್ ಜ್ಯೂಶ್ ಸೆಂಟರ್
ಗಾಂಧಿ ನಗರ, ಮುನಿಕೋಣೇನಹಳ್ಳಿ ಮಾರತಹಳ್ಳಿ,9060391499

ಜನ ವಾಹಿನಿ ರಮೇಶ್ ಸ್ಟೋರ್
ಅವೆನ್ಯೂ ರಸ್ತೆ , 8317433759

ಮ್ಯಾಗಜಿನ್ ಸ್ಟೋರ್
ಕಾಂಪ್ಲೆಕ್ಸ್, ಬನಶಂಕರಿ 2ನೇ ಹಂತ, 8892151661

ಮಂಜುನಾಥ ಪಾನ್ ಸ್ಟಾಲ್
ಮಾರುತಿ ಮಂದಿರ ಮುಂಭಾಗ, ವಿಜಯನಗರ 8317433736

ಕಲಾ ನ್ಯೂಸ್ ಏಜೆನ್ಸಿ
ಮಾರ್ಕೆಟ್ ರಸ್ತೆ , ಟಿ.ದಾಸರಹಳ್ಳಿ 9945034402

ನಂದಿನಿ ಮಿಲ್ಕ್ ಸ್ಟೋರ್
ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ, ನಾಗರಬಾವಿ ಬಿಡಿಎ ಕಾಂಪ್ಲೆಕ್ಸ್, 9845866318

ಎಂ ಕೆ ಸ್ಟೋರ್
ಕುಮಾರಸ್ವಾಮಿ ಲೇಔಟ್, 9886120191

ರಾಜೇಶ್ವರಿ ನ್ಯೂಸ್ ಪೇಪರ್ ಏಜೆನ್ಸಿ
ಕದರಿಹಳ್ಳಿ, ಬಸ್ ನಿಲ್ದಾಣದ ಮುಂಭಾಗ 9449163563

ಲಾವಣ್ಯ ಕಾಂಡಿಮೆಂಟ್ಸ್
ಬಿಎಸ್ ಕೆ ರಿಂಗ್ ರಸ್ತೆ , ಬೆಂಗಳೂರು ಒನ್ ಹತ್ತಿರ 9448884021

ಆರಾಧ್ಯ ನ್ಯೂಸ್ ಪೇಪರ್
ಬಿಡಿಎ ಕಾಂಪ್ಲೆಕ್ಸ್, ಬನಶಂಕರಿ 2ನೇ ಹಂತ 8892151661

ನಂದಿನಿ ಮಿಲ್ಕ್ ಪಾರ್ಲರ್
ಬಿಎಸ್ ಕೆ ರಿಂಗ್ ರಸ್ತೆ , ಬಿಎಂಟಿಸಿ ಡಿಪೋ ಹಿಂಭಾಗ, 7975889787

ಎಸ್ ಶಿವಲಿಂಗಯ್ಯ ನಂದಿನಿ ಮಿಲ್ಕ್ ಬೂತ್
ಮಹದೇಶ್ವರ ಸ್ಟೋರ್ , ಬ್ಯಾಂಕ್ ಕಾಲೋನಿ ಬಸ್ ನಿಲ್ದಾಣ, 9880455907

ಮೂಕಾಂಬಿಕ ಸ್ಟೋರ್
ಎಸ್ ಎಲ್ ವಿ ಹೊಟೇಲ್ ಹತ್ತಿರ , ಕತ್ರಿಗುಪ್ಪೆ ಮುಖ್ಯ ರಸ್ತೆ, 9845919105

ಪ್ರಭಾಸ್ ಸ್ಟೋರ್
ಬಿಇಎಂಎಲ್ ಕಾಂಪ್ಲೆಕ್ಸ್, ಆರ್ ಆರ್ ನಗರ, 9538579992

ಶ್ರೀ ಮಂಜುನಾಥ ಕಾಂಡಿಮೆಂಟ್ಸ್
ನಿಮಿಷಾಂಬ ದೇವಸ್ಥಾನದ ಮುಂಭಾಗ, ಆರ್ ಆರ್ ನಗರ, 8861485113

ನಾಗರಾಜ ಮ್ಯಾಗಝಿನ್ ಸೆಂಟರ್
ರೈಲ್ವೆ ನಿಲ್ದಾಣ, ಮೆಜೆಸ್ಟಿಕ್, 7022527949

ಪರಿಮಳ ಸ್ಟೋರ್
ಎಲ್ ಹೆಚ್ ವಿಧಾನ ಸೌಧ, 9980602865

ಜಗದೀಶ್ ನ್ಯೂಸ್ ಏಜೆನ್ಸಿ
ಕಾಲೇಜ್ ಸ್ಟಾಪ್ , ಬ್ಯಾಡರಹಳ್ಳಿ, ಮಾಗಡಿ 6362146576

ಕೃಷ್ಣ ಸ್ಟೋರ್
ಗಂಗಮ್ಮ ಸರ್ಕಲ್ , ಹೆಚ್ಎಂಟಿ ಮುಖ್ಯ ರಸ್ತೆ 9964464164

ಗಂಗಾ ಬುಕ್ಸ್ ಸ್ಟೋರ್
ಗಂಗಮ್ಮ ಸರ್ಕಲ್ , ಹೆಚ್ಎಂಟಿ ಮುಖ್ಯ ರಸ್ತೆ 9880381118

ಈಶ್ವರ್ ಬುಕ್ಸ್ ಸ್ಟೋರ್
ವಸಂತನಗರ, 7676059036

ಭಾರತ್ ನ್ಯೂಸ್ ಏಜೆನ್ಸಿ
ಎಂ ಎಸ್ ರಾಮಯ್ಯ ಆಸ್ಪತ್ರೆ ರಸ್ತೆ, ಶ್ರೀ ಶಂಕರ ಟಿವಿ ಮುಂಭಾಗ, ಸಂಜಯನಗರ 9845803260

ಮಂಜುನಾಥ್ ಕಾಂಡಿಮೆಂಟ್ಸ್
ಗಂಗಮ್ಮ ಸರ್ಕಲ್, ಹೆಚ್ಎಂಟಿ ಮುಖ್ಯ ರಸ್ತೆ ಅಂಬೇಡ್ಕರ್ ಕಾಲೇಜು ಸರ್ಕಲ್ ಮಲ್ಲತ್ ಹಳ್ಳಿ, 9004656117

ಪ್ರಿಯಾಂಕ ಸ್ಟೋರ್
ಕೆಂಗೇರಿ ಪೋಸ್ಟ್ ಆಫೀಸ್ ಮುಂಭಾಗ 9901268094

ಶ್ರೀ ಕೃಷ್ಣ ಬುಕ್ಸ್ ಸ್ಟೋರ್
ಅಕ್ಷಯ ನಗರ, ದೇವಸಂದ್ರ ರಸ್ತೆ , ಕೆ ಆರ್ ಪುರಂ, 9916975177

ಅಂಭಾಜಿ ನ್ಯೂಸ್ ಏಜೆನ್ಸಿ
ಮರಿಯಪ್ಪನಪಾಳ್ಯ ಪಾರ್ಕ್ ಮುಂಭಾಗ, ನವರಂಗ್ ನಿಂದ ಮಲ್ಲೇಶ್ವರಂ ರಸ್ತೆ, 7204920356

ಆರ್ ಆರ್ ಪಾನ್ ಶಾಪ್
ಮಲ್ಲೇಶ್ವರಂ, ಸಂಪಿಗೆ ರಸ್ತೆ, ಸಾಯಿಬಾಬ ದೇವಸ್ಥಾನದ ಹಿಂಭಾಗ, 8197504277

ಬಾಲಾಜಿ ಬುಕ್ ಸ್ಟೋರ್
ರಾಜಾಜಿ ನಗರ, ಇಎಸ್ ಐ ಆಸ್ಪತ್ರೆ ರಸ್ತೆ, 9620369493

ವಿಜಯಲಕ್ಷ್ಮಿ
ಜಯನಗರ 9ನೇ ಬ್ಲಾಕ್, 7625071310

ಮೈಸೂರು

ಗೌರಿ ಶಂಕರ ಬುಕ್ಸ್ ಸ್ಟಾಲ್
ಕೆ.ಆರ್ ಸರ್ಕಲ್ , ಮೈಸೂರು 94485 28575

ಮಂಜುನಾಥ ಬುಕ್ಸ್ ಸ್ಟಾಲ್
ನಜರ್ಬಾದ್ , ಸಂದೇಶ್ ಹೊಟೇಲ್ ಹತ್ತಿರ, ಮೈಸೂರು, 94485 28575

ಶಂಕರ್ ಬುಕ್ಸ್ ಸ್ಟಾಲ್
ನಜರ್ಬಾದ್, ಸಂದೇಶ್ ಹೊಟೇಲ್ ಹತ್ತಿರ, ಮೈಸೂರು, 94485 28575

ಭವ್ಯ ನ್ಯೂಸ್ ಪೇಪರ್
ಮೈಲಾರಿ ಹೊಟೇಲ್ ಹತ್ತಿರ, ನಜರ್ಬಾದ್, ಮೈಸೂರು, 94485 28575

ಸ್ಟಾಪ್ ಇನ್ ಸ್ಟಾಪ್
14ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು, 94485 28575

ಮಂಜುನಾಥ ಸ್ಟೋರ್
ಚಂದ್ರಕಲಾ ಆಸ್ಪತ್ರೆ ಹತ್ತಿರ, ವಿಜಯನಗರ, ಮೈಸೂರು, 94485 28575

ಬಾಬು ಬುಕ್ಸ್
ಮೆಷಿನ್ ಹಾಸ್ಪಿಟಲ್ ರಸ್ತೆ ಮೈಸೂರು, 94485 28575

ಶ್ರೀಕಾಂತ್ ಸ್ಟೋರ್
ಮೆಷಿನ್ ಹಾಸ್ಪಿಟಲ್ ಮೈಸೂರು, 94485 28575

ಪರಮೇಶ್ ಸ್ಟೋರ್
ಜೆ ಪಿ ನಗರ, ಗೋಬಳಿಮರ, ಮೈಸೂರು, 94485 28575

ಗೋವಿಂದು ಬೀಡಾ ಸ್ಟಾಲ್
ಶಾಂತಿಸಾಗರ್, ಕುವೆಂಪು ನಗರ ಹತ್ತಿರ, ಮೈಸೂರು,94485 28575

ಕುಮಾರ್ ಸ್ಟೋರ್
ವಿವೇಕಾನಂದ ಸರ್ಕಲ್ , ರಾಮಕೃಷ್ಣ ನಗರ, ಮೈಸೂರು, 94485 28575

ಹಿಮಕರ ಎಂಟರ್ಪ್ರೈಸಸ್
ರಾಮಾನುಜ ರಸ್ತೆ, ಎಸ್ ಬಿಐ ಹತ್ತಿರ, ಮೈಸೂರು

ಮಧು ಫ್ರುಟ್ಸ್
ಬಲ್ಲಾಳ್ ಸರ್ಕಲ್, ಮೈಸೂರು, 94485 28575

ಮಹಾದೇವ್ ಸ್ಟಾಲ್
ಮಹೇಶ್ ಪ್ರಸಾದ್ ಹೊಟೇಲ್ ಮುಂಭಾಗ, ಬಲ್ಲಾಳ್ ಸರ್ಕಲ್ ಹತ್ತಿರ, ಮೈಸೂರು, 94485 28575

ಆನಂದ್ ನ್ಯೂಸ್ ಏಜೆನ್ಸಿ
ಟಿ ನರಸೀಪುರ 7760244438

ಚನ್ನಕೇಶವ
ನಾಗಮಂಗ, 9845269110

ಚೈತನ್ಯ ನ್ಯೂಸ್ ಏಜೆನ್ಸಿ
ಕೆ.ಆರ್ ನಗರ, 9964123731

ಹಾಸನ

ಸಾಗರ್ ವೆರೈಟಿ ಸೆಂಟರ್
ಕೆ ಆರ್ ಪುರಂ, ಹಾಸನ, 9845892686

ಶ್ರೀ ರಾಮ ಸ್ಟೋರ್
ಸುಧಾ ಹಾಸ್ಪಿಟಲ್ ಹತ್ತಿರ, ಹಳೆಯ ಬಸ್ ನಿಲ್ದಾಣ, ಹಾಸನ, 9481669286

ವೆಂಕಟೇಶ್ವರ ಬುಕ್ಸ್ ಸ್ಟೋರ್
ಸಾಲುಗುಪ್ಪೆ ರಸ್ತೆ, ಸರಸ್ವತಿಪುರಂ, ಹಾಸನ, 9916166060

ತುಮಕೂರು

ನಾಗರಾಜ್ ಸ್ಟೋರ್
ಹನುಮಂತಪುರ, ತುಮಕೂರು 9964210518

ಸಪ್ತಗಿರಿ ಕಾಫಿ ವರ್ಕ್ಸ್
ಸುನಿತಾ ಹೊಟೇಲ್ ಮುಂಭಾಗ, ಸರಸ್ವತಿಪುರಂ ತುಮಕೂರು, 9880393711

ಎಸ್.ಎಸ್. ಎಂಟರ್ಪ್ರೈಸಸ್
ಬನಶಂಕರಿ ಸರ್ಕಲ್, ತುಮಕೂರು, 9480862462

ಲಕ್ಷ್ಮಿ ಸ್ಟೋರ್
ಸರಸ್ವತಿಪುರಂ ಮುಖ್ಯರಸ್ತೆ, ತುಮಕೂರು, 9611029815

ದರ್ಶನ್ ನ್ಯೂಸ್ ಏಜೆನ್ಸಿ
ದರ್ಶನ್ ಪ್ರಿಂಟರ್ಸ್, ಸರಸ್ವತಿಪುರಂ, ತುಮಕೂರು, 8904400474



» ಲಕ್ಷ್ಮಣ್ ಗೊರ್ಲಕಟ್ಟೆ ಮೈಸೂರು

ಯಕಶ್ಚಿತ್ ಸೊಳ್ಳೆಗಳಿಗಾಗಿ ಒಂದು ದಿನ ಇದೆ ಎಂಬುದು ವಿಸ್ಮಯ! ಅಲ್ಲವೆ! ಸೊಳ್ಳೆಗಳಿಂದ ಹರಡುವ ಸೋಂಕಿನಿಂದ ನಾವೆಲ್ಲಾ ಎಚ್ಚರದಿಂದಿರಬೇಕು ಎಂದು ವಿಶ್ವ ಸೊಳ್ಳೆ ದಿನವನ್ನು ಆಗಸ್ಟ್ 20 ರಂದು ಆಚರಿಸಲಾಗುತ್ತಿದೆ. ಮಲೇ ರಿಯಾ ರೋಗವು ಸೊಳ್ಳೆಗಳಿಂದ ಹರಡುತ್ತದೆ ಎಂದು ರೊನಾಲ್ಡ್ ರಾಸ್ ಎಂಬ ವೈದ್ಯನು ಕಂಡು ಹಿಡಿದದ್ದು ಆಗಸ್ಟ್ 20 ರಂದು. ಆ ನಂತರ ಮಲೇರಿಯಾವು ಜಗತ್ತಿನಾದ್ಯಂತ ನಿಯಂತ್ರಣಕ್ಕೆ ಬಂತು ಎನ್ನಬಹುದು.

ಸೊಳ್ಳೆಗೂ ಒಂದು ವಿಶ್ವ ದಿನ ಇದೆಯೇ? ಹೌದು ವಿಶ್ವ ಸೊಳ್ಳೆಯ ದಿನ ಇದೆ ಎಂದರೆ ಆಶ್ಚರ್ಯ ಪಡದಿರಿ. ಪ್ರತಿ ವರ್ಷ ಆಗಸ್ಟ್ 20 ರಂದು ವಿಶ್ವ ಸೊಳ್ಳೆಯ ದಿನ. ಇದು ಸಂಭ್ರಮ ಪಡಲು ಅಲ್ಲ, ಎಚ್ಚರಿಕೆ ವಹಿಸಲು! ಗಾತ್ರದಲ್ಲಿ ಹೋಲಿಸಿದರೆ ಸೊಳ್ಳೆಗೂ ಮನುಷ್ಯನಿಗೂ ಅಜಗಜಾಂತರ ವ್ಯತ್ಯಾಸ. ಹೀಗಿದ್ದೂ ಸಾಸುವೆ ಕಾಳಿನಷ್ಟು ಸಣ್ಣದಾದ ಸೊಳ್ಳೆಯು ಕಚ್ಚಿದರೆ ಮಲೇರಿಯ, ಡೆಂಗ್ಯೂ, ಜೀಕಾ ವೈರಸ್ ಹಳದಿ ಜ್ವರ ಮುಂತಾದ ಮಾರಣಾಂತಿಕ ರೋಗದಿಂದ ಬಲಿ ಆಗಲೂ ಬಹುದು. ಸೊಳ್ಳೆ ಸಣ್ಣದೆಂದು ನಿರ್ಲಕ್ಷ್ಯ ಮಾಡುವಂತಿಲ್ಲ. ಅದಕ್ಕೆಂದೇ ವಿಶ್ವ ಸೊಳ್ಳೆಯ ದಿನ ನಾವು ಸೊಳ್ಳೆಯಿಂದ ಹರಡುವ ರೋಗಗಳಿಂದ ರಕ್ಷಿಸುವ ಉಪಾಯಗಳ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ಜಾಗೃತಿ ಮೂಡಿಸುವ ದಿನ.

ರೋನಾಲ್ಡ್ ರೋಸ್, ಮಲೇರಿಯ ರೋಗಕ್ಕೆ ಕಾರಣ ಅನಾಫಿಲೀಸ್ ಸೊಳ್ಳೆಯು ಕಚ್ಚುವುದರಿಂದ ಎಂದು ಕಂಡುಹಿಡಿದದ್ದು ಸಿಕಂದರಾಬಾದ್ ನಗರದ ಬಳಿ ಬೇಗಂಪೇಟ್‌ನಲ್ಲಿನ ಒಂದು ಸಣ್ಣ ಪ್ರಯೋಗಶಾಲೆಯಲ್ಲಿ! ಈ ಪ್ರಯೋಗಶಾಲೆಗೆ ರೊನಾಲ್ಡ್ ರಾಸ್ ಅವರ ಹೆಸರನ್ನು ಇಡಲಾಗಿದೆ. ಅವರ ಮಲೇರಿಯ ರೋಗದ ಸಂಶೋಧನೆಯನ್ನು ಕುರಿತಾಗಿ ಈ ಪ್ರಯೋಗಶಾಲೆಯ ಮುಂದೆ ಒಂದು ಪ್ರಶಂಸಾ ಫಲಕವನ್ನು ಸಹ ಸ್ಥಾಪನೆ ಮಾಡಲಾಗಿದೆ.

ರೋನಾಲ್ಡ್ ರೋಸ್ ಅವರು ಮಲೇರಿಯ ರೋಗದ ಬಗ್ಗೆ ಮಾಡಿದ ತಮ್ಮ ಸಂಶೋಧನೆಯನ್ನು 1897ರಲ್ಲಿ ಇಂಡಿಯನ್ ಮೆಡಿಕಲ್ ಗೆಜೆಟ್‌ನಲ್ಲಿ ಪ್ರಕಟಿಸಿದರು. ಮುಂದೆ ಆ ವರದಿ ಬ್ರಿಟಿಷ್ ಮೆಡಿಕಲ್ ಜರ್ನಲ್ ನಲ್ಲಿಯೂ ಪ್ರಕಟವಾಯಿತು. ಇದೊಂದು ಮಹತ್ವದ ಸಂಶೋಧನೆ ಎಂದು ವೈದ್ಯಲೋಕ ಗುರುತಿಸಿತು. ರೋಸ್ ಅವರ ಈ ಸಂಶೋಧನೆಯ ಮಹತ್ವವನ್ನು ಪರಿಗಣಿಸಿ ಅವರಿಗೆ 1902 ರಲ್ಲಿ ನೋಬೆಲ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

3000 ವರ್ಷಗಳ ಹಿಂದೆ!

ಸೊಳ್ಳೆಗಳಿಂದ ಹರಡುವ ಮಲೇರಿಯ ಮುಂತಾದ ರೋಗಗಳು ಸಾವಿರಾರು ವರ್ಷಗಳಿಂದ ಮಾನವರನ್ನು ಬಲಿ ತೆಗೆದುಕೊಂಡಿದೆ. ಸುಮಾರು 3000 ವರ್ಷಗಳ ಹಿಂದೆ ಈಜಿಪ್ಟಿನ ಪ್ರಸಿದ್ಧ ಪಿರಮಿಡ್‌ನಲ್ಲಿ ದೊರೆತ ಟ್ಯೂಟೆಕಾಮುನ್ ದೊರೆಯ ಮಮ್ಮಿಯ (ಶವ) ಪರೀಕ್ಷೆಯಿಂದ ಅವನು ಸತ್ತಿದ್ದು ಮಲೇರಿಯ ರೋಗದಿಂದ ಎಂದು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ. ಮಲೇರಿಯ ರೋಗಕ್ಕೆ ಬಲಿಯಾದವರೆಂದು ನಂಬಲಾದ ಇನ್ನಿತರ ಕೆಲವು ಪ್ರಮುಖರು: ಅಲೆಕ್ಸಾಂಡರ್ (ಕ್ರಿಸ್ತ ಪೂರ್ವ 323), ಒಟ್ಟೋ ರೋಮನ್ ದೊರೆ (ಕ್ರಿ. ಶ 983)

ನೊಬೆಲ್ ಪ್ರಶಸ್ತಿ!

ಯಕಶ್ಚಿತ್ ಸೊಳ್ಳೆಗಳ ಮೇಲೆ ಸಂಶೋಧನೆ ಮಾಡಿದವರಿಗೆ ನೊಬೆಲ್ ಪ್ರಶಸ್ತಿಯೇ ಎಂದು ಹುಬ್ಬೇರಿಸಬೇಡಿ! ಮಲೇರಿಯಾ ರೋಗವು ಸೊಳ್ಳೆಗಳಿಂದಲೇ ಹರಡುತ್ತದೆ ಎಂದು ಅಧ್ಯಯನ ಮಾಡಿ, ಪ್ರಚುರಗೊಳಿಸಿದ ರೊನಾಲ್ಡ್ ರಾಸ್ ಎಂಬ ಬ್ರಿಟಿಷ್ ವೈದ್ಯನಿಗೆ ನೊಬೆಲ್ ಪ್ರಶಸ್ತಿ ದೊರಕಿದೆ. ರೊನಾಲ್ಡ್ ರಾಸ್‌ನು ಬ್ರಿಟಿಷ್ ರಾಜ್‌ನಲ್ಲಿ ವೈದ್ಯಾಧಿಕಾರಿಯಾಗಿದ್ದ ಮತ್ತು ಸಿಕಿಂದರಾಬಾದ್ ಹತ್ತಿರದ ಬೇಗಂಪೇಟೆ ಎಂಬ ಜಾಗದಲ್ಲಿ ತನ್ನ ಪ್ರಯೋಗಾಲಯವನ್ನು ನಡೆಸುತ್ತಿದ್ದ. ಅದುವರೆಗೆ ಮಲೇರಿಯಾ ರೋಗದ ಮೂಲ ಗೊತ್ತಾಗದೇ, ಸಾಕಷ್ಟು ಜನ ಸಾವನ್ನಪ್ಪುತ್ತಿದ್ದರು. ಮಲೇರಿಯಾವು ಸೊಳ್ಳೆಗಳಿಂದಲೇ ಖಚಿತವಾಗಿ ಹರಡುತ್ತದೆ ಎಂದು ಪತ್ತೆ ಮಾಡಿದ ರೊನಾಲ್ಡ್ ರಾಸ್‌ನ ಸಂಶೋಧನೆಯು, ಮನುಕುಲದ ಪ್ರಗತಿಗೆ ಗಮನಾರ್ಹ ಕೊಡುಗೆ ನೀಡಿದೆ ಎಂದೇ ನೊಬೆಲ್ ಪ್ರಶಸ್ತಿಯನ್ನು ನೀಡಲಾಯಿತು. ಆದ್ದರಿಂದ, ವಿಶ್ವ ಸೊಳ್ಳೆ ದಿನಾಚರಣೆ ಆರಂಭವಾಗುವಲ್ಲಿ, ಭಾರತದ ಕೊಡುಗೆಯೂ ಇದೆ ಎನ್ನಬಹುದೇನೊ!

ಇಟಲಿಯ ಪ್ರಸಿದ್ಧ ಕವಿ ಡಾಂಟೆ (ಕ್ರಿ. ಶ 1321), ವಾಸ್ಕೋ ಡ ಗಾಮ (ಕ್ರಿ ಶ 1524), ಲಾರ್ಡ್ ಬೈರನ್ ಆಂಗ್ಲ ಕವಿ (ಕ್ರಿ ಶ 1824). 20 ನೆಯ ಶತಮಾನದಲ್ಲಿ ಮಲೇರಿಯ ರೋಗಕ್ಕೆ ಬಲಿ ಆದವರ ಸಂಖ್ಯೆ ಸರಿ ಸುಮಾರು 15 ರಿಂದ 30 ಕೋಟಿ ಇರಬಹುದು ಎಂದು ಅಂದಾಜು ಮಾಡಲಾಗಿದೆ.

ನಮ್ಮ ರಾಜ್ಯದ ಮಲೆನಾಡು ಮತ್ತು ಬಯಲು ಸೀಮೆಯಲ್ಲೂ ಮಲೇರಿಯಾ ಕಾಟ ಬಹಳ ವಾಗಿತ್ತು.

ರೋಸ್ ಅವರ ಸಂಶೋಧನೆಯಿಂದ ಮಲೇರಿಯ ರೋಗ ಹರಡುವ ಮೂಲ ತಿಳಿದು ಅದಕ್ಕೆ ಚಿಕಿತ್ಸೆ ಕಂಡು ಹಿಡಿಯುವ ಮೂಲಕ ಕೋಟ್ಯಂತರ ಜನರು ಮಲೇರಿಯ ರೋಗದಿಂದ ಸಾವನ್ನಪ್ಪುವುದನ್ನು ತಡೆಯಲು ಸಾಧ್ಯವಾಯಿತು. ರೋನಾಲ್ಡ್ ರೋಸ್ ಸಂಶೋಧನೆ ಮನುಕುಲಕ್ಕೆ ಒಂದು ಅಮೂಲ್ಯ ಸೇವೆಯೆಂದೇ ಪರಿಗಣಿಸಲಾಗಿದೆ.

ಸೊಳ್ಳೆಯಿಂದ ಹರಡುವ ಖಾಯಿಲೆಗಳ ಬಗ್ಗೆ ತಿಳುವಳಿಕೆ, ಸೊಳ್ಳೆಗಳಿಂದ ರಕ್ಷಣೆಯ ಉಪಾಯಗಳು ಮತ್ತು ಸೊಳ್ಳೆಗಳ ಸಂತಾನೋತ್ಪತ್ತಿ ತಡೆಯುವ ಕ್ರಮಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಲು ವಿಶ್ವ ಆರೋಗ್ಯ ಸಂಸ್ಥೆ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಅವುಗಳನ್ನು ಅನುಸರಿಸಿ ಸೊಳ್ಳೆಗಳಿಂದ ಹರಡುವ ರೋಗಗಳಿಂದ ರಕ್ಷಿಸಿಕೊಳ್ಳಬೇಕೆಂಬುದು ವಿಶ್ವ ಸೊಳ್ಳೆಯ ದಿನದ ಸಂದೇಶ.



ವಿಶ್ವಸೊಳ್ಳೆ ದಿನಾಚರಣೆ!

ದಿನಾಂಕ 20 ಆಗಸ್ಟ್ 1897 ವೈದ್ಯಕೀಯ ಸಂಶೋಧನೆಯಲ್ಲಿ ಒಂದು ಮಹತ್ತರ ದಿನ. ರೋನಾಲ್ಡ್ ರಾಸ್ (1857-1933) ಎಂಬ ವೈದ್ಯನು ಮಲೇರಿಯ ರೋಗದ ಬಗ್ಗೆ 1894 ರಿಂದ ಪ್ರಯೋಗ ನಿರತನಾಗಿದ್ದನು. ಆತನ ಪ್ರಯತ್ನ ಸಫಲವಾಗಿ 'ಪ್ಲಾಸ್ಮೋಡಿಯಂ ವಿವಾಕ್ಸ್' ರೋಗಾಣು ಉಳ್ಳ ಅನಾಫಿಲೀಸ್ ಎಂಬ ಹೆಣ್ಣು ಜಾತಿಯ ಸೊಳ್ಳೆ ಮನುಷ್ಯನನ್ನು ಕಚ್ಚಿದಾಗ ಮಲೇರಿಯ ಖಾಯಿಲೆ ಉಂಟಾಗುತ್ತದೆ ಎಂದು ಕಂಡುಹಿಡಿದನು. ಆತನ ಪ್ರಯೋಗ ಯಶಸ್ವಿಯಾಗಿದ್ದು 1897 ಆಗಸ್ಟ್ ತಿಂಗಳ 20 ನೆಯ ದಿನ. ಈ ಮಹತ್ತರ ಸಂಶೋಧನೆಯ ಕುರುಹಾಗಿ ಪ್ರತಿ ವರ್ಷ ಆಗಸ್ಟ್ 20 ನೆಯ ದಿನಾಂಕದಂದು 'ವಿಶ್ವ ಸೊಳ್ಳೆಯ ದಿನ'ವನ್ನಾಗಿ ಆಚರಿಸಲಾಗುತ್ತದೆ.

» ಶೃಂಗೇಶ್ವರ ಶರ್ಮ ಎಸ್.

ಗಣಕಯಂತ್ರದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಹಲವು ತಂತ್ರಾಂಶಗಳಿದ್ದರೂ ಹೆಚ್ಚಿನವರು ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ಬಳಸುವುದು ಕನ್ನಡ ಗಣಕ ಪರಿಷತ್ತು ರೂಪಿಸಿದ 'ನುಡಿ' ತಂತ್ರಾಂಶವನ್ನೇ! ಇದಕ್ಕೆ ಮುಖ್ಯ ಕಾರಣವೆಂದರೆ, ಅದರ ಅಕ್ಷರಗಳು ಸುಂದರವಾಗಿವೆ, ಬಳಕೆ ಸುಲಭ ಮತ್ತು ನುಡಿ ತಂತ್ರಾಂಶವು ಉಚಿತವಾಗಿ ಲಭ್ಯವಿದೆ. ಗಣಕ ಪರಿಷತ್ತು ಇದುವರೆಗೆ ಅಭಿವೃದ್ಧಿಪಡಿಸಿದ ನುಡಿ ತಂತ್ರಾಂಶ 1.0ದಿಂದ 6.5ವರೆಗಿನ ಎಲ್ಲಾ ಅವತರಣಿಕೆಗಳೂ ಒಂದು ಸಂಪಾದಕದಲ್ಲಿ ಅನೇಕ ಸೌಲಭ್ಯಗಳನ್ನು ಹೊಂದಿವೆ. ಇತ್ತೀಚೆಗೆ ಕನ್ನಡ ಗಣಕ ಪರಿಷತ್ತು ತನ್ನ ಸಂರಚನೆಯನ್ನು ಕನ್ನಡ ಗಣಕ ಪ್ರತಿಷ್ಠಾನ ಎಂದು ಬದಲಾಯಿಸಿದ್ದು, ಗಣಕದಲ್ಲಿ ಕನ್ನಡ ಬಳಕೆಯ ವಿವಿಧ ಸಾಧ್ಯತೆಗಳನ್ನು ಪರಿಚಯಿಸುವತ್ತ ವಿಶೇಷ ಗಮನ ಹರಿಸುತ್ತಿದೆ.

2001 ▶▶ ನುಡಿ ಜನನ

ಗಣಕಗಳಲ್ಲಿ ಕನ್ನಡ ಭಾಷೆಯನ್ನು ಅಳವಡಿಸುವುದರ ಬಗ್ಗೆ ಕಾಳಜಿ ಹೊಂದಿದ ಕೆಲವು ಗೆಳೆಯರು ಸೇರಿ 1997ರಲ್ಲಿ ಕನ್ನಡ ಗಣಕ ಪರಿಷತ್ತನ್ನು ಸ್ಥಾಪಿಸಿದರು. ಕರ್ನಾಟಕ ಸರ್ಕಾರದ ಆಡಳಿತಕ್ಕೆ ಸಂಬಂಧಿಸಿದ ಗಣಕೀಕರಣ ಕಾರ್ಯ ಸುಲಭ ಸಾಧ್ಯವಾಗಿ ಸರ್ಕಾರದ ಎಲ್ಲ ಗಣಕ ವ್ಯವಹಾರ ಗಳೂ ಸುಗಮವಾಗಿ ಕನ್ನಡದಲ್ಲಿ ನಡೆಯಬೇಕೆಂಬ ಉದ್ದೇಶ ದಿಂದ ಗಣಕ ಪರಿಷತ್ತು ಕನ್ನಡ ತಂತ್ರಾಂಶವೊಂದನ್ನು ಪ್ರಚುರಪಡಿಸಿತು. ಈ ದಿಸೆಯಲ್ಲಿ ಗಣಕ ಪರಿಷತ್ತಿನ ಕಾರ್ಯವನ್ನು ಮೆಚ್ಚಿಕೊಂಡ ಕರ್ನಾಟಕ ಸರ್ಕಾರವು, ಒಂದು ಮಾನಕ ಲಿಪಿ ತಂತ್ರಾಂಶವನ್ನು ಸಿದ್ಧಪಡಿಸಲು ಸೂಚಿಸಿತು. ಇದು 2001ರಲ್ಲಿ ಗಣಕ ಪರಿಷತ್ತಿನ 'ನುಡಿ' ತಂತ್ರಾಂಶದ ಆವಿಷ್ಕಾರಕ್ಕೆ ನಾಂದಿ ಯಾಯಿತು. ಈ ತಂತ್ರಾಂಶವನ್ನು ಮರು ವರ್ಷವೇ ಕೇಂದ್ರ ಸರ್ಕಾರದ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯು ಅನು ಮೋದಿಸಿತು. ಇದರಿಂದಾಗಿ 'ನುಡಿ' ತಂತ್ರಾಂಶ ಜನಪ್ರಿಯವಾಗಿದೆ.

ಕನ್ನಡ ಗಣಕ ಪ್ರತಿಷ್ಠಾನವು ನುಡಿ ಬರವಣಿಗೆ 1.0 ಎಂಬ ಹೊಸ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಸದ್ಯದಲ್ಲೇ ಇದನ್ನು ಉಚಿತವಾಗಿ ಸಾರ್ವಜನಿಕರಿಗೆ ಒದಗಿಸಲಿದೆ. ಇದರಲ್ಲಿ ಹಲವು ಸೌಲಭ್ಯಗಳಿದ್ದು, ಇದೇಮೊದಲ ಬಾರಿಗೆ 'ವಾಗಕ್ಷರ' ಎಂಬ ಸೌಲಭ್ಯವನ್ನು ನೀಡಲಾಗುತ್ತಿದೆ. 'ವಾಗಕ್ಷರ' - ಅಂದರೆ ಧ್ವನಿಯನ್ನು ಅಕ್ಷರ ರೂಪಕ್ಕೆ (ವಾಕ್ ಅಕ್ಷರ) ಪರಿವರ್ತಿಸುವ ಹೊಸ ಸೌಲಭ್ಯ; ಧ್ವನಿ ಪರಿವರ್ತನೆ ಬೆರಳಚ್ಚು ಸೌಲಭ್ಯ ಈಗಾಗಲೇ ಕೆಲವೆಡೆ ಚಾಲ್ತಿಯಲ್ಲಿದ್ದರೂ, ಇದು ಹೆಚ್ಚು ಜನಸ್ನೇಹಿ ಎನಿಸಲಿದೆ. ಗಣಕಯಂತ್ರ ಅಥವಾ ಲ್ಯಾಪ್ಟಾಪ್ ಮುಂದೆ ಕುಳಿತು 'ವಾಗಕ್ಷರ'ವನ್ನು ಪ್ರವೇಶಿಸಿ, ದಾಖಲಿಸಬೇಕಾದ ವಿಷಯವನ್ನು ಓದುತ್ತಾ ಅಥವಾ ಹೇಳುತ್ತಾ ಹೋದಂತೆ, ಅವೆಲ್ಲವೂ ಗಣಕ ಪುಟದಲ್ಲಿ ಕನ್ನಡ ಅಕ್ಷರದಲ್ಲಿ ಮೂಡಿ ಬರುತ್ತವೆ; ಅಗತ್ಯವೆನಿಸಿದರೆ ಅದನ್ನು ತಿದ್ದಿ, ನೇರವಾಗಿ ಮುದ್ರಣಕ್ಕೆ ಕಳಿಸಬಹುದು!

ಕನ್ನಡ ಗಣಕಲೋಕಕ್ಕೊಂದು ಹೊಸ ಕೊಡುಗೆ!

ನುಡಿ ಬರವಣಿಗೆ



ಈಗ, ಕನ್ನಡ ಗಣಕ ಪ್ರತಿಷ್ಠಾನವು 'ನುಡಿ ಬರವಣಿಗೆ 1.0' ಎಂಬ ಹೊಸ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಸದ್ಯದಲ್ಲಿಯೇ ಇದನ್ನು ಸಾರ್ವಜನಿಕರಿಗೆ ಪರಿಚಯಿಸಲಿದೆ. ಸಾಮಾನ್ಯವಾಗಿ, ಗಣಕಯಂತ್ರವನ್ನು ತೆರೆದಕೂಡಲೇ, ಅಲ್ಲಿ ಕಾಣುವ ಎಲ್ಲ ಪುಟಗಳೂ, ವಿನ್ಯಾಸಗಳೂ, 'ಎಂಎಸ್ ಆಫೀಸ್ ವರ್ಡ್' ತಂತ್ರಾಂಶ ಆಧರಿತವಾಗಿವೆ. ಪ್ರಸ್ತುತ ವರ್ಡ್, ಎಕ್ಸೆಲ್, ಪವರ್ ಪಾಯಿಂಟ್ ಮುಂತಾದ ಯಾವುದೇ ಕಡತವಿರಲಿ, ಕನ್ನಡ ಲಿಪಿಯಲ್ಲಿ ಬೆರಳಚ್ಚು ಮಾಡಲು 'ಮೈಕ್ರೋಸಾಫ್ಟ್' ತಂತ್ರಾಂಶವನ್ನು ಬಳಸುವುದು ಹೆಚ್ಚಾಗಿ ರೂಢಿಯಲ್ಲಿದೆ. ಎಂಎಸ್ ಆಫೀಸ್ ತಂತ್ರಾಂಶದಲ್ಲಿ ರುವಂತಹ ಅನೇಕ ಸೌಲಭ್ಯಗಳನ್ನು ಪ್ರಸ್ತುತ ಕನ್ನಡ ಗಣಕ ಪ್ರತಿಷ್ಠಾನವು ರೂಪಿಸಿರುವ ಹೊಸ ತಂತ್ರಾಂಶದಲ್ಲೂ ಅಳವಡಿಸಲಾಗಿದ್ದು, ಅವುಗಳಿಗೆ ನುಡಿಬರವಣಿಗೆ (ವರ್ಡ್), ನುಡಿಲೆಕ್ಕ (ಎಕ್ಸೆಲ್), ನುಡಿಪ್ರಸ್ತುತಿ (ಪವರ್ ಪಾಯಿಂಟ್), ನುಡಿ ದತ್ತ (ಡಾಟಾ ಬೇಸ್) ಎಂದು ಹೆಸರಿಸಲಾಗಿದೆ.

'ನುಡಿ ಬರವಣಿಗೆ 1.0' ತಂತ್ರಾಂಶವನ್ನು ಡೌನ್ಲೋಡ್ ಮಾಡಿಕೊಂಡು, ಆ ಐಕಾನ್ ಮೇಲೆ ಕ್ಲಿಕ್ ಮಾಡಿದರೆ, ವರ್ಡ್ ತಂತ್ರಾಂಶದಲ್ಲಿ ದೊರೆಯುವ ಅನೇಕ ಸೌಲಭ್ಯಗಳು ಕನ್ನಡದ ಪರಿವಿಡಿಯಲ್ಲಿಯೇ ಮೂಡುತ್ತವೆ. ಉದಾ: ಮನೆ (ಹೋಮ್) ಸೇರಿಸಿ(ಇನ್‌ಸರ್ಟ್), ಪುಟವಿನ್ಯಾಸ, ಸಹಾಯ, ಕತ್ತರಿಸಿ, ಅಂಟಿಸಿ, ನಕಲಿಸಿ ಹುಡುಕಿ (ಖಜ ಚಿಡಿಟಿಖಿ), ಪದಪರೀಕ್ಷೆ (ಸ್ಪೆಲ್ ಚೆಕ್) ಇತ್ಯಾದಿ. ಇದೇರೀತಿ ಅಕ್ಷರ ಶೈಲಿ, ಪ್ಯಾರಾಗ್ರಾಫ್, ಶೀರ್ಷಿಕೆ ಶೈಲಿಗಳು, ಬದಲಾಯಿಸಿ, ಅಗ್ರಶೀರ್ಷಿಕೆ/ಅಡಿಶೀರ್ಷಿಕೆ, ನುಡಿ ವ್ಯವಸ್ಥಾಪಕ, ವಾಗಕ್ಷರ ಮುಂತಾದುವೂ ಇದರಲ್ಲಿದೆ.

ಅಕ್ಷರ ವಿನ್ಯಾಸ

'ನುಡಿ ಬರವಣಿಗೆ' ತಂತ್ರಾಂಶವು 50ಕ್ಕೂ ಹೆಚ್ಚು ಬಗೆಯ ಕನ್ನಡ ಅಕ್ಷರ ವಿನ್ಯಾಸಗಳನ್ನು ಯುನಿಕೋಡ್ ರೂಪದಲ್ಲಿ ಹೊಂದಿದ್ದು, ಮುಖ್ಯಶೀರ್ಷಿಕೆ, ಅಡಿಶೀರ್ಷಿಕೆ, ಪ್ಯಾರಾಗ್ರಾಫ್‌ಗಳನ್ನು ಹೆಚ್ಚು ಆಕರ್ಷಕವಾಗಿಸಲು ವಿವಿಧ ಅಕ್ಷರ ವಿನ್ಯಾಸಗಳನ್ನು ಸಂದರ್ಭೋಚಿತವಾಗಿ ಬಳಸಬಹುದು. ಈ ಪೈಕಿ 'ನುಡಿ ಪಾರಿಜಾತ' ಎಂಬ ಅಕ್ಷರ ವಿನ್ಯಾಸವು ಯುನಿಕೋಡಿನಲ್ಲಿದ್ದು, ಪ್ರಸ್ತುತ ಹೆಚ್ಚು ಬಳಕೆಯಾಗುತ್ತಿರುವ 'ನುಡಿ 01'(ಆಸ್ಕಿ) ಅಕ್ಷರ ವಿನ್ಯಾಸಕ್ಕೆ ಸಮಾನಾಂತರವಾಗಿದೆ.

ಒಂದು ವೇಳೆ ಕನ್ನಡ ಪದಗಳ ಮಧ್ಯೆ ಇಂಗ್ಲಿಷ್ ಪದಗಳನ್ನು ಬರೆಯಬೇಕೆನಿಸಿತೆನ್ನಿ, ಸ್ಕ್ರೋಲ್ ಲಾಕ್ ಬದಲು ವಿಂಡೋ ಮತ್ತು ಸ್ಪೇಸ್ ಬಾರ್ ಒತ್ತಿ ನಂತರ ಇಂಗ್ಲಿಷ್ ಅಕ್ಷರಗಳನ್ನು ಟೈಪ್ ಮಾಡಬಹುದು. ಮತ್ತೆ ಕನ್ನಡ ಅಕ್ಷರಗಳನ್ನು ಟೈಪ್ ಮಾಡಬೇಕಿದ್ದಲ್ಲಿ ಇನ್ನೊಮ್ಮೆ ವಿಂಡೋ ಮತ್ತು ಸ್ಪೇಸ್ ಬಾರ್ ಒತ್ತಿದರೆ ಸಾಕು. ಆಸ್ಕಿ ಮಾದರಿಯಲ್ಲಿಯೂ ಅನೇಕ ಕನ್ನಡ ಅಕ್ಷರ ವಿನ್ಯಾಸಗಳನ್ನು ರೂಪಿಸಿದ್ದು, ಪಠ್ಯವನ್ನು ಆಸ್ಕಿಯಿಂದ ಯುನಿಕೋಡಿಗೆ ಹಾಗೂ ಯುನಿಕೋಡಿನಿಂದದ ಆಸ್ಕಿಗೆ ಪರಿವರ್ತಿಸುವ ಸೌಲಭ್ಯವನ್ನೂ ಈ ತಂತ್ರಾಂಶದಲ್ಲಿ ಒದಗಿಸಲಾಗಿದೆ.

ಪದ ಪರೀಕ್ಷೆ

ಇದು ಕನ್ನಡಕ್ಕೆ ವಿಶಿಷ್ಟವಾದ ಸೌಲಭ್ಯ; ಬೆರಳಚ್ಚಿಸುವಾಗ ಅಕ್ಷರ ದೋಷಗಳು ನುಸುಳುವುದು ಸಹಜ. ಅದಕ್ಕಾಗಿ ಇಂಗ್ಲಿಷ್‌ನಲ್ಲಿ ಸ್ಪೆಲ್ ಚೆಕ್ ಇರುವಂತೆಯೇ, ಇಲ್ಲಿ 'ಪದ ಪರೀಕ್ಷೆ' ಎಂಬ ಸೌಲಭ್ಯವನ್ನು ಕಲ್ಪಿಸಲಾಗಿದೆ. ಇದನ್ನು ಬಳಸಿ, ತಪ್ಪಾಗಿ ಬೆರಳಚ್ಚಿಸಿದ ಕನ್ನಡ ಪದಗಳ ಅಡಿಯಲ್ಲಿ ಕೆಂಪು ಗೆರೆ ಮೂಡಿದಲ್ಲಿ ಆ ಪದವನ್ನು ಗುರುತಿಸಿ, ಪದದೋಷವನ್ನು ಸರಿಪಡಿಸಬಹುದು.

ವಾಗಕ್ಷರ ಸೌಲಭ್ಯ

'ವಾಗಕ್ಷರ' - ಅಂದರೆ ಧ್ವನಿಯನ್ನು ಅಕ್ಷರ ರೂಪಕ್ಕೆ (ವಾಕ್ ಅಕ್ಷರ) ಪರಿವರ್ತಿಸುವ ಹೊಸ ಸೌಲಭ್ಯವನ್ನು ಈ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ಇದು ಕನ್ನಡ ಗಣಕಲೋಕಕ್ಕೆ ಕನ್ನಡ ಗಣಕ ಪ್ರತಿಷ್ಠಾನದ ಮಹತ್ತರ ಕೊಡುಗೆಯಾಗಿದೆ. ಧ್ವನಿ ಪರಿವರ್ತನೆ ಸೌಲಭ್ಯ ಈಗಾಗಲೇ ಕೆಲವೆಡೆ ಚಾಲ್ತಿಯಲ್ಲಿದ್ದರೂ, ಗಣಕಯಂತ್ರದ ಬಳಕೆಯಲ್ಲಿ ಕನ್ನಡ ಧ್ವನಿ ಪರಿವರ್ತನೆಯನ್ನು ಅಳವಡಿಸಿರುವುದು ಇದೇ ಮೊದಲು ಎನ್ನಬಹುದು. ಗಣಕಯಂತ್ರ ಅಥವಾ ಲ್ಯಾಪ್ಟಾಪ್ ಮುಂದೆ ಕುಳಿತು 'ವಾಗಕ್ಷರ'ವನ್ನು ಪ್ರವೇಶಿಸಿ, ದಾಖಲಿಸಬೇಕಾದ ವಿಷಯವನ್ನು ಓದುತ್ತಾ ಅಥವಾ ಹೇಳುತ್ತಾ ಹೋದಂತೆ, ಅವೆಲ್ಲವೂ ಗಣಕ ಪುಟದಲ್ಲಿ ಕನ್ನಡ ಅಕ್ಷರದಲ್ಲಿ ಮೂಡಿಬರುತ್ತವೆ. ಮಧ್ಯೆ ಮಧ್ಯೆ ಇಂಗ್ಲಿಷ್ ಪದಗಳನ್ನು ಸೇರಿಸುವುದಕ್ಕೂ ಅವಕಾಶವಿರುತ್ತದೆ.

ಟೈಪಿಂಗ್ ಕಲಿಯದೆ ಇಡೀ ಪಠ್ಯವನ್ನು ಕೈಯಲ್ಲಿ ಬರೆದುಕೊಂಡು ನಂತರ ಬೆರಳಚ್ಚು ಬಲ್ಲವರಿಂದ ಟೈಪ್ ಮಾಡಿಸುವವರಿಗೆ ಹಾಗೂ ಅಂಧರಿಗೆ ಮತ್ತು ವಿಕಲಹಸ್ತರಿಗೆ 'ವಾಗಕ್ಷರ' ಸೌಲಭ್ಯದಿಂದ ಹೆಚ್ಚು ಅನುಕೂಲವಾಗಲಿದೆ. ರಹಸ್ಯ ಮಾಹಿತಿಗಳನ್ನು ಅಕ್ಷರ ರೂಪದಲ್ಲಿ ದಾಖಲಿಸಬೇಕಾದಲ್ಲಿ ಇನ್ನೊಬ್ಬರನ್ನು ಅವಲಂಬಿಸಬೇಕಿಲ್ಲ. ಮಾಹಿತಿಗಳನ್ನು ನೇರವಾಗಿ ತಮ್ಮ ಧ್ವನಿಯ ಮೂಲಕವೇ ದಾಖಲಿಸಿ, ಅದರ ಅಕ್ಷರ ರೂಪವನ್ನು ಮುದ್ರಿಸಿಕೊಳ್ಳಬಹುದು. ಆದರೆ ಧ್ವನಿಯ ಏರಿಳಿತಗಳು, ಅಕಾರ ಹಕಾರಾದಿಗಳು, ಅಲ್ಪಪ್ರಾಣ, ಮಹಾಪ್ರಾಣದಂತಹ ವ್ಯತ್ಯಾಸಗಳು ಸಹ ವಾಗಕ್ಷರದಲ್ಲಿ ಅಕ್ಷರಶಃ ದಾಖಲಾಗುವುದರಿಂದ, ತಪ್ಪುಗಳು ನುಸುಳುವ ಸಾಧ್ಯತೆ ಇರುತ್ತದೆ. ಅವನ್ನೆಲ್ಲ ನಂತರ ಪರಿಷ್ಕರಿಸುವುದು ಅಗತ್ಯ. ಈ ಬಗೆಯ ಧ್ವನಿ ಲೇಖನ ಸೌಲಭ್ಯ ಎಂಎಸ್ ಆಫೀಸ್ ತಂತ್ರಾಂಶದಲ್ಲಿ ಕಂಡುಬರುವುದಿಲ್ಲ.

ಬುನಾದಿ ಹಾಕಿದವರು



ಗಣಕಗಳಲ್ಲಿ ಬಳಸಲು ಸೂಕ್ತವಾಗುವ ಕನ್ನಡ ಕೀಲಿ ಮಣೆ ಮತ್ತು ತಂತ್ರಾಂಶಕ್ಕೆ ಭದ್ರ ಬುನಾದಿ ಹಾಕಿದವರು ಪ್ರೊ. ಕೆ.ಪಿ.ರಾವ್ ಅವರು. ಅವರು ರೂಪಿಸಿದ ತಂತ್ರಾಂಶವು ಕನ್ನಡವೂ ಸೇರಿದಂತೆ ಇತರ ಭಾರತೀಯ ಭಾಷೆಗಳ ಕೀಲಿಮಣೆಗಳ ವಿನ್ಯಾಸಕ್ಕೆ ಮತ್ತು ಗಣಕಗಳಲ್ಲಿ ಬಳಸಲು ಪೂರಕವೆನಿಸಿತು. -ಶಹಾ

ಉಚಿತವಾಗಿ ಲಭ್ಯ

ಕನ್ನಡ ಗಣಕ ಪ್ರತಿಷ್ಠಾನವು ಅಭಿವೃದ್ಧಿಪಡಿಸಿರುವ 'ನುಡಿ ಬರವಣಿಗೆ' ತಂತ್ರಾಂಶಕ್ಕೆ ಅಂತಿಮ ರೂಪ ನೀಡಲಾಗುತ್ತಿದ್ದು, ಸದ್ಯದಲ್ಲಿಯೇ ಮುಕ್ತ ಮೂಲದಲ್ಲಿ (ಓಪನ್ ಸೋರ್ಸ್) ಇಡಲಾಗುವುದು. ಯಾರು ಬೇಕಾದರೂ, ಉಚಿತವಾಗಿ ಡೌನ್ಲೋಡ್ ಮಾಡಿಕೊಂಡು ಬಳಸಬಹುದು. ಈವರೆಗೆ ಕನ್ನಡ ಗಣಕ ಪರಿಷತ್ತು ಪ್ರಚುರಪಡಿಸಿದ ಎಲ್ಲಾ ಸೌಲಭ್ಯಗಳೂ ಉಚಿತವಾಗಿಯೇ ಲಭ್ಯವಿದ್ದು, ಅಂತರಜಾಲದಿಂದ ಡೌನ್ಲೋಡ್ ಮಾಡಿಕೊಳ್ಳಬಹುದು.

ಪಂಪ ಮತ್ತು ಕುಮಾರವ್ಯಾಸ!

ಗಣಕ ಪರಿಷತ್ತಿನ ಕಾರ್ಯಚಟುವಟಿಕೆಗಳು 'ನುಡಿ' ತಂತ್ರಾಂಶ ಅಭಿವೃದ್ಧಿಯ ಜತೆಯಲ್ಲೇ, ಇತರ ಕ್ಷೇತ್ರಗಳಿಗೂ ವ್ಯಾಪಿಸಿದೆ. ಕನ್ನಡ-ಕನ್ನಡ ಸಂಕ್ಷಿಪ್ತ ನಿಘಂಟು, ಕನ್ನಡ ವಿಶ್ವಕೋಶ, ಪಂಪನ ಮಹಾಕಾವ್ಯಗಳು, ಕುಮಾರವ್ಯಾಸ ಭಾರತ, ನಿಸಾರ್ ಸಮಗ್ರ ನೋಟ ಮುಂತಾದ ಗ್ರಂಥಗಳ ಅಡಕಮುದ್ರಿಕೆಗಳನ್ನುಹೊರತಂದಿದೆ. ಹಲವು ಇಲಾಖೆ ಗಳು, ಸಂಘ ಸಂಸ್ಥೆಗಳಿಗೆ ಜಾಲತಾಣ ವಿನ್ಯಾಸವನ್ನೂ ರೂಪಿಸಿದೆ. ಗಣಕ ಪರಿಷತ್ತು ರಚಿಸಿದ 'ಕಂಪ್ಯೂಟರ್ ಪದ ವಿವರಣ ಕೋಶ' ವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಪ್ರಕಟಿಸಿದೆ.



ಸದ್ಯದಲ್ಲೇ ಎಲ್ಲರಿಗೆ ಉಚಿತವಾಗಿ ಲಭ್ಯವಾಗುವ 'ನುಡಿ ಬರವಣಿಗೆ 1.0' ತಂತ್ರಾಂಶವು ಕನ್ನಡ ಗಣಕ ಪ್ರಪಂಚವನ್ನು ಇನ್ನಷ್ಟು ವಿಸ್ತರಿಸಲಿದೆ. ಕಂಪ್ಯೂಟರ್ ಬಳಕೆ ಕುರಿತು ಹೆಚ್ಚಿನ ಪರಿಣತಿ ಇಲ್ಲದವರೂ ಸಹ, ಇದನ್ನು ಬಳಸಿ ಕನ್ನಡದಲ್ಲಿ ಟೈಪ್ ಮಾಡಬಹುದು, ತಮ್ಮ ಸಾಹಿತ್ಯವನ್ನು ಸೃಷ್ಟಿಸಬಹುದು!

ಮನುಷ್ಯನಲ್ಲಿ ಬದುಕುವ ತುಡಿತ ಮತ್ತು ಎಂತಹದೇ ಸಂಕಷ್ಟ ಎದುರಾದರೂ, ದುರ್ಭರ ಸನ್ನಿವೇಶದಿಂದ ಪಲಾಯನ ಮಾಡುವ ಚೇತನದ ಪ್ರತೀಕವಾಗಿ ಎರಡು ದೊಡ್ಡ ಸಾಹಸಗಳು ಪುಸ್ತಕ ರೂಪದಲ್ಲಿ ಬಂದಿವೆ. ಆ ಎರಡೂ ಕೃತಿಗಳು ಕನ್ನಡಕ್ಕೆ ಅನುವಾದವಾಗಿರು ವುದು ವಿಶೇಷ.

2 ಪಲಾಯನಗಳ ಕಥೆ!

» ಗೊರೂರು ಶಿವೇಶ್

ಕಳೆದ ಶತಮಾನದ ಎರಡು ಅತಿ ಶ್ರೇಷ್ಠ ಮಹಾಪಲಾಯನದ ಕೃತಿಗಳನ್ನು ವಿಸ್ಮಯ ಲೇಖಕ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಕನ್ನಡಕ್ಕೆ ತಂದಿದ್ದಾರೆ. ಸಂಕೋಲೆಗಳಿಂದ ವಿಮುಕ್ತನಾಗಲು ಬಂಧನದಿಂದ ಪಾರಾಗಲು ಮನುಷ್ಯ ಪ್ರಯತ್ನದ ಅಸಾಧ್ಯ ಸಾಧ್ಯತೆಗಳಿಗೆ ಹೆನ್ರಿಛಾರೇರೆ ಬರೆದ 'ಪ್ಯಾಪಿಲಾನ್' ಹಾಗೂ ಸ್ಲಾವೋಮಿರ್ ರಾವಿಸ್ ರವರ 'ಲಾಂಗ್ ವಾಕ್' ಕೃತಿಗಳು ಉದಾಹರಣೆಯಾಗಿ ತನ್ನನ್ನು ಬಹುದಿನದವರೆಗೆ ಕಾಡಿವೆ ಎಂದು ಮಹಾಪಲಾಯನದ ಕೃತಿಯ ಮುನ್ನುಡಿಯಲ್ಲಿ ಹೇಳಿದ್ದಾರೆ.

ಪ್ಯಾಪಿಲಾನ್ ಕೃತಿಯಲ್ಲಿ ತನ್ನ ಅನುಭವವನ್ನು ಬಿಡಿಟ್ಟ ಹೆನ್ರಿಛಾರೇರೆ ಮೂಲತಃ ಭೂಗತಲೋಕದ ವ್ಯಕ್ತಿ. ಭೂಗತ ಲೋಕದ ಕೊಲೆ ಸುಲಿಗೆ ಹಿಂಸಾಚಾರ ಇತ್ಯಾದಿ ವೃತ್ತಾಂತಗಳು ಇದರಲ್ಲಿ ಇದೆಯಾದರೂ ಇದು ಮೂಲತಃ ಸ್ವಾತಂತ್ರ್ಯಕ್ಕೆ ಮನುಷ್ಯನೊಬ್ಬನ ಅದಮ್ಯ ಹೋರಾಟದ ಕಥೆ. ಸ್ವಭಾವತಃ ತೇಜಸ್ವಿಯವರು ಭೂಗತ ಚಟುವಟಿಕೆಗಳ ಕಥಾವಸ್ತುವಿನ ಬಗ್ಗೆ ತಾತ್ವಿಕ ವಿರೋಧ ಹೊಂದಿದವರು. ಪ್ಯಾಪಿಲಾನ್ ಕೃತಿಯು ಎಲ್ಲಾ ಕಾಲದ ಮಹೋನ್ನತ ಸಾಹಸ ಕಥೆ ಎಂದು ಕರೆದಿದ್ದನ್ನು ಕಂಡು ಓದಿ ಪ್ರಭಾವಿತರಾಗಿ ಸಾವಿರಕ್ಕೂ ಹೆಚ್ಚು ಪುಟದ ಈ ಕೃತಿಯನು, ಎರಡು ಭಾಗಗಳಲ್ಲಿ ಪ್ರದೀಪ ಕೆಂಜಿಗೆಯವರ ಜೊತೆಗೂಡಿ ಸಂಗ್ರಾಹಾನುವಾದ ಮಾಡಿ ಕನ್ನಡಕ್ಕೆ ತಂದಿದ್ದಾರೆ.



ಈ ಕಥೆ ಪ್ರಾರಂಭವಾಗುವುದು ಪ್ರಾನ್ಸಿನ ರಾಜಧಾನಿ ಪ್ಯಾರಿಸ್ಸಿನಿಂದ. ಯಾವ ತಪ್ಪನ್ನೂ ಮಾಡಿಲ್ಲದ ಕೊಲೆ ಪ್ರಕರಣಕ್ಕೆ ಸಂಬಂಧವೇ ಇಲ್ಲದ ಒಬ್ಬ ತರುಣನನ್ನು ನಿಷ್ಕಾರುಣವಾಗಿ ಪ್ರೆಂಚ್ ಪೋಲಿಸರು, ಸರ್ಕಾರಿ ಲಾಯರುಗಳು ಸೇರಿ ಪಿತೂರಿ ಮಾಡಿ ಬಂಧಿಸಿದರು. ಅವನನ್ನೇ ಪ್ಯಾಪಿಲಾನ್ ಎಂದು ಕರೆದರು. ಅವನನ್ನು ಬಹು ದೂರದ ದ್ವೀಪದಲ್ಲಿದ್ದ ಜೈಲಿಗೆ ಹಾಕಿದರು. ಸಮಾನತೆ, ನ್ಯಾಯ, ಸ್ವಾತಂತ್ರ್ಯಗಳಿಗೆ ಆಧಾರ ಸ್ತಂಭವೆನಿಸಿದ ಪ್ರೆಂಚ್ ನಾಗರಿಕತೆ ಎಂಥ ಕ್ರೂರ, ನಿರ್ದಯ, ಅಮಾನುಷ ವ್ಯವಸ್ಥೆಯನ್ನು, ಖೈದಿಗಳ ನೆವದಲ್ಲಿ ಅಲ್ಲಿಯೇ ರೂಪಿಸಿತ್ತು ಎನ್ನುವುದು ಇಡೀ ಮನುಕುಲವನ್ನೇ ಬೆಚ್ಚಿ ಬೀಳಿಸುವ ಸಂಗತಿ. ಈ ದ್ವೀಪಗಳಿಗೆ ಹೋದ ಯಾವನೂ ತನ್ನ ಕಾರಾಗೃಹದ ಅವಧಿ ಮುಗಿಸಿ ಜೀವಂತ ಹಿಂದಿರುಗಿರುವುದಿಲ್ಲ. ಸುತ್ತ ವಿಶಾಲ ಸಾಗರದಿಂದ ಸುತ್ತುವರಿದಿದ್ದ ಈ ದ್ವೀಪಗಳಿಂದ ಪಾರಾಗಲು ಪ್ಯಾಪಿಲಾನ್ ಹದಿಮೂರು ವರ್ಷಗಳ ನಿರಂತರ ಹೋರಾಟ ಆರಂಭವಾಗುತ್ತದೆ. ಒಮ್ಮೊಮ್ಮೆ ಗುಂಪಿನಲ್ಲಿ ಮತ್ತೆ ಕೆಲವೊಮ್ಮೆ ಏಕಾಂಗಿಯಾಗಿ ಪರಾರಿಯಾಗಲು ಬಳಸುವ ತಂತ್ರ ಗಳು, ಎದುರಾಗುವ ಆಡಚಣೆಗಳು, ಸಣ್ಣ ಸಣ್ಣ ತಪ್ಪುಗಳಿಂದ ಅಜಾಗರೂಕತೆಯಿಂದ ಸಿಕ್ಕಿ ಹಾಕಿಕೊಳ್ಳುವ ಬಗೆ. ಓದುಗರಲ್ಲಿ ರೋಮಾಂಚನಕ್ಕೀಡು ಮಾಡುತ್ತದೆ. ಪ್ರತಿ ಬಾರಿ ಸಿಕ್ಕಿ ಬಿದ್ದಾಗಲೂ ಅಧಿಕಾರಿಗಳು ಮತ್ತು ವ್ಯವಸ್ಥೆ ನೀಡುವ ಶಿಕ್ಷೆ ಎದೆ ನಡುಗಿಸುತ್ತದೆ. ▶▶ ನಾಲ್ಕನೇ ಪುಟಕ್ಕೆ

ಪುಸ್ತಕ ವಿಮಾನ

ವಿಶಾಲ ಕ್ಯಾನ್ವಾಸ್ ಹೊಂದಿದ ಬರಹಗಳು

» ಎಂ.ಎಸ್.ಹೆಬ್ಬಾರ್

ಸಂಪಾದಕರ ಸದ್ಯಶೋಧನೆ' ಎಂಬ ಹೆಸರನ್ನು ಮೊದಲು ಬಳಸಿದಾಗ, ಲೇಖಕರಾಗ ವಿಶ್ವೇಶ್ವರ ಭಟ್ ಅವರಿಗೆ ಕೆಲವು ಓದುಗರ ಸಲಹೆ ನೀಡಿದ್ದರಂತೆ 'ಸಾರ್, ಸದ್ಯ ಶೋಧನೆ ಎಂಬ ಮುದ್ರಣದೋಷವಾಗಿದೆ; ಅದು ಸತ್ಯಶೋಧನೆ ಆಗಬೇಕು' ಎಂದು! ಆದರೆ, 'ಸದ್ಯಶೋಧನೆ' ಎಂಬ ಪದವನ್ನು ಉದ್ದೇಶ ಪೂರ್ವಕವಾಗಿಯೇ ಬಳಸಲಾಗಿದ್ದು, ಸದ್ಯಶೋಧನೆಯ ಮಹತ್ವ ಮೊದಲಾದ ವಿವರಗಳನ್ನು ಲೇಖಕರು ನೀಡಿದ ನಂತರ, ಓದುಗರು ಒಪ್ಪಿದರು; ಮಾತ್ರವಲ್ಲ ತುಂಬಾ ಇಷ್ಟಪಟ್ಟರು! ಈ ರೀತಿ ಇಷ್ಟಪಟ್ಟದ್ದಕ್ಕೆ ಪುರಾವೆಯೇ, ಈ ಸರಣಿಯ ಆರನೆಯ ಸಂಪುಟ ಈಗ ಹೊರಬಂದಿದೆ.

ಇಲ್ಲಿ ಸದ್ಯ ಶೋಧನೆಯೂ ಇದೆ, ಸತ್ಯ ಶೋಧನೆಯೂ ಇದೆ! ಹಾಗೆಂದು, ಲೇಖಕರೇ ಹೇಳಿದ್ದಾರೆ. ಅದು ನಿಜವೂ ಹೌದು. ಜತೆಗೆ, ಈ ಪುಸ್ತಕದ ಬರಹಗಳಲ್ಲಿ ಆಯ್ದುಕೊಂಡ ವಿಷಯಗಳು ಬಹು ವೈವಿಧ್ಯ ವಾದದು! ''ಇಲ್ಲಿ ಯಾವ ವಿಷಯವನ್ನಾದರೂ ಚರ್ಚಿಸಬಹುದು. ಹೀಗಾಗಿ ಈ ಬರಹದ ಕ್ಯಾನ್ವಾಸ್ ವಿಶಾಲವೂ, ವಿಸ್ತಾರವೂ ಆಗಿದೆ. ಇಂಥದೇ ವಿಷಯ ಬರಬಹುದು, ಬರೆಯಬಹುದು ಎಂದು ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಕೆಲವು ಸಲ, ಹತ್ತು ನಿಮಿಷದ ಮೊದಲು ಏನು ಬರೆಯುತ್ತೇನೆ ಎಂಬುದು ನನಗೂ ಗೊತ್ತಿರುವುದಿಲ್ಲ. ಏನೇ ಬರೆದರೂ ಅದನ್ನು ಸಹಿಸಿಕೊಳ್ಳುವ ಮತ್ತು ಒಳಗೊಳ್ಳುವ ಗುಣ ಇಲ್ಲಿನ ಬರಹಗಳಿಗಿವೆ.'' ಈ ಕುತೂಹಲಕಾರಿ ಪುಸ್ತಕದಲ್ಲಿ 100 ಬರಹಗಳಿವೆ! ಪ್ರತಿಯೊಂದು ಬರಹವೂ ಓದಿಸಿಕೊಂಡು ಹೋಗುವ ಗುಣವನ್ನು ಹೊಂದಿದೆ ಮತ್ತು ತನ್ನ ವಿಷಯ ವೈವಿಧ್ಯತೆಯಿಂದ ಗಮನ ಸೆಳೆಯು ವಂತಿದೆ. ವಿಷಯದ ಆಯ್ಕೆಗೆ ಮಿತಿಯೇ ಇಲ್ಲ ಎಂಬಂತಹ ನೂರು ಬರಹಗಳಿವೆ. ಉದಾಹರಣೆಗೆ, ಐಫೆಲ್ ಟವರ್ ನೋಡಿದ ಗಾಂಧೀಜಿ ಯಿಂದ ಹಿಡಿದು, ವೈಎನ್ಕೆ ಅವರ ಕುರಿತು ಗಿರೀಶ್ ಕಾರ್ನಾಡ್ ಏನು ಹೇಳುತ್ತಾರೆ ತನಕ, ಶೇವಿಂಗ್ ಮಾಡಲು ಸಕಾಲ ಯಾವುದು ಎಂಬು ದರಿಂದ ಹಿಡಿದು, ಪತ್ರಕರ್ತರೆಂಬ ವಿಚಿತ್ರ ಜೀವಿಗಳ ವರ್ತನೆಯ ತನಕ ಇಲ್ಲಿನ ಬರಹಗಳ ಕ್ಯಾನ್‌ವಾಸ್ ಹರಡಿದೆ. ಜತೆಯಲ್ಲೇ, ಆಗೊಮ್ಮೆ ಈಗೊಮ್ಮೆ ಎಂಬಂತೆ 'ಬೆತ್ತಲಾಗುವುದು ಅಂದರೆ. .' (ಪುಟ 65) ರೀತಿಯ ಪುಟ್ಟ ಬರಹಗಳನ್ನೂ ಇಲ್ಲಿ ಕಾಣಬಹುದು.

'ಸಂಪಾದಕರ ಸದ್ಯಶೋಧನೆ – ಸಂಪುಟ 6'ರಲ್ಲಿರುವ ಕೆಲವು ಬರಹಗಳಂತೂ ಸಿಕ್ಕಾಪಟ್ಟೆ ಕುತೂಹಲ ಹುಟ್ಟಿಸುತ್ತವೆ; ಮಾತ್ರವಲ್ಲ, ಅದನ್ನು ಓದಿದವರಿಗೆ, ಆ ವಿಚಾರದ ಜಾಡು ಹಿಡಿದು ಇನ್ನಷ್ಟು ಓದಬೇಕು, ಸಂಶೋಧನೆ ಮಾಡಬೇಕು ಎನಿಸುತ್ತದೆ! 'ಗೋಯಂಕಾ–ಇಂದಿರಾ ಪತ್ರ,' (ಪುಟ 56) ಅಂತಹದೊಂದು ಲೇಖನ. ತುರ್ತುಪರಿಸ್ಥಿತಿಯ ಸಮಯದಲ್ಲಿ ಇಂದಿರಾ ಗಾಂಧಿಯವರ ವಿರುದ್ಧ ನಿಂತ ಕೆಲವೇ ಕೆಲವು ಪತ್ರಕರ್ತರಲ್ಲಿ ರಾಮನಾಥ ಗೋಯಂಕಾ ಒಬ್ಬರು. 1975–76ರಲ್ಲಿ ಹಲವು ರಾಜಕಾರಣಿಗಳನ್ನು, ಪತ್ರಕರ್ತರನ್ನು ಬಂಧಿಸಿದಂತೆ, ಗೋಯಂಕಾ ಅವರ ಪುತ್ರ ಮತ್ತು ಸೊಸೆಯನ್ನು ಸರಕಾರವು ಬಂಧಿಸಬಹುದು ಎಂಬ ವಿಚಾರ ಚರ್ಚೆಯಲ್ಲಿತ್ತು; ಅದನ್ನು ಎದುರಿಸಲು, ಗೋಯಂಕಾ ಅವರು ಖ್ಯಾತ ವಕೀಲರ ಮೂಲಕ ಇಂದಿರಾ ಗಾಂಧಿಯವರಿಗೆ ಒಂದು ಸಂದೇಶ ಕಳಿಸಿದರು : ''ಒಂದು ವೇಳೆ ನನ್ನ ಮಗ ಮತ್ತು ಸೊಸೆಯನ್ನು ಬಂಧಿಸಿದರೆ, ನಿಮ್ಮ ತಾಯಿ (ಕಮಲಾ ನೆಹರು) ಜಯಪ್ರಕಾಶ ನಾರಾಯಣ ಅವರ ಪತ್ನಿ ಪ್ರಭಾವತಿ ಅವರಿಗೆ ಬರೆದ ಪತ್ರವನ್ನು ಬಿಡುಗಡೆ ಮಾಡುತ್ತೇನೆ, ಎಚ್ಚರ'' ಎಂಬ ಸಂದೇಶ ತಲುಪಿಸಿದ್ದರು. ಆ ಪತ್ರದಲ್ಲಿ ಕಮಲಾ ನೆಹರು ಅವರು ತಮ್ಮ ಪತಿ ಜವಾಹರಲಾಲ್ ನೆಹರು ತಮ್ಮನ್ನು ಕೆಟ್ಟದಾಗಿ ನೋಡಿಕೊಳ್ಳುತ್ತಾರೆ, ತಮ್ಮನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಮತ್ತು ನೆಹರು ಅವರ ಸಹೋದರಿಯರು ತಮ್ಮನ್ನು ನಿಕೃಷ್ಟವಾಗಿ ನಡೆಸಿಕೊಳ್ಳುತ್ತಾರೆ ಎಂಬ ಅಳಲನ್ನು ಪ್ರಭಾವತಿ ಅವರ ಮುಂದೆ ತೋಡಿಕೊಂಡಿದ್ದರು.''(ಪುಟ 57) ಇಂತಹ ಕುತೂಹಲಕಾರಿ ಮಾಹಿತಿ ಹೊಂದಿದ ಬರಹವನ್ನು ಓದಿದ ಪ್ರಾಜ್ಞ ಓದುಗರು, ಗೋಯಂಕಾ ಕುರಿತು, ಅವರು ಕಟ್ಟಿದ ಪತ್ರಿಕಾ ಸಾಮ್ರಾಜ್ಯದ ಕುರಿತು, ಕಮಲಾ ನೆಹರು ಅವರ ಕಷ್ಟಗಳ ಕುರಿತು ಇತರ ಸಂಬಂಧಪಟ್ಟ ವಿಷಯಗಳ ಕುರಿತು ಇನ್ನಷ್ಟು ತಿಳಿಯಬೇಕು ಎಂಬ ಕುತೂಹಲ ತಾಳಿದರೆ ಅಚ್ಚರಿಯಿಲ್ಲ! ಈ ಬರಹಗಳು ಪ್ರತಿದಿನ ಅಂಕಣದ ರೂಪದಲ್ಲಿ ಪ್ರಕಟಗೊಂಡಿದ್ದರೂ, ಪುಸ್ತಕ ರೂಪದಲ್ಲಿ ಅವನ್ನು ಓದಿದಾಗ ಬೇರೆಯದೇ ಆದ ಓದಿನ ಅನುಭವ ದೊರಕುವುದಂತೂ ನಿಚ್ಚಳ. ಇಂತಹ ಹಲವು ಪುಟ್ಟ ಪುಟ್ಟ ಬರಹಗಳನ್ನು ಹೊಂದಿರುವ 'ಸಂಪಾದಕರ ಸದ್ಯಶೋಧನೆ 6' ಒಂದು ಸಂಗ್ರಹಯೋಗ್ಯ ಪುಸ್ತಕ.

ಸಂಪಾದಕರ ಸದ್ಯಶೋಧನೆ 6
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ
8431007267
ಬೆಲೆ ರು.250/-

ವೈವಿಧ್ಯಮಯ ಬರಹಗಳನ್ನು ಹೊಂದಿರುವ ಈ ಪುಸ್ತಕದ ಕ್ಯಾನ್‌ವಾಸ್ ಬಹು ವಿಶಾಲ; ಇದನ್ನು ಓದಿದವರ ಜ್ಞಾನವೂ ವಿಸ್ತಾರವಾಗುವುದು ನಿಚ್ಚಳ.

ಕಷ್ಟದ ಬದುಕು ನಿಷ್ಠೆಯ ವೃತ್ತಿ

» ಬಿ.ಕೆ.ಮೀನಾಕ್ಷಿ, ಮೈಸೂರು

ಮನುಷ್ಯ, ತನ್ನ ಚೈತನ್ಯವನ್ನು ಆತ್ಮಸ್ಥೈರ್ಯವನ್ನು ಕಳೆದುಕೊಂಡಾಗೆಲ್ಲ ಯಾವುದೋ ಒಂದು ದಿವ್ಯಶಕ್ತಿ ಆಸರೆಯಾಗಿ ಒದಗಿಬರುತ್ತದೆ ಎಂಬುದು ಈ ಪುಸ್ತಕ ಓದಿದಾಗ ಅರಿವಾದೀತು. ಬದುಕೆಂಬ ಕತ್ತಿಯಲಗಿನ ಮೇಲೆ ನಡೆಯುತ್ತಾ, ಜೀವನವನ್ನು ಸರಿದೂಗಿಸಲು ಸಮತೋಲನಗೊಳಿಸುತ್ತಾ, ಇಡೀ ಜೀವನವನ್ನೇ ಸವೆಸುವುದಿದೆಯಲ್ಲ ಅದಕ್ಕಿಂತ ದೌರ್ಭಾಗ್ಯ ಇನ್ನೊಂದಿಲ್ಲ. ಆದರೆ ಆ ದುರದೃಷ್ಟವನ್ನೇ ತನ್ನ ಪಾಲಿನ ಸೌಭಾಗ್ಯವನ್ನಾಗಿ ಸ್ವೀಕರಿಸಿ ಬದುಕನ್ನು ಸುಗಮಗೊಳಿಸಿಕೊಳ್ಳಲು ಮನುಷ್ಯ ಹಾಕುವ ಪ್ರಯತ್ನ ನಿಜಕ್ಕೂ ಮೆಚ್ಚತಕ್ಕದ್ದು. ಇಂತಹ ಒಂದು ಪ್ರಯತ್ನ ಮಾಡಿ, ಜಯಶೀಲರಾಗಿರುವುದು ನಮ್ಮ ಅರುಣಕುಮಾರ ಹಬ್ಬು ಅವರು.

ಅರುಣಕುಮಾರ ಹಬ್ಬು ಅವರ ಆತ್ಮಕಥೆ ಓದುತ್ತಿದ್ದಂತೆ ಮನಸು ಆರ್ದ್ರವಾಯಿತು. ಬಹುಪಾಲು ಜನರಿಗೆ ಇಷ್ಟು ಕಷ್ಟ ನಿಜಕ್ಕೂ ಇರುತ್ತದೆಯೇ ಎಂದು ಅಚ್ಚರಿಯಾದೀತು. ಬಡತನದ ಕುಟುಂಬದಲ್ಲಿ ಜನಿಸಿ, ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಳ್ಳುವ ದುಃಸ್ಥಿತಿ ಒದಗುತ್ತದೆ. ತಾಯಿಯು ತವರು ಸೇರಿಕೊಂಡು ಮಕ್ಕಳು ಚೆಲ್ಲಾಪಿಲ್ಲಿಯಾದರೂ, ಈ ಅಣ್ಣತಮ್ಮಂದಿರಲ್ಲಿ ಯಾರೊಬ್ಬರೂ ಬದುಕಿನ ಸನ್ಮಾರ್ಗವನ್ನು ತೊರೆದು, ಅಡ್ಡದಾರಿ ಹಿಡಿಯದೆ, ಮೌಲಿಕವಾದ ಬದುಕು ಕಟ್ಟಿಕೊಂಡವರು! ಇಂದಿನ ಯುವ ಜನಾಂಗಕ್ಕೆ ಮಾದರಿಯಾಗಿ ನಿಲ್ಲುವವರು. ಪರೀಕ್ಷಾಶುಲ್ಕ ಇಪ್ಪತ್ತು ರೂಪಾಯಿಗಳಿಗಾಗಿ ಊರೂರನ್ನು ನಡೆದುಕೊಂಡು ಅಲೆದದ್ದು, ಕಲಿಯಲೇಬೇಕೆಂಬ ಬಾಲಕ ಅರುಣರ ಛಲಕ್ಕೆ ಹಿಡಿದ ಕನ್ನಡಿಯಾಗಿದೆ. ಇಪ್ಪತ್ತು ರೂಪಾಯಿ ಸಿಗದೆ ವಾಪಸಾದಾಗ ತನ್ನ ಗುರುಗಳೇ ಅದನ್ನು ಭರಿಸಿದ್ದು, ಅವರೆಡೆಗೆ ಎಂಥ ಕೃತಜ್ಞತಾಭಾವ ವನ್ನು ಮೂಡಿಸುತ್ತದೆಂದರೆ ಅದನ್ನು ಅನುಭವಿಸಿ ಬರೆದಿದ್ದಾರೆ! ಇದೇ ದಿಸೆಯಲ್ಲಿಯೇ ಕಾಲೇಜು ಶಿಕ್ಷಣ, ಸ್ನಾತಕ ಪದವಿ ಪಡೆದದ್ದು ಸಂತೋಷ ತಂದರೆ, ಅರ್ಥವಾಗದ ಕೈಬರೆಹದ ಕಾರಣ ಮೂರನೇ ದರ್ಜೆಯಲ್ಲಿ ಉತ್ತೀರ್ಣರಾಗಿ, ಇವರಿಗೆಲ್ಲೂ ಕೆಲಸ ದೊರಕದೇ, ಪುಟ್ಟಗ್ರಾಮ ಬೀಳಗಾಕ್ಕೆ ಅನಿವಾರ್ಯವಾಗಿ ಹೋಗಿ, ಉಪನ್ಯಾಸಕ ಹುದ್ದೆಯನ್ನು ಸ್ವೀಕರಿಸಿದರು.



ಬೊಗಸೆ ನೀರು : ಪತ್ರಕರ್ತನ ಸತ್ಯಕಥೆ
ಲೇ: ಅರುಣಕುಮಾರ ಹಬ್ಬು
ಪ್ರಕಾಶನ: ಸುದರ್ಶನ ಪ್ರಕಾಶನ, ಬೆಂಗಳೂರು

ನಂತರ ಅರೆಕಾಲಿಕ ಪತ್ರಕರ್ತ ಹುದ್ದೆ; ನಂತರ ಪೂರ್ಣಾವಧಿ ಹುದ್ದೆ; ಬೆಂಗಳೂರಿಗೆ ಪ್ರಯಾಣ, ನಂತರ ಬೀದರ್; ಅಲ್ಲಿಯ ಜನರ ಮಮತೆ ಪ್ರೀತಿ ವಾತ್ಸಲ್ಯದ ಮಳೆ, ಹೊತ್ತಿ ಉರಿದ ಬೀದರ್, ಹುಬ್ಬಳ್ಳಿ, ಬೇಡದ ಕಿರುಕುಳ, ಮತ್ತೆ ಬೆಂಗಳೂರು, ರಾಜೀನಾಮೆ; ವಿವಿಧ ಪತ್ರಿಕೆಗಳಲ್ಲಿ ಉದ್ಯೋಗ. ವೃತ್ತಿಗೆ ನಿಷ್ಠರಾಗಿದ್ದುದು, ಖಾಯಿಲೆಯಲ್ಲೂ ಕೆಲಸ ಮಾಡಲು ಹಾತೊರೆದುದು, ಏಳು ಬೀಳುಗಳಲ್ಲಿ ಸಾಗುವಾಗಲೂ ಚಂಚಲಗೊಳ್ಳದ ವಿವೇಕ, ಕಷ್ಟ ನೋವುಗಳಿದ್ದರೂ ಯಾರನ್ನೂ ದೂರದ, ಬೇಡಿಕೊಳ್ಳದ ಪ್ರಾಮಾಣಿಕತೆ, ನಿರ್ಲಿಪ್ತತೆ, ತನ್ನ ಸಂಕಷ್ಟಗಳಿಗೆ ತಾನು ಮಾತ್ರವೇ ಹೊಣೆ ಎಂಬ ವಿಶಾಲ ಭಾವ – ಇದು ಹಬ್ಬು ಮನೆತನದ ಸ್ವಭಾವವೇ ಎಂಬಂತೆ ಲೇಖಕರಲ್ಲಿ ಹರಿದು ಬಂದಿದೆ.

ಇಂದಿನ ಮಕ್ಕಳಿಗೆ ಸೌಕರ್ಯಗಳನ್ನು ಒದಗಿಸಿಕೊಟ್ಟರೂ ಓದಲು ಕಷ್ಟ ಪಡುತ್ತಾರೆ. ಏನನ್ನಾದರೂ ತೆಗೆದುಕೊಡಲಿಲ್ಲವೆಂದರೆ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳಿವೆ. ದಯವಿಟ್ಟು ಇಂದಿನ ಯುವಜನಾಂಗ ಈ ಪುಸ್ತಕವನ್ನು ಓದಲಿ. ಬದುಕಲು ಕಲಿಯಲಿ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ವಿದೇಶ ಕಾಲ
(ನೂರಕ್ಕೂ ಹೆಚ್ಚು ದೇಶಗಳಿಗೆ ಪ್ರವಾಸ ಕೈಗೊಂಡಿರುವ ವಿಶ್ವೇಶ್ವರ ಭಟ್ಟರು ಅಲ್ಲಿಯ ವಿಶಿಷ್ಟ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಇದು ಭಟ್ಟರ ನೂರನೇ ಪುಸ್ತಕವೂ ಹೌದು)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 500/-

2



ಪೀಜಿ
(ಮಹಿಳಾ ಪೀಜಿಗಳನ್ನು ಕುರಿತ ಮೊದಲ ಕಾದಂಬರಿ. ಬುಕ್ ಬ್ರಹ್ಮ ಕಾದಂಬರಿ ಸ್ಪರ್ಧೆಯಲ್ಲಿ ಒಂದು ಲಕ್ಷ ರೂ ಗಳಿಸಿದ ಕೃತಿ)
ಲೇ: ಸುಶೀಲಾ ಡೋಣೂರ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 330/-

3



ಬುದ್ಧಯಾನ
(ಕಂನಾಡಿಗರ ಹೊಸ ಕಾದಂಬರಿ. ಸುಧಾ ವಾರಪತ್ರಿಕೆಯಲ್ಲಿ ಪ್ರಕಟವಾಗಿ ಜನಪ್ರಿಯತೆ ಪಡೆದುಕೊಂಡಿದೆ)
ಲೇ: ಕಂನಾಡಿಗಾ ನಾರಾಯಣ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ : ರೂ 170/-

4

ಒಂದಾನೊಂದು ಮಲೆನಾಡಲ್ಲಿ
(ಸ್ವಾತಂತ್ರ ಪೂರ್ವದಿಂದ ಹಿಡಿದು ಇತ್ತೀಚಿನವರೆಗಿನ ಮಲೆನಾಡಿನ ಬದುಕು ಇಲ್ಲಿ ಚಿತ್ರಿತವಾಗಿದೆ)
ಲೇ: ಮಾಕೋನಹಳ್ಳಿ ವಿನಯ್ ಮಾಧವ
ಪ್ರ: ನ್ಯೂವೇವ್ ಬುಕ್ಸ್, ಬೆಂಗಳೂರು
ಬೆಲೆ : ರೂ 160/-

5



ಹ್ಯಾಷ್ ಟ್ಯಾಗ್
(ಛಂದ ಪುಸ್ತಕ ಬಹುಮಾನ ಪಡೆದ ಕೃತಿ. ಕುಲಕರ್ಣಿ ಅವರ ಮೊದಲ ಪ್ರಕಟಿತ ಕಥಾ ಸಂಕಲವಿದು.)
ಲೇ: ಗುರುರಾಜ ಕುಲಕರ್ಣಿ
ಪ್ರ: ಛಂದ ಪುಸ್ತಕ,ಬೆಂಗಳೂರು
ಬೆಲೆ : ರೂ 135/-

6



ಸಂಗಮ
(ರಾಜಲಕ್ಷ್ಮಿ ಎನ್.ರಾವ್ ಅವರ ಏಕೈಕ ಪ್ರಕಟಿತ ಕಥಾ ಸಂಕಲನವಿದು. ಬಿಎಂಶ್ರೀ ಅವರ ಮೊಮ್ಮಗಳ, 91 ವರ್ಷದ ಲೇಖಕಿಯ ಕಥಾ ಸಂಕಲನ ಈಗ ಮರುಮುದ್ರಣವಾಗಿದೆ)
ಲೇ: ರಾಜಲಕ್ಷ್ಮಿ ಎನ್.ರಾವ್
ಪ್ರ: ಸಂಕಥನ, ಮಂಡ್ಯ
ಬೆಲೆ : ರೂ 320/-

7



ಬದುಕಿನ ಅರ್ಥದ ಹುಡುಕಾಟದಲ್ಲಿ ಮನುಷ್ಯ
(ಬೆಸ್ಟ್‌ಸೆಲ್ಲರ್ ಎಂದು ಪ್ರಸಿದ್ಧವಾಗಿರುವ ವಿಕ್ಟರ್ ಫ್ರಾಂಕಲ್‌ನ ಕೃತಿಯನ್ನು ಶಿವಾನಂದ ಬೇಕಲ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ)
ಲೇ: ವಿಕ್ಟರ್ ಈ. ಫ್ರಾಂಕಲ್
ಅನು : ಶಿವಾನಂದ ಬೇಕಲ್
ಪ್ರ: ಡಬ್ಲ್ಯುಒಡಬ್ಲ್ಯು ಪ್ರಕಾಶನ, ಪುಣೆ
ಬೆಲೆ : ರೂ 195/-

8



ದಿಡುಗು
(ಬಹುಮಾನ ಪಡೆದ ಕಥೆಗಳಿಲ್ಲಿವೆ. ಹಳ್ಳಿಗಾಡಿನ ಬದುಕನ್ನು ಚಿತ್ರಿಸುವ ಜೊಂಡಿ ಅವರ ಮೊದಲ ಕಥಾಸಂಕಲನವಿದು)
ಲೇ: ಮಲ್ಲಮ್ಮ ಜೊಂಡಿ
ಪ್ರ: ವೈಷ್ಣವಿ ಪ್ರಕಾಶನ, ಕೆ. ಗುಡದಿನ್ನಿ
ಬೆಲೆ : ರೂ 120/-

9



ಕ್ರೈಂ ಡೈರಿ – 1
(ಲೇಖಕರು ಪೋಲೀಸ್ ಮಹಾನಿರ್ದೇಶಕರಾಗಿದ್ದವರು ಅವರ ಸೇವಾವಧಿಯಲ್ಲಿ ಮುಖಾಮುಖಿಯಾದ ಕ್ರೈಂಗಳು ಇಲ್ಲಿ ಕಥಾ ರೂಪ ತಾಳಿವೆ)
ಲೇ: ಡಾ। ಡಿ.ವಿ. ಗುರುಪ್ರಸಾದ್
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 300/-

10



ಬಯಲು
(ಅಲ್ಲಮನ ವಚನಗಳು ಈಗಾಗಲೇ ಸುಪರಿಚಿತವಾಗಿವೆ. ಅವರ ನಿಗೂಢ ಬದುಕನ್ನು ಕಾದಂಬರಿ ರೂಪದಲ್ಲಿ ಹೆಣೆದಿದ್ದಾರೆ.)
ಲೇ: ಡಾ। ಶ್ರೀಧರ ಎಚ್.ಜಿ.
ಪ್ರ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು ಬೆಲೆ : ರೂ 450/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಗಾಂಧೀಜಿ ಮೇಕೆ ಹಾಲು ಕುಡಿಯುತ್ತಾರಂತೆ!

ತಾಳಮದ್ದಲೆಯ ದಿನ ಮಧ್ಯಾಹ್ನ ಊಟ ಮಾಡಿದವರೇ, ವೆಂಕಣ್ಣಯ್ಯ ಕೋಟೇಶ್ವರಕ್ಕೆ ನಡೆಯಲು ಆರಂಭಿಸಿದರು; ವೆಂಕಣ್ಣಯ್ಯ ಹೊರಟಿದ್ದಾರೆ ಎಂದು ಗೊತ್ತಾದಾಗ, ಮೇಲ್ಕೊಡಿಗೆಯ ಕೃಷ್ಣಯ್ಯನೂ ಜತೆಯಾದರು. ಕೃಷ್ಣಯ್ಯನ ಜತೆ ನಡಿಗೆ ಎಂದರೆ, ಮಾತು ಮಾತಿಗೂ ಹಾಸ್ಯ, ಕುಶಾಲು ಮಾಡುವ ಹುಮ್ಮಸ್ಸು 'ಬೀಸ ನಡೆದರೆ, ಹೊತ್ತು ಕಂತುವ ಹೊತ್ತಿಗೆ ಕೋಟೇಶ್ವರ ಸೇರಲಕ್ಕು, ಜಾಸ್ತಿ ದೂರ ಇಲ್ಲ. ನನಗೆ ಈ ದಾರಿ ಚೆನ್ನಾಗಿ ಗೊತ್ತುಂಟು' ಎಂದು ವೆಂಕಣ್ಣಯ್ಯನ ಜತೆ ಅವರೂ ಕಾಲು ಹಾಕಿದರು. ಕುಶಾಲು, ಹಾಸ್ಯದ ಜತೆಯಲ್ಲೇ, ಕೃಷ್ಣಯ್ಯನಿಗೆ ಇನ್ನೊಂದು ಹವ್ಯಾಸವಿತ್ತು; ಅವರು ಬಹಳ ರಸಿಕರು. ಅದಕ್ಕಾಗಿ ಎಷ್ಟು ದೂರ ಬೇಕಾದರೂ, ಯಾವ ಹೊತ್ತಿನಲ್ಲಿ ಬೇಕಾದರೂ ಹೋಗುತ್ತಿದ್ದ ಉತ್ಸಾಹಿ. ಅವರ ರಸಿಕತೆ ಕುರಿತು ನಾನಾ ರೀತಿಯ, ವರ್ಣರಂಜಿತ ಸುದ್ದಿಗಳನ್ನು ವೆಂಕಣ್ಣಯ್ಯ ಕೇಳಿದ್ದುಂಟು; ಅವರು ರಸಿಕತೆಯ ಹಾಯಿದೋಣಿ ಏರಿ, ಹಲವು ಸಾಹಸಗಳನ್ನು ಮಾಡಿದ್ದರು ಎಂಬ ಕತೆಗಳು ನೆಲ್ಯಾಡಿ ಬೈಲಿನುದ್ದಕ್ಕೂ ತೇಲಿಬರುತ್ತಿದ್ದವು. ಅವರ ರಸಿಕತೆ ಇದ್ದರೆ ಅವರಿಗೆ, ನನ್ನ ಮನಸ್ಸು ನನ್ನ ಕೈಯಲ್ಲಿದ್ದರೆ ಯಾರೇನು ಮಾಡಿಯಾರು ಎಂದು, ವೆಂಕಣ್ಣಯ್ಯ ಅವರ ಜತೆ ಹೆಜ್ಜೆ ಹಾಕಿದರು. ಮಣ್ಣಿನ ರಸ್ತೆ; ಒಂದೆರಡು ಎತ್ತಿನ ಗಾಡಿಗಳು ಸಂತೆಯ ಕಡೆ ಹೊರಟಿದ್ದರೂ, ಯಾವುದರಲ್ಲೂ ಜಾಗ ಇರಲಿಲ್ಲ; ಮತ್ತೆ ಗುರುತು ಪರಿಚಯ ಇಲ್ಲದವರ ಬಳಿ ಕೇಳುವುದೇನು, ಹೀಗೇ ನಡೆಯುತ್ತಾ ಹೋದರೆ ಕೋಟೇಶ್ವರ ಸಿಗುತ್ತದೆ ಎಂದು ನಡೆದೇ ಬಿಟ್ಟರು. ದೀಪ ಹಚ್ಚುವ ಹೊತ್ತಿಗೆ, ಕೋಟೇಶ್ವರ ದೇವಸ್ಥಾನ ತಲುಪಿದರು. ಅದಾಗಲೇ ಗುರು ಯಜ್ಞಣ್ಣ ಅಲ್ಲಿ ಬೀಡುಬಿಟ್ಟಿದ್ದರು.

'ಹೊಸ ಅರ್ಥ ಧಾರಿ ಬಂದರು. ಬಾ ವೆಂಕಣ್ಣಯ್ಯ. ಓಹ್, ಕೃಷ್ಣಯ್ಯನೂ ಬಂದಿದ್ದಾನೋ. ಒಳ್ಳೆಯದಾಯಿತು. ಮೊದಲು ಊಟ ಮಾಡಿ' ಎಂದರು ಯಜ್ಞಣ್ಣ. ಅಲ್ಲೇ ಒಬ್ಬರ ಮನೆಯಲ್ಲಿ ಊಟವಾಯಿತು. ರಾತ್ರಿ ಎಂಟು ಗಂಟೆಯ ನಂತರ ಯಕ್ಷಗಾನ ತಾಳಮದ್ದಲೆ; ಜನರು ಸುಮಾರು ಸೇರಿದ್ದರು. ವೆಂಕಣ್ಣಯ್ಯನಿಗೆ ಇದೊಂದು ಹೊಸ ಅನುಭವ. ಅವರು ತಮ್ಮ ಗ್ರಾಮದ ಸುತ್ತಮುತ್ತ ಮತ್ತು ಮೂಡಲಾಯಿ ಹಲವು ಹಳ್ಳಿಗಳಲ್ಲಿ ಅರ್ಥದಾರಿಕೆ ಮಾಡಿದ್ದರು. ಈ ಪಡುವಲ ಭಾಗದಲ್ಲಿ ಇದೇ ಮೊದಲ ಬಾರಿ ಅವರು ಅರ್ಥಗಾರಿಕೆಗೆ ಬಂದಿದ್ದರು. ತಮ್ಮ ಸೀಮೆಯ ಜನರಿಗಿಂತಲೂ ಹೆಚ್ಚು ಚುರುಕು ಎಂದೇ ಹೆಸರಾಗಿದ್ದ ಕರಾವಳಿಯವರ ಜತೆ ಮಾತನಾಡುವ, ಅರ್ಥ ಹೇಳುವ ಹೊಸ ಅನುಭವ. ದೇವಸ್ಥಾನದ ಹೊರ ಪೌಳಿಯಲ್ಲಿ ಎಲ್ಲರೂ ಸೇರಿ, ಭಾಗವತರು ಮೊದಲ ಪದ ಹೇಳುವಾಗ, ವೆಂಕಣ್ಣಯ್ಯ ಆಚೀಚೆ ಕಣ್ಣು ಹಾಯಿಸಿದರು, ತನ್ನ ಜತೆ ಬಂದ ಕೃಷ್ಣಯ್ಯ ಎಲ್ಲಿ ಎಂದು; ಅವರು ನಾಪತ್ತೆ! ಎಲ್ಲಿಗೆ ಹೋಗಿರಬಹುದು ಸವಾರಿ? ಆತನ ರಸಿಕತೆ ಬಗ್ಗೆ ಕೇಳಿದ್ದರೂ, ತನ್ನ ಜತೆ ಬಂದಾಗಲೂ ಅದರ ಪ್ರಯೋಗಕ್ಕೆ ಅವರು ಹೊರಡಬಹುದು ಎಂದು ವೆಂಕಣ್ಣಯ್ಯ ಊಹಿಸಿರಲಿಲ್ಲ.

ಯಜ್ಞಣ್ಣ ಇವರನ್ನು ಕರೆದು, 'ಈಗ ಎಂತ ಅತ್ತಿತ್ತ ನೋಡುತ್ತಿದ್ದೀಯಾ. ಭಾಗವತರು ಆಗಲೇ ಪದ ಹೇಳಲು ಆರಂಭಿಸಿಯಾಯಿತು. ಎಲ್ಲವನ್ನೂ ಗಮನವಿಟ್ಟು ಕೇಳು. ನಿನ್ನ ಗೆಳೆಯ ಅದಾಗಲೇ ಬಸ್ರೂರು ದಾರಿ ಹಿಡಿದಿದ್ದಾನೆ. ನನಗೆ ಗೊತ್ತುಂಟು ಅವನ ರಸಿಕತೆ. ಹಿಂದೊಮ್ಮೆ ಅವನನ್ನು ಅಲ್ಲೆಲ್ಲೋ ನೋಡಿದ್ದೆ' ಎಂದು ಎಚ್ಚರಿಸಿ, ಅರ್ಥದಾರನಿಗೆ ಇರಬೇಕಾದ ಏಕಾಗ್ರತೆಯನ್ನು ಒತ್ತಿ ಹೇಳಿದರು. ತಾಳಮದ್ದಲೆಯಲ್ಲಿ ತನಗೆ ದೊರೆತ ಸಣ್ಣ ಪಾತ್ರವೊಂದನ್ನು ನಿಭಾಯಿಸಿ, ಸೂಕ್ತ ರೀತಿಯಲ್ಲಿ ಅರ್ಥ ಹೇಳಿ, ಅಲ್ಲೇ ದೇವಸ್ಥಾನದ ಪೌಳಿಯಲ್ಲಿ ಮಲಗಿದಾಗ ರಾತ್ರಿ ಒಂದು ಗಂಟೆ.

ಎಂತಿದ್ದರೂ ಬಂದಾಗಿದೆ, ಮರುದಿನ ಕುಂದಾಪುರ ಸಂತೆ, ಖರೀದಿ ಮಾಡುವಂತಹದ್ದು ಏನೂ ಇಲ್ಲದಿದ್ದರೂ ನೋಡಿಕೊಂಡು ಹೋಗುವ ಎಂದು ವೆಂಕಣ್ಣಯ್ಯ ಕುಂದಾಪುರಕ್ಕೆ ನಡೆದೇ ಹೊರಟರು. ಅವರ ಗುರು ಯಜ್ಞಣ್ಣ ತಮ್ಮೂರಿನ ಕಡೆ ಹೋಗುತ್ತಿದ್ದ ಎತ್ತಿನ ಗಾಡಿಯೊಂದರಲ್ಲಿ ಕುಳಿತು ವಾಪಸಾದರು. ಆ ಸುತ್ತಮುತ್ತಲಿಗೆಲ್ಲಾ ಹೆಸರು ವಾಸಿ ಕುಂದಾಪುರ ಸಂತೆ; ಸುತ್ತಮುತ್ತಲಿನ ಹತ್ತೈವತ್ತು ಹಳ್ಳಿಗಳ ಕೃಷಿಕರು ಬಾಳೆ, ಅಡಿಕೆ ಮೊದಲಾದವನ್ನು ತಂದು ಮಾರುತ್ತಿದ್ದರು; ಸಮುದ್ರಕ್ಕೆ ತಾಗಿ ಇದ್ದ ಮರವಂತೆ, ಉಪ್ಪುಂದ, ಬೈಂದೂರು ಮೊದಲಾದ ಹಳ್ಳಿಗಳ ರೈತರು ಹಸಿರು ತರಕಾರಿ, ಜಡೆ ಈರುಳ್ಳಿ ತರುತ್ತಿದ್ದರು. ಕುಂದಾಪುರ ಸುತ್ತಮುತ್ತಲಿನ ಹೆಂಗೆಳೆಯರು ಬಸಳೆ, ಹರಿವೆ ಸೊಪ್ಪು ಮೊದಲಾದವನ್ನು ಹರಡುತ್ತಿದ್ದರು. ಮೀನುಗಾರರು ಮೀನಿನ ರಕಂಗಳನ್ನು ಹರಡಿಕೊಂಡು ಮಾರುತ್ತಿದ್ದರು.



ನದಿ ದಾಟಿ ಬಂದವರು
ಲೇ: ಶಶಿಧರ ಹಾಲಾಡಿ
ಪ್ರ: ಅಂಕಿತ ಪುಸ್ತಕ ಬೆಂಗಳೂರು
08026617100, 9019190502
ಬೆಲೆ ರು.250/-

'ತಾಳಮದ್ದಲೆ ಹ್ಯಾಗಾಯ್ತು?' ಸಂತೆಯಲ್ಲಿ ವೆಂಕಣ್ಣಯ್ಯ ಓಡಾಡುತ್ತಿದ್ದಾಗ, ತನ್ನ ಬೆನ್ನಿನ ಹತ್ತಿರವೇ ಮೂಡಿಬಂದ ಈ ಪ್ರಶ್ನೆ ಕೇಳಿ ತಿರುಗಿ ನೋಡಿದರೆ, ಕೃಷ್ಣಯ್ಯ! 'ಅರೆ, ನಿನ್ನೆ ರಾತ್ರಿ ನೀವು ಎಲ್ಲಿಗೆ ಹೋಗಿದ್ದಿರಿ ಮಾರಾಯರೆ, ಒಳ್ಳೆ ಒಳ್ಳೆಯ ಅರ್ಥಧಾರಿಗಳು ಬಂದಿದ್ದರು. ಕರಾವಳಿಯ ಜನ, ಹೆಚ್ಚು ತಿಳಿದವರು, ಅವರ ಮಾತು ಕೇಳುವುದೇ ಒಂದು ಸೊಗಸು. ನನಗೂ ಒಂದು ಒಳ್ಳೆಯ ಅನುಭವ. ಅದಿರಲಿ, ನೀವು ಹೋಗಿದ್ದು ಎಲ್ಲಿಗೆ?' ಎಂದು ಅಚ್ಚರಿಯಿಂದ ವೆಂಕಣ್ಣಯ್ಯ ಪ್ರಶ್ನಿಸಿದಾಗ, ಕೃಷ್ಣಯ್ಯ ಹುಳ್ಳಗೆ ನಕ್ಕರು.'ಇಲ್ಲೇ ನನ್ನ ಗುರುತಿನವರು ಒಬ್ಬರು ಇದ್ದಾರೆ, ಅವರ ಮನೆಗೆ ಹೋದನಾ, ಊಟಕ್ಕೆ ಕುಳಿತುಕೊಳ್ಳಿ ಎಂದರು; ದೇವಸ್ಥಾನದಲ್ಲೇ ನನ್ನ ಊಟ ಆಗಿದೆ ಎಂದೆ ಕೇಳಲಿಲ್ಲ; ಬಾಳೆ ಹಣ್ಣು ತಿನ್ನಿ ಎಂದರು. ಪಟ್ಟಾಂಗ ಹೊಡೆಯುತ್ತಾ ಕುಳಿತೆವು. ಬನ್ನಿ ತಾಳಮದ್ದಲೆಗೆ ಹೋಗುವ ಎಂದರೆ, ಇಲ್ಲ ಮಾರಾಯ, ನನಗೆ ಕಾಲು ನೋವು, ನೀನೂ ಇಲ್ಲೇ ಇರು, ಇಬ್ಬರೂ ಮಾತನಾಡುತ್ತಾ ಕೂರುವ ಎಂದರಾ? ಅಲ್ಲೇ ಉಳಿದೆ! ರಾತ್ರಿ ಇಡೀ ನಾನಾ ವಿಚಾರ ಮಾತುಕತೆಯಾಯಿತು. ಅವರಿಗೆ ದೇಶದ ವಿಚಾರ ಭಾರೀ ಗೊತ್ತುಂಟು. ಕುಂದಾಪುರದಲ್ಲಿ ಸದ್ಯದಲ್ಲಿ ಅದೇನೋ ಸಭೆ ಉಂಟಂತೆ ಎಂದೂ ಹೇಳಿದರು' ಎಂದರು ಕೃಷ್ಣಯ್ಯ ನಗುತ್ತಾ. ಹೇಳುವಾಗಲೇ ಅದು ಸುಳ್ಳು ಎಂದು ಗೊತ್ತಾಗುತ್ತಿತ್ತು.

'ನಿಮ್ಮ ಗುರುತಿನವರು ಯಾರು? ನನಗೆ ನಿಮ್ಮ ನೆಂಟರೆಲ್ಲರ ಮಾಹಿತಿ ಉಂಟು. ಎಲ್ಲಿ ಬಸ್ರೂರಿನವರಾ?' ಎಂದು ವೆಂಕಣ್ಣಯ್ಯ ಕೇಳಿದಾಗ, ತುಸು ಗಾಬರಿಗೊಂಡವರಂತೆ, 'ಬಸ್ರೂರು ಅಲ್ಲ ಮಾರಾಯ, ಇಲ್ಲೇ ತೆಕ್ಕಟ್ಟೆಯಲ್ಲಿ, ಮತ್ತೆ ನೀವು ನಮ್ಮ ಊರಿನಲ್ಲಿ ಯಾರಿಗೂ ಈ ವಿಚಾರ ಹೇಳಬೇಡಿ ಆಯಿತಾ? ಇವತ್ತು ಇಲ್ಲೇನೋ ಸಭೆ ಉಂಟಂತೆ, ಎಂತ ಅಂತ ವಿಚಾರಿಸುವ' ಎಂದು ಮಾತು ಬದಲಿಸಿದರು ಕೃಷ್ಣಯ್ಯ. ಇವನದ್ದು ಇದೇ ಕಥೆ ಎಂದು ಊಹಿಸಿದ ವೆಂಕಣ್ಣಯ್ಯ ಅದರ ವಿಚಾರ ಮತ್ತೇನೂ ಹೇಳದೆ, 'ಒಳ್ಳೆಯ ಜಡೆ ಈರುಳ್ಳಿ ಬಂದಿತ್ತು, ತಕಂಡು ಹೋಗುವ' ಎಂದು, ಸಂತೆಯಲ್ಲಿ ಆರು ಜಡೆ ಈರುಳ್ಳಿ ಖರೀದಿಸಿದರು. ತ್ರಾಸಿ, ಮರವಂತೆ, ಗಂಗೊಳ್ಳಿಯ ಕೃಷಿಕರು ಉಪ್ಪು ನೀರು ಹಾಕಿ ಬೆಳೆಸಿದ ಈರುಳ್ಳಿಗೆ ರುಚಿ ಜಾಸ್ತಿ. ಸಂತೆಯ ಮಧ್ಯದಲ್ಲಿ ನಾಲ್ಕಾರು ಜನ ಬಿಳಿ ಬಟ್ಟೆ ಧರಿಸಿದ ಹಿರಿಯರು, ಅಲ್ಲೇ ನಿಂತು ಮಾತಾಡುವುದು ಕೇಳಿಸಿತು: 'ಇದೇ ತಿಂಗಳು ನಾಲ್ಕನೆಯ ವಾರ, ಅಂದರೆ ಫೆಬ್ರವರಿ 25ಕ್ಕೆ ಗಾಂಧಿ ಮಹಾತ್ಮ ಕುಂದಾಪುರಕ್ಕೆ ಬರುತ್ತಾರೆ. ಎಲ್ಲರೂ ಬಂದು ಅವರ ಮಾತುಗಳನ್ನು ಕೇಳಿ, ದೇಶವನ್ನು ವಿದೇಶೀಯರ ದಾಸ್ಯದಿಂದ ಬಿಡಿಸುವ ಹೋರಾಟಕ್ಕೆ ಸಹಕರಿಸಿ, ಎಲ್ಲರೂ ಕೈಲಾದಷ್ಟು ಹಣವನ್ನು ನೀಡಿ ಬೆಂಬಲಿಸಿ' ಎಂದು ಮನವಿ ಮಾಡುತ್ತಿದ್ದರು.

ಅವರನ್ನು ಕಂಡು ಕೃಷ್ಣಯ್ಯ ನಕ್ಕು, 'ಇದೇ ಸಭೆ! ಇವರಿಗೆ ಬೇರೆ ಕೆಲಸ ಇಲ್ಲ, ಬ್ರಿಟಿಷರು ನಮ್ಮ ದೇಶವನ್ನು ಚೆನ್ನಾಗಿ ಆಳುತ್ತಿದ್ದಾರೆ; ಅವರಿಂದ ಏಕೆ ಬಿಡಿಸಿಕೊಳ್ಳಬೇಕು. ಇವರದ್ದು ಸುಮ್ಮನೆ ಹೋರಾಟ' ಎಂದರು. ಆದರೆ ವೆಂಕಣ್ಣಯ್ಯ ಒಪ್ಪಲಿಲ್ಲ. 'ಗಾಂಧಿ ಮಹಾತ್ಮ ಗೊತ್ತಿಲ್ಲವೇ! ತಮ್ಮ ಹೋರಾಟಕ್ಕಾಗಿಯೇ ಜೀವನವನ್ನೇ ತ್ಯಾಗ ಮಾಡಿದ್ದಾರೆ. ಅವರಿಗೆ ಬೆಂಬಲ ನೀಡಿದರೆ ಒಳ್ಳೆಯದು. ಗಾಂಧೀಜಿ ಅವರು ಹೇಳುವುದೆಲ್ಲಾ ಸತ್ಯ, ಗೊತ್ತಾ? ಅವರು ಸುಳ್ಳೇ ಹೇಳಿಲ್ಲವಂತೆ ಗೊತ್ತಾ?' ಎಂದು ಸಮರ್ಥಿಸಿದ ವೆಂಕಣ್ಣಯ್ಯ, ಫೆಬ್ರವರಿ 25ರಂದು ಕುಂದಾಪುರಕ್ಕೆ ಬರುವುದು ಎಂದು ಅಲ್ಲೇ ನಿರ್ಧರಿಸಿದರು. ವೆಂಕಣ್ಣಯ್ಯನ ದೇಶಾಭಿಮಾನ ಕಂಡು ಕೃಷ್ಣಯ್ಯನಿಗೆ ಹಾಸ್ಯ, ನಗು! ಸಂತೆ ಮುಗಿಸಿ, ಕೈಯಲ್ಲಿ ಆರು ಜಡೆ ಈರುಳ್ಳಿ ಹಿಡಿದು, ಊರಿಗೆ ವಾಪಸಾಗುವಾಗ ಜತೆಯಲ್ಲಿ ಕೃಷ್ಣಯ್ಯ ಇದ್ದುದರಿಂದ, ನಾನಾ ರೀತಿಯ ಕುಶಾಲು ಮಾತು, ಹಾಸ್ಯದ ಪ್ರಸಂಗಗಳನ್ನು ಮಾತನಾಡುತ್ತಾ, ದಾರಿ ಸಾಗಿದ್ದೇ ಗೊತ್ತಾಗಲಿಲ್ಲ.

'ನೀವು ಒಂದೆರಡು ಜಡೆ ಈರುಳ್ಳಿ ತಕೋಬೇಕಿತ್ತು' ಎಂದಾಗ, 'ಹೌದು, ಆದರೆ, ಅಷ್ಟು ದೂರ ಅದನ್ನು ಹಿಡಿದು ನಡೆಯುವುದು ನನ್ನಿಂದಾಗದು. ನನ್ನ ಎಡಗೈ ತುಸು ತೆಳು ಆಗಿದೆ, ಬಲ ಕಡಿಮೆ. ನಾನು ಹುಡುಗನಾಗಿದ್ದಾಗ ಅದೆಂತದೋ ಪೋಲಿಯೋ ಆಗಿದ್ದು ಗೊತ್ತಲ್ಲಾ..' ಎಂದು ಕೃಷ್ಣಯ್ಯ ಮಾತು ಮರೆಸಿದರು ಹೊರತು, ಹಿಂದಿನ ದಿನ ತಾನು ಬಸ್ರೂರಿಗೆ ಯಾಕೆ ಹೋಗಿದ್ದೆ ಎಂಬುದರ ಗುಟ್ಟು ಬಿಟ್ಟುಕೊಡಲಿಲ್ಲ.

17.08.2025 ರಂದು ಬಿಡುಗಡೆಯಾಗುತ್ತಿರುವ 'ನದಿ ದಾಟಿ ಬಂದವರು' ಕಾದಂಬರಿಯ ಆಯ್ದ ಭಾಗ.

ಅದಾಗಿ ಎರಡೇ ವಾರ; ಗಾಂಧಿ ಮಹಾತ್ಮ ಕುಂದಾಪುರಕ್ಕೆ ಬರುವ ದಿನ; ವೆಂಕಣ್ಣಯ್ಯ ಮತ್ತೊಮ್ಮೆ ಕುಂದಾಪುರಕ್ಕೆ ನಡೆದೇ ಹೋಗಬೇಕಾಯಿತು. 1934ರ ಫೆಬ್ರವರಿ 25. ಬೆಳಗ್ಗೆ ಬೇಗನೆದ್ದು, ಒಂದಷ್ಟು ಒಗ್ಗರಣೆ ಅವಲಕ್ಕಿ ತಿಂದು, ನಡೆಯಲು ಆರಂಭಿಸಿದ ವೆಂಕಣ್ಣಯ್ಯ, ಮಧ್ಯಾಹ್ನದ ಹೊತ್ತಿಗೆ ಕುಂದಾಪುರ ತಲುಪಿದರು. ಕಾಳಾವರ, ಸಳ್ವಾಡಿ ಹತ್ತಿರ ನಡೆಯುತ್ತಿರುವಾಗ, ಇವರ ಜತೆ ಇನ್ನೊಂದಿಷ್ಟು ಜನ ಗಾಂಧಿ ಮಹಾತ್ಮನನ್ನು ನೋಡಲು ಹೊರಟವರು ಸಿಕ್ಕಿದರು. ಹಳ್ಳಿ ಜನರಲ್ಲೂ ಅದೊಂದು ರೀತಿಯ ಉತ್ಸಾಹ; ಗಾಂಧಿಯವರ ಸಾಧನೆ ಕುರಿತು ಅಲ್ಪಸ್ವಲ್ಪ ವಿವರ ಗೊತ್ತಿತ್ತು; ಅವರು ಸುಳ್ಳು ಹೇಳುವುದಿಲ್ಲವಂತೆ ಎಂದೂ ಪ್ರಚಾರವಾಗಿತ್ತು. 'ಗಾಂಧಿ ಮಹಾತ್ಮ' ಕುಂದಾಪುರಕ್ಕೆ ಬರುತ್ತಾರಂತೆ ಎಂಬ ಸುದ್ದಿ ಎಲ್ಲೆಲ್ಲೂ. ಶೇರೇಗಾರ ಎಂಬ ಒಬ್ಬರು ಹಿರಿಯರು, ಗಾಂಧಿ ಸ್ವಾಗತ ಸಮಿತಿಗೆ ಅಧ್ಯಕ್ಷರಂತೆ. ಕಾಮತ ಎಂಬುವವರ ಮನೆಯಲ್ಲಿ ಗಾಂಧಿ ರಾತ್ರಿ ತಂಗುವವರಂತೆ ಎಂಬೆಲ್ಲಾ ಚರ್ಚೆ. ವೆಂಕಣ್ಣಯ್ಯ ಕುಂದಾಪುರ ತಲುಪುವಾಗ, ಅದಾಗಲೇ ಕುಂದಾಪುರದ ನರಿಬ್ಯಾಣದಲ್ಲಿ ಸ್ವಲ್ಪ ಜನ ಸುಳಿದಾಡುತ್ತಿದ್ದರು. ಗಾಂಧೀಜಿ ಈಗ ಉಡುಪಿಯಲ್ಲಿದ್ದಾರಂತೆ, ಸಂಜೆ ಹೊತ್ತಿಗೆ ಬರುತ್ತಾರಂತೆ ಎಂದು ಅಲ್ಲಿದ್ದವರು ಹೇಳಿದರು.

ಕುಂದಾಪುರ ತಲುಪಿದ ವೆಂಕಣ್ಣಯ್ಯ, ಮೊದಲು ಕುಂದೇಶ್ವರ ದೇವಸ್ಥಾನದ ಬೀದಿಯಲ್ಲಿದ್ದ ಬಂಧುಗಳ ಮನೆಗೆ ಹೋಗಿ, ಊಟ ಮಾಡಿ, ಸಂಜೆ ನರಿಬ್ಯಾಣಕ್ಕೆ ಬಂದರು. ಅಷ್ಟು ಹೊತ್ತಿಗೆ ಅಲ್ಲಿ ಸಾಕಷ್ಟು ಜನ ಸೇರಿದ್ದರು. ವಿಶಾಲವಾದ ಮೈದಾನವಾದ್ದರಿಂದ, ಇಲ್ಲಿ ಎಷ್ಟು ಜನ ಸೇರಿದರೂ ಇಕ್ಕಟ್ಟು ಆಗುವುದಿಲ್ಲ ಎಂದುಕೊಂಡರು ವೆಂಕಣ್ಣಯ್ಯ. ಅವರು ಅಷ್ಟೊಂದು ಜನರನ್ನು ಈ ಹಿಂದೆ ಎಂದೂ ಕಂಡಿರಲಿಲ್ಲ; ರಾತ್ರಿ ಎಂಟು ಗಂಟೆಯಾಗಿರಬಹುದು. 'ಗಾಂಧಿ ಬಂದರು, ಗಾಂಧಿ ಬಂದರು ಎಂದು ಎಲ್ಲರೂ ಒಂದು ದಿಕ್ಕಿನತ್ತ ನೋಡತೊಡಗಿದರು. ಬಹಳ ಜನರ ಜತೆ ಗಾಂಧಿ ಬಂದು, ವೇದಿಕೆ ಏರಿದರು.

ಮೈದಾನದಲ್ಲಿ ಮಧ್ಯದ ವೇದಿಕೆಯ ಭಾಗದಲ್ಲಿ, ಅಲ್ಲಲ್ಲಿ ಗ್ಯಾಸ್‌ಲೈಟ್ ವ್ಯವಸ್ಥೆ ಮಾಡಲಾಗಿತ್ತು. ಗಾಂಧೀಜಿಯವರ ಕುರಿತು, ಬ್ರಿಟಿಷರ ವಿರುದ್ಧ ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಹೋರಾಟದ ಕುರಿತು ಸ್ಥಳೀಯರು ಭಾಷಣ ಮಾಡಿದ ನಂತರ, ಗಾಂಧೀಜಿಯವರು ಮಾತನಾಡಿ, ಸ್ವಾತಂತ್ರ್ಯ ಹೋರಾಟಕ್ಕೆ ಕುಂದಾಪುರದವರು ಬೆಂಬಲ ನೀಡಿದ್ದಕ್ಕೆ ಧನ್ಯವಾದ ಹೇಳಿದರು. ಎಲ್ಲರೂ ತಮ್ಮ ಕೈಲಾದಷ್ಟು ಹಣ ಅಥವಾ ಚಿನ್ನ ನೀಡಬೇಕು ಎಂದು ಕರೆಕೊಟ್ಟರು! ಬಂದಿದ್ದವರಲ್ಲಿ ಕೆಲವರು ದೇಣಿಗೆ ನೀಡಿದರು; ವೆಂಕಣ್ಣಯ್ಯನ ಬಳಿ ಸ್ವಲ್ಪ ಹಣವಿತ್ತು; ನಾಣ್ಯಗಳು; ಅದನ್ನು ನೀಡಿದರು. ಬೇರೆ ಕೆಲವರು 5 ರುಪಾಯಿ ದೇಣಿಗೆ, ಇನ್ನು ಕೆಲವರು ಚಿನ್ನದ ಆಭರಣ ದೇಣಿಗೆ ನೀಡಿದ್ದು ತಿಳಿದು, ವೆಂಕಣ್ಣಯ್ಯನಿಗೆ ಬಹಳ ಅಚ್ಚರಿ ಆಯಿತು; ವೆಂಕಣ್ಣಯ್ಯ ಇರುವ ನೆಲ್ಯಾಡಿಯಲ್ಲಿ 5 ರುಪಾಯಿ ಎಂದರೆ ಬಹುದೊಡ್ಡ ಮೊತ್ತ. ಅಷ್ಟೊಂದು ಹಣವನ್ನು ಗಾಂಧಿ ಮಹಾತ್ಮನಿಗೆ ಇವರು ಕೊಡಬೇಕೆಂದರೆ, ಅವರ ಬಳಿ ಇನ್ನಷ್ಟು ಹಣ ಇರಬೇಕು!

ಅಲ್ಲಿ ಸೇರಿದ್ದ ಜನರು ಮಾತನಾಡುತ್ತಿದ್ದ ಒಂದು ವಿಚಾರ ಕೇಳಿ, ವೆಂಕಣ್ಣಯ್ಯನಿಗೆ ಆದ ಬೆರಗು ಅಷ್ಟಿಷ್ಟಲ್ಲ, ಅದೇನೆಂದರೆ, ಗಾಂಧಿಯವರು ಹಸುವಿನ ಹಾಲನ್ನು ಕುಡಿಯುವುದಿಲ್ಲವಂತೆ, ಮೇಕೆ ಹಾಲನ್ನು ಕುಡಿಯುತ್ತಾರಂತೆ, ಅದಕ್ಕಾಗಿ, ಎರಡು ಮೇಕೆಗಳನ್ನು, ಹೊಳೆಯಿಂದಾಚೆ ಇದ್ದ ಗಂಗೊಳ್ಳಿಯ ಸಾಯಿಬರ ಮನೆಯಿಂದ ತರಿಸಿ, ನರಿಬ್ಯಾಣದ ಹತ್ತಿರ ಕಾಮತರ ಮನೆಯಲ್ಲಿ ಕಟ್ಟಿಹಾಕಿದ್ದರಂತೆ; ಅದಕ್ಕೆ ಬೇಕಾದ ಆಹಾರ ನೀಡಿ, ಜಾಗ್ರತೆಯಿಂದ ನೋಡಿಕೊಳ್ಳುತ್ತಿದ್ದಾರಂತೆ! ಅದರ ಹಾಲು ಕರೆದು, ಬಿಸಿ ಮಾಡಿ ಗಾಂಧಿಯವರಿಗೆ ಕೊಟ್ಟರಂತೆ ಎಂಬ ವಿಚಾರವನ್ನೇ ಎಲ್ಲರೂ ಮಾತನಾಡುತ್ತಿದ್ದರು! ಬೆರಗು ಏಕೆಂದರೆ, ಮೇಕೆ ಅಥವಾ ಆಡು ಎಂಬ ಪ್ರಾಣಿಯನ್ನು ನಿಜಜೀವನದಲ್ಲಿ ವೆಂಕಣ್ಣಯ್ಯ ಎಲ್ಲೂ ಕಂಡೇ ಇರಲಿಲ್ಲ. ಯಕ್ಷಗಾನ ಪ್ರಸಂಗಗಳಲ್ಲಿ, ಆಡಿನ ಮುಖದ ದಕ್ಷನ ಕಥೆ ಕೇಳಿದ್ದರು. ಆದರೆ, ಆಡಿನ ಹಾಲನ್ನು ಕುಡಿಯಬಹುದು ಎಂಬ ವಿಚಾರವೂ ಅವರಿಗೆ ಅಚ್ಚರಿಯದ್ದೇ!

ಸಭೆ ಮುಗಿಯುವ ಹೊತ್ತಿಗೆ ರಾತ್ರಿ ಬಹಳ ಹೊತ್ತಾಗಿತ್ತು. ಗಾಂಧಿಯವರು ಅಲ್ಲೇ ಸನಿಹದಲ್ಲಿದ್ದ ಕಾಮತರ ಮನೆಯಲ್ಲಿ ತಂಗಿದರು; ಅದಕ್ಕಾಗಿ ಆ ಮನೆಯಲ್ಲಿ ವ್ಯವಸ್ಥೆಯನ್ನೂ ಮಾಡಲಾಗಿತ್ತು. ವೆಂಕಣ್ಣಯ್ಯ ಅಲ್ಲಿನ ಪರಿಚಿತರ ಮನೆಯಲ್ಲಿ ಉಳಿದು, ಬೆಳಗ್ಗೆ ಊರಿಗೆ ಹೊರಟರು. ಗಾಂಧಿ ತಂಗಿದ್ದ ಕಾಮತರ ಮನೆಯ ಮುಂದಯೇ ಇವರ ದಾರಿ ಸಾಗುತ್ತಿತ್ತು; ಬೆಳಗ್ಗೆ ಆ ಮನೆ ಮುಂದೆ ನೂರಾರು ಜನ ನಿಂತಿದ್ದರು. ಎಲ್ಲರೂ ಮನೆಯ ಒಂದು ಕಿಟಕಿಯಲ್ಲಿ ಇಣುಕಿ ಇಣುಕಿ ನೋಡುತ್ತಿದ್ದರು.

ಆ ದಿನ ಸೋಮವಾರ; ಗಾಂಧೀಜಿಯವರು ಮೌನವ್ರತ ತಾಳುವ ದಿನ. ವೆಂಕಣ್ಣಯ್ಯನೂ ಅಲ್ಲಿನ ಸರದಿ ಸಾಲಿನಲ್ಲಿ ಸ್ವಲ್ಪ ಹೊತ್ತು ನಿಂತರು; ತಮ್ಮ ಸರದಿ ಬಂದಾಗ, ಅಲ್ಲಿದ್ದ ಒಂದು ಕಿಟಕಿಯಲ್ಲಿ ಇಣುಕಿದರು: ಗಾಂಧಿಯವರು ಏನನ್ನೋ ಬರೆಯುತ್ತಿದ್ದುದು ಕಾಣಿಸಿತು. ದೇಶಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡಿದ ಗಾಂಧೀಜಿ, ಅವರನ್ನು ನೋಡಲು ಬಂದ ಸಾವಿರಾರು ಜನ, ಅವರ ಹೋರಾಟಕ್ಕೆ ದೇಣಿಗೆ ನೀಡಿದ್ದು ಇವೆಲ್ಲವೂ ವೆಂಕಣ್ಣಯ್ಯನ ಮೇಲೆ ಬಹಳ ಪ್ರಭಾವ ಬೀರಿತು. ಆ ನಂತರದ ದಿನಗಳಲ್ಲಿ ತಾಳಮದ್ದಲೆ ಅರ್ಥಗಾರಿಕೆಯಲ್ಲಿ ಸಂದರ್ಭ ಬಂದಾಗಲೆಲ್ಲಾ, ಗಾಂಧಿಯ ವಿಚಾರವನ್ನು ಹೇಳುತ್ತಿದ್ದರು, ದೇಶದ ದಾಸ್ಯದ ವಿಚಾರ ಹೇಳುತ್ತಿದ್ದರು; ಬಡಜನರ ಉದ್ದಾರವಾಗಬೇಕಾದರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದು ಅಗತ್ಯ ಎಂದು ವಾದಿಸುತ್ತಿದ್ದರು. ಗಾಂಧಿಯವರನ್ನು ಕಣ್ಣಾರೆ ನೋಡಿದ್ದು, ವೆಂಕಣ್ಣಯ್ಯನ ಬದುಕಿನ ಮೇಲೆ, ಯೋಚಿಸುವ ಕ್ರಮದ ಮೇಲೆ ಪ್ರಚಂಡ ಪರಿಣಾಮ ಬೀರಿದ್ದಂತೂ ನಿಜ.

ಮಳೆಯಲ್ಲಿ ಮಾಯವಾದ ಮಾಯಾ!

ಮಳೆ ಸುರಿದು ವಿಪರೀತ ನೀರು ಹರಿದು, ಚರಂಡಿಗೆ ಜಾರಿ ಬಿದ್ದ ಮಾಯಾಳ ಸಾವಿಗೆ ಮಳೆ ಕಾರಣವೇ ಅಥವಾ ವಿಪರೀತ ಭ್ರಷ್ಟಾಚಾರವೇ?

» ಸತ್ಯಕಾಮ ಶರ್ಮಾ ಕಾಸರಗೋಡು

ಹೊಸ ಕಥೆ

'ಸಾಹೇಬ್ರು, ಯಾಕೋ ತುಂಬಾ ಸೀರಿಯಸ್ ಆಗಿದ್ದೀರಾ?' ತನ್ನ ಅಭ್ಯಾಸ ಬಲದಂತೆ ಉದ್ಗರಿಸಿದ ಪ್ರೇಮ್.

'ಪ್ಲೀಸ್ ಡಿಸ್ಟರ್ಬ್ ಮಾಡ್ಬೇಡ. ನಾನು ಮಾಡ್ತಿರೋದು ನಿಂದೇ ಕ್ಲೈಂಟ್ ಕೆಲ್ಸ. ಈ ಆಡ್ (ಜಾಹೀರಾತು) ನಾಳೆನೇ ರಿಲೀಸ್ ಆಗ್ಬೇಕು, ಗೊತ್ತಲ್ಲ?' ಹುಸಿ ಮುನಿಸು ಪ್ರದರ್ಶಿಸುತ್ತಾ ಮೆಲ್ಲನೆ ಉತ್ತರಿಸಿದ ಪ್ರಸನ್ನ.

ಪ್ರೇಮ್ ಮುಂದುವರಿಸಿದ. ''ವಿಷ್ಯ ಗೊತ್ತಾ? ಇನ್ನೊಂದು ಆಡ್ ಸಿಕ್ರೆ ಹ್ಯಾಟ್ರಿಕ್ ಕಣೋ ಹ್ಯಾಟ್ರಿಕ್. . . ನಗರಸಭೆಯ ಈ ಅಪ್ಪೀಲ್ ಆಡ್, ಈ ಹುಡುಗಿಯ ಶ್ರದ್ಧಾಂಜಲಿ ಆಡ್. . . ಮತ್ತಿನ್ನು ಅವ್ಳ ವೈಕುಂಠ ಸಮಾರಾಧನೆ ಆಡ್ ಸಿಕ್ರೆ ಅಂತೂ ತ್ರೀ ಆಡ್ಸ್! ನಾನು ಟಾರ್ಗೆಟ್ ರೀಚ್ ಆಗ್ತೀನಿ ಕಣೋ. ಇವೆರಡೂ ನನ್ನ ಕ್ಲೈಂಟ್ಸ್. ನನ್ಗೆ ಹೈಕ್ ಸಿಗೋದು ಶೂರ್. ನಿನ್ಗಂತೂ ಒಂದು ಪಾರ್ಟಿ ಶೂರ್!''

ಕಾಟಾಚಾರಕ್ಕೆ ಎಂಬಂತೆ ''ಛೇ! ಅಂಥಾ ಮಳೆ! ಚೆಂಡು ಹಿಂದೆ ಬಿದ್ದ ಹುಡುಗಿಗೆ ಗೊತ್ತಿತ್ತಾ ಹೀಗಾಗುತ್ತೆ ಅಂತ. ಆದ್ರೂ, ಆ ಹುಡ್ಗಿ ಬಾಡಿ ಸಿಕ್ತಾ?'' ಅನ್ನುತ್ತಾ ಅಲ್ಲಿಂದ ತೆರಳಿದ ಪ್ರೇಮ್.

ನಗರದಲ್ಲಿ ಸುರಿದ ಮಳೆಗೆ ಮನೆ ಛಾವಣಿ ಕುಸಿದು ಕೆಲವರು ಸತ್ತರೆ ಇನ್ನು ಕೆಲವರು ಸಿಡಿಲಿಗೆ ಬಲಿಯಾಗಿದ್ದರು, ಜಲಸಮಾಧಿಯಾಗಿದ್ದರು. ಟಿ ವಿ ಚಾನಗಳಲ್ಲಿ ಮಳೆಯ ದುರಂತದ ಸುದ್ದಿಯದ್ದೇ ಮಳೆ ನೋಡಿ ನೋಡಿ ಸಾಕಾದ ನಗರದ ಜನರ ಸೋಷಿಯಲ್ ಮೀಡಿಯಾದಲ್ಲಿ ಸುದ್ದಿಯನ್ನೇ ಗೇಲಿ ಮಾಡುವ ಮೀಮ್‌ಗಳು ವೈರಲ್ ಆಗಿ, ಸಾವು ತನ್ನ ರುದ್ರತೆಯನ್ನು ಕಳಕೊಂಡಿತ್ತು.

ಎಲ್ಲಕ್ಕಿಂತಲೂ ದಾರುಣವಾದ ದುರಂತ ಮಾಯಾಳದ್ದು. ಮಳೆ ಸ್ವಲ್ಪ ಕಮ್ಮಿಯಾಯ್ತು ಅನ್ನುವಷ್ಟರಲ್ಲಿ ಮನೆಯ ಟೆರೇಸಿನಲ್ಲಿ ಚೆಂಡಾಡುತ್ತಿದ್ದ ಹುಡುಗಿ, ರಸ್ತೆಗೆ ಬಿದ್ದ ಚೆಂಡನ್ನು ಹಿಂಬಾಲಿಸಿ ಸರಸರಸನೆ ಮೆಟ್ಟಿಲಿಳಿದು ಮಳೆ ನೀರ ಪ್ರವಾಹದಲ್ಲಿ ಕಾಲಿಟ್ಟಿದ್ದಾಳೆ–ಅಪ್ಪ ಅಮ್ಮ ಕೂಗಿ ಕರೆದರೂ ಕೇಳದೆ! ಕಿತ್ತು ಹೋದ ಚರಂಡಿಯ ಸ್ಲಾಬ್ ಎಂಬ ತೀರಾ ಚಿಲ್ಲರೆ ಸಂಗತಿ ಮುಗ್ಧ ಬಾಲಕಿಯ ನಾಪತ್ತೆಯಿಂದ ಮುನ್ನೆಲೆಗೆ ಬಂದಿದೆ. ಈ ಅನ್ಯಾಯದ ಸಾವಿಗೆ ಯಾರು ಹೊಣೆ? ಅನ್ನುವುದು ಕೆಲವು ಚಾನಲ್‌ಗಳಲ್ಲಿ ಚರ್ಚೆಯ ವಿಷಯವಾದದ್ದು, ಅವಳು ಇನ್ನೂ ಬದುಕಿದ್ದಾಳೆ ಎಂದು ನಂಬುವ, ನಂಬಲು ಬಯಸುವ ಅವಳ ತಂದೆ ತಾಯಿಯ ಎದೆಯ ಗಾಯಕ್ಕೆ ಉಪ್ಪು ಸವರಿದೆ.

ಹಠಹಿಡಿದು ಸುರಿದ ಮುಸಲಧಾರೆಗೆ ಥಂಡಿಯಾದ ನಗರದ ಜನ ಬಿಸಿಸಿ ಐಟಂಗಳನ್ನು ಆನ್‌ಲೈನಿನಲ್ಲಿ ತರಿಸಿ ಗಬಗಬನೆ ತಿನ್ನುತ್ತಾ, ದುರಂತದ ಸುದ್ದಿಯನ್ನು ಕಂಡೂ ಕಾಣದಂತೆ, ಕೇಳಿಯೂ ಕೇಳದಂತೆ ಎಂಜಾಯ್ ಮಾಡುತ್ತಿದ್ದಾರೆ. ಸಾಕಪ್ಪಾ ಸಾಕು ಎಂದು ಚಾನೆಲ್ ಬದಲಾಯಿಸಿ. ಬದಲಾಯಿಸಿ ಅಲ್ಲಿಗೇ ತಲುಪಿ, ಟಿವಿ ಆಫ್ ಮಾಡಿ ಮೊಬೈಲ್ ಕೈಗೆತ್ತಿಕೊಳ್ಳುತ್ತಿದ್ದಾರೆ. ದುರಂತಗಳು, ಅನ್ಯಾಯಗಳು ಸಂಭವಿಸಿದಾಗಲೆಲ್ಲಾ ಈ ಹಿಂದೆ ಅವರಂತೇ ವರ್ತಿಸುತ್ತಿದ್ದ ಮಾಯಾಳ ತಂದೆ ತಾಯಿ ಹಾಗೂ ಆಪ್ತ ವಲಯವನ್ನು ಹೊರತುಪಡಿಸಿ!

ಜೊತೆಗೆ ರಾಜಕೀಯ ಕೆಸರೆರೆಚಾಟ ಮಳೆಯೊಂದಿಗೆ ಸ್ಪರ್ಧೆಗೆ ಇಳಿದಿದೆ.

''ವಿಧಿಯಾಟ! ಏನೂ ಮಾಡೋಕಾಗಲ್ಲ!'' ಎಂಬ ಪ್ರೇಮ್‌ನ ಚರ್ವಿತಚರ್ವಣದಂಥ ಮಾತಿಗೆ ಉತ್ತರಿಸುವ ಮನಸ್ಥಿತಿಯಲ್ಲಿಲ್ಲದ ಪ್ರಸನ್ನನ ಮಸ್ತಿಷ್ಕದೊಳಗೆ ಮಂಥನ ಬಿರುಸಿನಿಂದ ಸಾಗಿತ್ತು.

ವಿಧಿಯಾಟವಲ್ಲ, ನಮ್ಮ ಅಸ್ಮಿತೆ ಅನ್ನುವಷ್ಟರ ಮಟ್ಟಿಗೆ ಅಂಟಿಕೊಂಡ, ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಿರುವ ಭ್ರಷ್ಟಾಚಾರ, ಮಾಯಾ ನಾಪತ್ತೆಯಾಗಲು ಕಾರಣ. ಒಂದು ದೇಶವನ್ನು ಕಟ್ಟಿ ಬೆಳೆಸಿದೆವೋ ಇಲ್ಲವೋ, ಭ್ರಷ್ಟ ವ್ಯವಸ್ಥೆಯೊಂದನ್ನು ನಾವೆಲ್ಲರೂ ಕಟ್ಟಿ, ಬೆಳೆಸಿ ಪೋಷಿಸಿದ ಪರಿ ನಿಜಕ್ಕೂ ಅಚ್ಚರಿ ಹುಟ್ಟಿಸುತ್ತದೆ. ಇದು ಒಂದು ಐತಿಹಾಸಿಕ ಸಾಧನೆಯೇ! ಬಹುಶಃ ನಮ್ಮಲ್ಲಿ ಎದ್ದು ಕಾಣುವ ಏಕತೆಯ ಅಂಶ ಇದೊಂದೇ–ಭ್ರಷ್ಟ ವ್ಯವಸ್ಥೆಯ ಎದುರಿನ ಅಸಹಾಯಕತೆ, ಅದನ್ನು ಮರೆಮಾಚುವ ಚಾಣಾಕ್ಷತನ, ಹೊಣೆಗೇಡಿತನಕ್ಕೆ ನೀಡುವ ಸಮರ್ಥನೆಗಳು, ಪರಿಪರಿಯಾದ ಆತ್ಮವಂಚನೆಯ ಆಟಾಟೋಪಗಳು!

ತಾನೇನು ಕಮ್ಮಿಯೇ? ಕ್ರಿಯೇಟಿವಿಟಿಗೆ ಸ್ಕೋಪ್ ಇದೆ ಎಂದು ಜಾಹೀರಾತು ರಂಗವನ್ನು ನೆಚ್ಚಿಕೊಂಡ ತಾನೇಕೆ ಮಹತ್ತರವಾದ ಗುರಿಯನ್ನು ಹಾಕಿಕೊಳ್ಳಲಿಲ್ಲ? ಅಭದ್ರತೆಯ ಭಾವ ಅಡ್ಡಿಯಾಯಿತೇ? ಖಡ್ಗಕ್ಕಿಂತ ಹರಿತವಾದ ಲೇಖನಿಯನ್ನು ನಾನು ತರಕಾರಿ ಹೆಚ್ಚುವಂಥಹಾ ಚಿಲ್ಲರೆ ಕೆಲಸಕ್ಕೆ ಬಳಸುತ್ತಿದ್ದೇನೆಯೆ?

ಹೋರಾಡುವುದು ಬೇರೆ. ಸೋಲು ಕಟ್ಟಿಟ್ಟದ್ದು ಎಂಬುದು ತಿಳಿದಾಗಲೂ ಹೋರಾಡಿ ವೀರಮರಣ ಅಪ್ಪುವುದು ಬೇರೆ. ಅದು ಶ್ರೇಷ್ಠ ಬಲಿದಾನ. ಇಂಥಾ ಸಹಸ್ರ ಬಲಿದಾನಗಳ ಫಲ ನಾವು ಇಂದು ಅನುಭವಿಸುತ್ತಿರುವ ಸ್ವಾತಂತ್ರ್ಯ. ಇಂದು ಈ ದೇಶದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಡುವುದು ಈ ಎರಡನೆಯ ಬಗೆಯ ಹೋರಾಟ.

ಎಲ್ಲದಕ್ಕೂ ನಗರಸಭೆಯೇ ಕಾರಣ. ಇಂಜಿನೀಯರುಗಳನ್ನು ಅಮಾನತುಗೊಳಿಸಿ, ಗುತ್ತಿಗೆದಾರರನ್ನು ಶಿಕ್ಷಿಸಿ ಎಂಬಿತ್ಯಾದಿ ಕೂಗು (ಮುಗಿಲು ಇರುವ ತನಕ) ಮುಗಿಲು ಮುಟ್ಟುತ್ತಿದೆ. ಹೀಗಾಗಿ ದಿನಪತ್ರಿಕೆಗಳಲ್ಲಿ ಒಂದು ಮನವಿ ರೂಪದ ಜಾಹೀರಾತನ್ನು ಬಿಡುಗಡೆ ಮಾಡಲು ನಗರಸಭೆ ಮುಂದಾಗಿದ್ದು ಪ್ರಸನ್ನ ಹಾಗೂ ಪ್ರೇಮ್ ವರುಷಗಳಿಂದ ದುಡಿಯುತ್ತಿರುವ ಜಾಹೀರಾತು (ಆಡ್) ಏಜನ್ಸಿಗೆ ಅದರ ವಿನ್ಯಾಸ ಮತ್ತು ಮಾಧ್ಯಮಗಳಲ್ಲಿ ಅದರ ಬಿಡುಗಡೆಯ ನಿರ್ವಹಣೆಯ ಕೆಲಸ ವಹಿಸಿದೆ.

ನಗರಸಭೆ, ಪ್ರೇಮ್ ಹ್ಯಾಂಡಲ್ ಮಾಡುವ ಕ್ಲೈಂಟ್. ಸಹಜವಾಗಿಯೇ ಅವನು ಉತ್ಸಾಹದಲ್ಲಿದ್ದಾನೆ. ತನ್ನ ಟಾರ್ಗೆಟ್ ತಲುಪಿದರೆ, ಸಂಬಳದಲ್ಲಿ ಹೈಕ್ ದೊರೆತರೆ ಮಗನ ಸ್ಕೂಲ್ ಫೀಸಿಗೆ ಮಾಡಿದ ಸಾಲ ಬೇಗನೆ ತೀರಿಸುವ ಕನಸು ಕಾಣುತ್ತಿದ್ದಾನೆ. ಮನವಿ ಜಾಹೀರಾತು ಹೇಗಿರಬೇಕು, ಅದರಲ್ಲಿ ಏನಿರಬೇಕು ಎಂಬುದನ್ನೆಲ್ಲಾ ಕ್ರಿಯೇಟಿವ್ ಟೀಮ್ಗೆ ಚಾಚೂ ತಪ್ಪದೆ ವಿವರಿಸಿದ್ದಾನೆ ಪ್ರೇಮ್. ಹುಡುಗಿ ನಾಪತ್ತೆಯಿಂದ ನಗರ ಸಭೆಗೆ ತೀವ್ರ ಆಘಾತವಾಗಿದೆ. . .ಅತೀವ ಸಂತಾಪ ವ್ಯಕ್ತಪಡಿಸುತ್ತೇವೆ. . .ಆದರೆ ಈ ದುರಂತಕ್ಕೆ ನಾವು ಹೊಣೆಯಲ್ಲ. . . ಸಾರ್ವಜನಿಕರು ಎಚ್ಚರ ವಹಿಸಬೇಕು . . .ಚರಂಡಿಯಲ್ಲಿ ಕಸ, ಪ್ಲಾಸ್ಟಿಕ್ ತೊಟ್ಟೆಗಳನ್ನು ಎಸೆಯಬಾರದು. . . ಇನ್ನು ಮುಂದೆ ಹೀಗಾಗದಂತೆ ಎಚ್ಚರ ವಹಿಸುತ್ತೇವೆ. . . ಇತ್ಯಾದಿ ಇತ್ಯಾದಿ.

ಇವಿಷ್ಟನ್ನು, ನಗರಸಭೆಯ ಪಿ ಆರ್, ಹೆಚ್ಚು ಕಡಿಮೆ ತಾನೇ ಬರೆದು ಕೊಟ್ಟು ಪ್ರಸನ್ನನ ಬರೆಯುವ ಭಾರ ಇಳಿಸಿದ್ದ. ಇನ್ನು ಪ್ರಸನ್ನ ಮಾಡಬೇಕಾದ್ದು ಅದನ್ನು ಫೈನ್ಟ್ಯೂನ್ ಮಾಡುವುದು, ಇಂಗ್ಲಿಶ್‌ಗೆ ತರ್ಜುಮೆ ಮಾಡುವುದು. ನಿಗದಿಯಾದ ಸೈಜ್ಗೆ ತಕ್ಕ ಲೇಔಟ್, ವಿನ್ಯಾಸ ಮಾಡುವುದು ಇತರರ ಕೆಲಸ.

ಮಳೆ ಮಾಡಿದ ಹಾನಿಯಿಂದ ಜರ್ಜರಿತವಾದ ನಗರ ನಿಧಾನಕ್ಕೆ ಎಚ್ಚೆತ್ತುಕೊಳ್ಳುತ್ತಿದೆ. ಪ್ರಸನ್ನ ಹಾಗೂ ಪ್ರೇಮ್ ನಿತ್ಯ ಕಾಫಿ ಬ್ರೇಕ್ ತೆಗೆದುಕೊಳ್ಳುವ ಹೋಟೆಲ್ ತೆರೆದಿದೆ.

''ಏನ್ ಸಾಹೇಬ್ರು, ಇಷ್ಟೊಂದು ಡಲ್?'' ಪ್ರೇಮ್, ಕಾಫಿ ಹೀರುತ್ತಾ.

''ಮಾಯಾಳ ನಾಪತ್ತೆ ಹಿಂದೆ ಇರೋದು ಕರಪ್ಷನ್, ವಿಧಿಯಾಟವಲ್ಲ. ಅದನ್ನು ಈ ಲೆವೆಲ್ಗೆ ಬೆಳೆಯಲು ಬಿಟ್ಟಿದ್ದು ನಮ್ಮೆಲ್ಲರ ತಪ್ಪು'' ಪ್ರಸನ್ನನ ಉತ್ತರ.

''ಅದು ಈ ದೇಶದ ದುರ್ವಿಧಿ ಅಂದೆ'' ಪ್ರೇಮ್ ಗಂಭೀರನಾದ.

''ಅದು ಎಲ್ರಿಗೂ ಗೊತ್ತು. ಅದು ಎಲ್ಲಾ ದೇಶದಲ್ಲೂ ಇದೆ. ಅಂಥಾ ಜಪಾನಿನಲ್ಲಿ ಇಲ್ವಾ? ಹೋಗ್ಲಿ, ಅದ್ರ ಬಗ್ಗೆ ಮಾತ್ನಾಡಿ ಏನು ಫಲ? ನಾವಿಲ್ಲಿ ಕಾಫಿ ಕುಡಿತಾ ಅದನ್ನು ಖಂ–ಡಿ–ಸಿ–ದರೆ (ನಾಟಕೀಯವಾಗಿ, ಬಿಡಿಸಿ ಬಡಿಸಿ, ಒತ್ತಿ ಹೇಳಿ) ಇಶ್ಯೂ ಸಾಲ್ವ್ ಆಗುತ್ತಾ? ಬಿ ಪ್ರಾಕ್ಟಿಕಲ್! ದೊಡ್ಡ ದೊಡ್ಡ ಹಗರಣ ವರದಿ ಮಾಡುವ ಪತ್ರಕರ್ತರಿಗೆ, ಹೋರಾಡುವ ನೇತಾರರಿಗೆ ಸಾಧ್ಯವಾಗದ್ದು ನಮ್ಮಿಂದ ಸಾಧ್ಯವಾಗುತ್ತಾ? ಜಸ್ಟ್ ಲೀವ್ ಇಟ್!'' ಮಳೆ ನಿಂತ ಮೇಲೆ ಬಂದೆರಗಿದ ಪ್ರೇಮ್ನ ಗುಡುಗಿಗೆ ಅಕ್ಕ ಪಕ್ಕದವರು ಕೂಡಾ ಗಾಬರಿಯಾದರು.

ಪ್ರಸನ್ನ ಇನ್ನಷ್ಟು ಮಂಕಾದ. ಮಾಯಾಳ ದುರಂತ ತಾವು ದುಡಿಯುತ್ತಿರುವ ಕಂಪನಿಗೆ ಜಾಹೀರಾತು ರೂಪದಲ್ಲಿ ಹಣ ಕುದುರಿಸುತ್ತಿರುವುದರ ಕುರಿತು ತನ್ನನ್ನು ಕಾಡುತ್ತಿರುವ ಅಪರಾಧಿ ಪ್ರಜ್ಞೆಯ ವಿಷಯ ಎತ್ತಿದರೆ, ಇನ್ನೇನು ಕಾದಿದೆಯೋ? ಎಂದು ಅನಿಸಿದವನಿಂದ ಒಂದು ದೀರ್ಘ ನಿಟ್ಟುಸಿರು ಹೊರಬಂತು.

ಮಾಯಾಳ ದೇಹಕ್ಕಾಗಿ ನಡೆದ ಹುಡುಕಾಟ ಚಾನೆಲ್‌ಗಳಲ್ಲಿ ಲೈವ್ ವರದಿಯಾತ್ತಲೇ ಇತ್ತು. ನಗರನಿವಾಸಿಗಳ ಮಾತುಕತೆ ನಡುವೆ ಬಾಡಿ ಸಿಕ್ತಾ? ಅನ್ನುವ ಪ್ರಶ್ನೆ ಸುಳಿದಾಡುತ್ತಿತ್ತು. ಸೋಷಿಯಲ್ ಮೀಡಿಯಾಗಳಲ್ಲಿ ಸಿಕ್ಕ ಸಿಕ್ಕ ಫೋಟೋಗಳನ್ನು ಹಾಕಿ ಬಾಡಿ ಸಿಕ್ತು ಎಂದು ಕೆಲವರು ಸಂಭ್ರಮಿಸಿದರೆ, ಪಳೆಯುಳಿಕೆಗಳಂತಾದ ಕೆಲವು ಪ್ರಜ್ಞಾವಂತರು ಇದಕ್ಕೇನೆ, ಸೋಷಿಯಲ್ ಮೀಡಿಯಾ ಮೇಲೆ ಕಂಟ್ರೋಲ್ ಇರ್ಬೇಕು ಅನ್ನೋದು ಎಂದು ಕೆಂಡ ಕಾರಿದರು.

ಅಂತೂ 'ಕೊನೆಗೂ ಪ್ರತ್ಯಕ್ಷವಾದ ಮಾಯ , ಮಾಯವಾಗಿಲ್ಲ, ಬದುಕಿ ಉಳಿಯಲಿಲ್ಲ, ಮುದ್ದು ಬಾಲಕಿ ಮಾಯ' ಎಂಬಿತ್ಯಾದಿ ಶೀರ್ಷಿಕೆಗಳ ಮೂಲಕ ರಾರಾಜಿಸಿ ಬ್ರೇಕಿಂಗ್ ನ್ಯೂಸ್ ಭಾಗ್ಯ ಪಡೆದ ಹತಭಾಗ್ಯ ಹುಡುಗಿ ಮಗದೊಂದು ಬಾರಿ ಅವಳ ತಂದೆತಾಯಿ ಮತ್ತಿತರರ ರೋದನಕ್ಕೆ ಕಾರಣಳಾದಳು. ಅವಳ ಶವಯಾತ್ರೆಯಲ್ಲಿ ಕುಟುಂಬದವರಲ್ಲದೆ ಆ ಲೊಕಾಲಿಟಿಯ ಸಮಸ್ತರು, ಗಣ್ಯರು, ಪುಢಾರಿಗಳು, ಶಾಸಕರು, ಕೌನ್ಸಿಲರ್, ನೂರಾರು ಮಂದಿ ಭಾಗಿಯಾದರು. ಸಾಮಾಜಿಕ ಕಳಕಳಿಯಿಂದ ಬಳಲುವ ಕೆಲವರು ನಗರಸಭೆ ಪುರಭವನದೆದುರು ರಾತ್ರೆ ಗುಂಪು ಸೇರಿ ಮೋಂಬತ್ತಿ ಹಿಡಿದು ನಿಂತು ತೆಗೆದುಕೊಂಡ ಸೆಲ್ಫಿಯನ್ನು ಎಲ್ಲಡೆ ಪೋಸ್ಟ್ ಮಾಡಿ, ಶೇರ್ ಮಾಡಿದರು.

* * *

'' ಬನ್ನಿ ಬನ್ನಿ'' ಪ್ರೇಮ್ ಸ್ವಾಗತಿಸಿದ ಅಪರಿಚಿತ ದಂಪತಿಯರು ತನ್ನ ಕುರ್ಚಿಯತ್ತ ನಡೆದು ಬರುತ್ತಿರುವುದು ಕಂಡು ಪ್ರಸನ್ನ ಎದ್ದು ನಿಂತ. ''ಇವ್ರೇನೆ ಮಾಯಾಳ ತಂದೆ ತಾಯಿ'' ಪ್ರೇಮ್ ಅವರನ್ನು ಪರಿಚಯಿಸಿದ.

ಈ ತೀರಾ ಅನಿರೀಕ್ಷಿತ ಸನ್ನಿವೇಶಕ್ಕೆ ಹೇಗೆ ಪ್ರತಿಕ್ರಿಯಿಸಲಿ ಎಂದು ಚಡಪಡಿಸಿದ ಪ್ರಸನ್ನ ಅವರಿಗೆ ನಮಸ್ಕರಿಸಿ ಕುಳಿತುಕೊಳ್ಳಿ ಅಂದ. ಅಷ್ಟರಲ್ಲಿ ಅವರಿದ್ದಲ್ಲಿಗೆ ಎರಡು ಕುರ್ಚಿಗಳನ್ನು ತಳ್ಳಿಕೊಂಡು ಪ್ರೇಮ್ ಹಾಗೂ ಆಫೀಸ್ ಹುಡುಗ ಬಂದದ್ದು ಮಾತ್ರವಲ್ಲದೆ ಇಡೀ ಆಫೀಸ್ ಸಿಬ್ಬಂದಿ ಅಲ್ಲಿ ಜಮಾಯಿಸಿದರು. ಅವರೆಲ್ಲರೂ ಸಂತಾಪ ಸೂಚಿಸಿದ ಪರಿಗೆ ಅವರಿಬ್ಬರೂ ಧಾರಾಕಾರ ಕಣ್ಣೀರ ಮಳೆಗರೆದರು.

ತಾನೆಲ್ಲಿ ಭಾವದ ಭರಪೂರದಲ್ಲಿ ಕೊಚ್ಚಿ ಹೋಗುತ್ತೇನೋ ಎಂದು ಆತಂಕಗೊಂಡ ಪ್ರಸನ್ನ, ಪ್ರೇಮ್ನನ್ನು ಮೂಲೆಗೆ ರಟ್ಟೆ ಹಿಡಿದು ಎಳೆದೊಯ್ದು ಕೇಳಿದ

''ವೈ ದ ಹೆಲ್ ಆರ್ ದೆಯ್ ಹೀಯರ್?''

'' ಮತ್ತೆ. . . ನಾನು ಶ್ರದ್ಧಾಂಜಲಿ ಜಾಹಿರಾತಿಗೆ ಮಾಯಾಳ ಒಂದು ಒಳ್ಳೆ ಫೋಟೋ ಬೇಕಾಗುತ್ತೆ ಅಂದಿದ್ದೆ. ಅವ್ರು ವಾಟ್ಸಾಪ್ ಮಾಡುವುದು ಬಿಟ್ಟು ಫೋಟೋ ಹಿಡ್ಕೊಂಡು ಇಲ್ಲಿಗೇ ಬಂದ್ ಬಿಟ್ಟಿದ್ದಾರೆ. ಅದೆಲ್ಲಾ ಅವ್ರಿಗೆ ಗೊತ್ತಿಲ್ಲ ಅನ್ತಿದ್ದಾರೆ ಈಗ'' ಪ್ರೇಮ್‌ನ ಸಮಜಾಯಿಷಿ. ಹಿಂತಿರುಗಿದವರಿಗೆ ಕಂಡದ್ದು ಮಾಯಾಳ ತಂದೆ ತಾಯಿ ಕಂಪ್ಯೂಟರಿನಲ್ಲಿ ಅವಳ ಶ್ರದ್ಧಾಂಜಲಿ ಜಾಹೀರಾತನ್ನು ನೋಡುತ್ತಿರುವ ಕರುಳು ಹಿಂಡುವ ದೃಶ್ಯ.

''ನಿಮಗೆ ಏನಾದರೂ ಚೇಂಜಸ್ ಬೇಕಿದ್ರೆ ಈಗಲೇ ಮಾಡ್ಸಿಕೊಳ್ಳಿ. ಟೆಕ್ಸ್ಟ್‌ನಲ್ಲಿ ಚೇಂಜಸ್ ಇದ್ರೆ. . . ಇವ್ರು ಪ್ರಸನ್ನ ಅಂತ. . . (ಹಲೋ, ನಮಸ್ಕಾರ) ಇವ್ರ ಹತ್ರ ಹೇಳಿ'' ಪ್ರೇಮ್ ತಗ್ಗಿದ ದನಿಯಲ್ಲಿ ನುಡಿದ.

''ಇಟ್ ಇಸ್ ಓಕೆ'' ಅವರು ತಲೆ ತಗ್ಗಿಸಿ ಸಮ್ಮತಿಸಿದರು.

''ಸೋ ಯು ಆರ್ ಹ್ಯಾಪಿ''

ಹಾಗಂದ ಪ್ರೇಮನ ಕಡೆಗೆ ದುರುಗುಟ್ಟಿ ನೋಡಿದ ಪ್ರಸನ್ನ .

ತಕ್ಷಣ '' ಸಾರಿ. ನಾನು ಶ್ರದ್ಧಾಂಜಲಿ ಆಡ್ ವಿಷ್ಯದಲ್ಲಿ ನೀವು ಹ್ಯಾಪಿನಾ ಅಂದೆ'' ಎಂದ ಪ್ರೇಮ್.

''ಗೊತ್ತಾಯ್ತು ಬಿಡಿ'' ಎಂದು ಎದ್ದು ನಿಂತ ಅವರು ''ನಾವಿನ್ನು ಬರ್ತೀವಿ'' ಎಂದು ನಮಸ್ಕರಿಸಿ ಹೊರಡಲನುವಾದಾಗ ಪುನಃ ಎಲ್ಲರೂ ಜಮಾಯಿಸಿ ಅವರನ್ನು ಬೀಳ್ಕೊಟ್ಟರು.

''ಪಾಪ! ಶ್ರದ್ಧಾಂಜಲಿ ಆ್ಯಡ್ ಕೊಡೋಕೆ ಅವ್ರ ಕೈನಲ್ಲಿ ಕಾಸಿಲ್ಲ. ಇನ್ನೊಂದು ಟ್ರಾಜಿಡಿ'' ಹಾಗಂದ ಪ್ರೇಮ್ ನಾಲಿಗೆ ಕಚ್ಕೊಂಡ.

''ಎಷ್ಟಾಗುತ್ತೆ ಹೇಳೋ! ಆ ಎಮೌಂಟ್ ನಾನು ಕೊಡ್ತೀನಿ'' ಪ್ರಸನ್ನ ಆವೇಶ ಭರಿತನಾದ.

''ನನ್ಗೊತ್ತಿತ್ತು ನೀನು ಇಂಥಾ ಹುಚ್ಚಾಟ ಶುರು ಮಾಡ್ತಿ ಅಂತ. ಹೀಗಾಗಿ ನಾನು ನಿನ್ನ ಹತ್ರ ಈ ವಿಷ್ಯ ಹೇಳೋಕೆ ಹೋಗಿಲ್ಲ''

ಹಾಗೆಂದ ಪ್ರೇಮ್‌ಗೆ ಉತ್ತರಿಸುವ ಗೋಜಿಗೆ ಹೋಗದ ಪ್ರಸನ್ನ, ಶ್ರದ್ಧಾಂಜಲಿ ಆಡ್ನಲ್ಲಿ ಸಿಕ್ಕ ಅವರ ಫೋನ್ ನಂಬರನ್ನು ತನ್ನ ಮೊಬೈಲ್ನಲ್ಲಿ ಸೇವ್ ಮಾಡಿಕೊಂಡ. ಅದನ್ನು ಕಂಡ ಪ್ರೇಮ್ ಹಣೆ ಚಚ್ಚಿಕೊಳ್ಳುತ್ತಾ ''ನೀನು ಉದ್ಧಾರ ಆಗೋಲ್ಲ ಕಣೋ! ಈ ಜನ್ಮದಲ್ಲಿ ಉದ್ಧಾರ ಆಗೋಲ್ಲ'' ಅಂದ.

ದುರಂತ ನಡೆದ ಬಳಿಕ ಮೊದಲ ಬಾರಿಗೆ ಪ್ರಸನ್ನನಲ್ಲಿ ತುಸು ಲವಲವಿಕೆ ಮೂಡಿತ್ತು. ನೊಂದ ಜೀವಿಗಳಿಗೆ ಏನೋ ಒಂದು ಸಾಂತ್ವನ, ಮಾತಿನಲ್ಲಿ ಅಲ್ಲ ಕೃತಿಯಲ್ಲಿ, ನೀಡುವ ಅವಕಾಶ ಸಿಕ್ಕಿತೆಂದು ಅವನಿಗೆ ಸಮಾಧಾನವಾಯಿತು.

''ನೀನು ನಯಾ ಪೈಸೆ ಕೊಡ್ಬೇಕಾಗಿಲ್ಲ ಕಣೋ. ಉಮಾಕಾಂತ್ ಗೊತ್ತಲ್ಲ? ವೆರಿ ರಿಚ್ ಪಾರ್ಟಿ! ತುಂಬಾ ದೊಡ್ ಮನುಷ್ಯ. ಪ್ರತಿ ವರ್ಷ ಶಬರಿಮಲೆಗೆ ಹೋಗ್ತಾರೆ. ಎಷ್ಟು ಒಳ್ಳೆಯವ್ರು! ಅವ್ರದ್ದೇ ಓನ್ ಸ್ಕೂಲ್, ಕಾಲೆಜ್, ಹಾಸ್ಪಿಟಲ್, ಹಾಲ್ ಎಲ್ಲಾ ಉಂಟು ನಗರದಲ್ಲಿ. ಕೊಡುಗೈ ದಾನಿ ಕೂಡಾ. ಅವ್ರದ್ದೇ ಅನಾಥಶ್ರಮ ಬೇರೆ ಉಂಟು. ನಾವು ದಾರೀಲಿ ನಿತ್ಯ ನೋಡೊ ಬಂಗಲೆ ಉಂಟಲ್ಲಾ, ಅದು ಅವ್ರ ಮನೆ'' ಪ್ರೇಮ್ ಹೇಳುತ್ತಲೇ ಇದ್ದ.

''ಸಾಕು ಮಾಡು ಉಮಾಕಾಂತ್ ಪುರಾಣ. ವಿಷ್ಯಕ್ಕೆ ಬಾ'' ಪ್ರಸನ್ನ ಬೊಬ್ಬಿರಿದ.

'ಅದೇನೇ ಬ್ರೇಕಿಂಗ್ ನ್ಯೂಸ್. . . ನಮ್ ಪಾಲಿಗೆ ಮೋರ್ ಬಿಲ್ಲಿಂಗ್ ನ್ಯೂಸ್. ಮಾಯಾಳ ಸ್ಮಾಲ್ ಶ್ರದ್ಧಾಂಜಲಿ ಆಡ್ ಬದ್ಲಿಗೆ ಒಂದು ಫುಲ್ ಪೇಜ್ ಆಡ್ ರಿಲೀಸ್ ಮಾಡೊಕೆ ಅವ್ರು ರೆಡಿ ಇದ್ದಾರೆ. ಕೆಳ್ಗಡೆ: ಸ್ಪೇಸ್ ಡೊನೇಟೆಡ್ ಬೈ ಅಂತ ಅವ್ರ ಹೆಸರಿರುತ್ತೆ.'' ಪ್ರೇಮನ ಸಂಭ್ರಮಕ್ಕೆ ಎಣೆಯೇ ಇಲ್ಲ.

ಊಟ ಮುಗಿಸಿದ ಮೇಲೆ ಪ್ರಸನ್ನ ಮೀಡಿಯಾ ಡಿಪಾರ್ಟ್ಮೆಂಟ್ ಗೆ ಹೋಗಿ ದಿನಪತ್ರಿಕೆಯ ಸುದ್ದಿಯನ್ನು ಇನ್ನೊಮ್ಮೆ ನೋಡಿ ಖಚಿತ ಪಡಿಸಿಕೊಂಡ. ಉಮಾಕಾಂತ್ ಅವನೇನೇ. ಸಂಶಯವಿಲ್ಲ. ಈ ಹಗರಣದ ನಂತರ ಪ್ರತಿಪಕ್ಷಗಳ ಒತ್ತಾಯಕ್ಕೆ ಮಣಿದು ಅಮಾನತುಗೊಂಡ ನಗರಸಭೆ ಚೀಫ್ ಇಂಜಿನೀಯರ್. ಇದನ್ನು ಪ್ರೇಮ್‌ನ ಗಮನಕ್ಕೆ ತರಲೆ? ಬೇಡ ಅನಿಸಿತು. ಅವನ ಏನೀವಾಗ? ಅನ್ನುವ ಪ್ರತಿಕ್ರಿಯೆಯಿಂದ ತಾನು ಇನ್ನಷ್ಟು ಕುಗ್ಗಿ ಹೋಗುತ್ತೇನೆ ಅಷ್ಟೆ ಎಂದನಿಸಿದವನಿಗೆ. ಅದೃಶ್ಯ ವರ್ಷಧಾರೆಯೊಂದರ ಅಬ್ಬರಕ್ಕೆ ಮಾಯಾಳ ಜೊತೆ ತಾನೂ, ಇನ್ನೂ ಏನೇನೋ ಕೊಚ್ಚಿಕೊಂಡು ಹೋದಂತಾಗಿ ನಲುಗಿದ ಅನುಭವ.

» ಡಾ. ಕೆ.ಎಸ್.ಚೈತ್ರಾ

ತಮಿಳುನಾಡಿನ ರಾಮೇಶ್ವರಂ ನ ಸಮುದ್ರ ತೀರದಲ್ಲಿ ಹೊತ್ತಲ್ಲದ ಹೊತ್ತಿನಲ್ಲಿ ದೋಣಿಯ ಮೂಲಕ ಇಳಿದಿದ್ದು ತಂದೆ ಧರ್ಮ ದಾಸ್, ತಾಯಿ ವಾಸಂತಿ ಮತ್ತು ಮಕ್ಕಳಾದ ನಿತು ಸನ್ –ಮುಳ್ಳಿ ಯರ ಪುಟ್ಟ ಕುಟುಂಬ. ಅಲ್ಲಿದ್ದ ಪೊಲೀಸರಿಂದ ವಿಚಾರಣೆಗೆ ಒಳಗಾಗಿ, ಪೊಲೀಸ್ ವ್ಯಾನ್ ನಲ್ಲಿ ಪಯಣ. ಕಾರಣ ಟೂರಿಸ್ಟ್ ಫ್ಯಾಮಿಲಿ! ಆದರೆ ವಾಸ್ತವದಲ್ಲಿ ಇವರು ಶ್ರೀಲಂಕಾದ ತಮಿಳರು. ಕೋವಿಡ್ ನಂತರ ಅಲ್ಲಿ ಬದುಕು ನಡೆಸುವುದು ಕಷ್ಟವಾಗಿ ಉತ್ತಮ ಭವಿಷ್ಯ ಅರಸಿ ಭಾರತಕ್ಕೆ ಬಂದವರು. ಸದ್ಯಕ್ಕೆ ನಕಲಿ ದಾಖಲೆ ಹೊಂದಿದ್ದರೂ ಇಲ್ಲಿಯ ನಾಗರಿಕರಾಗುವ ಯೋಜನೆ ; ಚೆಂದದ ಬದುಕು ಕಟ್ಟಿಕೊಳ್ಳುವ ಭರವಸೆ !ಇದಕ್ಕೆಲ್ಲಾ ಸಹಕಾರ ವಾಸಂತಿಯ ಅಣ್ಣ ಪ್ರಕಾಶ್‌ರದ್ದು.

ಪೊಲೀಸರಿಂದ ಹೇಗೋ ಬಿಡಿಸಿಕೊಂಡು ಚೆನ್ನೈನ ಕೇಶವ ನಗರ ಕಾಲನಿಯಲ್ಲಿ ಇವರ ವಾಸ. ತಾವು ಶ್ರೀಲಂಕನ್ನರು ಎನ್ನುವ ಸತ್ಯವನ್ನು ಮರೆಮಾಚಿ ಮಲೆಯಾಳಿಗಳು ಎಂದು ಹೇಳಿ ಇನ್ಸ್ಪೆಕ್ಟರ್ ರಾಘವನ್ ಮನೆಯಲ್ಲಿ ಬಾಡಿಗೆದಾರರಾಗಿ ಹೊಸ ಜೀವನ ಆರಂಭ. ಪಕ್ಕದಲ್ಲಿದ್ದ ಅಕ್ಕಪಕ್ಕದರೊಡನೆ ಹೆಚ್ಚಿನ ಮಾತುಕತೆ ಒಡನಾಟ ಬೇಡವೇ ಬೇಡ ಎನ್ನುವ ಪ್ರಕಾಶ್‌ರ ಎಚ್ಚರಿಕೆಯನ್ನು ದೂರವಿಟ್ಟು ನಿಧಾನವಾಗಿ ನೆರಹೊರೆಯವ ರೊಡನೆ ಸಂಪರ್ಕ. ಹಾಗೆಂದು ಕಾಲನಿಯಲ್ಲಿ ಎಲ್ಲವೂ ಸರಿ ಇದೆ ಎಂದಲ್ಲ. ಸದಾ ಸಿಡುಕುವ ಮಧ್ಯ ವಯಸ್ಕ, ಎಲ್ಲೆಂದರಲ್ಲಿ ಮಿತಿಮೀರಿ ಕುಡಿದು ಎಲ್ಲೆಂದರಲ್ಲಿ ಬಿದ್ದು ಯುವಕ ಎಲ್ಲರಿಂದ ಬೈಸಿಕೊಳ್ಳುವ ಯುವಕ, ವಿದೇಶಕ್ಕೆ ಹೋಗಲು ಬಯಸುವ ಆದರೆ ಆಗಾಗ್ಗೆ ಮನಸ್ಸು ಬದಲಿಸುವ ಹುಡುಗಿ, ಯೌವನದಲ್ಲಿ ಒಬ್ಬರಲ್ಲೊಬ್ಬರು ಪ್ರೀತಿಸಿ ತಮ್ಮವರಿಂದ ದೂರಾಗಿ ಇಲ್ಲಿ ನೆಲೆಸಿರುವ ವೃದ್ಧ ದಂಪತಿ, ಹೀಗೆ ಒಬ್ಬೊಬ್ಬರದು ಒಂದೊಂದು ವ್ಯಕ್ತಿತ್ವ ಒಂದೊಂದು ಕಥೆ. ಬರಿ ಕಾಲನಿಯಲ್ಲಿ ಮಾತ್ರವಲ್ಲ. ಮನೆ ಯಲ್ಲೂ ಆರ್ಥಿಕ ಮುಗ್ಗಟ್ಟಿನ ಜತೆ ಒಳಗೊಳಗೇ ಹೊಗೆಯಾಡುವ ಅಸಮಾಧಾನ.

ಇದೆಲ್ಲದರ ನಡುವೆಯೇ ತನ್ನ ಸೌಜನ್ಯ –ಪ್ರಾಮಾಣಿಕತೆಯಿಂದ ಜನರ ಮನಸ್ಸನ್ನು ಗೆಲ್ಲುವ ಧರ್ಮದಾಸ್‌ಗೆ ಡ್ರೈವರ್ ಕೆಲಸ ಸಿಗುತ್ತದೆ. ಹೇಗೋ ಬದುಕು ನೆಲೆ ಕಂಡು ಕೊಳ್ಳುತ್ತಿದೆ ಎಂದು ಉಸಿರು ಬಿಡುವಾಗಲೇ ಅನಿರೀಕ್ಷಿತ ತಿರುವು. ರಾಮೇಶ್ವರಂನಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ಸಮುದ್ರ ತೀರದಲ್ಲಿ ಬಂದಿಳಿದ ಇವರ ಮೇಲೆ ತೀವ್ರ ಗುಮಾನಿ. ಪರಿಶೀಲನೆ ನಡೆದು ಟೂರಿಸ್ಟ್ ಎಂದು ಸುಳ್ಳು ಹೇಳಿ ಬಂದವರ ಕಥೆ ಏನಾ ಯಿತು? ಸ್ವಾರಸ್ಯಕರವಾಗಿ ಕೊನೆಯವರೆಗೂ ನೋಡುವಂತೆ ಮಾಡುವ ಸಿನಿಮಾವಿದು.

ಚೆನ್ನೈನಲ್ಲಿ ಸೆಟ್ ಹಾಕಿ ಸಿಂಗಲ್ ಶೆಡ್ಯೂಲ್‌ನಲ್ಲಿ 35 ದಿನಗಳಲ್ಲಿ ಸಿನಿಮಾವನ್ನು 7 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿತ್ತು. ಹೆಚ್ಚಿನ ಪ್ರಚಾರವನ್ನೂ ನೀಡಿರಲಿಲ್ಲ. ಬಿಡುಗಡೆಯಾಗಿ ಮೊದಲ ವಾರದಲ್ಲಿ ಪರವಾಗಿಲ್ಲ ಎನ್ನುವ ಪ್ರತಿಕ್ರಿಯೆ ಸಿಕ್ಕಿತ್ತು.



ದೇಶಗಳಿಗೆ ಗಡಿಯಿದೆ ಮನಸ್ಸುಗಳಿಗಿಲ್ಲ!

ಎರಡನೇ ವಾರದಿಂದ ತೊಂಬತ್ತು ಕೋಟಿ ಲಾಭ ಗಳಿಸಿ ಯಶಸ್ಸು ಕಾಣಲು ಮೂರು ಮುಖ್ಯ ಕಾರಣಗಳು. ಮೊದಲನೆಯದ್ದು ವಿಭಿನ್ನ ಕಥೆ. ತಮಿಳು ಸಿನಿಮಾಗಳಲ್ಲಿ ಶ್ರೀಲಂಕನ್ ತಮಿಳರ ಪ್ರಸ್ತಾಪ ತೀರಾ ಕಡಿಮೆ. ಕೋವಿಡ್ ನಂತರ ಉಂಟಾದಂತಹ ಆರ್ಥಿಕ ಸಂಕಷ್ಟದ ಸಮಯದಲ್ಲಿ ಅನೇಕ ತಮಿಳು ಕುಟುಂಬಗಳು ಅಲ್ಲಿಂದ ಭಾರತಕ್ಕೆ ಬಂದಿದ್ದರು. ಅಂತಹ ಒಂದು ಕುಟುಂಬದ ಕಥೆ ಇದಾದರೂ ಕೇವಲ ಒಂದು ದೇಶ, ಭಾಷೆಗೆ ಸಂಬಂಧಿಸಿದ ವಿಷಯವಲ್ಲ. ಕಷ್ಟದ ಪರಿಸ್ಥಿತಿಯಲ್ಲಿ ಸ್ವದೇಶ ಬಿಟ್ಟು ಬಂದು ಮತ್ತೊಂದೆಡೆ ಹೊಂದಿಕೊಳ್ಳಲು ಪ್ರಯತ್ನಿಸುವ ಎಲ್ಲ ಕುಟುಂಬಗಳ ಭಾವನಾತ್ಮಕ ತುಮುಲ ಮತ್ತು ಕಷ್ಟಗಳ ಕಥೆ. ಎರಡನೆಯದ್ದು ವಿಷಯ ಗಂಭೀರವಾಗಿದ್ದರೂ ಕಥೆಯುದ್ದಕ್ಕೂ ಇರುವ ತಿಳಿ ಹಾಸ್ಯ ಮತ್ತು ಹಿತವಾದ ಸಂಗೀತ. ಕಿರಿಯ ಮಗನ ಮುಗ್ಧತೆ, ತರಲೆ ಮನಸ್ಸಿಗೆ ಖುಷಿ ನೀಡುತ್ತದೆ. ಮೂರನೆಯದ್ದು ಹಿಂಸೆ, ಕ್ರೌರ್ಯ, ದ್ವೇಷವೇ ಮುಖ್ಯವಾಗಿರುವ ಇಂದಿನ ಸಿನಿಮಾಗಳ ನಡುವೆ ಕೌಟುಂಬಿಕ ಮೌಲ್ಯಗಳು ಪ್ರಧಾನವಾಗಿರುವ ಚಿತ್ರವಿದು. ಶಶಿಕುಮಾರ್, ಸಿಮ್ರಾನ್, ಯೋಗಿ ಬಾಬು ಮುಖ್ಯ ಪಾತ್ರದಲ್ಲಿರುವ ಈ ಸಿನಿಮಾವನ್ನು ನಿರ್ದೇಶಿಸಿದವರು ಅಭಿಶನ್ ಜೀವಿಂತ್.

ದೇಶಗಳಿಗೆ ಗಡಿಯಿದೆ, ಮನಸ್ಸುಗಳಿಗೆ ಇಲ್ಲ ಎನ್ನುವ ಸಂದೇಶವನ್ನು 'ಟೂರಿಸ್ಟ್ ಫ್ಯಾಮಿ' ನೀಡುತ್ತದೆ.

» ಕೆ. ಶ್ರೀನಿವಾಸರಾವ್, ಹರಪನಹಳ್ಳಿ

ರೆಡಿಮೇಡ್ ಬೋರ್ಡ್ ಬೇಕೇನ್ರೀ!

ಹಹ್ಹಾಸ್ಯ!

ಅದೇ ತಾನೇ ಕಾಫಿ ಕುಡಿದು ಅಂದಿನ ದಿನಪತ್ರಿಕೆ ಹಿಡಿದು ಇಂದು ಯಾರು ಯಾರಿಗೆ ಏಟು– ಎದುರೇಟು ಕೊಟ್ಟರು ಎಂದು ಅಪಾರ ಆಸಕ್ತಿಯಿಂದ ಓದುತ್ತ ವರಾಂಡದಲ್ಲಿ ಕುಳಿತಿದ್ದೆ. ಮುಂದಿನ ಗೇಟು ತೆರೆದು ಯಾರೋ ಬಂದಂತಾಯಿತು. ಒಬ್ಬ ಸುಮಾರು35 ವರ್ಷದ ಕೃಶಕಾಯದವ 'ರೆಡಿಮೇಡ್ ಬೋರ್ಡುಗಳು ಬೇಕಾ ಸಾರ್?' ಎನ್ನುತ್ತಾ ಒಳಬಂದ. ಗೇಟಿನಿಂದ ಹೊರಗೆ ಸಣ್ಣದೊಂದು ಟಾಟಾ ಸುಮೋ. ಅದರ ತುಂಬಾ ನಾನಾ ತರಹದ ಬೋರ್ಡುಗಳು.

'ಸಾರ್, ಈ ಬೋರ್ಡ್ ನೋಡಿ. ಪ್ಲಾಸ್ಟಿಕ್ ಶೀಟ್ ಮೇಲೆ ಪ್ರಿಂಟ್ ಮಾಡಿದ್ದು. ಮಳೆಗೆ ನೆನೆದರೂ ಹಾಳಾಗೋಲ್ಲ. ಈ ಬೋರ್ಡ್ ತಗೊಳ್ಳಿ ಸಾರ್. 'ನಾಯಿ ಇದೆ ಎಚ್ಚರಿಕೆ.' ಅಪರಿಚಿತರು ಒಳಗೆ ಬರೋಕೆ ಹೆದರುತ್ತಾರೆ.' ಎಂದು ಒಂದು ಬೋರ್ಡನ್ನು ಮುಂದೆ ಹಿಡಿದ. ಚೆನ್ನಾಗಿಯೇ ಇತ್ತು.

'ನಮ್ಮ ಮನೆಯಲ್ಲಿ ನಾಯಿಯೇ ಇಲ್ಲ ಕಣಯ್ಯ! ನಿನ್ನ ಬೋರ್ಡ್ ಬೇಕಿಲ್ಲ.'

'ಹೌದಾ ಸಾರ್, ಅಗೋ ನೋಡಿ. ಆ ಹುಡುಗಿ ನಿಮ್ಮ ಗಿಡದ ಗುಲಾಬಿ ಕಿತ್ತುಕೊಂಡು ಹೋದಳು. ಈ ಬೋರ್ಡ್ ಹಾಕಿ ಸಾರ್ .'ಎಂದು ಹೂ ಕೀಳಬಾರದು ಎಂಬ ಬೋರ್ಡ್ ಎದುರಿಗೆ ಹಿಡಿದ. ಬೇಡ ಎಂಬಂತೆ ತಲೆಯಾಡಿಸಿದೆ.

'ಸಾರ್, ನಿಮ್ಮ ಮನೆ ರಸ್ತೆಗೆ ಹೊಂದಿಕೊಂಡಿದೆ. ಪಕ್ಕದಲ್ಲಿ ಲೇಡೀಸ್ ಹಾಸ್ಟಲ್ ಬೇರೆ. ಇಗೋ ಶ್! ಸದ್ದು ಮಾಡಬೇಡಿ' ಎಂಬ ಈ ಬೋರ್ಡ್ ಗೇಟಿಗೆ ತಗಲು ಹಾಕಿಬಿಡಿ. ಮನೆಯಲ್ಲಿ ಚಿರಶಾಂತಿ'

ಇವನೇಕೋ ನನ್ನನ್ನು ಬಿಡುವಂತೆ ಕಾಣುತ್ತಿಲ್ಲ.

'ಧಣಿ, ಮನೆ ಬಾಡಿಗೆಗೆ ಕೊಡುವ ಪ್ರಸಂಗ ಬಂದರೆ ನೋಡಿ, 'ಮನೆ ಬಾಡಿಗೆಗೆ ದೊರೆಯುತ್ತದೆ 'ಎಂಬ ಈ ಬೋರ್ಡ್, ಒಂದುವೇಳೆ ಮನೆ ಮಾರುವ ಬಯಕೆಯಾದರೆ 'ಮನೆ ಮಾರಾಟಕ್ಕಿದೆ 'ಎಂಬ ಈ ಬೋರ್ಡ್. ಯಾವುದಕ್ಕೂ ಇರಲಿ, ಇಟ್ಟುಕೊಳ್ಳಿ. ಸಸ್ತಾ ರೇಟು ಸ್ವಾಮಿ.'

ನನಗೆ ಕೊಂಚ ಕೊಂಚವೇ ಬಿಪಿ ಏರತೊಡಗಿತ್ತು. 'ನನಗೆ ಯಾವುದೂ ಬೇಡ ಹೋಗಯ್ಯ. ಮನೆಯೊಳಗೆ ತುಂಬಾ ಕೆಲಸ ಬಾಕಿ ಇದೆ' ಎಂದು ಮೇಲೇಳಲು ಉದ್ಯುಕ್ತನಾದೆ. 'ನಿಲ್ಲಿ ಸಾರ್, ನೀವೇ ಹೇಳಿದಿರಿ ಕೆಲಸ ಬಹಳ ಇದೆ ಅಂತ. ಅಂದರೆ ನಿಮ್ಮಿಂದ ಕೆಲಸ ನಿಭಾಯಿಸಲಿಕ್ಕೆ ಆಗ್ತಾ ಇಲ್ಲ. ಈ ಬೋರ್ಡ್ ನಿಮಗೆ ಬೇಕೇಬೇಕಾಗುತ್ತೆ : 'ಮನೆಕೆಲಸಕ್ಕೆ ಹೆಂಗಸರು ಬೇಕಾಗಿದ್ದಾರೆ 'ತಗೊಳ್ಳಿ. ಬೋರ್ಡ್ ಹಾಕಿದ ಕೂಡಲೇ ಯಾರಾದರೂ ಹೆಂಗಸರು ನಿಮ್ಮನ್ನು ಹುಡುಕಿಕೊಂಡು ಬರುತ್ತಾರೆ ಸಾರ್'.

ನನ್ನ ಸಹನೆಯ ಕಟ್ಟೆಯ ಕೆಳಗಿನ ಎರಡು ಸಾಲು ಮಾತ್ರ ಉಳಿದಿತ್ತು. ವಿಶ್ವಾಮಿತ್ರನಂತೆ ಅವನನ್ನು ಕಣ್ಣಲ್ಲೇ ಸುಡುವವನಂತೆ ದುರುದುರು ದಿಟ್ಟಿಸಿದೆ. ಉಹುಂ! ಅವನು ಶಾಂತಚಿತ್ತನಾಗಿಯೇ ಪ್ರವರ ಮುಂದುವರೆಸಿದ. 'ಗುರುಗಳೇ, ಹೊರಗೆ ನಿಮ್ಮ ಗೋಡೆಯ ಮೇಲೆ ಊರಿನ ಎಲ್ಲಾ ಗೋಟಾಳದ ಪೋಸ್ಟರ್ ಹಚ್ಚಿದ್ದಾರೆ 'ಇಲ್ಲಿ ಪೋಸ್ಟರ್ ಹಚ್ಚಕೂಡದು' ಈ ಬೋರ್ಡ್ ಕಟ್ಟಿ.ಆಮೇಲೆ ನೋಡಿ. ನಿಮ್ಮ ಗೇಟ್ ಬಿಟ್ಟು ಉಳಿದ ಎಲ್ಲಾ ಕಡೆ ಸಿಕ್ಕಸಿಕ್ಕಲ್ಲಿ ಮೂತ್ರ ಹೊಯ್ದಿದ್ದಾರೆ. ಗಬ್ಬು ವಾಸನೆ ನಾನು ಬರುವಾಗ ಮೂಗಿಗೆ ಕರ್ಚೀಫ್ ಅಡ್ಡ ಹಿಡಿದು ಒಳಬಂದೆ. ಅಲ್ಲಿಯೇ ಪಕ್ಕದಲ್ಲಿ'ಇಲ್ಲಿ ಮೂತ್ರ ವಿಸರ್ಜನೆ ಮಾಡಬಾರದು' ಬೋರ್ಡ್ ಹಾಕಿ. ಇಲ್ಲ ಅಂದ್ರೆ ಮನೆಯವರೆಲ್ಲರಿಗೂ ಕಾಯಿಲೆ ಗ್ಯಾರಂಟಿ.'

ನನಗೂ ಒಂದು ಸಲ ಹೌದಲ್ಲ ಎನಿಸಿತ್ತು! ಇನ್ನು ಇಲ್ಲಿಯೇ ಕುಳಿತರೆ ಇವನು ನನ್ನನ್ನು ನಿಮ್ಹಾನ್ಸಿಗೆ ಸೇರಿಸುವುದು ನಿಸ್ಸಂಶಯ.ಉಪಾಯದಿಂದ ಪಾರಾಗುವುದೊಳಿತು. ಎದ್ದು ನಿಂತು 'ಅಪ್ಪಾ, ಗೇಟಿಗೆ ಅಡ್ಡವಾಗಿ ಗಾಡಿ ನಿಲ್ಲಿಸಿದ್ದೀಯಲ್ಲ.ನಾನು ಆಫೀಸಿಗೆ ಹೋಗುವುದು ಹೇಗೆ?' ಎಂದು ರೇಗಿದೆ. ಅವನಲ್ಲಿ ಒಮ್ಮೆಲೇ ಸಾವಿರ ವೋಲ್ಟ್ ಕರೆಂಟ್ ಹರಿದಂತಾಯಿತು. ಗಬಕ್ಕನೆ ಎದ್ದವನೇ ಗಾಡಿಯಲ್ಲಿ ಹುಡುಕಿ ಕೈಯಲ್ಲಿ ಒಂದು ಬೋರ್ಡ್ ಹಿಡಿದು ತಂದ.

'ಸಾರ್, ನೋಡಿ,ಈ ಬೋರ್ಡ್ ನಿಮಗೆ ಅತ್ಯವಶ್ಯ. ಇಲ್ಲ ಅನ್ನಬೇಡಿ. ಸಸ್ತಾರೇಟು!' ಎಂದು ಬೋರ್ಡ್ ಗೇಟಿಗೆ ಕಟ್ಟಿದ.ನೋಡಿದೆ.

'ಗೇಟಿನ ಮುಂಭಾಗದಲ್ಲಿ ಯಾವುದೇ ವಾಹನ ನಿಲ್ಲಿಸಬೇಡಿ. ಸೀಜ್ ಮಾಡಲಾಗುವುದು'. ಗತ್ಯಂತರವಿಲ್ಲದೇ ಅದರ ಹಣ ಕೊಟ್ಟು ಒಳಬಂದೆ. ಅಂತಹ ಡಿಸೆಂಬರ್ ಚಳಿಯಲ್ಲೂ ಬೆವರಿಗೆ ಒದ್ದೆಯಾಗಿದ್ದ ಬನಿಯನ್ ಕಿತ್ತೆಸೆದು ಫ್ಯಾನ್ ಗಾಳಿಗೆ ಮೈಯೊಡ್ಡಿದೆ.



ಕ್ವಾಂಟಂ ವಿಜ್ಞಾನ ಹಾಗೂ ಅದ್ವೈತ

» ಬಿ.ಎಸ್ ಚಂದ್ರಶೇಖರ್

ಆಧುನಿಕ ವಿಜ್ಞಾನವು ವಿಸ್ಮಯಗಳ ಆಗರ. ಕ್ವಾಂಟಂ ಎಂಟಾಂಗಲ್ಮೆಂಟ್ ಅಥವಾ ಕ್ವಾಂಟಂ ತಳುಕು ಎಂಬ ಪರಿಕಲ್ಪನೆಯು, ಅದ್ವೈತ ಸಿದ್ಧಾಂತಕ್ಕರ ಪುಷ್ಟಿ ನೀಡಬಲ್ಲು ಎಂಬುದನ್ನು ಈ ಬರಹದಲ್ಲಿ ನಿವೇದಿಸಲಾಗಿದೆ.

ಒಂದು ಕಣದ ಎರಡು ಉಪಕಣಗಳನ್ನು ಬೇರ್ಪಡಿಸಿ ಅವುಗಳನ್ನು ಪರಸ್ಪರ ಎಷ್ಟೇ ದೂರದಲ್ಲಿ ಇರಿಸಿದರೂ ಅವು ಒಂದನ್ನೊಂದು ಪ್ರಭಾವಿಸುತ್ತವೆ. ಎಷ್ಟೇ ದೂರದಲ್ಲಿ ಎಂದರೆ ಭೂಮಿಯ / ಬ್ರಹ್ಮಾಂಡದ ಎರಡು ವಿರುದ್ಧ 'ತುದಿ'ಗಳ ನಡುವಿರುವಷ್ಟು ದೂರವೂ ಆಗಬಹುದು. ಒಂದು ಉಪಕಣದ ಸ್ಥಿತಿ ಎಲ್ಲೋ ದೂರದಲ್ಲಿರುವ ಇನ್ನೊಂದು ಕಣಕ್ಕೆ ಹೇಗೆ ತಿಳಿದೀತು ಎಂಬುದೇ ನಂಬಲಸಾಧ್ಯವೆನಿಸುವ ಪರಮಾಶ್ಚರ್ಯ! ಈ ಪ್ರಭಾವವು ಅವುಗಳ ನಡುವಿನ ಯಾವುದೇ ರೀತಿಯ 'ಸಂವಹನ'ವಲ್ಲ (ಉದಾ: ಅವುಗಳ ನಡುವೆ ಸಂದೇಶ ಹೋಗುವುದಿಲ್ಲ).

ಕ್ವಾಂಟಂ ತಳುಕಿನ ಅನ್ವೇಷಕರಾದ ಅಲೈನ್ ಆಸ್ಪೆಕ್ಟ್, ಜಾನ್ ಕ್ಲಾಸರ್ ಮತ್ತು ಆಂಟನ್ ಜೀಲಿಂಗರ್ ಅವರ ವಿಚಾರಕ್ಕೆ 2022 ರಲ್ಲಿ ಭೌತಶಾಸ್ತ್ರದ ನೊಬೆಲ್ ಪಾರಿತೋಷಕ ದೊರೆತಿದೆ. ಪರಸ್ಪರ ತಳುಕು ಹಾಕಿಕೊಂಡ ಫೋಟಾನ್ ಕಣಗಳನ್ನು ಬಳಸಿ ವಾಸ್ತವತೆಯ ಕ್ವಾಂಟಂ ಅಡಿಪಾಯವನ್ನು ಪರೀಕ್ಷಿಸಲು ಈ ಭೌತವಿಜ್ಞಾನಿಗಳು ಪ್ರಯೋಗ ನಡೆಸಿದ್ದರು. ಈ ಸಂಶೋಧನೆ ದಿಕ್ಸೂಚಿಯೆನಿಸಿದೆ.

ತಳುಕು ಹಾಕಿಕೊಂಡ ಕಣಗಳು ಎಷ್ಟೇ ದೂರದಲ್ಲಿರಲಿ, ಅವುಗಳ ನಡುವೆ ಏನೇ ಇರಲಿ, ಅವುಗಳಲ್ಲಿ ಒಂದರ ಮೇಲಾಗುವ ಪರಿಣಾಮವು ಇನ್ನೊಂದನ್ನು ತತ್ ಕ್ಷಣದಲ್ಲೇ ಪ್ರಭಾವಿಸುತ್ತದೆ. ಕಣದ ಸ್ಥಾನ (ಪೊಸಿಷನ್) ಒಂದರ ವರ್ತನೆ ಯಿಂದ ಇನ್ನೊಂದರ ವರ್ತನೆಯನ್ನು ಮುನ್ಸೂಚಿಸಬಹುದು. ನೋಟಕನೊಬ್ಬ ಒಂದು ಕಣದ ವರ್ತನೆಯನ್ನು ನಿರ್ಧರಿಸಿದರೆ ಆ ಕಣಕ್ಕೆ ತಳುಕಾದ ಇತರ ಕಣಗಳೂ ಅದೇ ಕ್ಷಣದಲ್ಲಿ ಆ ವರ್ತನೆಯನ್ನೇ ಪ್ರತಿಫಲಿಸುತ್ತವೆ! ಈ ಪ್ರತಿಫಲನವು ಕಣದ ಸ್ಥಾನ (ಪೊಸಿಷನ್), ಭ್ರಮಣ (ಸ್ಪಿನ್), ಆವೇಗ (ಮೊಮೆಂಟಮ್) ಅಥವಾ ಧ್ರುವತೆ(ಪೋಲಾರಿಟಿ) ಇಂಥ ಗುಣಗಳಿಗೆ ಸಂಬಂಧಿಸಿರಬಹುದು. ಉದಾ: ಒಂದು ಕಣದ್ದು ಎಡ ಭ್ರಮಣ (ಲೆಫ್ಟ್ ಸ್ಪಿನ್) ಆಗಿದ್ದರೆ ಇನ್ನೊಂದರದು ಬಲಭ್ರಮಣ (ರೈಟ್ ಸ್ಪಿನ್) ಆಗಿರಬಹುದು. ಸಂಬಂಧಿತವಾದ ಕಣಗಳು ಅನೇಕವೂ ಆಗಿರಬಹುದು.



ಕ್ವಾಂಟಂ ವಿಜ್ಞಾನದಲ್ಲಿನ ನವಸಂಶೋಧನೆಗಾಗಿ 2022 ರ ಭೌತಶಾಸ್ತ್ರ ನೊಬೆಲ್ ಪ್ರಶಸ್ತಿ ಗಳಿಸಿದ ಅಲೈನ್ ಆಸ್ಪೆಕ್ಟ್, ಜಾನ್ ಕ್ಲಾಸರ್ ಮತ್ತು ಆಂಟನ್ ಜೀಲಿಂಗರ್ .

ಈ ಎಲ್ಲ ಕಣಗಳೂ ಒಂದೇ ಆಗಿರುವಂತೆ ವರ್ತಿಸುವುದೇ ಕ್ವಾಂಟಂ ಎಂಟಾಗಲ್ಮೆಂಟ್ ಸಿದ್ಧಾಂತದ ಸೋಜಿಗ.

ಹೀಗೊಂದು ವಿವರಣೆ

ಅಣು ಮತ್ತು ಪರಮಾಣು ಮಟ್ಟದಲ್ಲಿ ದ್ರವ್ಯದ ಮತ್ತು ಶಕ್ತಿಯ ವರ್ತನೆಗಳನ್ನು ವಿವರಿಸುವ ಈ ಸಿದ್ಧಾಂತವು ಸಂಕೀರ್ಣವಾದ ಗಣಿತೀಯ ಸೂತ್ರಗಳನ್ನು ಬಳಸಿಯೇ ತನ್ನ ವಿಚಾರಗಳನ್ನು ಮುಂದಿಡುತ್ತದೆ. ಸಾಮಾನ್ಯ ಭಾಷೆಯಲ್ಲಿ ಇದನ್ನು ಗ್ರಹಿಸುವುದೂ, ವಿವರಿಸುವುದೂ ಕಷ್ಟ. ಒಂದು ಸರಳೀಕೃತ ಉದಾಹರಣೆಯಿಂದ ಇದನ್ನು ಹೀಗೆ ವಿವರಿಸಬಹುದು. ಕ್ವಾಂಟಂ ತಳುಕಾದ ಒಂದೇ ಬಗೆಯ ಎರಡು ಚೆಂಡುಗಳನ್ನು ಬೇರ್ಪಡಿಸಿ ಅವನ್ನು ಮಿಲಿಯಗಟ್ಟಲೆ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿರಿಸಲಾಗಿದೆ ಎಂದುಕೊಳ್ಳಿ. ಅವುಗಳಲ್ಲಿ ಒಂದು ಚೆಂಡು ಏಕಕಾಲದಲ್ಲಿ ಹಳದಿ ಮತ್ತು ಕೆಂಪು ಎರಡೂ ಬಣ್ಣವುಳ್ಳವಾಗಿರಬಹುದು. (ನಂಬಲಾಗದಿದ್ದರೂ ಕ್ವಾಂಟಂ ಲೋಕದಲ್ಲಿ ಇದು ವಾಸ್ತವ!). ಚಿಮ್ಮಿದ ನಾಣ್ಯವೊಂದಕ್ಕೆ (ರಾಜ-ರಾಣಿ ಎಂಬ) ಏಕಕಾಲದಲ್ಲಿ ಎರಡು ಮುಖಗಳಿದ್ದರೂ ಅದು ಬಿದ್ದಮೇಲೆ ನೋಡಿದಾಗ ಒಂದೇ ಮುಖ (ರಾಜ ಅಥವಾ ರಾಣಿ) ಕಾಣುವಂತೆ ಎಂದು ಅರ್ಥಮಾಡಿಕೊಳ್ಳಬಹುದು. ಎಂದರೆ ವಾಸ್ತವವು ವಿವಿಧ ಮುಖಗಳುಳ್ಳವಾದರೂ ನೋಡುಗನ ದೃಷ್ಟಿಯಿಂದ ಅದು ಒಂದು ನಿರ್ದಿಷ್ಟ ಸ್ಥಿತಿಯನ್ನು ತಳೆಯುತ್ತದೆ. ಒಂದು ಚೆಂಡು ವೀಕ್ಷಕನಿಗೆ ಹಳದಿಯಾಗಿ ಕಂಡಿತೆನ್ನಿ. ಅದೇ ಕ್ಷಣದಲ್ಲಿ ಎಲ್ಲೋ ದೂರದಲ್ಲಿರುವ ಇನ್ನೊಂದು ಚೆಂಡು ಕೂಡ ತತ್ ಕ್ಷಣವೇ ಹಳದಿಯಾ ಗುವುದೇ ಇಲ್ಲಿ ಪರಮ ವಿಸ್ಮಯ. ಐನ್‌ಸ್ಟೀನ್ ಮಹಾಶಯ spooky action at a distance (ದೂರದಲ್ಲಿ ಗಾಬರಿಗೊಳಿಸುವ ಕ್ರಿಯೆ) ಎಂದು ಲೇವಡಿ ಮಾಡಿದ್ದು ಇದನ್ನೇ.

ಅದ್ವೈತಕ್ಕೆ ತಳುಕು

ಕ್ವಾಂಟಂ ತಳುಕು ಹೊಂದಿದ ಎರಡು ಕಣಗಳು ಬೇರೆಯಾಗಿ ಎಷ್ಟೇ ದೂರದಲ್ಲಿದ್ದರೂ ಅವು ಒಂದಕ್ಕೊಂದು ಸಂಬಂಧಿಸಿಯೇ ಇದ್ದು ಅವೆರಡೂ ಒಂದೇ ಎಂಬಂತೆ ವರ್ತಿಸುತ್ತವೆ. ಎರಡು ಕಣಗಳು ಮಾತ್ರವಲ್ಲ, ಹೀಗೆ ಸಂಬಂಧಿತವಾದ ಕಣಗಳೂ ಹೆಚ್ಚಾಗಿಯೂ ಇರಬಹುದು. ಅವೆಲ್ಲ ಒಂದೇ ಎಂಬಂತೆ ವರ್ತಿಸುತ್ತವೆ. ಇದು ಕ್ವಾಂಟಂ ಎಂಟ್ಯಾಂಗಲ್ಮೆಂಟ್ ಥಿಯರಿಯ (ಕ್ವಾಂಟಂ ತಳಕು ಸಿದ್ಧಾಂತದ) ಗ್ರಹಿಕೆ.

ಇಡೀ ಬ್ರಹ್ಮಾಂಡದಲ್ಲಿರುವ ಎಲ್ಲ ವಸ್ತುಗಳೂ ಸೃಷ್ಟಿಯ ಆದಿಯಲ್ಲಿ ಒಂದು ಬಿಂದುವಿನಲ್ಲಿ ಐಕ್ಯವಾಗಿತ್ತೆಂದು ವಿಜ್ಞಾನವು 'ಮಹಾಸ್ಫೋಟ' ಸಿದ್ಧಾಂತದ (ಬಿಗ್ ಬ್ಯಾಂಗ್ ಥಿಯರಿಯ) ಮೂಲಕ ನಿವೇದಿಸಿದೆ. ಆದ್ದರಿಂದ ಯಾವುದೇ ಕ್ಷಣದಲ್ಲಿ ಬ್ರಹ್ಮಾಂಡದಲ್ಲಿ ಅಸ್ತಿತ್ವದಲ್ಲಿರುವ ಎಲ್ಲ ವಸ್ತುಗಳಿಗೂ ಕ್ವಾಂಟಂ ಎಂಟಾಗಲ್ಮೆಂಟ್ ಇರುತ್ತದೆ. ಸೃಷ್ಟಿಯಲ್ಲಿರುವ ಯಾವ ವಸ್ತುವೂ ಬೇರೆಯಲ್ಲ, ಎಲ್ಲವೂ ಒಂದೇ ಎನ್ನುವ ಅದ್ವೈತ ಸಿದ್ಧಾಂತಕ್ಕೆ ಇದು ಸಾಕಷ್ಟು ಪುಷ್ಟಿ ನೀಡುತ್ತದೆ.

ಜಗತ್ತು ಮಿಥ್ಯೆ

ಸ್ಥಳೀಯ ವಾಸ್ತವ ಎನ್ನುವುದು ಇಲ್ಲ (There is no Local reality) ಎನ್ನುವುದು ಕ್ವಾಂಟಂ ತಳುಕು ಸಿದ್ಧಾಂತದಿಂದ ಮೂಡಿರುವ ತರ್ಕಸಮ್ಮತವಾದ ಇನ್ನೊಂದು ಚಿಂತನೆ. ಸೃಷ್ಟಿಯಲ್ಲಿರುವ ಎಲ್ಲವೂ ಸೇರಿದಂತೆ ಇರುವುದು ಒಂದೇ ವಾಸ್ತವ. ಸ್ಥಳೀಯ ಅಥವಾ ಸೀಮಿತ ವಾಸ್ತವ ಎನ್ನುವುದು ಒಂದು ಭ್ರಮೆ ಅಷ್ಟೆ. ಹೀಗಾಗಿ ನಾವು ಕಾಣುತ್ತಿರುವ ಈ ಜಗತ್ತು ಒಂದು ಕನಸು, ಮಿಥ್ಯೆ. ಎಲ್ಲವೂ ಏಕವೂ, ಅಖಂಡವೂ ಆದ ವಿರಾಟ್ ಸೃಷ್ಟಿಯೊಂದೇ ಸತ್ಯ. ಹೀಗೆ 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎಂಬ ಅದ್ವೈತದ ಮೂಲಸಿದ್ಧಾಂತವೂ ಕ್ವಾಂಟಂ ಎಂಟ್ಯಾಂಗಲ್ಮೆಂಟ್ ಸಿದ್ಧಾಂತದಿಂದ ಬೆಂಬಲಿತವಾಗುತ್ತದೆ.

2 ಪಲಾಯನಗಳ ಕಥೆ!

» ಮೊದಲನೇ ಪುಟದಿಂದ

ಏಕಾಂತ ಶಿಕ್ಷೆ, ಬ್ಲಾಕ್ ಹೋಲಿನಲ್ಲಿನ ದುರ್ಬರ ಬದುಕು ಮೈ ಜುಮ್ಮೆನಿಸುತ್ತದೆ. ಎಷ್ಟೋ ಸಾರಿ ಸಾವಿನ ಅಂಚಿಗೆ ಹೋದವನು ಹೇಗಾದರೂ ತನ್ನನ್ನು ಸೆರೆಗೆ ಹಾಕಿದವರ ಮೇಲೆ ಮುಯ್ಯಿ ತೀರಿಸಬೇಕೆಂದು ಬದುಕಿ ಬರುತ್ತಾನೆ. ಆ ಕೆರೆಬಿಯನ್ ಸಮುದ್ರದಲ್ಲಿ ತೇಲುವ ತೆಂಗಿನಕಾಯಿ ಮೂಟೆಯನ್ನು ಸಹ ತಪ್ಪದಂತೆ ಉಪಯೋಗಿಸಿ ಪರಾರಿಯಾಗುವ ಯತ್ನವಂತೂ ಮೈನವಿರೇಳಿಸುತ್ತದೆ.

ಈ ನಡುವೆ ಪ್ರಕೃತಿಯ ಒಡನಾಟದಿಂದ ಪರಿಚಯವಾಗುತ್ತಾ ಹೋಗುವ ಅದರ ನಿಗೂಢವನ್ನು ಕೃತಿ ಪರಿಚಯಿಸುತ್ತದೆ. ಪೋಲಿಸರಂತೆ ಗಿಡುಗಗಳಿಂದ ಕೋಳಿಗಳನ್ನು ರಕ್ಷಿಸುವುದಲ್ಲದೆ ಅವುಗಳನ್ನು ಮೇಯಿಸಿ, ಗೂಡು ಸೇರಿಸುವ ಹೊಕ್ಕೊಹಕ್ಕಿಗಳು, ಬಾಯ್ಬಿಡುವ ಭೂಮಿಯಲ್ಲಿ ಸರಿದಾರಿ ತೋರಿಸುವ ಹಂದಿಮರಿ, ಆರು ಸಣ್ಣ ಸಣ್ಣ ಅಲೆಗಳ ಬೆನ್ನ ಮೇಲೆ ಸವಾರಿ ಮೂಡುತ್ತಾ ಬರುವ ಏಳನೆ ಅಲೆ ಸಾಗರದ ದಂಡೆಯನ್ನು ಬೆಳ್ಳಗೆ ಶುಭ್ರವಾಗಿಡುವುದರ ಜೊತೆಗೆ, ತನ್ನ ತೆಕ್ಕೆಗೆ ಸಿಲುಕಿದ ಸಕಲವನ್ನು ಸಾಗರದ ಒಡಲಿಗೆ ಸೇರಿಸುವ ಲಿಸೆಟ್ ಅಲೆ, ಈ ಪ್ಯಾಪಿಲಾನ್ ಇಡುವ ಹೆಸರು 'ದ್ವಿಲಿಂಗ ಚಿಟ್ಟೆ.... ಪತಂಗಗಳ ಬೇಟೆ....'. ಇಂತಹ ಇನ್ನೂ ಅನೇಕ ನಿಗೂಢಗಳ ಪರಿಚಯವಾಗುತ್ತದೆ.

ಇದರ ಜೊತೆಗೆ ತಮ್ಮ ಒಂದೊಂದೇ ಅಂಗಾಗಗಳು ಕಳಚಿ ಬೀಳುತ್ತಿದ್ದರೂ, ಪ್ಯಾಪಿಲಾನ್ ತಪ್ಪಿಸಿಕೊಳ್ಳಲು ತಾವು ಸಂಗ್ರಹಿಸಿದ ಹಣ ನೀಡುವುದರ ಜೊತೆಗೆ ತಮ್ಮ ರೋಗ ಅವನಿಗೆ ತಾಕದಿರಲೆಂದು ಕುಷ್ಠರೋಗಿಗಳು ವಹಿಸುವ ಎಚ್ಚರಿಕೆ. ಅಧಿಕಾರಿಗಳಿಂದ ಕಿರುಕುಳಕ್ಕೆ ಒಳಗಾದರೂ ಪ್ಯಾಪಿಲಾನ್‌ನನ್ನು ರಕ್ಷಿಸುವ ಇತಪಾ ಹಳ್ಳಿಯ ಮೀನುಗಾರರು, ಮಾನವೀಯತೆಯ ಮುಖಗಳನ್ನು ಪರಿಚಯಿಸುತ್ತಾರೆ. ಪ್ಯಾಪಿಲಾನ್ ಆ ದೂರದ ದ್ವೀಪದಿಂದ ಕೊನೆಗೂ ತಪ್ಪಿಸಿಕೊಂಡು ಬಂದಿದ್ದರು, ಇಪ್ಪತ್ತನೆಯ ಶತಮಾನದ ಬಹು ದೊಡ್ಡ ಸಾಹಸ ಎಂದೇ ಪರಿಗಣಿತವಾಗಿದೆ. ಪ್ಯಾಪಿಲಾನ್ ಕಥೆಯು ಚಲನಚಿತ್ರವಾಗಿಯೂ ಮೂಡಿಬಂದಿದೆ.

ಸೈಬೀರಿಯಾದ ಸಾಹಸ

ಇಂತಹ ಸಾಹಸವನ್ನು ಹೋಲುವ 'ಲಾಂಗ್‌ವಾಕ್' ಕೃತಿಯನ್ನು ಸಹ, 'ಮಹಾಪಲಾಯ'ನವೆಂದು ಸಂಗ್ರಹರೂಪದಲ್ಲಿ ತೇಜಸ್ವಿಯವರು ಕನ್ನಡಕ್ಕೆ ತಂದಿದ್ದಾರೆ. ಕೊರೆಯುವ ಚಳಿಯ ಸೈಬೀರಿಯಾದ ಕ್ಯಾಂಪ್ ನಂಬರ್ 303ಕ್ಕೆ ಇತರೆ ಯುದ್ಧ ಖೈದಿಗಳೊಂದಿಗೆ ರಾವಿಸ್ ಬರುತ್ತಾನೆ. ಮಾವೋವಾದದ ಆದರ್ಶದಲ್ಲಿ ಇಡೀ ವಿಶ್ವವನ್ನೇ ಕಮ್ಯುನಿಸ್ಟ್ ಆಡಳಿತಕ್ಕೆ ಒಳಪಡಿಸುವ ಹುಚ್ಚಿನಲ್ಲಿ ಆ ದೇಶಗಳಲ್ಲಿ ನಡೆಯುತ್ತಿದ್ದ ಅಮಾನುಷ ಕೃತ್ಯಗಳಿಗೆ ಇವನಂತೆಯೇ ಸಾವಿರಾರು ಬಲಿಪಶುಗಳಾಗಿ, ಬಲವಾದ ಬೇಲಿ ಹಾಗೂ ಕಾವಲುಗಳ ನಡುವೆ ಬಂಧಿತರಾಗಿರುತ್ತಾರೆ. ಜೀವಂತ ಶವಗಳಂತೆ ಕಾಲ ಕಳೆಯುತ್ತಾ ಅನಾಥ ಹೆಣಗಳಾಗಿ ಹೋಗುತ್ತಿರುವುದನ್ನು ಕಂಡು ಇಪ್ಪತ್ತೈದು ವರ್ಷದ ರಾವಿಸ್‌ಗೆ ಅಲ್ಲಿಂದ ಪಲಾಯನವಾಗುವ ಆಲೋಚನೆ ಮೂಡುತ್ತದೆ. ಇದಕ್ಕೆ ಒಂದು ಅನಿರೀಕ್ಷಿತ ಮೂಲದಿಂದ ಪ್ರೇರಕ ದೊರಕುತ್ತದೆ. ಅದು ಅಲ್ಲಿದ್ದ ಕಮಾಂಡರನ ಹೆಂಡತಿಯಿಂದ.

ಆಕೆಯ ಸಲಹೆಯಂತೆ ತನ್ನ ರೀತಿಯ ಆಲೋಚನೆಯಲ್ಲಿದ್ದ ಇತರೆ ಆರು ಜನರನ್ನು ಸಂಘಟಿಸುತ್ತಾನೆ. ಅವರುಗಳೆಂದರೆ ಲಾಟ್ವಿಯಾದ ರೈತ ಕೊಲೆಮೆನೋಸ್, ಪೋಲೆಂಡಿನ ಗಡಿರಕ್ಷಣೆ ಪಡೆಯ ಕಮ್ಯಾಂಡರ್ ಆಗಿದ್ದ ಮಕೋಸ್ಕಿ, ಸಾರ್ಜಂಟ್ ಪಾಲ್ಲೋವಿಚ್, ಯುಜೀನ್ ಜಾರೋ, ಲಿಥುವೇನಿಯಾ ಮಿಲಿಟರಿಯಲ್ಲಿದ್ದ ಮಾರ್ಚಿಂಕೋವ್, ಅಮೇರಿಕಾದ ಎಂಜಿನಿಯರ್ ಸ್ಮಿತ್.

ಕೊಡಲಿಯೇ ಆಯುಧ!

ಕಮಾಂಡರ್ ಹೆಂಡತಿ ಪ್ರೇರಣೆ ನೀಡುವುದರ ಜೊತೆಗೆ ಒಂದು ಕೊಡಲಿಯನ್ನು ನೀಡುತ್ತಾಳೆ. ಎರಡು ಕಲ್ಲಿನ ನಡುವೆ ಬೆಂಕಿ ಹತ್ತಿಕೊಳ್ಳುವ ಬುಬ್ಬಾಪಾಚಿ ಸಂಗ್ರಹಿಸಿಟ್ಟುಕೊಳ್ಳಲು ಆಕೆ ತಿಳಿಸುತ್ತಾಳೆ. ಪಾದರಕ್ಷೆಗಳಿಗೆ ಕಡವೆ ಚರ್ಮಗಳು, ಚೀಲ ಹಾಗೂ ಚಾಕು ಪ್ರತಿಯೊಬ್ಬರಿಗೂ ದಿನಾ ನೀಡುತ್ತಿದ್ದ ನಾಲ್ಕುನೂರು ಗ್ರಾಂ ಬ್ರೆಡ್ಡಿನಲ್ಲಿ ಪ್ರತಿದಿನ ಸ್ವಲ್ಪ ಬ್ರೆಡ್ಡನ್ನು ಸಂಗ್ರಹಿಸಿಡುತ್ತಾ ಹೋಗುತ್ತಾರೆ.

ದಟ್ಟವಾದ ಮಂಜು ಬೀಳುವ ದಿನ ಅವರು ಅಲ್ಲಿಂದ ಪರಾರಿಯಾಗುತ್ತಾರೆ. ಬಿಗಿಯಾದ ಬೇಲಿಗಳನ್ನು ದಾಟಿ ಸಾಗುವ ಮುಂದಿನ ಹಂತ ರೋಮಾಂಚನಕಾರಿಯಾಗಿದೆ. ದಾರಿಯಲ್ಲಿ ರಷ್ಯನ್ ಸೈನಿಕರಿಂದ ತನ್ನ ಪೋಷಕರನ್ನು ಕಳೆದುಕೊಂಡ ಕ್ರಿಸ್ಟೀನ್ ಜೊತೆಯಾಗುತ್ತಾಳೆ. ಪ್ರಾರಂಭದಲ್ಲಿ ಬೈಕಾಲ್ ಸರೋವರದ ಎಡದಂಡೆ ಹಿಡಿದ ಹಾಗೇ ಮುಂದುವರಿದು ಆಫ್ಘಾನಿಸ್ತಾನಕ್ಕೆ ದಾಟಿಕೊಳ್ಳುವುದು ಅವರ ಹಂಚಿಕೆಯಾಗಿರುತ್ತದೆ.

ಅವರ ರೋಮಾಂಚಕಾರಿ ಪಯಣ, ದಿಟ್ಟ ಸಾಹಸ, ಬದುಕ ಬೇಕೆನ್ನುವ ಛಲ, ಅವರಿಗೆದುರಾಗುವ ಮಾನವೀಯತೆ ಮೂರ್ತಿವೆತ್ತಂಥ ಜನರು ಓದುತ್ತಾ ಓದುತ್ತಾ ಮನ ರೋಮಾಂಚನಗೊಳ್ಳುತ್ತಿದ್ದರೆ, ಕೆಲವೆಡೆ ಮನಸ್ಸು ತೇವವಾಗುತ್ತದೆ. ಸೈಬೀರಿಯದ ಶೀತ ಪ್ರದೇಶ, ಗೋಬಿ ಮರುಭೂಮಿಯ ತೀವ್ರ ಶಾಖ, ಟಿಬೇಟಿನ ಚಳಿ, ಹಿಮಾಲಯದ ಕಡಿದಾದ ಪರ್ವತ ಶ್ರೇಣಿ, ಹೀಗೆ ಒಂದೊಂದೆ ತಡೆಯನ್ನು ಸಾಗುವ ರೀತಿಯನ್ನು ಪತ್ತೆದಾರಿ ಶೈಲಿಯ ಜೊತೆಗೆ ಹೃದಯ ಸ್ಪರ್ಶಿಯಾಗಿ ವಿವರಿಸುತ್ತಾ ಸಾಗುತ್ತದೆ. ಬಹುದೊಡ್ಡ ಕಂಟಕಗಳು ಎದುರಾಗುತ್ತವೆ, ಆದರೂ ಅವರ ದೀರ್ಘ ನಡಿಗೆ ಮುಂದುವರಿಯುತ್ತದೆ.

ಅವರ ಮಹಾಪಲಾಯನ ಯಶಸ್ವಿಯಾಯಿತೆ? ಎಲ್ಲರೂ ಬದುಕುಳಿದರೆ? ಮುಂತಾದ ಪ್ರಶ್ನೆಗಳನ್ನು ಕೃತಿಯನ್ನು ಓದಿಯೇ ನೀವು ಉತ್ತರ ಕಂಡುಕೊಳ್ಳಬೇಕು. ಈ ಮಳೆಗಾಲಕ್ಕೆ ಬೆಚ್ಚಗೆ ಓದಲು ಅತ್ಯುತ್ತಮ ಪುಸ್ತಕಗಳು ಪ್ಯಾಪಿಲಾನ್ ಮತ್ತು ಮಹಾಪಲಾಯನ.

ಪ್ರೀತಿ ಏನೆಂದು ತಿಳಿಯಲು ರವಿಚಂದ್ರನ್ ಸಿನಿಮಾ ನೋಡಿ!

ಸಿ.ಭಾವನಾ, ಚಿಕ್ಕಮಗಳೂರು

- **ಸಂಪಾದಕರೇ, ನಾನು ಒಬ್ಬ ಹುಡುಗನನ್ನು ಒಂದು ವರ್ಷದಿಂದ ಪ್ರೀತಿಸುತ್ತಿದ್ದೇನೆ. ಆದರೆ ನನ್ನ ತಾಯಿ ಒಬ್ಬ ಹುಡುಗನನ್ನು ಹುಡುಕಿದ್ದಾಳೆ. ಆತ ನಾನು ಪ್ರೀತಿಸುತ್ತಿರುವ ಹುಡುಗನಿಗಿಂತ ಚೆನ್ನಾಗಿದ್ದಾನೆ. ನನ್ನ ಅಮ್ಮನ ಮಾತನ್ನು ಮೀರಲಾರೆ ಎಂಬ ನೆಪವೊಡ್ಡಿ, ನಾನು ಪ್ರೀತಿಸುತ್ತಿರುವ ಹುಡುಗನನ್ನು ಮರೆತುಬಿಡಲೇ?**

- ಭಾವನಾ ಅವರೇ, ನೋಡಿ, ಪ್ರೀತಿ-ಪ್ರೇಮದ ವಿಚಾರದಲ್ಲಿ ನಿಮ್ಮನ್ನು ನೀವು ಒಂದು ಹಳೆಯ ರೇಡಿಯೋಗೆ ಹೋಲಿಸಿಕೊಳ್ಳಿ. ಒಂದು ರೇಡಿಯೋದಲ್ಲಿ ನೀವು ಇಷ್ಟಪಟ್ಟು ಒಂದು ಸ್ಟೇಷನ್ (ಚಾನೆಲ್) ಹಾಕಿದ್ದೀರಿ, ಆದರೆ ನಿಮ್ಮ ಅಮ್ಮನವರು ಬಂದು, 'ಬೇರೆ ಸ್ಟೇಷನ್ ಹಾಕಿ, ಅದರಲ್ಲಿ ಹೆಚ್ಚು ಸ್ಪಷ್ಟತೆ ಇದೆ' ಎಂದು ಹೇಳುತ್ತಾರೆ. ಈಗ ನೀವು ಹಳೆಯ ಸ್ಟೇಷನ್ (ನಿಮ್ಮ ಪ್ರೇಮಿ) ಬಿಟ್ಟು, ಹೊಸ ಸ್ಟೇಷನ್ (ಅಮ್ಮನ ಆಯ್ಕೆ) ಹಿಡಿದುಕೊಳ್ಳಲು ಯೋಚಿಸುತ್ತಿದ್ದೀರಿ. ಇದು ತುಂಬಾ ಸಹಜ! ಪ್ರೀತಿ, ವಿಡಂಬನೆಯ ಭಾಷೆಯಲ್ಲಿ ಹೇಳುವುದಾದರೆ, ಒಂದು ಬಗೆಯ 'ಆಫರ್'. ಒಂದು ವರ್ಷದಿಂದ ನೀವು ಒಬ್ಬರನ್ನೇ ಪ್ರೀತಿಸುತ್ತಿದ್ದೀರಲ್ಲ, ಅದು ಒಂದು 'ಹಳೆಯ ಆಫರ್' ಇದ್ದಂತೆ. ಈಗ ನಿಮ್ಮ ಅಮ್ಮನವರು ಹೊಸ ಬೈ ಒನ್ ಗೆಟ್ ಒನ್ ಫ್ರೀ ಆಫರ್ ತಂದಿದ್ದಾರೆ. ಹಳೆಯ 'ಆಫರ್' ಬಿಟ್ಟು ಹೊಸ ಆಫರ್ ತೆಗೆದುಕೊಳ್ಳಲು ಇಷ್ಟಪಡುತ್ತೀರಾ?

ಅಮ್ಮನ ಮಾತನ್ನು ಮೀರಲಾರೆ ಎಂಬ ಉತ್ತಮ ನೆಪವನ್ನು ಹೇಳುತ್ತಿದ್ದೀರಿ. ನೀವು ಒಂದು ವರ್ಷ ಪ್ರೀತಿಸಿದ ಆ ಹುಡುಗನಿಗೆ ನಿಮ್ಮ ಈಗಿನ ನಿರ್ಧಾರ ಗೊತ್ತಾದರೆ ಆತನಿಗೆ ಏನು ಅನಿಸಬಹುದು? ನಿಮ್ಮ ಬಗ್ಗೆ ಆತ ಎಷ್ಟು ಬೇಸರಿಸಿಕೊಳ್ಳಬಹುದು ಎಂಬುದನ್ನು ಯೋಚಿಸಿದ್ದೀರಾ? ಪ್ರೀತಿ ಎಂಬುದು ಅನುಕೂಲಸಿಂಧು ವ್ಯವಸ್ಥೆಯಲ್ಲ. ಅದು ಲಾಭ-ನಷ್ಟದ ವ್ಯವಹಾರವಲ್ಲ. ಪ್ರೀತಿಯಲ್ಲಿ ಒಂದು ಬದ್ಧತೆ ಇರಬೇಕು. ನಿಮ್ಮ ತಾಯಿ ಹೇಳಿದ ಮಾತ್ರಕ್ಕೆ ಇಷ್ಟು ಕಾಲ ಪ್ರೀತಿಸಿದ ಹುಡುಗನನ್ನು ಬಿಸಿ ಆಲೂಗಡ್ಡೆಯಂತೆ ಬಿಸಾಡುವುದು ಸರಿಯಲ್ಲ. ಒಂದು ವೇಳೆ, ನೀವು ಪ್ರೀತಿಸಿದ ಹುಡುಗ, ನನ್ನ ತಾಯಿ ನಿನಗಿಂತ ಚೆನ್ನಾಗಿರುವವಳನ್ನು ಹುಡುಕಿದ್ದಾಳೆ. ಹೀಗಾಗಿ ನಾನು ನಿನ್ನನ್ನು ಪ್ರೀತಿಸುವುದಿಲ್ಲ. ನೀನು ನಿನ್ನ ದಾರಿಯನ್ನು ನೋಡಿಕೋ ಎಂದು ಹೇಳಿದರೆ, ನಿಮಗೆ ಏನು ಅನಿಸುತ್ತದೆ?

ಭಾವನಾ ಅವರೇ, ಪ್ರೀತಿ ಅಂದ್ರೆ ಏನು ಎಂಬುದು ನಿಮಗೆ ಗೊತ್ತಿರಲಿಕ್ಕಿಲ್ಲ. ಸಾಧ್ಯವಾದರೆ ರವಿಚಂದ್ರನ್ ಅವರ ಸಿನಿಮಾಗಳನ್ನು ನೋಡಿ. ನಂತರ ನಿಮ್ಮ ಮನಸ್ಸು ಏನು ಹೇಳುತ್ತೋ ಹಾಗೆ ಮಾಡಿ.

ಅಜಿತ್ ಮಲ್ಪಾಡಿ, ಮಂಗಳೂರು

- **ಭಟ್ರೇ, ನಾನು ಒಂದು ಪಿಜಿಯಲ್ಲಿದ್ದೇನೆ. ನಮ್ಮ ಪಕ್ಕದ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಸೇವಕನಿಂದಾಗಿ ವೈಫೈ ಪಾಸ್‌ವರ್ಡ್ ಗಿಟ್ಟಿಸಿಕೊಂಡು ಉಪಯೋಗಿಸುತ್ತಿದ್ದೇನೆ. ಆದರೆ ಹಿಂದಿನ ವಾರ ಆ ಸೇವಕ ಮನೆಗೆಲಸ ಬಿಟ್ಟು ಹೋಗಿದ್ದಾನೆ. ಈ ಮಧ್ಯೆ, ಮನೆಯವರು ವೈಫೈ ಪಾಸ್‌ವರ್ಡ್‌ನ್ನು ಬದಲಿಸಿಬಿಟ್ಟಿದ್ದಾರೆ. ಇದರಿಂದ ನನಗೆ ಆ ವೈಫೈ ಬಳಸಲು ಸಾಧ್ಯವಾಗುತ್ತಿಲ್ಲ. ಆ ಪಾಸ್‌ವರ್ಡ್ ಪಡೆಯುವುದು ಹೇಗೆ?**

-ಅಜಿತ್ ಅವರೇ, ಯಾವುದೇ ವ್ಯಕ್ತಿಯ ವೈಫೈಗೆ ಅವರ ಅನುಮತಿಯಿಲ್ಲದೇ ಸಂಪರ್ಕಿಸುವುದು ಸರಿಯಲ್ಲ ಮತ್ತು ಇದು ಅನೈತಿಕವೂ ಹೌದು. ಇಂಥ ಸಂದರ್ಭದಲ್ಲಿ, ಬೇರೆ ದಾರಿಗಳನ್ನು ಕಂಡುಕೊಳ್ಳುವುದು ಸೂಕ್ತ. ನಿಮ್ಮ ಹಳೆಯ ಸಂಪರ್ಕ ಕಡಿತಗೊಂಡಿರುವುದರಿಂದ, ವೈಫೈ ಪಡೆಯಲು ಕೆಲವು ಸರಿಯಾದ ಮಾರ್ಗಗಳನ್ನು ಅನುಸರಿಸಬಹುದು. ನೀವು ಪಕ್ಕದ ಮನೆಯವರನ್ನು ನೇರವಾಗಿ ಸಂಪರ್ಕಿಸಿ, ನಿಮ್ಮ ಪರಿಸ್ಥಿತಿಯನ್ನು ವಿವರಿಸಿ, ವೈಫೈ ಸಂಪರ್ಕಕ್ಕಾಗಿ ವಿನಂತಿಸಬಹುದು. ಅವರು ಒಪ್ಪಿದರೆ, ಅದಕ್ಕೆ ಶುಲ್ಕ ವಿಧಿಸಬಹುದು ಅಥವಾ ಉಚಿತವಾಗಿ ಪಾಸ್‌ವರ್ಡ್ ನೀಡಬಹುದು.

ನೀವು ಪ್ರಸ್ತುತ ಇರುವ ಪಿಜಿಯಲ್ಲಿ ಬೇರೆ ವೈಫೈ ಸಂಪರ್ಕವಿದೆಯೇ ಎಂದು ವಿಚಾರಿಸಿ. ಒಂದು ವೇಳೆ ಇಲ್ಲದಿದ್ದರೆ, ನೀವು ಹೊಸ ಇಂಟರ್‌ನೆಟ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಬಹುದು. ಈಗ ಪ್ರತಿಯೊಂದು ಕಂಪನಿಗಳು ವಿವಿಧ ರೀತಿಯ ಆಯ್ಕೆಗಳನ್ನು ನೀಡುತ್ತವೆ. ಹೀಗಾಗಿ, ನೀವು ನಿಮ್ಮ ಅಗತ್ಯಕ್ಕೆ ತಕ್ಕಂತೆ ಕಡಿಮೆ ಬೆಲೆಯ ಯೋಜನೆಯನ್ನು ಆರಿಸಿಕೊಳ್ಳಬಹುದು. ನೀವು ಕಡಿಮೆ ಅವಧಿಗೆ ಇಂಟರ್‌ನೆಟ್ ಬಳಸಬೇಕಿದ್ದರೆ, ನಿಮ್ಮ ಮೊಬೈಲ್ ಡಾಟಾ ಅಥವಾ ಮೊಬೈಲ್ ಹಾಟ್‌ಸ್ಪಾಟ್ ಬಳಸಬಹುದು. ಹೆಚ್ಚಿನ ಮೊಬೈಲ್ ನೆಟ್‌ವರ್ಕ್ ಕಂಪನಿಗಳು ಉತ್ತಮ ಡಾಟಾ ಪ್ಯಾಕ್‌ಗಳನ್ನು ನೀಡುತ್ತವೆ.

ಒಟ್ಟಿನಲ್ಲಿ, ಕಾನೂನುಬಾಹಿರವಾಗಿ ಯಾವುದೇ ವೈಫೈ ಪಾಸ್‌ವರ್ಡ್ ಪಡೆಯುವುದು ಸರಿಯಲ್ಲ. ಹಾಗಾಗಿ, ನಿಮ್ಮದೇ ಆದ ಇಂಟರ್‌ನೆಟ್ ಸಂಪರ್ಕವನ್ನು ಹೊಂದುವುದು ಉತ್ತಮ. ಇದು ನಿಮ್ಮ ಇಂಟರ್‌ನೆಟ್ ಬಳಕೆಯನ್ನು ಸುರಕ್ಷಿತವಾಗಿಯೂ ಇಡುತ್ತದೆ.

ಗುರು, (ಇಮೇಲ್ ಮೂಲಕ)

- **ಸಂಪಾದಕರೇ, ನನಗೆ ಪತ್ನಿ ಇದ್ದಾಳೆ. ಹಾಗೆ ನನ್ನ ಮನಸ್ಸನ್ನು ಅರ್ಥ ಮಾಡಿಕೊಂಡ ಗರ್ಲ್ ಫ್ರೆಂಡ್ ಕೂಡ ಇದ್ದಾಳೆ. ಈ ವಿಷಯ ನನ್ನ ಹೆಂಡತಿಗೆ ಗೊತ್ತಿಲ್ಲ. ಗರ್ಲ್ ಫ್ರೆಂಡ್‌ನ್ನು ಬಿಟ್ಟಿರಲು ನನ್ನಿಂದ ಸಾಧ್ಯವಿಲ್ಲ. ಆಕೆಯೂ ನನ್ನನ್ನು ಬಹಳ ಇಷ್ಟಪಡುತ್ತಾಳೆ. ಈ ಸಂಬಂಧವನ್ನು ಎಷ್ಟು ದಿನ ಮುಂದುವರಿಸಲು ಸಾಧ್ಯ?**

- ಗುರು ಅವರೇ, ನೀವು ಕೇಳಿದ ಪ್ರಶ್ನೆ ನೇರವಾಗಿ ಹೇಳಬೇಕೆಂದರೆ ಇದು ಒಂಥರಾ ಟೈಮ್ ಬಾಂಬ್ ಇದ್ದಂತೆ. ನೀವು ಎಷ್ಟು ದಿನ ಈ ಸಂಬಂಧವನ್ನು ಮುಂದುವರಿಸಬಹುದು ಅಂದ್ರೆ, ಸತ್ಯ ಹೊರಬೀಳೋ ದಿನದವರೆಗೆ! ಅದು ನಾಳೆಯೂ ಆಗಬಹುದು, ವರ್ಷಗಳ ನಂತರವೂ ಆಗಬಹುದು. ಆದರೆ ಅನುಭವ ಹೇಳೋದು ಏನೆಂದರೆ, ಇಂಥ ರಹಸ್ಯಗಳು ಕಡೆಯವರೆಗೂ ಬಚ್ಚಿಡೋದು ಸಾಧ್ಯವಿಲ್ಲ. ನೀವು ಈಗ ಇಬ್ಬರನ್ನೂ ಕಳೆದುಕೊಳ್ಳಬೇಡ ಅನ್ನೋ ಮನಸ್ಥಿತಿಯಲ್ಲಿ ಇದ್ದೀರಿ. ಆದರೆ practically ಪತ್ನಿಗೆ ವಿಷಯ ತಿಳಿದರೆ, ಕುಟುಂಬ, ನಂಬಿಕೆ, ಕಾನೂನು ಸಮಸ್ಯೆ ಹೀಗೆ ಎಲ್ಲವೂ ಅಪಾಯಕ್ಕೆ ಸಿಲುಕಿಕೊಳ್ಳಬಹುದು. ಗರ್ಲ್‌ಫ್ರೆಂಡ್‌ಗೆ ಹೆಂಡತಿಯೊಂದಿಗೆ ಇರ್ತೀನಿ ಅನ್ನೋದು accept ಆಗದಿದ್ದರೆ, emotional drama ಗ್ಯಾರಂಟಿ. ನಿಮಗೆ guilt + stres ಕಾಡಬಹುದು. ಇದರಿಂದ ಮನಸ್ಸು ಮತ್ತು ಆರೋಗ್ಯ ಹಾಳಾಗಬಹುದು.

ಇದನ್ನು ಎಷ್ಟು ದಿನ ಮುಂದುವರಿಸುವುದು ಎಂಬುದು ಮುಖ್ಯ ಪ್ರಶ್ನೆಯಲ್ಲ. ಮುಖ್ಯ ಪ್ರಶ್ನೆ ಏನೆಂದರೆ ನೀವು ಏನು ಬಯಸುತ್ತೀರೋ ಅದನ್ನು ಸ್ಪಷ್ಟವಾಗಿ ನಿರ್ಧರಿಸುವುದು. ಅದಕ್ಕೆ ನಿಮ್ಮ value ಗಳು ಮತ್ತು priority ಏನು? ಸತ್ಯ ಹೇಳಿದಾಗ ಬರಲಿರುವ ಪರಿಸ್ಥಿತಿಯನ್ನು ಎದುರಿಸಲು ತಯಾರಿದ್ದೀರಾ? ಇಬ್ಬರಿಗೂ ನೋವು ಕೊಡದೆ, ನಿಮ್ಮ ಜೀವನದ guilt ಕಡಿಮೆ ಮಾಡುವ ಮಾರ್ಗ ಏನು? ಈ ವಿಷಯದ ಬಗ್ಗೆ ನೀವು ಯೋಚಿಸುವುದು ಒಳ್ಳೆಯದು. ನೀವು ಜೀವನದಲ್ಲಿ ಅನಗತ್ಯ ಸಮಸ್ಯೆಗಳನ್ನು ತಂದುಕೊಳ್ಳಬೇಡಿ.

ಕೊನೆಯದಾಗಿ, ಇದು ಬಹಳ ಸೂಕ್ಷ್ಮವಾದ ಮತ್ತು ವೈಯಕ್ತಿಕವಾದ ವಿಷಯ. ಈ ರೀತಿಯ ಸಂಬಂಧವನ್ನು ಎಷ್ಟು ದಿನ ಮುಂದುವರಿಸಬಹುದು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಇದು ನಿಮ್ಮ ಮತ್ತು ನಿಮ್ಮ ಸಂಬಂಧದಲ್ಲಿರುವ ವ್ಯಕ್ತಿಗಳ ಮೇಲೆ ಅವಲಂಬಿತವಾಗಿರುತ್ತದೆ. ಯಾವುದೇ ಸಂಬಂಧದಲ್ಲಿ ಪ್ರಾಮಾಣಿಕತೆ ಬಹಳ ಮುಖ್ಯ. ನಿಮ್ಮ ಹೆಂಡತಿಗೆ ಈ ವಿಷಯ ತಿಳಿದಿಲ್ಲವಾದ್ದರಿಂದ, ಇದು ಮುಂದೆ ದೊಡ್ಡ ಸಮಸ್ಯೆಗೆ ಕಾರಣವಾಗಬಹುದು. ಈ ಸಂಬಂಧದ ಪರಿಣಾಮಗಳ ಬಗ್ಗೆ ಯೋಚಿಸುವುದು ಒಳ್ಳೆಯದು. ಇದು ನಿಮ್ಮ, ನಿಮ್ಮ ಹೆಂಡತಿಯ ಮತ್ತು ನಿಮ್ಮ ಗರ್ಲ್ ಫ್ರೆಂಡ್‌ನ ಜೀವನದ ಮೇಲೆ ಹೇಗೆ ಪರಿಣಾಮ ಬೀರಬಹುದು ಎಂಬುದನ್ನು ಪರಿಗಣಿಸಿ. ಸಂಬಂಧದ ಭವಿಷ್ಯದ ಬಗ್ಗೆ ಯೋಚಿಸಿ. ನೀವು ಯಾರೊಂದಿಗೆ ನಿಮ್ಮ ಜೀವನವನ್ನು ಕಳೆಯಲು ಬಯಸುತ್ತೀರಿ ಎಂಬುದನ್ನು ನಿರ್ಧರಿಸುವುದು ಮುಖ್ಯ.



Ask the Editor

● ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಕೆ.ವಿ.ನಾಯಕ, (ಇಮೇಲ್ ಮೂಲಕ)

- **ಭಟ್ರೇ, ನನಗೆ ಮೂವತ್ತೊಂದು ವರ್ಷ. ತಕ್ಕಮಟ್ಟಿಗೆ ಹಾಡುತ್ತೇನೆ. ನಾನೊಬ್ಬ ಗಾಯಕ. ಹಾಡುವ ಮೂಲಕವೇ ನನ್ನ ಬದುಕನ್ನು ಕಟ್ಟಿಕೊಳ್ಳಬಹುದಾ?**

- ನಾಯಕ ಅವರೇ, ಖಂಡಿತವಾಗಿಯೂ! ಒಬ್ಬ ಗಾಯಕರಾಗಿ ಹಾಡಿನಿಂದಲೇ ಬದುಕು ಕಟ್ಟಿಕೊಳ್ಳುವುದು ಸಾಧ್ಯವೇ ಅಂತ ಕೇಳಿದ್ದೀರಿ. ಅಯ್ಯೋ, ಅದಕ್ಕಿಂತ ಮಜವಾದ ಬದುಕು ಇನ್ನೊಂದಿದೆಯೇ? ಗಾಯಕನಾಗಿ ಬದುಕು ಕಟ್ಟಿಕೊಳ್ಳುವುದು ಅಂದರೆ...

ರವಿ ಎನ್.ಬಿ., (ಇಮೇಲ್ ಮೂಲಕ)

- **ಭಟ್ರೇ, ನಾನು ಸರ್ಕಾರಿ ನೌಕರನಾಗಿದ್ದು, ಒಬ್ಬಳೇ ಹೆಂಡತಿ, ಮಕ್ಕಳೊಂದಿಗೆ ನೆಮ್ಮದಿಯ ಜೀವನ ಸಾಗಿಸುತ್ತಿದ್ದೇನೆ. ನಿಮ್ಮ ಅಂಕಣಗಳನ್ನು ಓದುವಾಗ ಬೇರೆ ಏನನ್ನಾದರೂ ಸಾಧಿಸಬೇಕು ಅಂತ ಅನ್ನಿಸುತ್ತದೆ. Think Big ಅಂತಾರಲ್ಲ, ಆ ರೀತಿ ಬೇರೆ ಏನನ್ನಾದರೂ ಸಾಧಿಸಬೇಕಾ ಅಥವಾ ಇದರಲ್ಲಿಯೇ ನೆಮ್ಮದಿಯಾಗಿ ಜೀವನ ಸಾಗಿಸಬೇಕಾ? ನನಗೆ ನಿಮ್ಮ ಸಲಹೆ ಬೇಕು.**

- ರವಿ ಅವರೇ, ನಿಮ್ಮ ಪ್ರಶ್ನೆಯು ಜೀವನದ ದೊಡ್ಡ ಸಂದೇಹವಾಗಿದೆ. ನಿಮ್ಮ ಪ್ರಶ್ನೆಗೆ ಉತ್ತರಿಸುವುದಾದರೆ, ನಿಮ್ಮ ಈ ಪರಿಸ್ಥಿತಿಯನ್ನು ಒಂದು ರುಚಿಕರ ಊಟಕ್ಕೆ ಹೋಲಿಸಬಹುದು. ನೋಡಿ, ನೀವು ಈಗಾಗಲೇ ರುಚಿಕರವಾದ, ಪೌಷ್ಟಿಕವಾದ ಮತ್ತು ಹೊಟ್ಟೆ ತುಂಬುವ ಊಟವನ್ನು ತಿಂದಿದ್ದೀರಿ. ಸರಕಾರಿ ನೌಕರಿ, ಹೆಂಡತಿ ಮತ್ತು ಮಕ್ಕಳು - ಇವೆಲ್ಲವೂ ನಿಮ್ಮ ಊಟದ ಒಂದು ಭಾಗ. ಆದರೆ, ಪಕ್ಕದ ಟೇಬಲ್‌ನಲ್ಲಿ ಯಾರೋ ಹೊಸ ರೀತಿಯ ಆಹಾರವನ್ನು ತಿನ್ನುತ್ತಿರುವುದನ್ನು ನೋಡಿದಾಗ, ನಮಗೂ ಅದೇ ಆಹಾರ ತಿನ್ನಲು ಆಸೆ ಆಗುತ್ತದೆ. ಈ ಪರಿಸ್ಥಿತಿಯಲ್ಲಿ, ನಿಮ್ಮ ಪ್ರಶ್ನೆ 'ನಾನು ಹೊಸ ಊಟವನ್ನು ಪ್ರಯತ್ನಿಸಬೇಕಾ, ಅಥವಾ ಹೊಟ್ಟೆ ತುಂಬಿರುವ ಈ ಊಟವನ್ನೇ ಆನಂದಿಸಬೇಕಾ?' ಎಂಬಂತಿದೆ.

ನೀವು ಹೊಸದನ್ನು ಸಾಧಿಸಲು ಹೋದರೆ, ಅದು ನೀವು ತಿನ್ನಲು ಹೋಗುವ ಹೋಟೆಲ್‌ನಲ್ಲಿ ಏನಾದರೂ ಇಲಿ, ಹೆಗ್ಗಣ ಬಂದರೆ ಹೇಗಿರುತ್ತದೋ, ಹಾಗೆ ಇರಬಹುದು. ಹೊಸ ಸಾಹಸದಲ್ಲಿ ನಿಮ್ಮ ನೆಮ್ಮದಿಯ ಜೀವನ ಕಳೆದುಕೊಳ್ಳುವ ಅಪಾಯವೂ ಇದೆ. ಒಂದು ವೇಳೆ, ನೀವು ಹೊಸ ಸಾಹಸದಲ್ಲಿ ಯಶಸ್ವಿಯಾದರೆ, ನಿಮ್ಮ ಮನೆಯಲ್ಲಿ ಎಲ್ಲರೂ ನಿಮ್ಮನ್ನು 'ಹೀರೋ' ಎಂದು ಕರೆಯುತ್ತಾರೆ. ಇಲ್ಲದಿದ್ದರೆ, 'ನೀವು ಯಾಕೆ ಇದನ್ನು ಮಾಡಿದ್ದೀರಿ?' ಎಂದು ದಿನವಿಡೀ ಪ್ರಶ್ನೆ ಕೇಳುತ್ತಾರೆ. ನಿಮ್ಮ ಮನೆಯಲ್ಲಿ ನೀವು ರಾಜನಂತೆ ಇದ್ದೀರಿ. ಹೊರಗೆ ಹೋಗಿ ಮತ್ತೊಮ್ಮೆ ಕಷ್ಟಪಡುವುದು ಯಾಕೆ? ಈಗಾಗಲೇ ನೀವು ಅಡುಗೆ ಮಾಡಿ, ಮನೆ ಸ್ವಚ್ಛಗೊಳಿಸಿ, ಮಕ್ಕಳನ್ನು ನೋಡಿಕೊಳ್ಳುತ್ತಿದ್ದೀರಲ್ಲ, ಇದೆಲ್ಲವೂ ಒಂದು ಸಾಧನೆಯೇ. ಇವುಗಳನ್ನು ಬಿಟ್ಟು ಇನ್ನೇನು ಸಾಧಿಸುತ್ತೀರಿ?

ಒಟ್ಟಿನಲ್ಲಿ, 'ಥಿಂಕ್ ಬಿಗ್' ಮಾಡುವುದನ್ನು ಯೋಚಿಸಿ. ಆದರೆ ನಿಮ್ಮ ಮನೆಯಲ್ಲಿ ಇರುವುದನ್ನು ಕಳೆದುಕೊಳ್ಳಬೇಡಿ. ನೀವು ಹೊರಗೆ ಹೋಗುವಾಗ, ನಿಮ್ಮ ಹೆಂಡತಿ 'ಯಾಕೆ ಹೊರಗೆ ಹೋಗುತ್ತಿದ್ದೀರಿ?' ಎಂದು ಕೇಳಿದರೆ, 'ನಾನು ಬೇರೆ ಏನಾದರೂ ಸಾಧಿಸಲು ಹೊರಟಿದ್ದೇನೆ' ಎಂದು ಹೇಳಿ. ಆದರೆ, ನೀವು ಹೊರಗೆ ಹೋಗುವಾಗ ನಿಮ್ಮ ಕೈಯಲ್ಲಿ ಮೊಬೈಲ್ ಫೋನ್ ಇರಲಿ, ಏಕೆಂದರೆ, ನೀವು ತೊಂದರೆಯಲ್ಲಿ ಸಿಕ್ಕಿಹಾಕಿಕೊಂಡರೆ, ನಿಮ್ಮ ಹೆಂಡತಿ ಕರೆ ಮಾಡಿ 'ಯಾಕೆ ಹೀಗೆ ಮಾಡಿದ್ದೀರಿ?' ಎಂದು ಕೇಳಬಹುದು. ಹಾಗಾಗಿ, ನೀವು ಹೊರಗೆ ಹೋಗುವಾಗ, ನಿಮ್ಮ ಹೆಂಡತಿಯನ್ನು ಕರೆದು 'ನಾನು ಮತ್ತಷ್ಟು ಸಾಧನೆ ಮಾಡಲು ಹೋಗುತ್ತಿದ್ದೇನೆ' ಎಂದು ಹೇಳಿ. ಆ ಮೂಲಕ ನೀವು ಇನ್ನಷ್ಟು ಸಾಧನೆಯನ್ನು ಮಾಡಬಹುದು.

1.ನಿಮ್ಮ ದಿನ ಶುರುವಾಗುವುದೇ ಸರಿಗಮಪದನಿಸ ದಿಂದ. ಬೇರೆಯವರು ಕಾಫಿ ಕುಡಿದು ಎಚ್ಚರವಾದರೆ, ನೀವು ಒಂದು ಚಂದದ ತಾನ್ ಹಾಕಿ ಫ್ರೆಶ್ ಆಗುತ್ತೀರಿ. ಅಕ್ಕಪಕ್ಕದ ಮನೆಯವರಿಗೆ ಮಾತ್ರ ನಿಮ್ಮ ಈ ಅಲಾರಾಂ ಸ್ವಲ್ಪ ಕಿರಿಕಿರಿ ಎನಿಸಬಹುದು. 2.ಮೊದಮೊದಲು ನಿಮ್ಮ ಪ್ರತಿಭೆಯ ಪ್ರದರ್ಶನಕ್ಕೆ ಸಿಗುವ ಏಕೈಕ ವೇದಿಕೆ ನಿಮ್ಮ ಮನೆಯ ಬಾತ್ ರೂಮ್. ಅಲ್ಲಿನ ಪ್ರತಿಧ್ವನಿ (echo) ನಿಮ್ಮ ಧ್ವನಿಯನ್ನು ಇನ್ನಷ್ಟು ಅದ್ಭುತವಾಗಿ ಕೇಳುವಂತೆ ಮಾಡುತ್ತದೆ. ಆದರೆ, ಅಲ್ಲಿಂದಾಚೆಗೆ ದೊಡ್ಡ ವೇದಿಕೆ ಏರಬೇಕಾದರೆ, ಹಲೋ, ಮೈಕ್ ಟೆಸ್ಟಿಂಗ್ 1, 2, 3 ಎಂದು ಹೇಳುತ್ತೀರಿ. 3.ತಿಂಗಳ ಕೊನೆಯಲ್ಲಿ ಸಂಬಳದ ನಿರೀಕ್ಷೆಯಲ್ಲಿರುವಾಗ, ನಿಮಗೆ ಸಿಗುವುದು ಜನರ ಚಪ್ಪಾಳೆ ಮತ್ತು ಒನ್ಸ್ ಮೋರ್, ಒನ್ಸ್ ಮೋರ್! ಎಂಬ ಪ್ರೀತಿಯ ಕೂಗು. ಈ ಚಪ್ಪಾಳೆಯೇ ನಿಮ್ಮ ಬ್ಯಾಂಕ್ ಬ್ಯಾಲೆನ್ಸ್! ಆದರೆ ನೆನಪಿಡಿ, ಚಪ್ಪಾಳೆಯಿಂದ ಹೊಟ್ಟೆ ತುಂಬುವುದಿಲ್ಲ, ಅದಕ್ಕೆ ಸಂಗೀತ ಕಾರ್ಯಕ್ರಮಗಳು ಬೇಕೇಬೇಕು! 4. ಬೇರೆಯವರು ಟ್ರಾಫಿಕ್‌ನಲ್ಲಿ ಸಿಕ್ಕಿಹಾಕಿಕೊಂಡು ಬೈಯುತ್ತಿದ್ದರೆ, ನೀವು ಕಾರಿನಲ್ಲೇ ಹೊಸ ರಾಗ ಸಂಯೋಜನೆ ಮಾಡುತ್ತೀರಿ. ಹಾರ್ನ್ ಸದ್ದಿನಲ್ಲೂ ನಿಮಗೆ ತಾಳ ಸಿಗುತ್ತದೆ. ಪಾಂ ಪಾಂ ಪೀಂ ಪೀಂ ಕೂಡ ನಿಮಗೆ ಒಂದು ಹೊಸ ಹಾಡಿನ ಆರಂಭದಂತೆ ಕೇಳಿಸಬಹುದು! 5. 'ಮಚ್ಚಾ, ಈ ಸಲ ಒಂದು ಚಾನ್ಸ್ ಸಿಕ್ಕಿದೆ, ಪ್ರೋಗ್ರಾಂ ಮುಗಿದ ತಕ್ಷಣ ನಿನ್ನ ದುಡ್ಡು ವಾಪಸ್ ಕೊಡ್ತೀನಿ' - ಇದು ನಿಮ್ಮ ಜೀವನದ ರಾಷ್ಟ್ರಗೀತೆಯಾಗಿರುತ್ತದೆ. ಆದರೆ, ಒಮ್ಮೆ ನೀವು ಫೇಮಸ್ ಆದ ಮೇಲೆ, ಇದೇ ಗೆಳೆಯರು ನಿಮ್ಮ ಹಿಂದೆ ಒಂದು ಸೆಲ್ಫಿ ಪ್ಲೀಸ್ ಎಂದು ಬರುತ್ತಾರೆ!

ಹಾಗಾದರೆ, ಗಾಯಕನಾಗಿ ಯಶಸ್ವಿಯಾಗುವುದು ಹೇಗೆ? ಯಶಸ್ಸು ಒಂದೇ ದಿನದಲ್ಲಿ ಸಿಗುವುದಿಲ್ಲ. ಅದಕ್ಕೆ ತಾಳ್ಮೆ ಎಂಬ ತಬಲಾವನ್ನು ನಿರಂತರವಾಗಿ ನುಡಿಸುತ್ತಲೇ ಇರಬೇಕು. ಪ್ರತಿದಿನ ರಿಯಾಜ್ ಮಾಡಬೇಕು. ನಿಮ್ಮ ಧ್ವನಿಯನ್ನು ಸದಾ ಶ್ರುತಿಯಲ್ಲಿಟ್ಟುಕೊಳ್ಳಬೇಕು. ಪರಿಶ್ರಮವಿಲ್ಲದೆ ಹಾರ್ಮೋನಿಯಂ ಕೂಡ ಸರಿಯಾಗಿ ನುಡಿಯುವುದಿಲ್ಲ. ಸಿಕ್ಕ ಸಣ್ಣಪುಟ್ಟ ಅವಕಾಶಗಳನ್ನೂ ಬಿಡಬೇಡಿ. ಗಲ್ಲಿಯ ಗಣೇಶನ ಹಬ್ಬದಿಂದ ಹಿಡಿದು, ದೊಡ್ಡ ಸಂಗೀತ ಕಛೇರಿಯವರೆಗೆ, ಸಿಕ್ಕಲ್ಲೆಲ್ಲ ನಿಮ್ಮ ಗಿಟಾರ್ (ಪ್ರತಿಭೆ) ನುಡಿಸಿ. ಇಂದಿನ ಕಾಲದಲ್ಲಿ ಯೂಟ್ಯೂಬ್, ಇನ್‌ಸ್ಟಾಗ್ರಾಮ್‌ಗಳೇ ನಿಮ್ಮ ದೊಡ್ಡ ವೇದಿಕೆ. ನಿಮ್ಮ ಹಾಡುಗಳನ್ನು ರೆಕಾರ್ಡ್ ಮಾಡಿ ಅಪ್‌ಲೋಡ್ ಮಾಡಿ. ಯಾರಿಗೆ ಗೊತ್ತು, ರಾತ್ರೋರಾತ್ರಿ ನೀವು ವೈರಲ್ ಸ್ಟಾರ್ ಆಗಬಹುದು!

ಕೊನೆಯದಾಗಿ ಹೇಳುವುದಾದರೆ, ಹಾಡುಗಾರಿಕೆ ಕೇವಲ ವೃತ್ತಿಯಲ್ಲ, ಅದೊಂದು ತಪಸ್ಸು. ಇದರಲ್ಲಿ ಕಷ್ಟಗಳಿವೆ, ಸವಾಲುಗಳಿವೆ, ಆದರೆ ನಿಮ್ಮಲ್ಲಿ ನಿಜವಾದ ಪ್ರತಿಭೆ ಮತ್ತು ಕಠಿಣ ಪರಿಶ್ರಮವಿದ್ದರೆ, ಖಂಡಿತವಾಗಿಯೂ ಸಂಗೀತದ ಮೂಲಕವೇ ಒಂದು ಸುಂದರವಾದ ಬದುಕನ್ನು ಕಟ್ಟಿಕೊಳ್ಳಬಹುದು. ನಿಮ್ಮ ಧ್ವನಿ ಜನರ ಮನಸ್ಸನ್ನು ತಲುಪಿದರೆ, ಹಣ, ಕೀರ್ತಿ ತಾನಾಗಿಯೇ ನಿಮ್ಮನ್ನು ಹುಡುಕಿಕೊಂಡು ಬರುತ್ತದೆ.